ಭಾನುವಾರ, ಆಗಸ್ಟ್ 25, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 237 | ಪುಟ 20

www.prajavani.net

prajavani.net | prajavani | Prajavani | Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಬೆಂಗಳೂರಿನಲ್ಲಿ ಟ್ರೆಂಡ್ ಆಗುತ್ತಿದೆ ವಾರಾಂತ್ಯದ ಕಾರ್ ಮೀಟ್‌ಅಪ್



ನಟ ನಾಗಾರ್ಜುನ ಒಡೆತನದ ಸಭಾಂಗಣ ಧ್ವಂಸ 7

ಇನ್ಫೊಸಿಸ್: ವ್ಯಾಪಾರ ರಹಸ್ಯ ಕಳವು ಆರೋಪ 9

ಕಾಡಾನೆ ನಿಗಾಕ್ಕೆ 'ಆನೆ ಎಲ್ಲಿ ಡಾಟ್‌ಕಾಂ' 5

'ಬಿಕ್ಕಟ್ಟು ನಿವಾರಣೆ: ಭಾರತದ್ದು ಮುಖ್ಯಪಾತ್ರ' 7

ಮೂಲವೇತನದ ಶೇ 50 ಪಿಂಚಣಿ

ಎನ್‌ಪಿಎಸ್ ಬದಲು ಯುಪಿಎಸ್ ಜಾರಿ: ಕೇಂದ್ರ ಸಚಿವ ಸಂಪುಟ ಅನುಮೋದನೆ

ನವದೆಹಲಿ (ಪಿಟಿಐ): ರಾಷ್ಟ್ರೀಯ ಪಿಂಚಣಿ ಯೋಜನೆಯಡಿ (ಎನ್‌ಪಿಎಸ್) ಇರುವ ಸುಮಾರು 23 ಲಕ್ಷ ಕೇಂದ್ರ ಸರ್ಕಾರಿ ನೌಕರರಿಗೆ ಮೂಲ ವೇತನದ ಶೇ 50ರಷ್ಟನ್ನು ಪಿಂಚಣಿಯಾಗಿ ನೀಡಲು ಕೇಂದ್ರ ಸಚಿವ ಸಂಪುಟ ಶನಿವಾರ ಅನುಮೋದನೆ ನೀಡಿದೆ.

2004ರ ಏಪ್ರಿಲ್ 1ರ ಬಳಿಕ ಕೆಲಸಕ್ಕೆ ಸೇರಿದ ನೌಕರರಿಗೆ ಎನ್‌ಪಿಎಸ್ ಅನ್ವಯವಾಗುತ್ತಿದೆ. ಸಂಪುಟ ಸಭೆಯ ನಿರ್ಧಾರಗಳನ್ನು ಪ್ರಕಟಿಸಿದ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್, ಏಕೀಕೃತ ಪಿಂಚಣಿ ಯೋಜನೆಯಡಿ (ಯುಪಿಎಸ್) ಸರ್ಕಾರಿ ನೌಕರರು ನಿವೃತ್ತಿಯ ಹಿಂದಿನ 12 ತಿಂಗಳ ಸರಾಸರಿ ಮೂಲ ವೇತನದ ಕನಿಷ್ಠ ಶೇ 50ರಷ್ಟನ್ನು ಪಿಂಚಣಿಯಾಗಿ ಪಡೆಯಲು ಅರ್ಹರಾಗಿರುತ್ತಾರೆ ಎಂದರು.

ಎನ್‌ಪಿಎಸ್ ಆಯ್ಕೆ ಮಾಡಿಕೊಂಡಿರುವ ನೌಕರರಿಗೆ ಈಗ ಏಕೀಕೃತ ಪಿಂಚಣಿ ಯೋಜನೆಯ ಆಯ್ಕೆಗೆ ಅವಕಾಶ ಸಿಗಲಿದೆ. ಕನಿಷ್ಠ 25 ವರ್ಷ ಕೆಲಸ ಮಾಡಿದವರಿಗೆ ಮೂಲ ವೇತನದ ಶೇ 50ರಷ್ಟು ಪಿಂಚಣಿಯಾಗಿ ಸಿಗಲಿದೆ. ಅದಕ್ಕಿಂತ ಕಡಿಮೆ ವರ್ಷ ಕೆಲಸ ಮಾಡಿದವರಿಗೆ ಸಿಗುವ ಪಿಂಚಣಿಯ ಮೊತ್ತ ಕೆಲಸ ಮಾಡಿದ ವರ್ಷಗಳಿಗೆ ಅನುಗುಣವಾಗಿ ನಿಗದಿಯಾಗಲಿದೆ.

ಸರ್ಕಾರಿ ನೌಕರರ ಪಿಂಚಣಿ ಯೋಜನೆಯನ್ನು ಪರಿಶೀಲಿಸಲು ಹಣಕಾಸು ಸಚಿವಾಲಯವು ಕಳೆದ ವರ್ಷ ಹಣಕಾಸು ಕಾರ್ಯದರ್ಶಿ ಟಿ.ವಿ ಸೋಮನಾಥನ್ ನೇತೃತ್ವದಲ್ಲಿ ಸಮಿತಿಯನ್ನು ರಚಿಸಿತ್ತು. ರಾಷ್ಟ್ರೀಯ ಪಿಂಚಣಿ ವ್ಯವಸ್ಥೆಯ ಈಗಿನ ನಿಯಮಗಳಲ್ಲಿ ಅಗತ್ಯವಿದ್ದರೆ ಬದಲಾವಣೆಗಳನ್ನು ತರುವಂತೆ ಸೂಚಿಸಿತ್ತು.

ಬಿಜೆಪಿಯೇತರ ಪಕ್ಷಗಳ ಆಡಳಿತವಿರುವ ಹಲವು ರಾಜ್ಯಗಳು ಹಳೆಯ ಪಿಂಚಣಿ ಯೋಜನೆಗೆ (ಒಪಿಎಸ್) ವಾಪಸಾಗಲು ನಿರ್ಧರಿಸಿದ್ದವು. ಕೆಲವು ರಾಜ್ಯಗಳಲ್ಲಿ ನೌಕರರ ಸಂಘಟನೆಗಳು ಕೂಡಾ ಒಪಿಎಸ್ ಜಾರಿಗೆ ಒತ್ತಾಯಿಸುತ್ತಾ ಬಂದಿವೆ.

4ನೇ ಪುಟ ನೋಡಿ

ಏಕೀಕೃತ ಪಿಂಚಣಿ ಯೋಜನೆಯ ಪ್ರಮುಖ ಅಂಶಗಳು

- ಕನಿಷ್ಠ 10 ವರ್ಷಗಳ ಸೇವೆಯ ಬಳಿಕ ನಿವೃತ್ತಿಯಾಗುವ ಸರ್ಕಾರಿ ನೌಕರರಿಗೆ ತಿಂಗಳಿಗೆ ₹ 10,000 ಪಿಂಚಣಿಯ ಭರವಸೆಯನ್ನು ಇದು ನೀಡುತ್ತದೆ
- ಪಿಂಚಣಿದಾರರ ಸಾವಿನ ಬಳಿಕ ಅವರ ಕುಟುಂಬಕ್ಕೆ ಶೇ 60ರಷ್ಟು (ಪಿಂಚಣಿದಾರ ಪಡೆದ ಕೊನೆಯ ತಿಂಗಳ ಪಿಂಚಣಿ ಮೊತ್ತದಲ್ಲಿ) ಕುಟುಂಬ ಪಿಂಚಣಿ ದೊರೆಯಲಿದೆ
- ಪ್ರಸ್ತುತ ಚಾಲ್ತಿಯಲ್ಲಿರುವ ಎನ್‌ಪಿಎಸ್‌ನಲ್ಲಿ ನೌಕರರು ಶೇ 10ರಷ್ಟು ಕೊಡುಗೆ ನೀಡುತ್ತಿದ್ದರೆ, ಕೇಂದ್ರ ಸರ್ಕಾರ ಶೇ 14ರಷ್ಟು ಕೊಡುಗೆ ನೀಡುತ್ತಿದೆ. ಯುಪಿಎಸ್‌ನಲ್ಲಿ ಕೇಂದ್ರದ ಕೊಡುಗೆ ಶೇ 18.5ಕ್ಕೆ ಏರಲಿದ್ದು, ನೌಕರರ ಕೊಡುಗೆಯಲ್ಲಿ ಯಾವುದೇ ವ್ಯತ್ಯಾಸ ಇರುವುದಿಲ್ಲ
- ಪಿಂಚಣಿಯ ಬಾಕಿ ಪಾವತಿಗೆ ₹ 800 ಕೋಟಿ ಖರ್ಚಾಗುತ್ತದೆ. ಅಲ್ಲದೆ ಕೇಂದ್ರದ ಕೊಡುಗೆಯ ಪಾಲು ಏರುವುದರಿಂದ ಹೆಚ್ಚುವರಿಯಾಗಿ ₹6,250 ಕೋಟಿ ಹೊರೆಯಾಗುತ್ತದೆ
- ರಾಜ್ಯ ಸರ್ಕಾರಗಳು ಯುಪಿಎಸ್ ಸೇರಲು ಬಯಸಿದರೆ, ಈ ಯೋಜನೆಯಿಂದ ಪ್ರಯೋಜನ ಪಡೆಯುವ ನೌಕರರ ಸಂಖ್ಯೆ 90 ಲಕ್ಷಕ್ಕೆ ಏರಲಿದೆ. ಆಗ, ಆಯಾ ರಾಜ್ಯ ಸರ್ಕಾರಗಳು ಹೆಚ್ಚುವರಿ ಹೊರೆಯನ್ನು ಭರಿಸಬೇಕಾಗುತ್ತದೆ
- ಗ್ರಾಚ್ಯುಟಿಯ ಜತೆಗೆ ನಿವೃತ್ತಿ ವೇಳೆಯಲ್ಲಿ ನೌಕರರಿಗೆ ಇಡುಗಂಟು ಸಿಗಲಿದೆ. ನೌಕರ ಪೂರ್ಣಗೊಳಿಸಿದ ಪ್ರತಿ 6 ತಿಂಗಳ ಸೇವೆಗೆ ಅನ್ವಯವಾಗುವಂತೆ ಒಂದು ತಿಂಗಳ ಮೂಲ ವೇತನ ಮತ್ತು ಡಿ.ಎಯ 10ನೇ 1 ಭಾಗವನ್ನು ಇದು ಒಳಗೊಂಡಿರುತ್ತದೆ

> ಏಕೀಕೃತ ಪಿಂಚಣಿ ಯೋಜನೆಯು ಸರ್ಕಾರಿ ನೌಕರರಿಗೆ ಘನತೆ ಮತ್ತು ಆರ್ಥಿಕ ಭದ್ರತೆಯನ್ನು ಖಾತರಿಗೊಳಿಸುತ್ತದೆ
> **ನರೇಂದ್ರ ಮೋದಿ,** ಪ್ರಧಾನಿ

ಕಳೆದ ಎರಡು ದಶಕಗಳಲ್ಲಿ ರಾಜ್ಯದಲ್ಲಿ ಅರಣ್ಯ ಪ್ರದೇಶದ ವಿಸ್ತಾರ ಇಳಿಮುಖ

ಅರಣ್ಯೀಕರಣ ಪ್ರಚಾರಕ್ಕೆ ಮಾತ್ರ?

2002ರ ಪ್ರಕಾರ: 43.35 ಲಕ್ಷ ಹೆಕ್ಟೇರ್ ಒಟ್ಟು ಪ್ರದೇಶದಲ್ಲಿ ಹರಡಿದ ಅರಣ್ಯ | 22.61% ರಷ್ಟು ರಾಜ್ಯದ ಅರಣ್ಯ ಪ್ರದೇಶದ ಹರವು

2023ರ ಪ್ರಕಾರ: 40.67 ಲಕ್ಷ ಹೆಕ್ಟೇರ್‌ಗೆ ಸಾಲಿಗೆ ಕುಸಿತ | 21.21% ಗೆ ಒಟ್ಟಾರೆ ಅರಣ್ಯ ಪ್ರದೇಶದ ವಿಸ್ತಾರ ಇಳಿಕೆ

● ಶಶಿಕಾಂತ ಎಸ್. ಶೆಂಬೆಳ್ಳಿ

ಒಳನೋಟ

ಬೀದರ್: ಬಯಲು ಪ್ರದೇಶದಲ್ಲಿ ನೆಡಲು, ನಾಗರಿಕರಿಗೆ ವಿತರಿಸಲು ತೆಗೆದುಕೊಂಡು ಹೋಗಿದ್ದ ನೂರಾರು ಸಸಿಗಳು ರಸ್ತೆಯ ಅಕ್ಕಪಕ್ಕ ಅನಾಥವಾಗಿ ಬಿದ್ದಿದ್ದವು. ಇದನ್ನು ನೋಡಿ ಸ್ಥಳೀಯರು ಆಕ್ಷೇಪಿಸಿದ ನಂತರ ಅರಣ್ಯ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಅಲ್ಲಿಗೆ ದೌಡಾಯಿಸಿ ಬಂದರು. ಆನಂತರ ಸಸಿಗಳನ್ನು ನೆಟ್ಟು, ಜನರಿಗೂ ವಿತರಿಸಿದರು. ಕೆಲ ದಿನಗಳ ಹಿಂದೆ ಬೀದರ್ ತಾಲ್ಲೂಕಿನ ಅಮಲಾಪುರ, ಶಹಾಪುರ ಸಮೀಪ ನಡೆದ ಈ ಘಟನೆ ಸಾಮಾಜಿಕ ಜಾಲತಾಣಗಳಲ್ಲೂ ಹರಿದಾಡಿ ಚರ್ಚೆಗೆ ಆಸ್ಪದ ಮಾಡಿಕೊಟ್ಟಿತು. ಬೀದರ್ ಹೊರವಲಯದಲ್ಲಿರುವ ರೇಷ್ಮೆ ಇಲಾಖೆಗೆ ಸೇರಿದ ನಾಲ್ಕೈದು ಎಕರೆ ಜಾಗದಲ್ಲಿ ಹೋದ ವರ್ಷ ವನಮಹೋತ್ಸವಕ್ಕೆ ನೂರಾರು ಸಸಿಗಳನ್ನು ನೆಡಲಾಗಿತ್ತು.

ಈಗ ಅವುಗಳೆಲ್ಲ ಎತ್ತರಕ್ಕೆ ಬೆಳೆದಿವೆ. ಇಡೀ ಪ್ರದೇಶ ಹಸಿರಿನಿಂದ ನಳನಳಿಸುತ್ತಿದೆ. ಅಲ್ಲಿನ ಸಿಬ್ಬಂದಿ ಅವುಗಳನ್ನು ಜತನದಿಂದ ಪೋಷಿಸುತ್ತಿರುವುದರ ಫಲವಿದು. ಈ ಪ್ರದೇಶ ಮುಖ್ಯ ರಸ್ತೆಗೆ ಹೊಂದಿಕೊಂಡಿದೆ. ಜನಪ್ರತಿನಿಧಿಗಳು, ಅಧಿಕಾರಿಗಳು ನಿತ್ಯ ಇದರ ಸನಿಹದಿಂದಲೇ ಓಡಾಡುತ್ತಾರೆ. ಅರಣ್ಯ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆಯವರು ಇಲ್ಲಿಂದಲೇ ವನ ಮಹೋತ್ಸವಕ್ಕೆ ಚಾಲನೆ ಕೊಟ್ಟು, ಅದರ ಮೇಲೆ ವಿಶೇಷ ನಿಗಾ ಇರಿಸಿದ್ದಾರೆ. ಈ ಎಲ್ಲಾ ಕಾರಣದಿಂದ ಇಲ್ಲಿ ನೆಟ್ಟಿರುವ ಗಿಡಗಳನ್ನು ಉತ್ತಮ ರೀತಿಯಲ್ಲಿ ಪೋಷಿಸಲಾಗುತ್ತಿದೆ.

ಈ ಮೇಲಿನ ಎರಡೂ ತಾಣಗಳಲ್ಲಿ ನಡೆದ ಬೆಳವಣಿಗೆಗಳನ್ನು ಗಮನಿಸಿದರೆ ಅರಣ್ಯೀಕರಣ ಯಾವ ರೀತಿಯಲ್ಲಿ ನಡೆಯುತ್ತಿದೆ ಎನ್ನುವುದನ್ನು ಯಾರು ಬೇಕಾದರೂ ಅಂದಾಜಿಸಬಹುದು.



ಕಲಬುರಗಿಯ ಕೇಸರಟಗಿ ಬಳಿ ಅರಣ್ಯ ಇಲಾಖೆಯ ಆವರಣದಲ್ಲಿ ಸಿಬ್ಬಂದಿ ಸಸಿಗಳನ್ನು ಆರೈಕೆ ಮಾಡುತ್ತಿರುವುದು ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

6ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ




'ಸಿದ್ದರಾಮಯ್ಯ ನಾಯಕತ್ವ ಅಬಾಧಿತ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಕರ್ನಾಟಕದಲ್ಲಿ ನಾಯಕತ್ವ ಬದಲಾವಣೆ ಪ್ರಶ್ನೆಯೇ ಇಲ್ಲ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೈಕಮಾಂಡ್ ನಾಯಕರನ್ನು ಶುಕ್ರವಾರ ಭೇಟಿ ಮಾಡಿ, ಸಮಾಲೋಚನೆ ನಡೆಸಿದ್ದರು.

ಆ ಬೆನ್ನಲ್ಲೆ 'ಪ್ರಜಾವಾಣಿ' ಜೊತೆ ಮಾತನಾಡಿದ ವೇಣುಗೋಪಾಲ್, 'ನಾವು ಮುಖ್ಯಮಂತ್ರಿಗೆ ಪೂರ್ಣ ಬೆಂಬಲ ನೀಡುತ್ತೇವೆ. ಪಕ್ಷದ ಕೇಂದ್ರ ನಾಯಕತ್ವವಷ್ಟೇ ಅಲ್ಲ, ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಇಡೀ ಕರ್ನಾಟಕ ಕಾಂಗ್ರೆಸ್ ಪಕ್ಷ ಸಿದ್ದರಾಮಯ್ಯ ಪರ ನಿಂತಿದೆ' ಎಂದರು.



ವೇಣುಗೋಪಾಲ್

'ಸಿದ್ದರಾಮಯ್ಯ ಭ್ರಷ್ಟ ಎಂದರೆ ಯಾರೂ ನಂಬುವುದಿಲ್ಲ. ಕಾಂಗ್ರೆಸ್ ಸರ್ಕಾರವನ್ನು ಅಸ್ಥಿರಗೊಳಿಸುವ ಮತ್ತು ಹಿಂದುಳಿದ ವರ್ಗದಿಂದ ಬಂದ ಮುಖ್ಯಮಂತ್ರಿಯನ್ನು ಪದಚ್ಯುತಗೊಳಿಸಲು ಬಿಜೆಪಿ ಪ್ರಯತ್ನಿಸುತ್ತಿದೆ. ಮುಖ್ಯಮಂತ್ರಿ ವಿರುದ್ಧ ಪಿತೂರಿ ನಡೆಯುತ್ತಿದೆ. ಹೀಗಾಗಿ, ಅವರ ಬೆಂಬಲಕ್ಕೆ ಹೈಕಮಾಂಡ್ ಗಟ್ಟಿಯಾಗಿ ನಿಲ್ಲಲಿದೆ ಎನ್ನುವುದನ್ನು ಸಿದ್ದರಾಮಯ್ಯ ಅವರಿಗೆ ಸ್ಪಷ್ಟವಾಗಿ ತಿಳಿಸಲಾಗಿದೆ' ಎಂದರು.

5ನೇ ಪುಟ ನೋಡಿ

'ರಾಷ್ಟ್ರಪತಿಗೆ ದೂರು ನೀಡಲು ಅವಕಾಶವಿದೆ'



'ಮುಡಾ ಪ್ರಕರಣದಲ್ಲಿ ರಾಜ್ಯಪಾಲರ ನಡೆಯ ವಿರುದ್ಧ ರಾಷ್ಟ್ರಪತಿಗೆ ದೂರು ನೀಡಲು ಅವಕಾಶವಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.


'ಮುಡಾ ಪ್ರಕರಣಕ್ಕೆ ಸಂಬಂಧಿಸಿ ರಾಜ್ಯಪಾಲರ ಮತ್ತು ವಿರೋಧ ಪಕ್ಷಗಳ ನಡೆ, ರಾಜ್ಯದಲ್ಲಿ ನಡೆಯುತ್ತಿರುವ ರಾಜಕೀಯ ಬೆಳವಣಿಗೆಗಳ ಬಗ್ಗೆ ಪಕ್ಷದ ವರಿಷ್ಠರ ಜೊತೆ ಚರ್ಚೆ ನಡೆಸಲಾಗಿದೆ' ಎಂದರು.

'ಉಪ ಮುಖ್ಯಮಂತ್ರಿ, ಗೃಹ ಸಚಿವರು ಸೇರಿದಂತೆ ಕೆಲವು ಸಚಿವರ ಜೊತೆ ದೆಹಲಿಗೆ ತೆರಳಿ, ರಾಜ್ಯದಲ್ಲಿ ನಡೆಯುತ್ತಿರುವ ರಾಜಕೀಯ ಬೆಳವಣಿಗೆಗಳ ಬಗ್ಗೆ ವರಿಷ್ಠರಿಗೆ ವಿವರಿಸಿದ್ದೇನೆ. ವಿಪಕ್ಷಗಳು ಪಾದಯಾತ್ರೆ ಮಾಡಿದ್ದು, ಅದನ್ನು ರಾಜಕೀಯವಾಗಿ ಎದುರಿಸುವ ಬಗ್ಗೆಯೂ ಚರ್ಚೆ ನಡೆಸಲಾಗಿದೆ' ಎಂದರು.

ಕಾರ್ಕಳ: ಯುವತಿ ಅಪಹರಿಸಿ ಅತ್ಯಾಚಾರ

ಪ್ರಜಾವಾಣಿ ವಾರ್ತೆ

ಕಾರ್ಕಳ (ಉಡುಪಿ): ಇನ್‌ಸ್ಟಾಗ್ರಾಂ ಮೂಲಕ ಪರಿಚಯ ಮಾಡಿಕೊಂಡ ಯುವತಿಯನ್ನು ಅಪಹರಿಸಿ ಮದ್ಯದಲ್ಲಿ ಅಮಲು ಪದಾರ್ಥ ಬೆರೆಸಿ ಕುಡಿಸಿ ಅತ್ಯಾಚಾರ ಎಸಗಿದ ಪ್ರಕರಣ ಇಲ್ಲಿನ ರಂಗನಪಲ್ಕೆಯಲ್ಲಿ ಶುಕ್ರವಾರ ನಡೆದಿದೆ. ಆರೋಪಿಗಳಿಬ್ಬರನ್ನು ಬಂಧಿಸಲಾಗಿದೆ.



ಅಲ್ತಾಫ್



ಕ್ಸೇವಿಯರ್

ಇಲ್ಲಿನ ಬಂಗ್ಲೆಗುಡ್ಡೆ ನಿವಾಸಿ ಅಲ್ತಾಫ್ (34) ಮತ್ತು ಕ್ಸೇವಿಯರ್ ರಿಚರ್ಡ್ ಕ್ವಾಡ್ರಸ್ (35) ಬಂಧಿತರು. 21 ವರ್ಷದ ಯುವತಿಗೆ ಮೂರು ತಿಂಗಳ ಹಿಂದೆ ಇನ್‌ಸ್ಟಾಗ್ರಾಂ ಮೂಲಕ ಅಲ್ತಾಫ್‌ನ ಪರಿಚಯವಾಗಿತ್ತು. ಶುಕ್ರವಾರ ಮಧ್ಯಾಹ್ನ ಆಕೆಯನ್ನು ಸ್ಥಳವೊಂದಕ್ಕೆ ಬರುವಂತೆ ಆತ ತಿಳಿಸಿದ್ದ. ಅಲ್ಲಿಗೆ ಹೋದಾಗ ವಾಹನದಲ್ಲಿ ಕರೆದುಕೊಂಡು ಹೋಗಿದ್ದ ಎಂದು ದೂರಿನಲ್ಲಿ ತಿಳಿಸಿರುವುದಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣ್ ಕುಮಾರ್ ತಿಳಿಸಿದ್ದಾರೆ.

ರಂಗನಪಲ್ಕೆಯಲ್ಲಿ ವಾಹನ ನಿಲ್ಲಿಸಿ ಅಮಲು ಪದಾರ್ಥ ಬೆರೆಸಿದ್ದ ಮದ್ಯ ನೀಡಿ ಅಲ್ತಾಫ್ ಅತ್ಯಾಚಾರ ಎಸಗಿದ್ದಾನೆ. ಬಳಿಕ ಆಕೆಯನ್ನು ಆಕೆಯ ಮನೆಯ ಬಳಿ ಬಿಟ್ಟು ಹೋಗಿದ್ದಾನೆ. ಅಸ್ವಸ್ಥಗೊಂಡಿದ್ದ ಯುವತಿಗೆ ಮಣಿಪಾಲದ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದೆ ಎಂದಿದ್ದಾರೆ.

ಅಲ್ತಾಫ್‌ನ ಗೆಳೆಯ ಕ್ಸೇವಿಯರ್ ಮದ್ಯದ ಬಾಟಲಿ ನೀಡಿದ್ದ. ಇನ್ನೊಬ್ಬ ಗೆಳೆಯನೂ ಜೊತೆ ಇದ್ದ. ಆರೋಪಿ ಬಳಸಿದ್ದ ವಾಹನವನ್ನು ವಶಕ್ಕೆ ಪಡೆಯಲಾಗಿದೆ ಎಂದು ತಿಳಿಸಿರುವ ಅವರು ಇದನ್ನು ಸಾಮೂಹಿಕ ಅತ್ಯಾಚಾರ ಎಂದು ಸುಳ್ಳು ಮಾಹಿತಿ ಹರಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

5ನೇ ಪುಟ ನೋಡಿ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

PROPERTY CORNER

ಕ್ಲಾಸಿಫೈಡ್ಸ್



BANASHANKARI 6TH-STAGE WANTED/ AVAILABLE BDA RESIDENTIAL AND COMMERCIAL SITES IMMEDIATE SETTLEMENT CONTACT: 8050908920/ 9986866661

AVAILABLE BDA SITES BANASHANKARI 6th-4th Block 30x40- W/F Near R.V. Architecture College 7thBlock Near RVK School 30x40-S/F, 20x30-E/F- 9535575774/ 9343668888



Kempegowda Layout

NADAPRABHU KEMPEGOWDA Layout 8th block D sector 163X100 Semi Commercial South West Corner Site Sale.₹4500/-. Contact:9686469799

35X30 CORNER Revenue Site Sale"40ft" Road Opposite Podar School, Kempeygowda Layout 4900/- Negotiable: 9731652042

BDA KEMPEGOWDA LAYOUT 50×80 COMMERCIAL DOUBLE ROAD NEAR 300 FEET ROAD OWNER CONTACT: 7899570235

BDA KEMPEGOWDA LAYOUT 50×80 COMMERCIAL DOUBLE ROAD EAST FACING OWNER: 9663005859/ 9449556869

KEMPEGOWDA LAYOUT, BDA SITE FOR SALE 20X30, 30X40, 40X60, 50X80 CONTACT KUMAR: 99451 19449

BDA KEMPEGOWDA LAYOUT 40×60 COMMERCIAL EAST FACING CONTACT: OWNER 9035151657





REAL ESTATE SELLING

Sites

Anjanapura

FOR SALE BBMP 'A' Khata, 40x60 south-facing site on 33 ft road, in Adithya Garden, Anjanapura 80 ft Road, Loan available. Call: 9986655668.

ANJANAPURA/ BANASHANKARI 6th Stage 80/ 60 Feet Road, Commercial/ Residential Site 40x60 Sale: 9972720488/ 9880448478.

Arkavathi Layout

55X100 PROPERTY For Sale at Arkavathi Latout, Srirampura (Revenue Title). Contact: 7676900174 6363496142

Banashankari

BANASHANKARI 6TH Stg,4th H'Block,30x40,S/F,30" Road Near Vajarahalli Metro Station.4th Blk,30x40_North Nr RV College_Owner :9845698489, 9916809188

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

BANASHANKARI 6TH Stage, 10th Block, 20x30,Site For Sale,Very Good Location Contact: 8553482090/9066138498

SALE 40X60 Site in Banashankari 6th Stage 4th 'B' Block Near Prarthana Enclave. Price 12,000/ Sqft Call: 9845039831

BSK 6TH Stage, 2nd_Block 714sft. corner site with Borewell 40feet Road, Mahalakshmi Enterprise- 9845144365

HSR Layout

HSR SITE FOR SALE 40X60 50X80 30X40 RENTAL INCOME BUILDINGS COMMERCIAL & RESIDENTIAL AVAILABLE: 9900966336

SALE 3RD Sector Land Area 2400 Sft W/F Built up Area 14,000/- Sft Price 16Cr. Call Rao 8660189539 Brokers Excuse

Sahakarnagar

SALES & Buying MCECHS 12500/ Psft, Sahakaranagar 21,000/, Arkavathi 12000/, GKVK 13000/ Vidyaranyapura 10000: 9449970278

Intl Airport Road

"SALE SITE for`investment 30x40`Corner BIAPPA approved`Before International`Airport Toll`free`Road towards_K.R.Puram close`to_KIADB &`Bagalur Police_station Rs.65`Lakhs. 9845286505"

Jayanagar

JAYANAGAR 3RD Block 40x60,25000/-Nr Orthopedic center Jpnagar7th Phase MS Ramaiahcity 30x40_Corner4BHK Duplex House 2.10Cr: 9845600007

"SALE 40X60 North-facing Residential site @Jayanagar 3rd`Block Good location, Genuine buyers Call: 7760388034/ 9242135834"

BDA SITE For Sale, Jayanagar 3rd Block, 44x60,West Facing 38000/- Negotioble Contact : 9845212877

***JAYANAGAR* 5TH** Block 80 feet Road near RV Metro Station 45x90 Site sale. Contact: 9945079777

J P Nagar

SALE CORNER BDA Plot 60x60 Facing N&W JP.Nagar 2 Phase. Price 26K Psft slightly negotiable. Only Genuine Buyers- Call: 95351-64098/ 83104-48403

JPNAGAR 1ST Phase, 40x60, Price 25900/- Negotioble.3rd Phase 30x40, Price 3.70Crores Gopal: 9845704509

Kengeri

KENGERI UPANAGAR BDA Site 25X42. E/F Banashankari 6th Stage, 7th Block. 20X30. W/F 9632822225, 9110467577.

Koramangala

20X40 COMMERCIAL SITE OFF 80 FEET ROAD KORAMANGALA, PRICE 22,000/= PER SQFT 'NITI ESTATES' 9900001973

Kanakapura Road

SITE FOR SALE NarayanaNagar 2nd Block 30x40 East Facing, BDA Approved (Bank Officer Layout). 6363726250.

Nagarabhavi

NAGARABAVI, MALLATHAHALLI Village, ITI_employees Co-operative Society 30x40`Site No.753 16,000/- &.418 15,000/-`Final, both South_facing for sale, Krishna: 9845059328

SALE: SITE 30x60 Nagarabhavi 2nd Stage 'A' Khata. Bank loan Available. Immediate Registration. Genuine Buyers. 6361819741.

"30X45 NAGARBHAVI BDA Complex North, Vishweshwaraiah 4th Block 50x80 80`feet Road. Feel`free Contact: 7259675150"

Nelamangala

"30X50 SOUTH facing Site for sale`@ Nelamangala Rashi Developers close`to 'D'Mart, Tumkur Highway. 9845268611"

Rajajinagar

***RAJAJINAGAR* 5TH** Block 68th cross 1517sqft South Facing Rs.23500/- sqft Slightly Negotiable. Contact: 9686469799

Ramamurthy Nagar

RAMAMURTHY NAGAR SITE for Sale, Plot Area; 1575 SqFt, with 2 BHK house, 620 SqFT, near Ramamurthy nagar main road. No Brokers, only genuine buyers contact: 9900869886/ 9845274659

‘ಸಿ.ಎಂ. ಗಾದಿಗೆ ‘ಮ್ಯೂಸಿಕಲ್ ಚೇರ್’ ಸ್ಪರ್ಧೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲಿಕಾರ್ಜುನ ಖರ್ಗೆ, ಡಿ.ಕೆ. ಶಿವಕುಮಾರ್, ಜಿ. ಪರಮೇಶ್ವರ ಮಧ್ಯೆ ಮುಖ್ಯಮಂತ್ರಿ ಗಾದಿಗಾಗಿ ‘ಮ್ಯೂಸಿಕಲ್ ಚೇರ್’ ಸ್ಪರ್ಧೆ ನಡೆಯುತ್ತಿದೆ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಟೀಕಿಸಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ಬಿಜೆಪಿ ಸರ್ಕಾರ ಬೀಳಿಸುವ ಕೆಲಸ ಮಾಡುವುದಿಲ್ಲ. ಅವರ ನಡುವಿನ ಕುರ್ಚಿಯ ಕಿತ್ತಾಟದಿಂದಲೇ ಸರ್ಕಾರ ಪತನವಾಗಲಿದೆ. ಲೋಕಸಭೆ ಚುನಾವಣೆಯಲ್ಲಾದ ಸೋಲಿನ ನಂತರ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ‘ಜನರಿಗೆ ನಿಯತ್ತಿಲ್ಲ’ ಎಂದು ನಿಂದಿಸುತ್ತಿದ್ದಾರೆ. ಕಾಂಗ್ರೆಸ್ ಭ್ರಷ್ಟಾಚಾರಕ್ಕೆ ಅಧಿಕಾರಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಹೇಳಿದರು.

‘ರಾಜಭವನ ಎಂದರೆ ಬಿಜೆಪಿ ಕಚೇರಿ ಎನ್ನುವುದು ಹಳಸಿದ ಮಾತು. ರಾಜ್ಯಪಾಲರು ಮಸೂದೆ ವಾಪಸ್ ಕಳುಹಿಸಿದಾಗ ಸ್ಪಷ್ಟೀಕರಣ ಕೊಟ್ಟು ಮನವರಿಕೆ ಮಾಡುವುದು ಸರ್ಕಾರದ ಕರ್ತವ್ಯ’ ಎಂದರು.

ಶಿಕ್ಷಕರ ಕಲ್ಯಾಣ ನಿಧಿ ಬಳಕೆಯಲ್ಲಿ ತಾರತಮ್ಯ ಆರೋಪ

ಖಾಸಗಿ ಶಾಲೆ: ಆ.26ರಿಂದ ಕಪ್ಪುಪಟ್ಟಿ ಧರಿಸಿ ಕೆಲಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಕ್ಷಕರ ಕಲ್ಯಾಣ ನಿಧಿ ಬಳಕೆಯಲ್ಲಿನ ತಾರತಮ್ಯ ಖಂಡಿಸಿ ಖಾಸಗಿ ಶಾಲಾ ಶಿಕ್ಷಕರು ಆ. 26ರಿಂದ ಕಪ್ಪುಪಟ್ಟಿ ಧರಿಸಿ ಕೆಲಸಕ್ಕೆ ಹಾಜರಾಗಲಿದ್ದಾರೆ.

ಈ ಕುರಿತು ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ ಸಂಘದ ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ,‘ರಾಜ್ಯದ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ನಾಲ್ಕು ಲಕ್ಷಕ್ಕೂ ಅಧಿಕ ಶಿಕ್ಷಕರು ಕೆಲಸ ಮಾಡುತ್ತಿದ್ದಾರೆ. ಪ್ರತಿ ವರ್ಷ ಶಿಕ್ಷಕರ ಕಲ್ಯಾಣ ನಿಧಿಗೆ ಪ್ರಾಥಮಿಕ ಶಿಕ್ಷಕರಿಂದ ₹50 ಹಾಗೂ ಪ್ರೌಢಶಾಲಾ ಶಿಕ್ಷಕರು, ಪದವಿಪೂರ್ವ ಕಾಲೇಜು ಉಪನ್ಯಾಸಕರಿಂದ ₹100 ಸಂಗ್ರಹಿಸಲಾಗುತ್ತಿದೆ. ಆದರೆ, ಸಂಗ್ರಹಿಸಿದ ಹಣವನ್ನು ಸರ್ಕಾರಿ ಶಾಲಾ ಶಿಕ್ಷಕರ ಕಲ್ಯಾಣಕ್ಕಷ್ಟೇ ಬಳಸಲಾಗುತ್ತಿದೆ’ ಎಂದು ದೂರಿದರು.



ಲೋಕೇಶ್ ತಾಳಿಕಟ್ಟೆ

‘ಶಿಕ್ಷಕರು ನಿಧನರಾದರೆ, ಆರೋಗ್ಯ ಸಮಸ್ಯೆಗೆ ತುತ್ತಾದರೆ, ಶಿಕ್ಷಕರ ಮಕ್ಕಳ ಪ್ರತಿಭಾ ಪ್ರೋತ್ಸಾಹಕ್ಕೆ ಶಿಕ್ಷಕರ ನಿಧಿ ಬಳಸಲಾಗುತ್ತದೆ. ಈ ಎಲ್ಲ ಸೌಲಭ್ಯಗಳನ್ನು ಖಾಸಗಿ ಶಾಲಾ ಶಿಕ್ಷಕರಿಗೂ ಅನ್ವಯಿಸಬೇಕು ಎಂದು ಒತ್ತಾಯಿಸಿ ಪ್ರತಿಭಟನಾ ಧ್ವನಿ ಎತ್ತಲಾಗಿದೆ. ಬೇಡಿಕೆ ಈಡೇರದಿದ್ದರೆ ಹೋರಾಟ ತೀವ್ರಗೊಳಿಸುತ್ತೇವೆ’ ಎಂದರು.

ಶಿಕ್ಷಕರ ದಿನಾಚರಣೆ ವೇಳೆ ನೀಡುವ ಅತ್ಯುತ್ತಮ ಶಿಕ್ಷಕರ ಪ್ರಶಸ್ತಿಗೆ ಖಾಸಗಿ ಶಾಲಾ ಶಿಕ್ಷಕರನ್ನು ಪರಿಗಣಿಸಬೇಕು. 1995ರ ನಂತರ ಆರಂಭವಾದ ಕನ್ನಡ ಮಾಧ್ಯಮ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸಬೇಕು. ಗಡಿನಾಡು ಕನ್ನಡ ಶಾಲೆಗಳಲ್ಲಿ ಮಕ್ಕಳು–ಶಿಕ್ಷಕರ ಅನುಪಾತವನ್ನು ಕಡ್ಡಾಯಗೊಳಿಸಬಾರದು ಎಂಬುದೂ ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿದರು.

ಆರ್‌ಟಿಇ ಮರು ಜಾರಿಗೆ ಒತ್ತಾಯ

ಕೇಂದ್ರದ ಯುಪಿಎ ಸರ್ಕಾರ ಬಡ ಮಕ್ಕಳ ಶಿಕ್ಷಣಕ್ಕಾಗಿ 2009ರಲ್ಲಿ ರೂಪಿಸಿದ್ದ ಕಡ್ಡಾಯ ಶಿಕ್ಷಣ ನೀತಿಯ ಸ್ವರೂಪವನ್ನೇ ಬದಲಿಸಲಾಗಿದೆ. ಹಿಂದೆ ಇದ್ದಂತೆ ಆರ್‌ಟಿಇ ಮರುಜಾರಿಗೊಳಿಸಬೇಕು. ಎಲ್ಲ ಖಾಸಗಿ ಶಾಲೆಗಳಲ್ಲೂ ಆರ್‌ಟಿಇ ಅಡಿ ಮಕ್ಕಳನ್ನು ದಾಖಲು ಮಾಡಿಕೊಳ್ಳಲು ಅವಕಾಶ ಮಾಡಿಕೊಡಬೇಕು ಎಂದು ಲೋಕೇಶ್ ತಾಳಿಕಟ್ಟೆ ಒತ್ತಾಯಿಸಿದರು.

ಸಹಾಯಕ ಧರ್ಮಾಧ್ಯಕ್ಷರಿಗೆ ಧರ್ಮದೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಥೋಲಿಕ್ ಬೆಂಗಳೂರು ಧರ್ಮಪ್ರಾಂತ್ಯದ ನೂತನ ಸಹಾಯಕ ಧರ್ಮಾಧ್ಯಕ್ಷರಿಗೆ ಶನಿವಾರ ಧರ್ಮದೀಕ್ಷೆ ನೀಡಲಾಯಿತು.

ಸಹಾಯಕ ಧರ್ಮಾಧ್ಯಕ್ಷರಾದ ಆರೋಕ್ಯರಾಜ್ ಸತೀಶ್ ಕುಮಾರ್ ಮತ್ತು ಜೋಸೆಫ್ ಸೂಸೈನಾದನ್ ಅವರನ್ನು ಆರ್ಚ್ ಬಿಷಪ್ ಪೀಟರ್ ಮಚಾಡೊ ನೇತೃತ್ವದಲ್ಲಿ 400 ಧರ್ಮಗುರುಗಳ ಮೆರವಣಿಗೆಯಲ್ಲಿ ಸೇಂಟ್ ಫ್ರಾನ್ಸಿಸ್ ಕ್ಸೇವಿಯರ್ ಕೆಥಡ್ರಲ್ ದೇವಾಲಯಕ್ಕೆ ಕರೆ ತರಲಾಯಿತು.

ಭಕ್ತಿ- ಭಾವದಿಂದ ಸಾರ್ವಜನಿಕರು ಪಾಲ್ಗೊಂಡರು. ಬಳಿಕ ಮೈಸೂರು ಧರ್ಮಕ್ಷೇತ್ರದ ಆಡಳಿತಾಧಿಕಾರಿ ಬರ್ನಾಡ್ ಮೋರಸ್, ಚಿಕ್ಕಮಗಳೂರು ಧರ್ಮಾಧ್ಯಕ್ಷ ತೋಮಸಪ್ಪ ಅಂತೋಣಿಸ್ವಾಮಿ, ಬೆಂಗಳೂರು ಧರ್ಮಾಧ್ಯಕ್ಷ ಪೀಟರ್ ಮಚಾಡೊ ಅವರು ಧರ್ಮದೀಕ್ಷೆ ನೆರವೇರಿಸಿದರು.

ಕೆಥೋಲಿಕ್ ಧರ್ಮಸಭೆಯ ಸಂಪ್ರದಾಯದಲ್ಲಿ ಒಳ್ಳೆಯ ಕುರುಬನ ಪಾತ್ರದ ಕುರಿತು ಆರ್ಚ್ ಬಿಷಪ್ ಪೀಟರ್ ಮಚಾಡೊ, ಉಡುಪಿ ಧರ್ಮಾಧ್ಯಕ್ಷ ಜೆರಾಲ್ಡ್ ಐಸಾಕ್ ಲೋಬೊ, ತಮಿಳುನಾಡಿನ ಧರ್ಮಪುರಿ ಧರ್ಮಾಧ್ಯಕ್ಷ ಲಾರೆನ್ಸ್ ಪಿಯುಸ್ ವಿವರಿಸಿದರು. ಬೈಬಲ್ ಗ್ರಂಥದಲ್ಲಿ ಕುರುಬನಿಗೆ ನೀಡಿರುವ ಪ್ರಾಮುಖ್ಯವನ್ನು ತಿಳಿಸಿಕೊಟ್ಟರು.



ಬೆಂಗಳೂರು ಧರ್ಮಪ್ರಾಂತ್ಯದ ನೂತನ ಸಹಾಯಕ ಧರ್ಮಾಧ್ಯಕ್ಷರಾಗಿ ಆರೋಕ್ಯರಾಜ್ ಸತೀಶ್ ಕುಮಾರ್ ಮತ್ತು ಜೋಸೆಫ್ ಸೂಸೈನಾದನ್ ಅವರು ಶನಿವಾರ ಧರ್ಮದೀಕ್ಷೆ ಪಡೆದರು. ಆರ್ಚ್‌ಬಿಷಪ್ ಪೀಟರ್ ಮಚಾಡೊ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- ಬಲಿಪೂಜೆಯ ಕಾಣಿಕೆ ವಯನಾಡ್ ಸಂತ್ರಸ್ತರಿಗೆ ನೀಡಲು ನಿರ್ಧಾರ
- ನೂತನ ಸಹಾಯಕ ಧರ್ಮಾಧ್ಯಕ್ಷರ ಮೆರವಣಿಗೆ

‘ನೂತನ ಸಹಾಯಕ ಧರ್ಮಾಧ್ಯಕ್ಷರನ್ನು ಅವರ ಭಾಷಾ ಸಾಮರ್ಥ್ಯ, ಬೌದ್ಧಿಕ ಸಾಮರ್ಥ್ಯ ಅಥವಾ ಅವರ ಆಡಳಿತಾತ್ಮಕ ಸಾಮರ್ಥ್ಯದ ಆಧಾರದ ಮೇಲೆ ಆರಿಸಲಾಗಿಲ್ಲ. ಅವರ ದೀನತೆ ಹಾಗೂ ಸರಳತೆಯ ಆಧಾರದ ಮೇಲೆ ಆರಿಸಿಕೊಳ್ಳಲಾಗಿದೆ. ಭಾಷೆ, ಸಂಸ್ಕೃತಿ, ಸಂಪ್ರದಾಯಕ್ಕಿಂತ ಮಿಗಿಲಾದ ಸೇವೆ ನಿಮಗೆ ನೀಡಲಿದ್ದಾರೆ’ ಎಂದು ಪೀಟರ್ ಮಚಾಡೊ ವಿವರಿಸಿದರು.

ಬಲಿಪೂಜೆಯಲ್ಲಿ ಸಂಗ್ರಹವಾದ ಕಾಣಿಕೆಯನ್ನು ಕೇರಳದ ವಯನಾಡಿನ ಭೂಕುಸಿತದ ಸಂತ್ರಸ್ತರಿಗೆ ನೀಡಲು ನಿರ್ಧರಿಸಲಾಯಿತು.

ದೇಶದ 24 ಆರ್ಚ್ ಬಿಷಪ್‌ಗಳು, ಬಿಷಪ್‌ಗಳು, 500 ಧರ್ಮಗುರುಗಳು, ಸನ್ಯಾಸಿನಿ ಯರು, 6,000ಕ್ಕೂ ಅಧಿಕ ಭಕ್ತರು ಭಾಗವಹಿಸಿದ್ದರು. ಸನ್ಮಾನ ಕಾರ್ಯಕ್ರಮದಲ್ಲಿ ರಾಯಭಾರಿ ಪ್ರತಿನಿಧಿ ಅಲ್ಬರ್ಟೊ ನಪಾಲಿಟನೊ ಸಂದೇಶ ನೀಡಿದರು. ಬೆಂಗಳೂರು ಧರ್ಮಕ್ಷೇತ್ರದ ಪಿಆರ್‌ಒ ಜೆ.ಎ. ಕಾಂತರಾಜ್ ಸನ್ಮಾನ ಸಂದೇಶ ನೀಡಿದರು.

ಕೆಪಿಎಸ್‌ಸಿ ಪರೀಕ್ಷೆ ಮುಂದೂಡಲು ಆಗ್ರಹ

ಶೂ ಪಾಲಿಶ್ ಮಾಡುವ ಮೂಲಕ ಪರೀಕ್ಷಾರ್ಥಿಗಳ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗವು (ಕೆಪಿಎಸ್‌ಸಿ) ಆಗಸ್ಟ್ 27ರಂದು ನಡೆಸಲಿರುವ ಪೂರ್ವಭಾವಿ ಪರೀಕ್ಷೆಯನ್ನು ಮುಂದೂಡುವಂತೆ ಆಗ್ರಹಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಅಖಿಲ ಕರ್ನಾಟಕ ವಿದ್ಯಾರ್ಥಿಗಳ ಸಂಘದ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು.

ವಿವಿಧ ಜಿಲ್ಲೆಗಳ ಉದ್ಯೋಗಾಕಾಂಕ್ಷಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಸರ್ಕಾರ ಹಾಗೂ ಕೆಪಿಎಸ್‌ಸಿ ವಿರುದ್ಧ ಆಕ್ರೋಶ ಹೊರಹಾಕಿ ಘೋಷಣೆ ಕೂಗಿದರು. ಹಲವು ವರ್ಷಗಳಿಂದ ಕಷ್ಟಪಟ್ಟು ಅಭ್ಯಾಸ ನಡೆಸಿದ್ದವರನ್ನು ಸರ್ಕಾರವೇ ನಿರುದ್ಯೋಗಿಗಳನ್ನಾಗಿ ಮಾಡಲು ಮುಂದಾಗಿದೆ ಎಂದು ಆಕ್ರೋಶ ಹೊರಹಾಕಿದರು.

‘ಎಲ್ಲ ವರ್ಗದವರಿಗೂ ಅನುಕೂಲ ಆಗಲಿ ಎಂಬ ಕಾರಣಕ್ಕೆ ಭಾನುವಾರ ಪರೀಕ್ಷೆ ನಡೆಸಬೇಕು. ಆದರೆ, ವಾರದ ಮಧ್ಯದಲ್ಲಿ ಪರೀಕ್ಷೆ ನಡೆಸಿ ಅವಕಾಶ ವಂಚಿತರನ್ನಾಗಿ ಮಾಡಲಾಗುತ್ತಿದೆ’ ಎಂದು ನೋವು ತೋಡಿಕೊಂಡರು.



ಕೆಪಿಎಸ್‌ಸಿ ಪರೀಕ್ಷೆ ತೆಗೆದುಕೊಂಡ ಅಭ್ಯರ್ಥಿಗಳು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶೂ ಪಾಲಿಶ್ ಮಾಡುವ ಮೂಲಕ ಶನಿವಾರ ಪ್ರತಿಭಟನೆ ನಡೆಸಿದರು

ಆಗಸ್ಟ್ 27ರಂದು ಯುಜಿಸಿಯ ನೆಟ್ ಪರೀಕ್ಷೆಯೂ ನಡೆಯುತ್ತಿದೆ. ಅಂದೇ ಕೆಪಿಎಸ್‌ಸಿ ಪೂರ್ವಭಾವಿ ಪರೀಕ್ಷೆ ನಿಗದಿಯಾಗಿದೆ. ಎರಡೂ ಪರೀಕ್ಷೆ ತೆಗೆದುಕೊಂಡವರು, ಯಾವುದಾದರೂ ಒಂದು ಪರೀಕ್ಷೆಯಿಂದ ವಂಚಿತರಾಗಬೇಕಿದೆ. ಆದ್ದರಿಂದ, ಕೆಪಿಎಸ್‌ಸಿ ಪರೀಕ್ಷೆಯನ್ನು ಮುಂದೂಡುವಂತೆ ಕೋರಿದರು.

‘ಮಂಗಳವಾರ ಕೇಂದ್ರ ಸರ್ಕಾರ ಹಾಗೂ ಖಾಸಗಿ ಸಂಸ್ಥೆಗಳ ನೌಕರರಿಗೆ ರಜೆ ಸಿಗುವುದಿಲ್ಲ. ಅಲ್ಲದೇ ಪರೀಕ್ಷಾ ಕೇಂದ್ರಗಳೂ 400 ಕಿ.ಮೀ ದೂರದಲ್ಲಿವೆ. ಆ ಸ್ಥಳಕ್ಕೆ ತಲುಪುವುದೂ ಕಷ್ಟವಾಗಿದೆ’ ಎಂದು ಹೇಳಿದರು.

ವಿದ್ಯುತ್ ವೈಫಲ್ಯ: ಮೆಟ್ರೊ ಸಂಚಾರ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ' ಹಸಿರು ಮಾರ್ಗದಲ್ಲಿ ಮೆಜೆಸ್ಟಿಕ್‌ನ ನಾಡಪ್ರಭು ಕೆಂಪೇಗೌಡ ನಿಲ್ದಾಣ ಮತ್ತು ಶ್ರೀರಾಂಪುರ ನಡುವೆ ವಿದ್ಯುತ್ ಪೂರೈಕೆಯಲ್ಲಿ ವೈಫಲ್ಯ ಉಂಟಾಗಿ ರೈಲು ಸಂಚಾರ 12 ನಿಮಿಷ ಸ್ಥಗಿತಗೊಂಡಿತ್ತು.

ಶನಿವಾರ ಸಂಜೆ 4.11ಕ್ಕೆ ವಿದ್ಯುತ್ ಪೂರೈಕೆಯಲ್ಲಿ ವೈಫಲ್ಯ ಕಂಡುಬಂತು. ಇದರಿಂದ ಹಸಿರು ಮಾರ್ಗದಲ್ಲಿ ಮೆಟ್ರೊ ರೈಲುಗಳು ಬೇರೆ ಬೇರೆ ನಿಲ್ದಾಣಗಳಲ್ಲಿ ನಿಂತವು. ರಾಜಾಜಿನಗರ– ನಾಗಸಂದ್ರ ಮತ್ತು ನ್ಯಾಷನಲ್ ಕಾಲೇಜು– ಸಿಲ್ಕ್ ಇನ್‌ಸ್ಟಿಟ್ಯೂಟ್ ವರೆಗೆ ಶಾರ್ಟ್‌ಲೂಪ್ ಸಂಚಾರ ಆರಂಭಿಸಲಾಯಿತು. ರಾಜಾಜಿನಗರದಿಂದ ನ್ಯಾಷನಲ್ ಕಾಲೇಜಿನವರೆಗೆ ಮೆಟ್ರೊ ರೈಲು ಇಲ್ಲದೇ ಕೆಲಹೊತ್ತು ಪ್ರಯಾಣಿಕರು ಪರದಾಡಿದರು.

'ಬಿಎಂಆರ್‌ಸಿಎಲ್ ಸಿಬ್ಬಂದಿ ಸಮಸ್ಯೆ ಸರಿಪಡಿಸಿದರು. ಸಂಜೆ 4.23ರಿಂದ ಸಂಚಾರ ಆರಂಭಗೊಂಡಿತು' ಎಂದು ಬಿಎಂಆರ್‌ಸಿಎಲ್ ಪ್ರಕಟಣೆ ತಿಳಿಸಿದೆ.

ಮಾಂಸ ಮಾರಾಟ ನಿಷೇಧ ನಾಳೆ

ಬೆಂಗಳೂರು: ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಆ.26ರಂದು ಕಸಾಯಿಖಾನೆಯಲ್ಲಿ ಪ್ರಾಣಿವಧೆ ಹಾಗೂ ಮಳಿಗೆಗಳಲ್ಲಿ ಮಾಂಸ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ಬಿಬಿಎಂಪಿ ಪಶುಪಾಲನೆ ವಿಭಾಗದ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

ಡೆಂಗಿ: ಮರಣ 12ಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡೆಂಗಿ ಜ್ವರದಿಂದ ರಾಜ್ಯದಲ್ಲಿ ಇಬ್ಬರು ಮೃತಪಟ್ಟಿರುವುದು ಶನಿವಾರ ದೃಢಪಟ್ಟಿದೆ. ಇದರಿಂದಾಗಿ ಡೆಂಗಿ ಮರಣ ಪ್ರಕರಣಗಳ ಒಟ್ಟು ಸಂಖ್ಯೆ 12ಕ್ಕೆ ಏರಿಕೆಯಾಗಿದೆ.

ಆರೋಗ್ಯ ಇಲಾಖೆ ಮಾಹಿತಿ ಪ್ರಕಾರ, ದಾವಣಗೆರೆ ಹಾಗೂ ಧಾರವಾಡದಲ್ಲಿ ತಲಾ ಒಬ್ಬರು ಡೆಂಗಿಯಿಂದ ಮರಣ ಹೊಂದಿರುವುದು ಖಚಿತಪಟ್ಟಿದೆ. ರಾಜ್ಯದ ಹಲವೆಡೆ ಡೆಂಗಿ ಶಂಕಿತ ಮರಣ ಪ್ರಕರಣಗಳು ವರದಿಯಾದರೂ, ಈ ಪ್ರಕರಣಗಳ 'ಸಾವಿನ ಲೆಕ್ಕಗಳ ವರದಿ' (ಡೆತ್ ಆಡಿಟ್) ಸಿದ್ಧಗೊಂಡು, ಇಲಾಖೆಗೆ ಸಲ್ಲಿಕೆಯಾದ ಬಳಿಕ ಅಧಿಕೃತವಾಗಿ ಘೋಷಿಸಲಾಗುತ್ತದೆ.

ರಾಜ್ಯದಲ್ಲಿ ಶನಿವಾರ ಹೊಸದಾಗಿ 196 ಡೆಂಗಿ ಪ್ರಕರಣಗಳು ದೃಢಪಟ್ಟಿವೆ. ಸದ್ಯ 1,229 ಡೆಂಗಿ ಸಕ್ರಿಯ ಪ್ರಕರಣಗಳಿದ್ದು, 206 ಮಂದಿ ಆಸ್ಪತ್ರೆ ಚಿಕಿತ್ಸೆಗೆ ಒಳಗಾಗಿದ್ದಾರೆ. ಇನ್ನುಳಿದವರು ಮನೆಯಲ್ಲಿಯೆ ಆರೈಕೆ ಪಡೆಯುತ್ತಿದ್ದಾರೆ.

ಈವರೆಗೆ 1.65 ಲಕ್ಷ ಪರೀಕ್ಷೆ ಮಾಡಲಾಗಿದ್ದು, ಒಟ್ಟು 23,526 ಡೆಂಗಿ ಪ್ರಕರಣಗಳು ದೃಢಪಟ್ಟಿವೆ.

ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್.ಪುಷ್ಪ ಹೇಳಿಕೆ

'ಹೋರಾಟಕ್ಕೆ ಕಾವ್ಯ ಶಕ್ತಿ ನೀಡಬಲ್ಲದು'

ಪ್ರಜಾವಾಣಿ ವಾರ್ತೆ



'ಕಾವ್ಯ ಸಂಸ್ಕೃತಿ ಯಾನ: ರಾಜಧಾನಿ ಬೆಂಗಳೂರಿನಿಂದ ಧಾರವಾಡದ ಸಾಧನಕೇರಿ ಕಡೆಗೆ ಕಾವ್ಯ ದೀವಟಿಗೆಯ ಪಯಣ'ಕ್ಕೆ (ಎಡದಿಂದ) ಎಚ್.ಎಲ್.ಪುಷ್ಪ, ಬಸವರಾಜ ಸಾದರ, ಎಸ್.ಜಿ.ಸಿದ್ಧರಾಮಯ್ಯ, ಎಂ.ಪ್ರಕಾಶಮೂರ್ತಿ, ಮಲ್ಲಿಕಾರ್ಜುನಸ್ವಾಮಿ ಮಹಾಮನೆ ಚಾಲನೆ ನೀಡಿದರು –ಪ್ರಜಾವಾಣಿ ಚಿತ್ರ

ಬೆಂಗಳೂರು: 'ಕಾವ್ಯ ಮನಸ್ಸಿಗೆ ನೆಮ್ಮದಿ ಹಾಗೂ ಹೋರಾಟಕ್ಕೆ ಶಕ್ತಿ ನೀಡಬಲ್ಲದು' ಎಂದು ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪ ಹೇಳಿದರು.

ಬೆಂಗಳೂರು ನಗರ ಜಿಲ್ಲೆ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ರಂಗಮಂಡಲ ಸಹಯೋಗದಲ್ಲಿ ಶನಿವಾರ ನಡೆದ 'ಕಾವ್ಯ ಸಂಸ್ಕೃತಿ ಯಾನ: ರಾಜಧಾನಿ ಬೆಂಗಳೂರಿನಿಂದ ಧಾರವಾಡದ ಸಾಧನಕೇರಿ ಕಡೆಗೆ ಕಾವ್ಯ ದೀವಟಿಗೆಯ ಪಯಣ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಪ್ರಸ್ತುತ ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳ ಕುರಿತು ನಾವು ಕವಿತೆಗಳನ್ನು ರಚಿಸಬೇಕು. ಸಮಾಜದಲ್ಲಿರುವ ತಾರತಮ್ಯಗಳನ್ನು ಕಾವ್ಯದ ಮೂಲಕ ಅನಾವರಣಗೊಳಿಸಬೇಕು. ಕಾವ್ಯವನ್ನು ಸರಳವಾಗಿ ಬರೆದು, ಜನರಿಗೆ ತಲುಪಿಸಬೇಕು. ಕವಿತೆಗಳು ಕವಿಗಳಿಂದ ಕವಿಗಳಿಗೆ ಭಿನ್ನವಾಗಿರುತ್ತವೆ. ಮಹಿಳೆಯರು ಹಾಗೂ ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ಕಾವ್ಯದ ಮೂಲಕ ಖಂಡಿಸಬೇಕು' ಎಂದು ಕರೆ ನೀಡಿದರು.

ಸಾಹಿತಿ ಎಸ್.ಜಿ. ಸಿದ್ಧರಾಮಯ್ಯ ಮಾತನಾಡಿ, 'ಕಾವ್ಯಕ್ಕೆ ಅಕ್ಷರ ರೂಪ ದೊರೆತ ನಂತರ ಅದು ನಿರ್ದಿಷ್ಟವಾಗಿ ಇದರದ್ದೇ ಕವಿತೆ ಎಂಬುದನ್ನು ಗುರುತಿಸುವುದಕ್ಕೆ ಅನುಕೂಲವಾಯಿತು. ಅಕ್ಷರ ಪರಂಪರೆಯಲ್ಲಿ ಕವಿಗಳು ತಮ್ಮದೇ ಆದ ಭಾಷೆ, ಅಸ್ಮಿತೆಯ ಮೂಲಕ ಕಾವ್ಯ ರಚಿಸುತ್ತಿದ್ದಾರೆ' ಎಂದರು.

'ಕಣ್ಣಿಗೆ ಕಂಡದನ್ನು ಭಾಷೆಯ ರೂಪದಲ್ಲಿ ಕೊಡುವುದೇ ಕಾವ್ಯ. ಅದು ಅನುಭಾವಿಕ ವ್ಯಾಪ್ತಿಯ ಕಲ್ಪನಾ ಹೊರಹೊಮ್ಮುತ್ತದೆ' ಎಂದರು.

ಕೇಂದ್ರ ಸಾಹಿತ್ಯ ಅಕಾದೆಮಿ ಸದಸ್ಯ ಬಸವರಾಜ ಸಾದರ, ಬೆಂಗಳೂರು ನಗರ ಜಿಲ್ಲೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ. ಪ್ರಕಾಶಮೂರ್ತಿ, ಕಾವ್ಯ ಸಂಸ್ಕೃತಿಯಾನದ ಪ್ರಧಾನ ಸಂಚಾಲಕ ಮಲ್ಲಿಕಾರ್ಜುನಸ್ವಾಮಿ ಮಹಾಮನೆ ಭಾಗವಹಿಸಿದ್ದರು.

ಛಂದಸ್ಸು, ಅಲಂಕಾರ ಶಾಸ್ತ್ರ ಕಲಿತು ಕವಿಗಳಾಗುವುದು ಸಹಜ. ಸಹಜ ಕವಿಗಳಾಗುವುದು ಕಷ್ಟ. ಸಹಜ ಕಾವ್ಯಕ್ಕೆ ಅನುಭವ ಬೇಕಾಗುತ್ತದೆ

ಎಸ್.ಜಿ. ಸಿದ್ಧರಾಮಯ್ಯ, ಸಾಹಿತಿ

ಪರಿಶಿಷ್ಟ ಮಹಿಳೆ ಸಾವು: ಅತ್ಯಾಚಾರ, ಕೊಲೆ ಶಂಕೆ

ಪ್ರಜಾವಾಣಿ ವಾರ್ತೆ

ನಂಜನಗೂಡು (ಮೈಸೂರು ಜಿಲ್ಲೆ): ತಾಲ್ಲೂಕಿನ ಗಟ್ಟವಾಡಿ ಗ್ರಾಮದ ಪರಿಶಿಷ್ಟ ಜಾತಿಯ ಮಹಿಳೆ ಶಶಿಕಲಾ (39) ಅವರ ಮೃತದೇಹವು ಗ್ರಾಮದ ನಂಜುಂಡಪ್ಪ ಅವರ ತೋಟದ ಬಾಳೆ ಗಿಡಕ್ಕೆ ನೇಣು ಹಾಕಿಕೊಂಡ ಸ್ಥಿತಿಯಲ್ಲಿ ಶುಕ್ರವಾರ ರಾತ್ರಿ ಕಂಡುಬಂದಿದೆ.

'ತೋಟದ ಮಾಲೀಕರೇ ಅತ್ಯಾಚಾರ ನಡೆಸಿ, ಕೊಲೆ ಮಾಡಿದ್ದಾರೆ' ಎಂದು ಆರೋಪಿಸಿ, ಆಕೆಯ ಸೋದರ ಮಹದೇವಸ್ವಾಮಿ ಕವಲಂದೆ ದೂರು ನೀಡಿದ್ದಾರೆ.

ಆರು ತಿಂಗಳ ಹಿಂದೆ, ಪತಿ ನಾಗರಾಜು ಮೃತಪಟ್ಟ ಬಳಿಕ ಮಹಿಳೆಯು ಸ್ವಗ್ರಾಮ ಗಟ್ಟವಾಡಿಯಲ್ಲಿ ತಂದೆಯೊಂದಿಗೆ ವಾಸವಾಗಿದ್ದರು. ಲೂರ್ಬಸ್ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು. ಶುಕ್ರವಾರ ಬೆಳಿಗ್ಗೆ ಕೆಲಸಕ್ಕೆ ತೆರಳಿದ್ದರು. ಪಿಎಸ್‌ಐ ಕೃಷ್ಣಕಾಂತ ಕೋಳಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ತನಿಖೆ ನಡೆದಿದೆ.

ಭಾನುವಾರದ ಪುರವಣಿ ಓದಿರಿ

ನುಲಿಯ ಚಂದಯ್ಯ ಜಯಂತಿ

ಪ್ರಜಾವಾಣಿ ವಾರ್ತೆ



ಬಸವಣ್ಣ ಅವರ ಪುತ್ಥಳಿಗೆ ಹಾಗೂ ನುಲಿಯ ಚಂದಯ್ಯ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು

ಬೆಂಗಳೂರು: 'ವಚನಕಾರರಲ್ಲಿ ಯಾವುದೇ ರೀತಿಯ ತಾರತಮ್ಯವಿರಲಿಲ್ಲ. ಬಸವಣ್ಣನವರಷ್ಟೇ ಎಲ್ಲ ಶರಣರು ಪೂಜ್ಯರು, ಗೌರವಾರ್ಹರಾಗಿದ್ದರು' ಎಂದು ವಚನಜ್ಯೋತಿ ಬಳಗದ ಅಧ್ಯಕ್ಷ ಪಿನಾಕಪಾಣಿ ಹೇಳಿದರು.

ವಚನಜ್ಯೋತಿ ಬಳಗ ಶನಿವಾರ ಆಯೋಜಿಸಿದ್ದ 'ನುಲಿಯ ಚಂದಯ್ಯನವರ ಜಯಂತಿ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಸರ್ಕಾರ ನುಲಿಯ ಚಂದಯ್ಯನವರ ಜಯಂತಿಯನ್ನು ಘೋಷಣೆ ಮಾಡಿದಾಗ ಚಂದಯ್ಯನವರು ಯಾವ ವರ್ಗಕ್ಕೆ ಸೇರಿದವರು ಎನ್ನುವುದು ಗೊತ್ತಾಯಿತು. ನುಲಿಯ ಚಂದಯ್ಯನವರು ಕಾಯಕಶೀಲದ ಶಿಖರವಾಗಿದ್ದರು. ಲಿಂಗದೇವರನ್ನು ಧಿಕ್ಕರಿಸಿ, ಕಾಯಕ ದೇವರಿಗೆ ಒತ್ತು ಕೊಟ್ಟು ವಚನಗಳ ಸಂರಕ್ಷಣೆಯಲ್ಲಿ ಅಕ್ಕನಾಗಮ್ಮನವರೊಂದಿಗೆ ಹೆಗಲು ಕೊಟ್ಟಿದ್ದರು' ಎಂದು ಹೇಳಿದರು.

ಪ್ರಾಧ್ಯಾಪಕ ಎಚ್.ಎಂ. ಸೋಮಶೇಖರಪ್ಪ ಮಾತನಾಡಿ, 'ವಚನಗಳು ಬದುಕಿನ ಎಲ್ಲ ಆಯಾಮಗಳನ್ನು ಒಳಗೊಂಡಿದ್ದು, ವೈಜ್ಞಾನಿಕ ತಳಹದಿಯಲ್ಲಿ ವಚನ ಧರ್ಮ ರೂಪುಗೊಂಡಿದೆ. ತರೀಕೆರೆ ತಾಲ್ಲೂಕಿನ ನಂದ್ರಿ ಗ್ರಾಮದಲ್ಲಿ ನುಲಿಯ ಚಂದಯ್ಯನವರ ಜಾತ್ರೆಯನ್ನು ಎಲ್ಲ ವರ್ಗದ ಜನರು ಸೇರಿ ಸಂಭ್ರಮದಿಂದ ಆಚರಿಸುತ್ತಿದ್ದಾರೆ' ಎಂದು ತಿಳಿಸಿದರು.

ವಚನ ಕಲಿಕಾ ತರಗತಿಯ ವಿದ್ಯಾರ್ಥಿಗಳು ನುಲಿಯ ಚಂದಯ್ಯನವರ ವಚನಗಳನ್ನು ಹಾಡಿದರು. ಎಸ್.ಎಲ್.ಎನ್ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಎಸ್.ಸಿ. ಗಂಗರೇವಯ್ಯ ಅವರನ್ನು ಅಭಿನಂದಿಸಲಾಯಿತು.

ವಚನಜ್ಯೋತಿ ಬಳಗದ ಪ್ರಭು ಇಸುವನಹಳ್ಳಿ, ರಾಜಾ ಗುರುಪ್ರಸಾದ್, ಪ್ರಸನ್ನ, ಮಧು ಶಿವಕುಮಾರ್, ಜಾಗತಿಕ ಲಿಂಗಾಯತದ ರಾಯಚೂರು ಜಿಲ್ಲಾ ಘಟಕದ ಅಧ್ಯಕ್ಷ ಜಯಬಸವ, ಸರ್ವಾಣಿ ಯೋಗೀಶ್, ಸರೋಜಾ ನಂದೀಶ್, ಪುಷ್ಪಾ ಸೋಮಶೇಖರ್ ಭಾಗವಹಿಸಿದ್ದರು.

ಮೂಲವೇತನದ ಶೇ 50 ಪಿಂಚಣಿ

ಒಂದನೇ ಪುಟದಿಂದ...

ಯುಪಿಎಸ್ ಕುರಿತು ಮಾಧ್ಯಮಗಳಿಗೆ ಮಾಹಿತಿ ನೀಡಿದ ನಿಯೋಜಿತ ಸಂಪುಟ ಕಾರ್ಯದರ್ಶಿ ಟಿ.ವಿ ಸೋಮನಾಥನ್, ಹೊಸ ಯೋಜನೆಯು 2025ರ ಏಪ್ರಿಲ್ 1ರಿಂದ ಜಾರಿಗೆ ಬರಲಿದೆ ಎಂದರು.

ಯುಪಿಎಸ್ ಪ್ರಯೋಜನಗಳು ಈಗಾಗಲೇ ನಿವೃತ್ತಿ ಹೊಂದಿದವರಿಗೆ ಮತ್ತು 2025ರ ಮಾರ್ಚ್ 31ರವರೆಗಿನ ಅವಧಿಯಲ್ಲಿ ನಿವೃತ್ತಿ ಹೊಂದಲಿರುವವರಿಗೆ ಅನ್ವಯವಾಗಲಿದೆ ಎಂದು ತಿಳಿಸಿದರು.

ಕೇಂದ್ರ ಸಂಪುಟದ ನಿರ್ಧಾರ ತೃಪ್ತಿ ತಂದಿಲ್ಲ. ರಾಜ್ಯ ಸರ್ಕಾರಿ ನೌಕರರು ಇದನ್ನು ಒಪ್ಪಲ್ಲ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಚರ್ಚಿಸಿ ಹಳೆ ಪಿಂಚಣಿ ಯೋಜನೆಯನ್ನೇ ಮರು ಜಾರಿ ಮಾಡಲಿ

ಸಿ.ಎಸ್.ಷಡಾಕ್ಷರಿ ಅಧ್ಯಕ್ಷ, ರಾಜ್ಯ ಸರ್ಕಾರಿ ನೌಕರರ ಸಂಘ

ಮಾಗಡಿ ರಂಗನಾಥ ಸ್ವಾಮಿಗೆ ಮುಖ್ಯಮಂತ್ರಿ ಪತ್ನಿ ಪೂಜೆ

ಪ್ರಜಾವಾಣಿ ವಾರ್ತೆ

ಮಾಗಡಿ: ಪಟ್ಟಣದ ರಂಗನಾಥಸ್ವಾಮಿ ದೇವಸ್ಥಾನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರು ಶನಿವಾರ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು. ಮಧ್ಯಾಹ್ನ 3.30ರ ಸುಮಾರಿಗೆ ನಾಲ್ವರು ಸಂಬಂಧಿಕರೊಂದಿಗೆ ಕಾರಿನಲ್ಲಿ ದೇವಸ್ಥಾನಕ್ಕೆ ಬಂದ ಅವರು, ಸಾಮಾನ್ಯ ಭಕ್ತರಂತೆ ಸರದಿಯಲ್ಲಿ ನಿಂತು ದೇವರ ದರ್ಶನ ಪಡೆದರು.

ಮೂರನೇ ಶ್ರಾವಣ ಶನಿವಾರವಾದ ಇಂದು ಪುಷ್ಪಯಾಗ ಸೇವೆ ಹಮ್ಮಿಕೊಳ್ಳಲಾಗಿತ್ತು. ದೇವರಿಗೆ ಪುಷ್ಪದಲ್ಲಿ ವಿಶೇಷ ಅಲಂಕಾರ ಮಾಡಿ ಪೂಜೆ ಮಾಡಲಾಗಿತ್ತು. ಮಧ್ಯಾಹ್ನ ದೇವಸ್ಥಾನಕ್ಕೆ ಬಂದ ಪಾರ್ವತಿ ಅವರು ವಿಶೇಷ ಪೂಜೆ ಮಾಡಿಸಿದ ಬಳಿಕ, ಪ್ರದಕ್ಷಿಣೆ ಹಾಕಿ ಹೊರಟರು ಎಂದು ದೇವಸ್ಥಾನದ ಇಒ ಜಗದೀಶ್ ತಿಳಿಸಿದರು.

'ರಂಗನಾಥಸ್ವಾಮಿ ಭಕ್ತರಾದ ಪಾರ್ವತಿ ಅವರು ಕಳೆದ ಶಾವಣ ಮಾಸದಲ್ಲೂ ದೇವಸ್ಥಾನಕ್ಕೆ ಭೇಟಿ ನೀಡಿದ್ದರು. ಅದರಂತೆ ಈ ಬಾರಿಯೂ ಬಂದಿದ್ದಾರೆ. ಅವರು ಬರುವ ವಿಷಯ ಯಾರಿಗೂ ತಿಳಿಸಿರಲಿಲ್ಲ. ದೇವಸ್ಥಾನಕ್ಕೆ ಬಂದ ಅವರು 15 ನಿಮಿಷದೊಳಗೆ ಹೊರಟರು' ಎಂದು ದೇವಸ್ಥಾನದ ಮೂಲಗಳು ತಿಳಿಸಿವೆ.

ಮೈಸೂರಿನ ಮುಡಾ ಹಗರಣ ಬೆಳಕಿಗೆ ಬಂದ ಬಳಿಕ, ಪಾರ್ವತಿ ಅವರು ಮೊದಲ ಬಾರಿಗೆ ಖಾಸಗಿ ಭೇಟಿ ನಿಮಿತ್ತ ಬಹಿರಂಗವಾಗಿ ಕಾಣಿಸಿಕೊಂಡಿದ್ದಾರೆ.

'ರಾಜ್ಯಪಾಲರಲ್ಲ, ಕೇಂದ್ರಪಾಲರೆನ್ನಿ'

ಪ್ರಜಾವಾಣಿ ವಾರ್ತೆ

ಮೈಸೂರು: 'ಕೇಂದ್ರ ಸರ್ಕಾರದ ಆದೇಶದಂತೆ ವರ್ತಿಸುತ್ತಿರುವ ರಾಜ್ಯಪಾಲರನ್ನು ಕೇಂದ್ರಪಾಲ ಎಂದೇ ಕರೆಯುವುದು ಸೂಕ್ತ' ಎಂದು ಚಲನಚಿತ್ರ ಸಂಗೀತ ನಿರ್ದೇಶಕ ಹಂಸಲೇಖ ವ್ಯಂಗ್ಯವಾಡಿದರು.

ಮುಖ್ಯಮಂತ್ರಿ ಸಿದ್ಧರಾಮಯ್ಯ ವಿರುದ್ಧ ತನಿಖೆಗೆ ಅನುಮತಿಸಿರುವ ರಾಜ್ಯಪಾಲರ ನಡೆ ಖಂಡಿಸಿ 'ಕರ್ನಾಟಕ ಜನರಂಗ' ನಗರದ ಚಿಕ್ಕಗಡಿಯಾರದಲ್ಲಿ ಶನಿವಾರ ಸಂಜೆ ಆರಂಭಿಸಿದ 24 ಗಂಟೆಗಳ ಅಹೋರಾತ್ರಿ ಧರಣಿಗೆ ಚಾಲನೆ ನೀಡಿ ಮಾತನಾಡಿದರು.

'ತನಿಖೆಗೆ ಅನುಮತಿ ನೀಡಿದ ನಂತರ ರಾಜ್ಯಪಾಲರಿಗೆ 'ಝಡ್' ಶ್ರೇಣಿ ಭದ್ರತೆ ನೀಡಲಾಗಿದೆ. ಭದ್ರತೆ ನೀಡಬೇಕಿರುವುದು ಸಂವಿಧಾನಕ್ಕೆ. ಜನರೇ 'ಎ ಟು ಝಡ್' ಭದ್ರತೆ ನೀಡಲಿದ್ದಾರೆ' ಎಂದರು.

ಲೇಖಕ ಪ್ರೊ.ಬಂಜಗೆರೆ ಜಯಪ್ರಕಾಶ್ ಮಾತನಾಡಿ, 'ಈ ಹಿಂದೆ ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರವಿದ್ದಾಗ, ಇದೇ ರಾಜ್ಯಪಾಲ ಹುದ್ದೆಗಳನ್ನು ದುರ್ಬಳಕೆ ಮಾಡಿದಾಗಲೂ ಖಂಡಿಸಿದ್ದೇವೆ' ಎಂದು ಹೇಳಿದರು.

ಸಬಿಹಾ ಭೂಮಿಗೌಡ, ಟಿ.ಗುರುರಾಜ್, ಎಚ್.ಜನಾರ್ಧನ್, ಗೋಪಾಲಕೃಷ್ಣ, ಕೆ.ಎಸ್.ಶಿವರಾಮ್, ಕಾಳಚನ್ನೇಗೌಡ, ಸವಿತಾ ಪ.ಮಲ್ಲೇಶ್, ನಾ.ದಿವಾಕರ, ರವಿರಾವ್ ಹಾಜರಿದ್ದರು.

ವೈದ್ಯರ ಮೇಲೆ ಹಲ್ಲೆ: ವ್ಯಕ್ತಿ ಬಂಧನ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಇಲ್ಲಿನ ಬಾಪೂಜಿ ಮಕ್ಕಳ ಆಸ್ಪತ್ರೆಯಲ್ಲಿ ಕರ್ತವ್ಯನಿರತ ವೈದ್ಯರ ಮೇಲೆ ಹಲ್ಲೆ ನಡೆಸಿದ ಆರೋಪದ ಮೇರೆಗೆ ವ್ಯಕ್ತಿಯೊಬ್ಬರನ್ನು ಬಡಾವಣೆ ಠಾಣೆಯ ಪೊಲೀಸರು ಶನಿವಾರ ಬಂಧಿಸಿದ್ದಾರೆ.

ದಾವಣಗೆರೆಯ ರವಿಕುಮಾರ್ ಬಂಧಿತ ಆರೋಪಿ. ನ್ಯಾಯಾಧೀಶರ ಎದುರು ಹಾಜರುಪಡಿಸಿದ ಪೊಲೀಸರು, ಕಾರಾಗೃಹಕ್ಕೆ ಕಳುಹಿಸಿದ್ದಾರೆ.

ಡಾ.ಸನ್ನಿದಿ ನಾಯ್ಕ, ಡಾ.ಡಿ.ಎಸ್. ನಿಶಾಂತ್ ಹಾಗೂ ಡಾ.ಅಂಕುಶ್ ಅವರು ಜೆಜೆಎಂ ವೈದ್ಯಕೀಯ ಕಾಲೇಜಿನಲ್ಲಿ ವೈದ್ಯಕೀಯ ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿದ್ದಾರೆ. ಶುಕ್ರವಾರ ರಾತ್ರಿ ಪಾಳಿಯಲ್ಲಿ ಬಾಪೂಜಿ ಮಕ್ಕಳ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುವಾಗ ಹಲ್ಲೆ ನಡೆದಿತ್ತು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

'ಆರೋಪಿ ರವಿಕುಮಾರ್ ಅನಾರೋಗ್ಯದಿಂದ ಬಳಲುತ್ತಿದ್ದ ಪುತ್ರಿ ತಾನ್ವಿ (4) ಹಾಗೂ ಪತ್ನಿ ಉಷಾ ಅವರೊಂದಿಗೆ ಶುಕ್ರವಾರ ಮಧ್ಯರಾತ್ರಿ ಆಸ್ಪತ್ರೆಗೆ ಬಂದಿದ್ದರು. ಬಾಲಕಿಯ ಆರೋಗ್ಯ ಪರೀಕ್ಷಿಸಿ ತೀವ್ರ ನಿಗಾ ಘಟಕಕ್ಕೆ (ಐಸಿಯು) ದಾಖಲಿಸಲಾಗಿತ್ತು. ಕೆಲ ಸಮಯದ ಬಳಿಕ ಬಾಲಕಿಯ ಆರೋಗ್ಯದಲ್ಲಿ ತೀವ್ರ ಏರುಪೇರು ಕಾಣಿಸಿಕೊಂಡಿತ್ತು. ಚಿಕಿತ್ಸೆ ನೀಡುತ್ತಿರುವಾಗ ಐಸಿಯುಗೆ ನುಗ್ಗಿದ ರವಿಕುಮಾರ್, ವೈದ್ಯರ ಮೇಲೆ ಹಲ್ಲೆ ನಡೆಸಿ ಅವಾಚ್ಯ ಶಬ್ದಗಳಿಂದ ನಿಂದಿಸಿದರು' ಎಂದು ಠಾಣೆಗೆ ನೀಡಿದ ದೂರಿನಲ್ಲಿ ವೈದ್ಯರು ತಿಳಿಸಿದ್ದಾರೆ.

ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದ ತಾನ್ವಿ ಮೃತಪಟ್ಟಿದ್ದಾಳೆ ಎಂದು ಪೊಲೀಸರು ತಿಳಿಸಿದ್ದಾರೆ.

25ನೇ ಸಂಸ್ಮರಣೆ ಕಾರ್ಯಕ್ರಮದಲ್ಲಿ ಸಚಿವ ವಿ. ಸೋಮಣ್ಣ ಆಶಯ

‘ನಿಜಲಿಂಗಪ್ಪ ಜೀವನ ಪಠ್ಯವಾಗಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ಏಕೀಕರಣದ ರೂವಾರಿ ಎಸ್. ನಿಜಲಿಂಗಪ್ಪ ಹಾಗೂ ವಿಧಾನಸೌಧದ ನಿರ್ಮಾತೃ ಕೆಂಗಲ್ ಹನುಮಂತಯ್ಯ ಅವರ ಜೀವನವು ಪ್ರೌಢಶಾಲೆಯ ಪಠ್ಯವಾಗಬೇಕು. ಈ ಬಗ್ಗೆ ರಾಜ್ಯ ಸರ್ಕಾರ ಕ್ರಮಕೈಗೊಳ್ಳಬೇಕು’ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ತಿಳಿಸಿದರು.

ಎಸ್. ನಿಜಲಿಂಗಪ್ಪ ಬಳಗವು ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ‘ಎಸ್. ನಿಜಲಿಂಗಪ್ಪ 25ನೇ ಸಂಸ್ಮರಣೆ’ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

‘ಮಾಜಿ ಮುಖ್ಯಮಂತ್ರಿಗಳಾದ ಕೆಂಗಲ್ ಹನುಮಂತಯ್ಯ ಹಾಗೂ ನಿಜಲಿಂಗಪ್ಪ ಅವರು ದೂರದೃಷ್ಟಿ ಹೊಂದಿದ್ದರು. ಅವರ ದಿನಚರಿ, ಜೀವನ ಹಾಗೂ ಸಾಧನೆ ಮುಂದಿನ ಪೀಳಿಗೆಗೆ ತಲುಪಬೇಕು. ಆದ್ದರಿಂದ ಅವರ ಬಗ್ಗೆ ಪಠ್ಯ ರೂಪಿಸಬೇಕು. ಈ ಬಗ್ಗೆ ಸರ್ಕಾರಕ್ಕೆ ಪತ್ರವನ್ನೂ ಬರೆಯುತ್ತೇನೆ’ ಎಂದು ಹೇಳಿದರು.

‘ನಿಜಲಿಂಗಪ್ಪ ಅವರು ಬದ್ಧತೆ ಹೊಂದಿದ್ದರು. ಅವರು ರಾಜಕೀಯದಲ್ಲಿ ಎಂದೂ ಓಲೈಕೆ ಮಾಡಿದವರಲ್ಲ. ಕರ್ನಾಟಕದ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ಯೋಜನೆಗಳನ್ನು ರೂಪಿಸಿದ್ದರು. ಬೆಂಗಳೂರಿಗೆ ಕುಡಿಯುವ ನೀರಿನ ಯೋಜನೆ ರೂಪಿಸಿದ್ದ ಅವರು, ಬೆಂಗಳೂರು ವಿಶ್ವವಿದ್ಯಾಲಯ ಹಾಗೂ ಕೃಷಿ ವಿಶ್ವವಿದ್ಯಾಲಯ ಸ್ಥಾಪಿಸಿದ್ದರು. ಬೆಂಗಳೂರು ಸಕ್ಕರೆ ಕಾರ್ಖಾನೆ, ಕಾರವಾರ ಮತ್ತು ಮಂಗಳೂರು ಬಂದರು ನಿರ್ಮಾಣ, ವಿಶ್ವೇಶ್ವರಯ್ಯ ವಸ್ತು ಸಂಗ್ರಹಾಲಯ ಸ್ಥಾಪನೆ ಸೇರಿ ಹಲವು ಯೋಜನೆಗಳು ಅವರ ಕಾಲದಲ್ಲಿ ಕಾರ್ಯಗತವಾಗಿದ್ದವು. ಕರ್ನಾಟಕ ವೈದ್ಯಕೀಯ ಕಾಲೇಜನ್ನು ಸರ್ಕಾರವೂ ನಡೆಸಬಹುದು ಎಂಬುದಕ್ಕೆ ಅವರು ಪ್ರೇರಣೆ. ಅವರ ಜಯಂತಿ ಆಚರಿಸುವಂತೆ ಮುಖ್ಯಮಂತ್ರಿಗೆ ಮನವಿ ಮಾಡುತ್ತೇನೆ’ ಎಂದರು.

ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ, ‘ಕರ್ನಾಟಕ ಇತಿಹಾಸದ ಪುಟಗಳಲ್ಲಿ ನಿಜಲಿಂಗಪ್ಪ ಅವರು ಮರೆಯಲಾಗದ ವ್ಯಕ್ತಿಯಾಗಿದ್ದಾರೆ. ರಾಜಕೀಯ ಹಾಗೂ ಸಾರ್ವಜನಿಕ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವವರು ತಮ್ಮ ಸೇವೆ ಸಾರ್ಥಕವಾಗಲು ನಿಜಲಿಂಗಪ್ಪ ಅವರನ್ನು ಮಾದರಿಯಾಗಿ ಸ್ವೀಕರಿಸಬೇಕು. ನಿಜಲಿಂಗಪ್ಪ ಅವರ ಹೆಸರಿನಲ್ಲಿ ಪ್ರತಿಷ್ಠಾನ ಸ್ಥಾಪಿಸಿ, ಅವರ ಕೊಡುಗೆಗಳು ಹಾಗೂ ಮೌಲ್ಯಗಳನ್ನು ಜನರಿಗೆ ತಲುಪಿಸುವ ಕಾರ್ಯ ಮಾಡಬೇಕು’ ಎಂದು ಹೇಳಿದರು.

ಸಾಹಿತಿ ಹಂ.ಪ. ನಾಗರಾಜಯ್ಯ, ‘ನಿಜಲಿಂಗಪ್ಪ ರಾಜಕಾರಣಿಯಾಗಿದ್ದರೂ, ಸಾಂಸ್ಕೃತಿಕ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಆಸಕ್ತಿ ಹೊಂದಿದ್ದರು’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ಸಮಾರಂಭದಲ್ಲಿ ವಿ. ಸೋಮಣ್ಣ ಅವರು ಎಸ್‌. ನಿಜಲಿಂಗಪ್ಪ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಬಿಜೆಪಿ ಮುಖಂಡ ಅರುಣ್ ಸೋಮಣ್ಣ, ನ್ಯಾ. ಶಿವರಾಜ ವಿ. ಪಾಟೀಲ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಹಾಗೂ ಹಂ.ಪ. ನಾಗರಾಜಯ್ಯ ಉಪಸ್ಥಿತರಿದ್ದರು

ಮುಖ್ಯಾಂಶಗಳು

- ‘ಓಲೈಕೆ ರಾಜಕಾರಣದಿಂದ ದೂರವಿದ್ದರು’
- ನಿಜಲಿಂಗಪ್ಪ ಹೆಸರಿನಲ್ಲಿ ಪ್ರತಿಷ್ಠಾಪನೆ ಸ್ಥಾಪಿಸಲು ಸಲಹೆ

ಚಾರ್ಟರ್ಡ್ ಸಹಕಾರಿ ಬ್ಯಾಂಕ್‌ನ ವಾರ್ಷಿಕ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೋರಮಂಗಲದ ಚಾರ್ಟರ್ಡ್ ಸಹಕಾರಿ ಬ್ಯಾಂಕ್‌ನ 24ನೇ ವಾರ್ಷಿಕ ಸರ್ವ ಸದಸ್ಯರ ಸಭೆಯು ಇತ್ತೀಚೆಗೆ ನಡೆಯಿತು.

ಲೆಕ್ಕಪತ್ರವರದಿ ಮಂಡಿಸಿದ ಬ್ಯಾಂಕ್‌ನ ಅಧ್ಯಕ್ಷ ಮುನಿರೆಡ್ಡಿ ಎಂ. ಮಾತನಾಡಿ, ‘ರಾಜ್ಯ ಸರ್ಕಾರದಿಂದ ನಡೆದ ಸಹಕಾರ ಫಲಾನುಭವಿಗಳ ಸಮಾವೇಶದಲ್ಲಿ ಬ್ಯಾಂಕ್‌ಗೆ ‘ಉತ್ತಮ ಸಹಕಾರಿ ಬ್ಯಾಂಕ್’ ಪ್ರಶಸ್ತಿ ನೀಡಿ ಗೌರವಿಸಲಾಗಿದೆ ಎಂದು ತಿಳಿಸಿದರು.

ಅಲ್ಲದೆ, ಭಾರತೀಯ ರಿಸರ್ವ್ ಬ್ಯಾಂಕ್‌ನ ನಿಯಮಾವಳಿಗಳ ಅನ್ವಯ ಉತ್ತಮ ಆರ್ಥಿಕ ಮತ್ತು ಆಡಳಿತ ನಿರ್ವಹಣೆಯ ಮಾನದಂಡಗಳನ್ನು ಪೂರೈಸಿ ಸದೃಢವಾಗಿದೆ ಎಂದರು.

₹8.75 ಕೋಟಿ ನಿವ್ವಳ ಲಾಭ: 2023–24ನೇ ಸಾಲಿನಡಿ ಬ್ಯಾಂಕ್ ಒಟ್ಟು ₹29.97 ಕೋಟಿ ವರಮಾನ ಗಳಿಸಿದೆ. ಈ ಪೈಕಿ ಠೇವಣಿ ಮೇಲಿನ ಬಡ್ಡಿ, ಆಡಳಿತಾತ್ಮಕ ವೆಚ್ಚ, ಆದಾಯ ತೆರಿಗೆ, ಆಸ್ತಿಗಳ ಮೇಲಿನ ಸವಕಳಿ ಕಳೆದು ₹8.75 ಕೋಟಿ ನಿವ್ವಳ ಲಾಭಗಳಿಸಿದೆ. ಕಳೆದ ಆರ್ಥಿಕ ವರ್ಷದಲ್ಲಿ ಬ್ಯಾಂಕ್‌ನ ನಿವ್ವಳ ಎನ್‌ಪಿಎ ಶೇ 2.95ರಷ್ಟಿತ್ತು. ಪ್ರಸಕ್ತ ವರ್ಷದ ಮಾರ್ಚ್ ಅಂತ್ಯಕ್ಕೆ ನಿವ್ವಳ ಎನ್‌ಪಿಎ ಶೂನ್ಯವಾಗಿದೆ ಎಂದು ಹೇಳಿದರು.

ಬ್ಯಾಂಕ್ ಸದಸ್ಯರ ಅನುಕೂಲಕ್ಕಾಗಿ ಕಳೆದ ಮೂರು ವರ್ಷಗಳಿಂದ ವಿವಿಧ ಸಾಲಗಳ ಮೇಲಿನ ಬಡ್ಡಿದರದಲ್ಲಿ ಶೇ 3ರಷ್ಟು ಕಡಿತ ಮಾಡಲಾಗಿದೆ. ಗೃಹ ಸಾಲ ನೀಡಿಕೆಯ ವೈಯಕ್ತಿಕ ಸಾಲ ಮಿತಿಯನ್ನು ₹70 ಲಕ್ಷದಿಂದ ₹1.40 ಕೋಟಿಗೆ ಹೆಚ್ಚಿಸಲಾಗಿದೆ. ಆರ್‌ಬಿಐ ನಿಗದಿಪಡಿಸಿರುವ ಆದ್ಯತಾ ವಲಯದ ಸಾಲದ ಗುರಿ ಸಾಧಿಸಲು ಸಾಧ್ಯವಾಗುವ ರೀತಿಯಲ್ಲಿ ಸಾಲ ಸೌಲಭ್ಯ ನೀಡಲಾಗುವುದು. ಸಾಲಗಳ ಮೇಲಿನ ನಿರ್ವಹಣಾ ಶುಲ್ಕವನ್ನು ಶೇ 0.50ರಿಂದ ಶೇ 0.25ರಷ್ಟಕ್ಕೆ ಇಳಿಸಿರುವುರಿಂದ ಸಾಲ ಪಡೆಯುವ ಸದಸ್ಯರಿಗೆ ಅನುಕೂಲವಾಗಲಿದೆ ಎಂದು ವಿವರಿಸಿದರು.

ಎಚ್‌ಎಸ್‌ಆರ್ ಲೇಔಟ್‌ನಲ್ಲಿರುವ ಬ್ಯಾಂಕ್‌ನ ನಿವೇಶನದಲ್ಲಿ ಕಟ್ಟಡ ನಿರ್ಮಿಸಿ ಶಾಖೆ ತೆರೆಯುವ ಪ್ರಸ್ತಾವಕ್ಕೆ ಸಭೆಯು ಒಪ್ಪಿಗೆ ನೀಡಿತು. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಉತ್ತಮ ಅಂಕ ಪಡೆದ ಬ್ಯಾಂಕ್‌ನ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಪಿಇಎಸ್ ಕಾಲೇಜಿನಲ್ಲಿ ‘ವಿರಿಂಚಿ’ಗೆ ಚಾಲನೆ

ಬೆಂಗಳೂರು: ನಗರದ ಪಿಇಎಸ್ ಪದವಿ ಪೂರ್ವ ಕಾಲೇಜು ವತಿಯಿಂದ ‘ವಿರಿಂಚಿ 2024’ ಅಂತರ ಕಾಲೇಜು ಸ್ಪರ್ಧೆಗೆ ಚಾಲನೆ ನೀಡಲಾಯಿತು.

ಸ್ಪರ್ಧೆ ಉದ್ಘಾಟಿಸಿ ಮಾತನಾಡಿದ ವಿಶ್ವವಿದ್ಯಾಲಯದ ಡೀನ್ ಶೈಲಶ್ರೀ ಹರಿದಾಸ್, ‘ವಿದ್ಯಾರ್ಥಿಗಳು ನಾಯಕತ್ವ ಗುಣ ಅಳವಡಿಸಿಕೊಳ್ಳಬೇಕು. ಏನಾದರೂ ಸಾಧನೆ ಮಾಡಬೇಕೆಂಬ ಮನೋಭಾವ ಇರುತ್ತದೆ. ಸ್ಪರ್ಧೆಯಲ್ಲಿ ಸೋಲು–ಗೆಲುವು ಸಹಜ. ಕ್ರೀಡಾ ಮನೋಭಾವದಿಂದ ಸ್ವೀಕರಿಸಬೇಕು’ ಎಂದರು.

ವಿದ್ಯಾಸಂಸ್ಥೆ ನಿರ್ದೇಶಕ ಪ್ರೊ. ಎಂ.ವಿ. ಸತ್ಯನಾರಾಯಣ ಅಧ್ಯಕ್ಷತೆ ವಹಿಸಿದ್ದರು. ಪ್ರಾಂಶುಪಾಲ ಸಿ.ನಾರಾಯಣ ಹಾಜರಿದ್ದರು. ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

ಮುರಿದು ಬಿದ್ದ ಮರ: ಸಂಚಾರ ಪೊಲೀಸರಿಂದ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆಗೆ ಅಡ್ಡಲಾಗಿ ಮುರಿದು ಬಿದ್ದ ಮರವನ್ನು ತೆರವುಗೊಳಿಸಲು ಬಿಬಿಎಂಪಿ ಸಿಬ್ಬಂದಿ ಬಾರದೇ ಇದ್ದಿದ್ದರಿಂದ ಸಂಚಾರ ಪೊಲೀಸರೇ ತೆರವುಗೊಳಿಸಿ ವಾಹನ ಸಂಚಾರ ಸುಗಮಗೊಳಿಸಿದರು.

ಬೆಂಗಳೂರಿನ ಅರಮನೆ ರಸ್ತೆಯ ಓಣಿ ಮುನೇಶ್ವರ ಸ್ವಾಮಿ ದೇವಸ್ಥಾನ ಮತ್ತು ಕರ್ನಾಟಕ ಡ್ರಗ್ಸ್ ಕಂಟ್ರೋಲ್ ಇಲಾಖೆಯ ಸಮೀಪ, ಷಾ ವಲಿ ಮಸೀದಿ ಎದುರು ರಸ್ತೆಯಲ್ಲಿ ಶನಿವಾರ ದೊಡ್ಡ ಮರವೊಂದು ಮುರಿದು ಬಿದ್ದಿತ್ತು. ಈ ಬಗ್ಗೆ ಸ್ಥಳೀಯರು ಬಿಬಿಎಂಪಿಗೆ ಮಾಹಿತಿ ನೀಡಿದ್ದರು. ಸಂಚಾರ ಪೊಲೀಸರು ಕೂಡ ಮಾಹಿತಿ ರವಾನಿಸಿದ್ದರು.

ಆದರೆ, ಬಿಬಿಎಂಪಿಯಿಂದ ಸ್ಪಂದನೆ ದೊರೆಯದೇ ಇದ್ದಿದ್ದರಿಂದ, ಮಹಿಳಾ ಸಿಬ್ಬಂದಿ ಸೇರಿದಂತೆ ಸಂಚಾರ ಪೊಲೀಸರೇ ಮರ, ಕೊಂಬೆಗಳನ್ನು ತೆರವುಗೊಳಿಸಿದರು.



ರಸ್ತೆಗೆ ಅಡ್ಡ ಬಿದ್ದಿದ್ದ ಮರವನ್ನು ಸಂಚಾರ ಪೊಲೀಸರು ತೆರವುಗೊಳಿಸಿದರು
—ಪ್ರಜಾವಾಣಿ ಚಿತ್ರ/ ಎಸ್‌.ಕೆ. ದಿನೇಶ್

ನಗರದಲ್ಲಿ ಇಂದು

ಗುರುವಂದನಾ ಕಾರ್ಯಕ್ರಮ: ತಬಲಾ ಸೋಲೊ: ಕೇದಾರ್, ಸಂತೂರ್: ಶ್ರೀಧರ್ ಹೆಗಡೆ, ತಬಲಾ: ವಿಕಾಸ್ ನರೇಗಲ್, ಸನ್ಮಾನ: ರವೀಂದ್ರ ಯಾವಗಲ್, ತಬಲಾ ಸೋಲೊ: ಶ್ರೀವತ್ಸ ಕೌಲಗಿ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಸವನಗುಡಿ, ಬೆಳಿಗ್ಗೆ 9

‘ರಾಜ್ಯ ಶಿಕ್ಷಣ ನೀತಿ’ ಉತ್ತಮ ಶಿಕ್ಷಣಕ್ಕಾಗಿ ರಾಜ್ಯಮಟ್ಟದ ಸಮಾವೇಶ: ಭಾಗವಹಿಸುವವರು: ವಿ.ಪಿ. ನಿರಂಜನಾರಾಧ್ಯ, ಜವಾಹರ್ ನೇಸನ್, ಅಕ್ಕೈ ಪದ್ಮಶಾಲಿ, ಆಯೋಜನೆ: ಎಐಎಸ್‌ಎ, ಸ್ಥಳ: ಸಿ.ಎಂ ಹಾಲ್, ಕರ್ನಾಟಕ ರಾಜ್ಯ ಸೆಕ್ರೆಟರಿಯೇಟ್ ಕ್ಲಬ್, ಬೆಳಿಗ್ಗೆ 10

ಉಚಿತ ಚರ್ಮ ಚಿಕಿತ್ಸೆ ಶಿಬಿರ: ಆಯೋಜನೆ ಮತ್ತು ಸ್ಥಳ: ಮೆಡಿಕೇರ್ ಸ್ಕಿನ್ ಮತ್ತು ಕಾಸ್ಮೆಟಿಕ್ ಕ್ಲಿನಿಕ್, ಯಲಚೇನಹಳ್ಳಿ ಮೆಟ್ರೊ ನಿಲ್ದಾಣದ ಹತ್ತಿರ, ಬೆಳಿಗ್ಗೆ 10

50ನೇ ಬುಕ್ ಬ್ಯಾಂಕ್ ಆ್ಯಂಡ್ ಸ್ಕಾಲರ್‌ಶಿಪ್ ಕಾರ್ಯಕ್ರಮ: ಅತಿಥಿಗಳು: ಡಾ.ಸಿ.ಎನ್. ಮಂಜುನಾಥ್, ಪದ್ಮಜಿ ಖಿಂಚಾ, ಮೋಹನ್‌ಲಾಲ್‌ಜಿ ರಂಕ, ಆಯೋಜನೆ: ರಾಜಸ್ಥಾನ ಯೂಥ್ ಅಸೋಸಿಯೇಷನ್, ಸ್ಥಳ: ಪ್ರಿನ್ಸೆಸ್ ಶ್ರೈನೆ, ಗೇಟ್ ಸಂಖ್ಯೆ 9, ಅರಮನೆ ಮೈದಾನ, ಬೆಳಿಗ್ಗೆ 10

ಧೀ ಆಸ್ಪತ್ರೆ ಲೋಕಾರ್ಪಣಾ ಸಮಾರಂಭ: ಸಾನ್ನಿಧ್ಯ: ಶ್ರೀಶ್ರೀ ರವಿಶಂಕರ್ ಗುರೂಜಿ, ಅತಿಥಿಗಳು: ಡಿ.ಕೆ. ಶಿವಕುಮಾರ್, ದಿನೇಶ್ ಗುಂಡೂರಾವ್, ಗುರುರಾಜ ಕರಜಗಿ, ರವಿಶಂಕರ್ ದಾಕೂಜು, ಆಯೋಜನೆ ಮತ್ತು ಸ್ಥಳ: ಧೀ ಆಸ್ಪತ್ರೆ, ಕನಕಪುರ ರಸ್ತೆ, ಮಧ್ಯಾಹ್ನ 12.30

ಬೆಂಗಳೂರು ಚಿತ್ರೋತ್ಸವ: ಉದ್ಘಾಟನೆ: ಎಂ. ಪ್ರಿಯಕೃಷ್ಣ, ಅಧ್ಯಕ್ಷತೆ: ಎಂ. ಕೃಷ್ಣಪ್ಪ, ಅತಿಥಿಗಳು: ಚಿಕ್ಕಣ್ಣ, ತಾರಾ ಲೋಕೇಶ್, ಗೀತಾ, ಕೃಷ್ಣ ಕುಲಾಲ್, ಅವಿನಾಶ್ ಆರ್., ಶೈಲಜಾ ಮಂಜುನಾಥ್, ರಾಜೇಶ್ವರಿ, ಜಗದೀಶ್ ಮಹರಾಜ್ಪೇಟ್, ಆಯೋಜನೆ: ಕೀಮ್‌ಸ್ಟಾರ್ಸ್ ಡ್ರೀಮ್ ಫಿಲ್ಮ್ಸ್, ಸ್ಥಳ: ಶಿವಕುಮಾರ ಸ್ವಾಮೀಜಿ ಜ್ಞಾನಸೌಧ, ಮೂಡಲಪಾಳ್ಯ, ಬೆಳಿಗ್ಗೆ 10

ಕೃಷ್ಣ ಜನ್ಮಾಷ್ಟಮಿ ಅಂಗವಾಗಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ: ಉದ್ಘಾಟನೆ: ಲಿಂಗಯ್ಯ ಬಿ. ಕಾಡದೇವರಮಠ, ಅತಿಥಿಗಳು: ಕವಿತಾ ಲಿಂಗಯ್ಯ ಕಾಡದೇವರಮಠ, ಭಾರತಿ ಶಂಕರ್, ಶ್ರವಣ್ ಲಕ್ಷ್ಮಣ್, ರೋಶನಿ ಗೌಡ, ಎಂ. ಮಂಜುನಾಥ್, ಅಧ್ಯಕ್ಷತೆ: ಆರ್. ಶ್ರೀಧರ್, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಪ್ರೆಸ್‌ಕ್ಲಬ್, ಕಬ್ಬನ್ ಉದ್ಯಾನ, ಬೆಳಿಗ್ಗೆ 10.30

‘ನಮ್ಮ ನಾಡು ನಮ್ಮ ಆಳ್ವಿಕೆ’ ಚಿಂತನಾ ಸಭೆ: ಅತಿಥಿಗಳು: ಕುಂ. ವೀರಭದ್ರಪ್ಪ, ಬಿ.ಎಂ. ಹನೀಫ್, ಆನಂದ್ ಗುರು, ಪೂಜಾ ಗಾಂಧಿ, ಸ್ಥಳ: ಬಸವ ಸಮಿತಿ, ಸಭಾಂಗಣ, ಚಾಲುಕ್ಯ ವೃತ್ತ, ಬೆಳಿಗ್ಗೆ 10



ಕುಂ. ವೀರಭದ್ರಪ್ಪ

ಬಜರಂಗದಳ ಬಸವನಗುಡಿ ಘಟಕದ ಉದ್ಘಾಟನೆ, ವಿಶ್ವ ಹಿಂದೂ ಪರಿಷತ್ ಸ್ಥಾಪನೆ ದಿನಾಚರಣೆ, ಶ್ರೀಕೃಷ್ಣ ಜನ್ಮಾಷ್ಟಮಿ: ಉದ್ಘಾಟನೆ: ರಾಜಶೇಖರ್, ದಿಕ್ಸೂಚಿ ಭಾಷಣ: ಗೋವರ್ಧನ್, ಆಯೋಜನೆ: ಬಜರಂಗದಳ, ಸ್ಥಳ: ಶಂಕರನಾಗ್ ವೃತ್ತ, ಕೆಂಪೇಗೌಡ ಆಟದ ಮೈದಾನ, ವಿದ್ಯಾಪೀಠ ವೃತ್ತ, ಬೆಳಿಗ್ಗೆ 10.30

ರಾಜಾ ಸರ್ ಮುತ್ತಯ್ಯ ಚೆಟ್ಟಿಯಾರ್ ಮತ್ತು ರುಕ್ಮಿಣಿದೇವಿ ಅರುಂಡೇಲ್ ದತ್ತಿ ನಿಧಿ: ಭಕ್ತಿಗೀತೆ ಗಾಯನ ಸ್ಪರ್ಧೆ, ಭರತನಾಟ್ಯ ಸ್ಪರ್ಧೆ: ಉದ್ಘಾಟನೆ: ಕೆ. ಮೋಹನ್‌ದೇವ್ ಆಳ್ವ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನದ ಎಂ.ವಿ.ಸೀ ಸಭಾಂಗಣ, ಎನ್‌.ಆರ್. ಕಾಲೊನಿ, ಬೆಳಿಗ್ಗೆ 10.30

ಕವಿಗೋಷ್ಠಿ, ಗೀತಗಾಯನ, ರಸಪ್ರಶ್ನೆ: ಅಧ್ಯಕ್ಷತೆ: ಬಿ. ಶಾಂತಕುಮಾರ್, ಅತಿಥಿಗಳು: ಲಕ್ಷ್ಮೀರಾಮಚಂದ್ರ, ಹೈಟೇಕ್ ವೇಣುಗೋಪಾಲ್, ಆಯೋಜನೆ: ರವಿಕಿರಣ ಆರ್ಟ್ಸ್ ಆ್ಯಂಡ್ ಕ್ರಿಯೇಷನ್ಸ್ ಟ್ರಸ್ಟ್, ಸ್ಥಳ: ಕೆನ್‌ಕಲಾ ಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

ರೊಟ್ಟಿ ಪಂಚಮಿ–2024: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಅತಿಥಿಗಳು: ಸತೀಶ್ ಜಾರಕಿಹೊಳಿ, ಡಾ.ಕೆ. ಸುಧಾಕರ್, ಎಸ್‌.ಆರ್. ವಿಶ್ವನಾಥ್, ಹಣಮಂತ ರುದ್ರಪ್ಪ ನಿರಾಣಿ, ಮಹೇಶ ಜೋಶಿ, ಮಹಾಂತೇಶ್ ಚರಂತಿಮಠ, ಎಸ್.ಎಸ್. ಆಲೂರ, ಕೆ.ಎಸ್. ವಿಜಯ ಮಹಾಂತೇಶ್, ದಯಾನಂದ್ ಪಟ್ಟಣಶೆಟ್ಟಿ, ಶಿವನಗೌಡ ಪಾಟೀಲ್, ಪ್ರಾಚಿಗೌಡ, ಅಧ್ಯಕ್ಷತೆ: ಬಿ.ಜಿ. ಅವಟಿ, ಸ್ಥಳ: 2ನೇ ಮುಖ್ಯರಸ್ತೆ, (ವಿಶಾಲ ಮಾರ್ಟ್ ಹಿಂಭಾಗ) 4ನೇ ಹಂತ, ಯಲಹಂಕ ಉಪನಗರ, ಬೆಳಿಗ್ಗೆ 11

ಹಿರಿಯ ನಾಗರಿಕರಿಗೆ ಉದ್ಯೋಗ ಮೇಳ: ಅತಿಥಿಗಳು: ಮಹಾದೇವ ಪ್ರಸಾದ್ ಎನ್‌.ಎಸ್., ವೇಣುಗೋಪಾಲ ಪಿ., ಯು.ಎಸ್. ಮಹೇಂದರ್, ಆಯೋಜನೆ: ನೈಟಿಂಗಲ್ಸ್ ಮೆಡಿಕಲ್ ಟ್ರಸ್ಟ್, ಸ್ಥಳ: ಸೇಂಟ್ ಜೋಸೆಫ್ ವಿಶ್ವವಿದ್ಯಾಲಯ, ಲ್ಯಾಂಗ್‌ಫೋರ್ಡ್ ಟೌನ್, ಬೆಳಿಗ್ಗೆ 11

‘ಮಲೆನಾಡಿನಲ್ಲಿ ಭೂಹಕ್ಕು ಮತ್ತು ಅರಣ್ಯ ಕಾಯ್ದೆಗಳಿಗೆ ಸಂಬಂಧಿಸಿದ ಸಮಸ್ಯೆಗಳು ಮತ್ತು ಮಾರ್ಗೋಪಾಯಗಳು’ ಕುರಿತು ವಿಚಾರಗೋಷ್ಠಿ: ಅಧ್ಯಕ್ಷತೆ: ಆರಗ ಜ್ಞಾನೇಂದ್ರ, ಅತಿಥಿಗಳು: ಟಿ.ಡಿ. ರಾಜೇಗೌಡ, ಪ್ರಧಾನ ಭಾಷಣಕಾರರು: ಕಮ್ಮರಡಿ ಪ್ರಕಾಶ್, ವಿಠಲ್ ಹೆಗ್ಡೆ ಕಲ್ಕುಳಿ ಶೃಂಗೇರಿ, ಬಿ.ಎಂ. ರಮೇಶ್ ಹೆಗ್ಡೆ, ಆಯೋಜನೆ: ಸಹ್ಯಾದ್ರಿ ಸಂಘ, ಸ್ಥಳ: ಶಾಸಕರ ಭವನ ಕಟ್ಟಡ–2, ಸಮ್ಮೇಳನ ಸಭಾಂಗಣ, ಬೆಳಿಗ್ಗೆ 11

‘ನಾಟ್ ಜಸ್ಟ್ ಎ ಲಾಫಿಂಗ್ ಮ್ಯಾಟರ್’ ಅಬು ಅಬ್ರಹಾಂ ಅವರ ವ್ಯಂಗ್ಯ ಚಿತ್ರಗಳ ಕುರಿತು ಚರ್ಚೆ: ಭಾಗವಹಿಸುವವರು: ಇ.ಪಿ. ಉನ್ನಿ, ಎ.ಎಸ್. ಪನ್ನೀರಸೆಲ್ವನ್, ಗೋಕುಲ್ ಗೋಪಾಲಕೃಷ್ಣನ್, ಜಾನಕಿ ನಾಯರ್, ರೋಹಿಣಿ ಮೋಹನ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಬೆಳಿಗ್ಗೆ 11

‘ಸೃಷ್ಟಿ ಕಲಾ ಭೂಷಣ’ ಪ್ರಶಸ್ತಿ ಪ್ರದಾನ: ಕಟ್ಟೆ ಸತ್ಯ, ಪ್ರಶಸ್ತಿ ಪುರಸ್ಕೃತರು: ಅಕ್ಷಯ ಆಚಾರ್ ಬಿದ್ಕಲ್ ಕಟ್ಟೆ, ಅಧ್ಯಕ್ಷತೆ: ಶ್ರೀಕಾಂತ್ ಎಂ.ಜಿ., ‘ಮಾರಣಾಧ್ವರ ಬಳಿಕ ರಾಜಸೂಯಾಧ್ವರ’ ಯಕ್ಷಗಾನ ಪ್ರದರ್ಶನ: ಸೃಷ್ಟಿ ಕಲಾ ವಿದ್ಯಾಲಯದ ವಿದ್ಯಾರ್ಥಿಗಳಿಂದ, ಆಯೋಜನೆ: ಸೃಷ್ಟಿ ಕಲಾ ವಿದ್ಯಾಲಯ, ಸ್ಥಳ: ಅಶ್ವತ್ಥ ಕಲಾಭವನ, ಎನ್‌.ಆರ್. ಕಾಲೊನಿ, ಸಂಜೆ 4

‘21ನೇ ಶತಮಾನಕ್ಕೆ ಮಹಾತ್ಮ ಗಾಂಧೀಜಿ’ ಅಂತರರಾಷ್ಟ್ರೀಯ ವಿಚಾರಸಂಕಿರಣ ಸಮಾರೋಪ ಸಮಾರಂಭ: ಅವಲೋಕನ: ವೂಡೇ ಪಿ. ಕೃಷ್ಣ, ಸಮಾರೋಪ ಭಾಷಣ: ಎನ್. ಸಂತೋಷ್ ಹೆಗ್ಡೆ, ಅಧ್ಯಕ್ಷತೆ: ಎಚ್. ಕೆ. ಪಾಟೀಲ, ಉಪಸ್ಥಿತಿ: ರಾಮಚಂದ್ರ ರಾಹಿ, ಆಯೋಜನೆ: ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಸ್ಥಳ: ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ, ಸಂಜೆ 4

‘ನಾಟ್ಯ ಸಂಧ್ಯಾ’ ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಸಾಹಿತ್ಯ ಸೂರ್ಯ, ಅತಿಥಿಗಳು: ಸತ್ಯನಾರಾಯಣರಾಜು, ಸುಭದ್ರಾ ಪ್ರಭು, ಬೇಲೂರು ರಘುನಂದನ್, ಎಲ್‌.ಜಿ. ಮೀರಾ, ಆಯೋಜನೆ: ಸಂಸ್ಕೃತಿ ದಿ ಟೆಂಪಲ್ ಆಫ್ ಆರ್ಟ್, ಸ್ಥಳ: ಜೆಎಸ್‌ಎಸ್ ಶಿವರಾತ್ರೇಶ್ವರ ಸೆಂಟರ್, ಜಯನಗರ 8ನೇ ಬ್ಲಾಕ್, ಸಂಜೆ 5.30



ಸಂಗೀತ ಶ್ರಾವಣ: ಸಂಜೆ 4: ಸಾಂಸ್ಕೃತಿಕ ಕಾರ್ಯಕ್ರಮ, ತಬಲಾ: ಸಂತೋಷ್ ಕುಲಕರ್ಣಿ, ಅತಿಥಿಗಳು: ಸುಬ್ರಹ್ಮಣ್ಯ ಜೋಯಿಸ್, ಬಲವಂತರಾವ್ ಪಾಟೀಲ್, ಯಮುನಾ ಶ್ರೀನಿಧಿ, ರೇಖಾ ಕೆ. ಗೋವಿಂದ್, ಚಿತ್ರ ನಾಗಶಯನ, ಉಪಸ್ಥಿತಿ: ಸತೀಶ್ ಹಂಪಿಹೊಳಿ, ಆಯೋಜನೆ: ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಷನ್ ಟ್ರಸ್ಟ್, ಸ್ಥಳ: ಶ್ರೀಕೃಷ್ಣ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಭಾ ಕಾರ್ಯಕ್ರಮ ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ)ಕಳುಹಿಸಿ.
nagaradalli_indu@prajavani.co.in

ಮಲತಂದೆಯಿಂದ ಕೃತ್ಯ ಶಂಕೆ • ಉತ್ತರ ಪ್ರದೇಶ ಮೂಲದ ಕುಟುಂಬ

ಇಬ್ಬರು ಬಾಲಕಿಯರ ಭೀಕರ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಈಶಾನ್ಯ ವಿಭಾಗದ ಅಮೃತಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ದಾಸರಹಳ್ಳಿಯಲ್ಲಿ ಶನಿವಾರ ಇಬ್ಬರು ಬಾಲಕಿಯರನ್ನು ಮಚ್ಚಿನಿಂದ ಕೊಚ್ಚಿ ಭೀಕರವಾಗಿ ಹತ್ಯೆ ಮಾಡಲಾಗಿದೆ.

14 ಹಾಗೂ 16 ವರ್ಷದ ಬಾಲಕಿಯರು ಕೊಲೆಯಾಗಿದ್ದಾರೆ. 8 ಹಾಗೂ 9ನೇ ತರಗತಿ ಓದುತ್ತಿದ್ದರು.

ಪ್ರಾಥಮಿಕ ತನಿಖೆಯಿಂದ ಹೆಣ್ಣು ಮಕ್ಕಳ ಮಲತಂದೆಯೇ ಕೊಲೆ ಮಾಡಿ ಪರಾರಿಯಾಗಿರುವ ಶಂಕೆಯಿದೆ. ಆರೋಪಿ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ ಎಂದು ಪೊಲೀಸರು ಹೇಳಿದರು. ಅಮೃತಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಉತ್ತರ ಪ್ರದೇಶ ಮೂಲದ ಕುಟುಂಬವು ದಾಸರಹಳ್ಳಿಯ ಕಾವೇರಿ ಬಡಾವಣೆಯ ಬಾಡಿಗೆ ಮನೆಯೊಂದರ ಎರಡನೇ ಮಹಡಿಯಲ್ಲಿ ಎರಡು ವರ್ಷಗಳಿಂದ ನೆಲೆಸಿತ್ತು. ಕೊಲೆಯಾದ ಹೆಣ್ಣು ಮಕ್ಕಳ ತಾಯಿ ಅನಿತಾ ಅವರು ಮೊದಲ ಪತಿಯಿಂದ ವಿಚ್ಛೇದನ ಪಡೆದು ಕೊಂಡಿದ್ದರು. ಡೆಹ್ರಾಡೂನ್‌ನ ಮೋಹನ್ ಎಂಬಾತನ ಜತೆಗೆ ಒಂಬತ್ತು ವರ್ಷಗಳ ಹಿಂದೆ ಎರಡನೇ ಮದುವೆ ಆಗಿದ್ದರು. ಮೋಹನ್ ಅವರು ಫುಡ್ ಡೆಲಿವರಿ ಕೆಲಸ ಮಾಡುತ್ತಿದ್ದರು. ತಾಯಿ ಗಾರ್ಮೆಂಟ್ಸ್ ನಲ್ಲಿ ಕೆಲಸ ಮಾಡುತ್ತಿದ್ದರು. ಬಾಲಕಿಯರು ಸಮೀಪದ ಶಾಲೆಗೆ ತೆರಳುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಇಬ್ಬರು ಹೆಣ್ಣು ಮಕ್ಕಳನ್ನು ಮಲತಂದೆ ಮೋಹನ್ ಪ್ರೀತಿಯಿಂದಲೇ ನೋಡಿಕೊಳ್ಳುತ್ತಿದ್ದರು ಎನ್ನಲಾಗಿದೆ. ಬೇಕಾದ ಎಲ್ಲ ವಸ್ತುಗಳನ್ನೂ ಕೊಡಿಸುತ್ತಿದ್ದರು. ಆದರೆ, ಎರಡು ತಿಂಗಳಿಂದ ಮಲತಂದೆಯನ್ನು ಮಕ್ಕಳು ಮಾತನಾಡಿಸುತ್ತಿರಲಿಲ್ಲ. ಇದು ಮಲತಂದೆಗೆ ಸಿಟ್ಟುತರಿಸಿತ್ತು. ಅದೇ ವಿಚಾರಕ್ಕೆ ಶನಿವಾರ ಮಧ್ಯಾಹ್ನ ಮಕ್ಕಳ ಜತೆಗೆ ಗಲಾಟೆ ನಡೆದು ಕೊಲೆ ಮಾಡಲಾಗಿದೆ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಆದರೆ, ಎಲ್ಲ ಆಯಾಮದಿಂದಲೂ ತನಿಖೆ ಮುಂದುವರಿದಿದೆ' ಎಂದು ಪೊಲೀಸರು ಹೇಳಿದರು.

'ಮನೆಯಲ್ಲಿ ತಾಯಿ ಇರಲಿಲ್ಲ'

ಅಪರಾಧ ಸುದ್ದಿ

'ಕೊಲೆ ನಡೆದ ವೇಳೆ ತಾಯಿ ಮನೆಯಲ್ಲಿ ಇರಲಿಲ್ಲ. ತಾಯಿ ಗಾರ್ಮೆಂಟ್ಸ್‌ನಲ್ಲಿ ಕೆಲಸಕ್ಕೆ ತೆರಳಿದ್ದರು. ಅದೇ ವೇಳೆ ಕೊಲೆ ನಡೆದಿದೆ' ಎಂದು ಪೊಲೀಸರು ಹೇಳಿದರು.

'ಮಕ್ಕಳ ತಾಯಿ ದೂರು ನೀಡಿದ್ದಾರೆ. ದೂರು ಆಧರಿಸಿ ತನಿಖೆ ನಡೆಸಲಾಗುತ್ತಿದೆ. ಮೋಹನ್ ಮೊಬೈಲ್ ಸ್ವಿಚ್ಡ್ ಆಫ್ ಬರುತ್ತಿದೆ. ಬಂಧನದ ಬಳಿಕವೇ ಆರೋಪಿ ಯಾರು ಹಾಗೂ ಕೊಲೆಗೆ ನಿಖರ ಕಾರಣ ಏನು ಎಂಬುದು ಗೊತ್ತಾಗಲಿದೆ. ಮನೆ ಅಕ್ಕಪಕ್ಕದಲ್ಲಿ ಅಳವಡಿಸಿರುವ ಸಿ.ಸಿ.ಟಿ.ವಿ ಕ್ಯಾಮೆರಾವನ್ನು ಪರಿಶೀಲಿಸಲಾಗುತ್ತಿದೆ' ಎಂದು ಈಶಾನ್ಯ ವಿಭಾಗದ ಡಿಸಿಪಿ ಸಜಿತ್ ತಿಳಿಸಿದ್ದಾರೆ.

ಜೋಡಿ ಕೊಲೆಯಿಂದ ಕಾವೇರಿ ಬಡಾವಣೆಯ ಜನರು ಬೆಚ್ಚಿ ಬಿದ್ದಿದ್ದಾರೆ. ಸದ್ಯ ಸ್ಥಳಕ್ಕೆ ಅಮೃತಹಳ್ಳಿ ಪೊಲೀಸರು, ಶ್ವಾನದಳ ಹಾಗೂ ವಿಧಿ ವಿಜ್ಞಾನ ಪ್ರಯೋಗಾಲಯದ ತಜ್ಞರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕಾರಿಗೆ ಬೈಕ್ ತಾಗಿಸಿ ಹಣ ಸುಲಿಗೆ

ಬೆಂಗಳೂರು: ದ್ವಿಚಕ್ರ ವಾಹನವನ್ನು ತಾನೇ ಉದ್ದೇಶಪೂರ್ವಕವಾಗಿ ಕಾರಿಗೆ ತಾಗಿಸಿ ವಾಹನ ಚಾಲಕರಿಂದ ಹಣ ಸುಲಿಗೆ ಮಾಡುತ್ತಿದ್ದ ಆರೋಪಿಯನ್ನು ಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮೈಸೂರಿನ ರಾಜೇಂದ್ರನಗರದ ಹಳೆ ಕೆಸರೆಯ ನಿವಾಸಿ ಜಮೀಲ್ ಖಾನ್(29) ಬಂಧಿತ ಆರೋಪಿ. ಆರೋಪಿಯಿಂದ ₹40 ಸಾವಿರ ನಗದು ಹಾಗೂ ಕೃತ್ಯಕ್ಕೆ ಬಳಸಿದ ಬೈಕ್ ಅನ್ನು ಜಪ್ತಿ ಮಾಡಲಾಗಿದೆ.

'ಜೂನ್ 14ರಂದು ಜಯನಗರ 4ನೇ ಬ್ಲಾಕ್‌ನ ಕೂಲ್ ಜಾಯಿಂಟ್ ವೃತ್ತದಲ್ಲಿ ವ್ಯಕ್ತಿಯೊಬ್ಬರ ಕಾರಿಗೆ ಕೈನಿಂದ ಗುದ್ದಿದ್ದ ಆರೋಪಿ ಕಾರು ನಿಲ್ಲಿಸುವಂತೆ ಬೆದರಿಕೆ ಹಾಕಿದ್ದ. ಬೈಕ್‌ಗೆ ಕಾರು ತಾಗಿದ್ದು, ಹಣ ನೀಡುವಂತೆ ಹೆದರಿಸಿದ್ದ. ಚಾಲಕರಿಂದ ₹30 ಸಾವಿರವನ್ನು ತನ್ನ ಖಾತೆಗೆ ವರ್ಗಾವಣೆ ಮಾಡಿಕೊಂಡಿದ್ದ. ಜೇಬಿನಲ್ಲಿದ್ದ ₹300 ಅನ್ನು ಕಸಿದುಕೊಂಡಿದ್ದ. 'ಆರೋಪಿ ವಿರುದ್ಧ ಹಲವು ಠಾಣೆಗಳಲ್ಲಿ 17 ಪ್ರಕರಣಗಳು ದಾಖಲಾಗಿವೆ' ಎಂದು ಮಾಹಿತಿ ನೀಡಿದರು.

ತಡರಾತ್ರಿ ಪಾರ್ಟಿ ನಡೆಸುತ್ತಿದ್ದ ಸ್ನೇಹಿತರಿಂದಲೇ ಕೃತ್ಯ

ತಲೆ ಮೇಲೆ ಕಲ್ಲು ಎತ್ತಿಹಾಕಿ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಪಿಗೆಹಳ್ಳಿಯ 80 ಅಡಿ ರಸ್ತೆ ಸಮೀಪದ ಖಾಲಿ ಪ್ರದೇಶದಲ್ಲಿ ಶುಕ್ರವಾರ ತಡರಾತ್ರಿ ಪಾರ್ಟಿ ನಡೆಸುತ್ತಿದ್ದ ಸ್ನೇಹಿತರೇ, ಯುವಕನ ತಲೆಯ ಮೇಲೆ ಕಲ್ಲು ಎತ್ತಿಹಾಕಿ ಪರಾರಿಯಾಗಿದ್ದಾರೆ.

ಪುಷ್ಪರಾಜ್(27) ಮೃತ ಕಾರ್ಮಿಕ. 'ಖಾಲಿ ಜಾಗದ ಶೆಡ್‌ನಲ್ಲಿ ಕೃತ್ಯ ಎಸಗಿ ಆರೋಪಿಗಳು ತಲೆಮರೆಸಿಕೊಂಡಿದ್ದಾರೆ. ಆರೋಪಿಗಳ ಸುಳಿವು ಸಿಕ್ಕಿದ್ದು ಶೋಧ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

'ಕೊಲೆಯಾದ ಪುಷ್ಪರಾಜ್ ಟೈಲ್ಸ್ ಕೆಲಸ ಮಾಡುತ್ತಿದ್ದರು. ಶುಕ್ರವಾರ ರಾತ್ರಿ ಸ್ನೇಹಿತರ ಜತೆಗೆ ಮದ್ಯದ ಪಾರ್ಟಿ ನಡೆಸುತ್ತಿದ್ದರು. ಮದ್ಯದ ಅಮಲಿನಲ್ಲಿ ಸ್ನೇಹಿತರ ನಡುವೆ ಗಲಾಟೆಯಾಗಿದೆ. ಆಗ ಪುಷ್ಪರಾಜ್ ಅವರನ್ನು ಕೊಲೆ ಮಾಡಲಾಗಿದೆ. ಶನಿವಾರ ಸಂಜೆ ಪೊದೆಯಲ್ಲಿ ಮೃತದೇಹ ಪತ್ತೆಯಾಗಿದೆ. ಕೊಲೆಯಾದ ವ್ಯಕ್ತಿಯ ಸಹೋದರ ದೂರು ನೀಡಿದ್ದು, ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಸಂಪಿಗೆಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರೌಡಿಶೀಟರ್ ಮೇಲೆ ಹಲ್ಲೆ 9 ಮಂದಿ ಬಂಧನ

ಬೆಂಗಳೂರು: ಹಣದ ವಿಚಾರಕ್ಕೆ ರೌಡಿಶೀಟರ್ ಮೇಲೆ ಹಲ್ಲೆ ನಡೆಸಿದ್ದ 9 ಮಂದಿ ಆರೋಪಿಗಳನ್ನು ಕೊಡಿಗೆಹಳ್ಳಿ ಠಾಣಾ ಪೊಲೀಸರು ಬಂಧಿಸಿದ್ದಾರೆ.

ವಿಜಯ್ ಕುಮಾರ್ ಎಂಬಾತನ ಮೇಲೆ ಆಗಸ್ಟ್ 21ರಂದು ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿದ್ದ ಆರೋಪದಡಿ ಮುತ್ತು, ನಂದ, ಕಿರಣ್, ಶಿವ, ಮಾರುತಿ, ಸುನಿಲ್, ಶರತ್, ರಿತು ಹಾಗೂ ಮೂರ್ತಿ ಎಂಬುವವರನ್ನು ಬಂಧಿಸಲಾಗಿದೆ.

ಮುತ್ತು ಬಳಿ ₹5 ಸಾವಿರ ರೂಪಾಯಿ ಹಣ ಪಡೆದಿದುಕೊಂಡಿದ್ದ ವಿಜಯ್, ಹಣ ಹಿಂದಿರುಗಿಸಿರಲಿಲ್ಲ. ಇತ್ತೀಚೆಗೆ ಬಡಾವಣೆಯಲ್ಲಿ ಅಣ್ಣಮ್ಮ ದೇವಿ ಮೂರ್ತಿ ಪ್ರತಿಷ್ಠಾಪಿಸುವ ವೇಳೆ, ಹಣ ವಾಪಸ್ ಕೊಡುವಂತೆ ಎಲ್ಲರ ಎದುರು ಮುತ್ತು ಕೇಳಿದ್ದ. ಸಾರ್ವಜನಿಕವಾಗಿ ಹಣ ಕೇಳಿದ್ದನ್ನು ಅವಮಾನವೆಂದು ಭಾವಿಸಿದ್ದ ವಿಜಯ್, ಮುತ್ತು ಜೊತೆ ಜಗಳ ಮಾಡಿಕೊಂಡಿದ್ದ ಎಂದು ಪೊಲೀಸರು ತಿಳಿಸಿದ್ದಾರೆ. ಬಳಿಕ ಇಬ್ಬರ ನಡುವೆ ಸಂಧಾನದ ಕುರಿತು ಚರ್ಚೆಯಾಗಿತ್ತು. ಬೆಳಿಗ್ಗೆ 5 ಗಂಟೆಗೆ ವಿಜಯ್ ವಾಯುವಿಹಾರ ಮಾಡುತ್ತಿದ್ದ ವೇಳೆ ಆರೋಪಿಗಳು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಪರಾರಿಯಾಗಿದ್ದರು. ಸದ್ಯ, ವಿಜಯ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ ಎಂದು ಹೇಳಿದ್ದಾರೆ.

ಸಾಲ ತೀರಿಸಲು ಸರಗಳ್ಳತನ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಲ ತೀರಿಸುವುದಕ್ಕಾಗಿ ಮಹಿಳೆಯ ಸರಗಳ್ಳತನ ಮಾಡಿದ್ದ ಆರೋಪಿಯನ್ನು ಗಿರಿನಗರ ಪೊಲೀಸರು ಬಂಧಿಸಿದ್ದಾರೆ.

ಕತ್ರಿಗುಪ್ಪೆ ನಿವಾಸಿ ಕುಮಾರ್ ಎಂಬಾತನನ್ನು ಬಂಧಿಸಿ, ₹45 ಸಾವಿರ ಮೌಲ್ಯದ 7.2 ಗ್ರಾಂ ತೂಕದ ಚಿನ್ನದ ಸರವನ್ನು ವಶಪಡಿಸಿಕೊಳ್ಳಲಾಗಿದೆ.

ಆನ್‌ಲೈನ್ ಗೇಮ್ ಆ್ಯಪ್‌ನಲ್ಲಿ ಬೆಟ್ಟಿಂಗ್ ಆಡುತ್ತಿದ್ದ ಆರೋಪಿ, ಸಾಕಷ್ಟು ಹಣ ಕಳೆದುಕೊಂಡಿದ್ದ. ಸುಮಾರು ₹5 ಲಕ್ಷ ರೂಪಾಯಿ ಸಾಲ ಮಾಡಿದ್ದ. ಸಾಲಗಾರರು ಹಣ ವಾಪಸ್ ನೀಡುವಂತೆ ಪೀಡಿಸುತ್ತಿದ್ದರು. ಸಾಲ ತೀರಿಸುವ ಸಲುವಾಗಿ ಆರೋಪಿ ಸರಗಳ್ಳತನ ಮಾಡಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ವಿಳಾಸ ಕೇಳುವ ನೆಪದಲ್ಲಿ ಆರೋಪಿ ಆ.14ರಂದು ಭೈರಪ್ಪ ಲೇಔಟ್‌ನಲ್ಲಿ ಮಹಿಳೆಯೊಬ್ಬರ ಕುತ್ತಿಗೆಯಲ್ಲಿದ್ದ ಚಿನ್ನದ ಸರವನ್ನು ಕಿತ್ತುಕೊಂಡು ಪರಾರಿಯಾಗಿದ್ದ. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ ಪೊಲೀಸರು, ಸಿ.ಸಿ ಟಿ.ವಿ ಕ್ಯಾಮೆರಾ ಹಾಗೂ ತಾಂತ್ರಿಕ ಸಾಕ್ಷ್ಯಾಧಾರಗಳ ಸಹಾಯದಿಂದ ಹೊಸಕೆರೆಹಳ್ಳಿ ಬಳಿ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದರು. ಗಿರವಿ ಅಂಗಡಿಯಲ್ಲಿ ಅಡವಿಟ್ಟಿದ್ದ ಸರವನ್ನು ವಶಕ್ಕೆ ತೆಗೆದುಕೊಳ್ಳಲಾಯಿತು ಎಂದು ಹೇಳಿದ್ದಾರೆ.

ನಾಲ್ಕು ದ್ವಿಚಕ್ರವಾಹನ ವಶ: ನಗರದ ವಿವಿಧೆಡೆ ದ್ವಿಚಕ್ರ ವಾಹನಗಳನ್ನು ಕಳವು ಮಾಡಿದ್ದ ನಾಯಂಡಹಳ್ಳಿ ನಿವಾಸಿ ಪೆಪ್ಸಿ ರಘು ಎಂಬಾತನನ್ನು ಬಂಧಿಸಿ, ₹4.10 ಲಕ್ಷ ಮೌಲ್ಯದ ನಾಲ್ಕು ದ್ವಿಚಕ್ರ ವಾಹನ ವಶಪಡಿಸಿಕೊಳ್ಳಲಾಗಿದೆ.

ಮನೆ ಕಳ್ಳತನ ಮತ್ತು ದ್ವಿಚಕ್ರ ವಾಹನಗಳ ಕಳವು ಸೇರಿದಂತೆ 15 ಪ್ರಕರಣಗಳು ಆರೋಪಿ ವಿರುದ್ಧ ದಾಖಲಾಗಿವೆ.

'ಜುಲೈ 15ರಂದು ಗಿರಿನಗರ ಪೊಲೀಸ್ ಠಾಣಾ ವ್ಯಾಪ್ತಿಯ ಕತ್ರಿಗುಪ್ಪೆ ಬಳಿ ವ್ಯಕ್ತಿಯೊಬ್ಬರ ದ್ವಿಚಕ್ರ ವಾಹನ ಕಳುವಾಗಿತ್ತು. ಸಿ.ಸಿ ಟಿ.ವಿ ಕ್ಯಾಮೆರಾಗಳನ್ನು ಪರಿಶೀಲಿಸಿದಾಗ ಆರೋಪಿಯ ಸುಳಿವು ದೊರೆಯಿತು. ಆತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಕಳವು ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ' ಎಂದು ಪೊಲೀಸರು ತಿಳಿಸಿದ್ದಾರೆ.

ನಗರದ ವಿವಿಧ ಪೊಲೀಸ್ ಠಾಣೆ, ಹಾಸನ ಹಾಗೂ ಮೈಸೂರು ನಗರದಲ್ಲಿ ಕಳವು, ದರೋಡೆ, ಕೊಲೆ ಯತ್ನಕ್ಕೆ ಸಂಬಂಧಿಸಿದ ಪ್ರಕರಣಗಳು ಆರೋಪಿ ವಿರುದ್ಧ ದಾಖಲಾಗಿವೆ ಎಂದು ಹೇಳಿದ್ದಾರೆ.

ಚಾಕು ತೋರಿಸಿ ಹಣ ಸುಲಿಗೆ: ಇಬ್ಬರ ಸೆರೆ

ಬೆಂಗಳೂರು: ಪಾದಚಾರಿಗಳು ಹಾಗೂ ಬೈಕ್ ಸವಾರರನ್ನು ಅಡ್ಡಗಟ್ಟಿ ಹಣ, ಚಿನ್ನಾಭರಣ ಸುಲಿಗೆ ನಡೆಸುತ್ತಿದ್ದ ಇಬ್ಬರು ಆರೋಪಿಗಳನ್ನು ವರ್ತೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಡಿ.ಜೆ.ಹಳ್ಳಿಯ ನಿವಾಸಿಗಳಾದ ಅಲ್ಲಾಭಕ್ಷ್ ಹಾಗೂ ಮೊಹಮ್ಮದ್ ತೌಸಿಫ್ ಬಂಧಿತರು. ಮತ್ತೊಬ್ಬ ಆರೋಪಿ ತಲೆಮರೆಸಿಕೊಂಡಿದ್ದಾನೆ. ಆರೋಪಿಗಳಿಂದ ಬೈಕ್ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

'ಠಾಣಾ ವ್ಯಾಪ್ತಿಯ ತಿಗಳ ಬೀದಿಯ ವ್ಯಕ್ತಿಯೊಬ್ಬರಿಗೆ ಮೂವರು ಚಾಕು ತೋರಿಸಿ ಬೆದರಿಸಿ, ₹30 ಸಾವಿರ ಸುಲಿಗೆ ಮಾಡಿದ್ದರು. ಡಿ.ಜೆ.ಹಳ್ಳಿಯ ಮೋದಿ ರಸ್ತೆಯಲ್ಲಿ ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಸುಲಿಗೆ ಮಾಡುತ್ತಿರುವ ಬಗ್ಗೆ ತಪ್ಪೊಪ್ಪಿಕೊಂಡಿದ್ದಾರೆ' ಎಂದು ಪೊಲೀಸರು ತಿಳಿಸಿದರು.

ಈ ರೀತಿಯ ಘಟನೆಗಳು ನಡೆದರೆ ಸಮೀಪದ ಠಾಣೆಗಳಿಗೆ ತಕ್ಷಣವೇ ಮಾಹಿತಿ ನೀಡುವಂತೆ ಪೊಲೀಸರು ಮನವಿ ಮಾಡಿದ್ದಾರೆ.

ಟಿಪ್ಪರ್ ಡಿಕ್ಕಿ: 35 ವಿದ್ಯುತ್ ಕಂಬಗಳಿಗೆ ಹಾನಿ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಚಿಕ್ಕಬಾಣಾವರದ ಹೆಸರಘಟ್ಟ ಮುಖ್ಯರಸ್ತೆಯಲ್ಲಿ ಯಂತ್ರ ತುಂಬಿದ್ದ ಟಿಪ್ಪರ್‌ವೊಂದು ಡಿಕ್ಕಿ ಹೊಡೆದು 35 ವಿದ್ಯುತ್ ಕಂಬಗಳಿಗೆ ಹಾನಿಯಾಗಿದೆ.

ಶುಕ್ರವಾರ ತಡರಾತ್ರಿ 1.30ರ ಸುಮಾರಿಗೆ ಟಿಪ್ಪರ್ ಡಿಕ್ಕಿ ಹೊಡೆದ ರಭಸಕ್ಕೆ ಅಕ್ಕಪಕ್ಕದ 35 ಕಂಬಗಳು ಧರೆಗೆ ಉರುಳಿದವು. ತಕ್ಷಣವೇ ಸ್ಥಳೀಯರು ಬೆಸ್ಕಾಂ ಸಹಾಯವಾಣಿಗೆ ಕರೆ ಮಾಡಿ ಮಾಹಿತಿ ನೀಡಿದ್ದರಿಂದ ಅವರು ವಿದ್ಯುತ್ ಸಂಪರ್ಕ ಸ್ಥಗಿತಗೊಳಿಸಿದರು. ಇದರಿಂದ ಯಾವುದೇ ಅಪಾಯ ಸಂಭವಿಸಿಲ್ಲ.

ಚಿಕ್ಕಬಾಣಾವರ ಸಂಚಾರ ಪೊಲೀಸರು, ವಾಹನ ಸಂಚಾರಕ್ಕೆ ಪರ್ಯಾಯ ಮಾರ್ಗ ಕಲ್ಪಿಸಿದರು. ಘಟನೆಯಿಂದ ಕೆಲವು ಕಾಲ ಹೆದ್ದಾರಿಯಲ್ಲಿ ವಾಹನಗಳ ಸಂಚಾರಕ್ಕೆ ತೊಂದರೆಯಾಯಿತು.

ಕಂಬಗಳು ಉರುಳಿ ಬಿದ್ದಿದ್ದರಿಂದ ಸುತ್ತಮುತ್ತಲ ಹಲವು ಬಡಾವಣೆ ಹಾಗೂ ಚಿಕ್ಕಬಾಣಾವರ ಮುಖ್ಯರಸ್ತೆಯಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಿತ್ತು. ಶನಿವಾರ ದಿನವಿಡಿ ಕಂಬಗಳ ಬದಲಾವಣೆ ಹಾಗೂ ವಿದ್ಯುತ್ ಮಾರ್ಗ ದುರಸ್ತಿ ಕಾರ್ಯ ನಡೆಯಿತು. 'ಟಿಪ್ಪರ್ ಡಿಕ್ಕಿಯಿಂದ ಒಂದು ವಿದ್ಯುತ್ ಪರಿವರ್ತಕ, ಕಡಿಮೆ ಹಾಗೂ ಅಧಿಕ ಒತ್ತಡದ ಕೇಬಲ್‌ಗಳು ಹಾಗೂ 35 ವಿದ್ಯುತ್ ಕಂಬಗಳಿಗೆ ಹಾನಿಯಾಗಿದೆ. ಚಾಲಕನ ಮೇಲೆ ಚಿಕ್ಕಬಾಣಾವರ ಸಂಚಾರ ಠಾಣೆಯಲ್ಲಿ ದೂರು ನೀಡಲಾಗಿದೆ. ಟಿಪ್ಪರ್ ಅನ್ನು ಸಂಚಾರ ಪೊಲೀಸರು ವಶಕ್ಕೆ ಪಡೆದಿದ್ದಾರೆ' ಎಂದು ಸೋಲದೇವನಹಳ್ಳಿ ಬೆಸ್ಕಾಂ ಸಹಾಯಕ ಎಂಜಿನಿಯರ್ ಭರತ್ ತಿಳಿಸಿದರು.

'ನಾವು–ನೀವು, ನೆರೆ–ಹೊರೆ ಕಾವಲು ಪಡೆ'ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಪೊಲೀಸ್ ಇಲಾಖೆಯಿಂದ ಜಾರಿಗೆ ತಂದಿರುವ 'ನಾವು –ನೀವು, ನೆರೆ–ಹೊರೆ ಕಾವಲು ಪಡೆ'ಗೆ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು ಚಾಲನೆ ನೀಡಿದರು.

ವಿಜಯನಗರದಲ್ಲಿ ಶನಿವಾರ ನಡೆದ ತಿಂಗಳ ಜನಸಂಪರ್ಕ ಸಭೆಯಲ್ಲಿ ಅವರು ನೂತನ ಯೋಜನೆಗೆ ಚಾಲನೆ ನೀಡಿದರು. 'ನಾವು–ನೀವು, ನೆರೆ–ಹೊರೆ ಕಾವಲು ಪಡೆ'ಗೆ ಪ್ರತಿ ಠಾಣಾ ವ್ಯಾಪ್ತಿಯಲ್ಲಿ 10ಕ್ಕೂ ಹೆಚ್ಚು ಮಂದಿ ಸ್ಥಳೀಯರನ್ನು ಆಯ್ಕೆ ಮಾಡಿಕೊಂಡಿದ್ದು, ಆ ವ್ಯಕ್ತಿಯ ಪೂರ್ವಾಪರ ಪರಿಶೀಲಿ ಸಲಾಗಿದೆ. ಅಲ್ಲದೆ, ಅವರಿಗೆ ಗುರುತಿನ ಚೀಟಿ ಹಾಗೂ ಟೀ–ಶರ್ಟ್ ವಿತರಣೆ ಮಾಡಲಾಗಿದೆ. ಬಿಡುವಿನ ವೇಳೆಯಲ್ಲಿ ನೇಮಕವಾದ ವ್ಯಕ್ತಿ ರಾತ್ರಿ ಪೊಲೀಸರೊಂದಿಗೆ ಗಸ್ತು ನಡೆಸುತ್ತಾರೆ' ಎಂದು ಪೊಲೀಸರು ಮಾಹಿತಿ ನೀಡಿದರು.

'ಡ್ರಗ್ಸ್, ಸಂಚಾರ ಸೇರಿ ಇಲಾಖೆಯ ಜಾಗೃತಿ ಕಾರ್ಯಕ್ರಮಗಳಲ್ಲಿ ಅರಿವು ಮೂಡಿಸುತ್ತಾರೆ. ಸಂಚಾರ ದಟ್ಟಣೆ ಸಂದರ್ಭದಲ್ಲೂ ಅವರನ್ನು ಬಳಸಿ ಕೊಳ್ಳಲಾಗುತ್ತದೆ. ಪ್ರತಿಯೊಬ್ಬ ವ್ಯಕ್ತಿಗೆ ಎರಡರಿಂದ ಮೂರು ಪ್ರದೇಶದ ಹೊಣೆ ನೀಡಲಾಗಿದೆ. ಅವರು ಆ ಪ್ರದೇಶದಲ್ಲಿನ ಅಪರಾಧ, ಬೇರೆ ಬೇರೆ ಅಕ್ರಮ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡುತ್ತಾರೆ. ಸದ್ಯ ಆ ವ್ಯಕ್ತಿಗೆ ಯಾವುದೇ ಸಂಭಾವನೆ ನೀಡುವುದಿಲ್ಲ. ಸ್ವಯಂ ಪ್ರೇರಿತವಾಗಿ ನೇಮಕಗೊಂಡಿದ್ದಾರೆ' ಎಂದು ಹೇಳಿದರು.

ಜನಸಂಪರ್ಕ ಸಭೆಯಲ್ಲಿ ಕಂದಾಯ ನಿವೇಶನ ಮಾರಾಟ, ವ್ಹೀಲಿ, ವಾಹನ ನಿಲುಗಡೆ, ಸೇರಿದಂತೆ ಹಲವು ಸಮಸ್ಯೆಗಳ ಕುರಿತು ಸಾರ್ವಜನಿಕರು ಅಧಿಕಾರಿಗಳ ಗಮನಕ್ಕೆ ತಂದರು. ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಎಂ.ಎನ್. ಅನುಚೇತ್, ಪಶ್ಚಿಮ ವಿಭಾಗದ ಡಿಸಿಪಿ ಎಸ್.ಗಿರೀಶ್, ಸಂಚಾರ ವಿಭಾಗದ ಡಿಸಿಪಿ ಅನಿತಾ ಹದಣ್ಣನವರ್ ಹಾಜರಿದ್ದರು.

ಶ್ವಾನದಳದಿಂದ ವಿವಿಧ ಬ್ಯಾರಕ್‌ಗಳಲ್ಲಿ ಪರಿಶೀಲನೆ

ಕಾರಾಗೃಹದ ಮೇಲೆ ಸಿಸಿಬಿ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಅಕ್ರಮ ಚಟುವಟಿಕೆಗಳು ನಡೆಯುತ್ತಿವೆ ಎಂಬ ದೂರಿನ ಮೇರೆಗೆ ಸಿಸಿಬಿ ಪೊಲೀಸರು ಶನಿವಾರ ದಿಢೀರ್ ದಾಳಿ ನಡೆಸಿದರು.

ಕೈದಿಗಳಿಗೆ ಮಾದಕ ವಸ್ತು ಪೂರೈಕೆ, ಮೊಬೈಲ್ ಬಳಕೆ ಸೇರಿ ಕೆಲವು ಅಕ್ರಮ ಚಟುವಟಿಕೆಗಳು ನಡೆಯುತ್ತಿವೆ ಎಂಬ ಆರೋಪದ ಮೇಲೆ ಪೊಲೀಸರು ಪರಿಶೀಲನೆ ನಡೆಸಿದರು.

ಶ್ವಾನ ದಳ ಸಹಿತ ಸಿಸಿಬಿಯ ಸುಮಾರು 40ಕ್ಕೂ ಅಧಿಕ ಅಧಿಕಾರಿ–ಸಿಬ್ಬಂದಿ ಜೈಲಿನ ಮೇಲೆ ದಾಳಿ ನಡೆಸಿ, ಪ್ರತಿ ಬ್ಯಾರಕ್‌ಗಳನ್ನು ತಪಾಸಣೆ ಮಾಡಿದರು.

'ರೌಡಿಗಳಾದ ಸುನೀಲ್, ವಿಲ್ಸನ್ ಗಾರ್ಡನ್ ನಾಗ ಸೇರಿ ಹಲವು ರೌಡಿಗಳು ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದಾರೆ. ರೌಡಿಗಳು ಮೊಬೈಲ್ ಮೂಲಕ ಹೊರಗಡೆ ಸಂಪರ್ಕ ಸಾಧಿಸಿ ದುಷ್ಕೃತ್ಯ ಎಸಗಲು ಸಂಚು ರೂಪಿಸುತ್ತಿದ್ದಾರೆ ಎಂಬ ಮಾಹಿತಿ ಇತ್ತು. ಮೊಬೈಲ್, ಮಾರಕಾಸ್ತ್ರ, ಮಾದಕ ಪದಾರ್ಥ ಸೇರಿ ಹಲವು ವಸ್ತುಗಳ ಪತ್ತೆಗೆ ಶೋಧ ಕಾರ್ಯ ನಡೆಸಲಾಯಿತು. ಜೈಲಿನಲ್ಲಿ ಯಾವುದೇ ನಿಷೇಧಿತ ವಸ್ತು ಪತ್ತೆಯಾಗಿಲ್ಲ' ಎಂದು ಸಿಸಿಬಿ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದರು.



ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಶ್ವಾನ ದಳದಿಂದ ತಪಾಸಣೆ ನಡೆಯಿತು

ವಿಚಾರಣಾಧೀನ ಕೈದಿಯೊಬ್ಬ ಮನೆಯೂಟಕ್ಕೆ ಅವಕಾಶ ನೀಡುವಂತೆ ಇತ್ತೀಚೆಗೆ ಸಲ್ಲಿಸಿದ್ದ ಅರ್ಜಿ ವಿಚಾರಣೆ ವೇಳೆ ವಕೀಲರೊಬ್ಬರು, ಪರಪ್ಪನ ಅಗ್ರಹಾರ ಸೇರಿ ರಾಜ್ಯದ ಜೈಲುಗಳಲ್ಲಿ ಗನ್, ಮಾದಕ ವಸ್ತು ಸೇರಿ ಎಲ್ಲ ನಿಷೇಧಿತ ವಸ್ತುಗಳು ಸಿಗುತ್ತವೆ ಎಂದು ಆರೋಪಿಸಿದ್ದರು.

ಹಾಸನ ಜಿಲ್ಲೆಯಲ್ಲಿ ಪ್ರಾಯೋಗಿಕ ಚಾಲನೆ • ಅರಣ್ಯ ಭವನದಲ್ಲಿ ಕಂಟ್ರೋಲ್ ರೂಂ


ಕಾಡಾನೆ ನಿಗಾಕ್ಕೆ 'ಆನೆ ಎಲ್ಲಿ ಡಾಟ್‌ಕಾಂ'

• ಚಿದಂಬರಪ್ರಸಾದ

ಹಾಸನ: ಕಾಡಾನೆಗಳ ಚಲನವಲನದ ಮೇಲೆ ನಿಗಾ ಇಟ್ಟು, ಮಾಹಿತಿ ಪಡೆಯಲು ಅರಣ್ಯ ಇಲಾಖೆಯು 'ಆನೆ ಎಲ್ಲಿ ಡಾಟ್ ಕಾಂ' (aaneelli.com) ವೆಬ್‌ಸೈಟ್ ರೂಪಿಸಿದ್ದು, ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ ಚಾಲನೆಗೊಂಡಿದೆ.

ನಗರದ ಅರಣ್ಯ ಭವನದಲ್ಲಿ ಫಾರೆಸ್ಟ್ ಕಂಟ್ರೋಲ್ ರೂಂ ತೆರೆದು ಪೊಲೀಸ್ ಇಲಾಖೆಯ ಮಾದರಿಯಲ್ಲಿ ದಿನದ 24 ಗಂಟೆ ಮೂರು ಪಾಳಿಯಲ್ಲಿ ಸಿಬ್ಬಂದಿ ನಿಯೋಜಿಸಲಾಗಿದೆ.

ಎಲ್ಲೆಂದರಲ್ಲಿ ದಾಳಿ ಮಾಡುವ ಆನೆಗಳು, ಗದ್ದೆಗಳಿಗೆ ನುಗ್ಗಿ ಬೆಳೆ ಹಾಳು ಮಾಡುತ್ತಿವೆ. ಜನರ ಮೇಲೂ ದಾಳಿ ಮಾಡುತ್ತಿವೆ. ಹೀಗಾಗಿ ಅವುಗಳ ಚಲನವಲನ ವೀಕ್ಷಣೆಗೆ ಇಲಾಖೆಯು ವೆಬ್‌ಸೈಟ್ ಮೊರೆ ಹೋಗಿದೆ. ರೇಡಿಯೊ ಕಾಲರ್, ಅರಣ್ಯ ಸಿಬ್ಬಂದಿಯಿಂದ ಸಿಗುವ ಮಾಹಿತಿ ಆಧರಿಸಿ ವೆಬ್‌ಸೈಟ್‌ನಲ್ಲಿ ಕಾಡಾನೆಗಳ ವಿವರ ಲಭ್ಯವಾಗುತ್ತಿದೆ.



ಆನೆ ಎಲ್ಲಿ ಡಾಟ್‌ಕಾಂ ವೆಬ್‌ಸೈಟ್‌ನಲ್ಲಿ ಆನೆಗಳು ಇರುವ ಮಾಹಿತಿಯನ್ನು ಹಾಸನ ಡಿಸಿಎಫ್ ಸೌರಭ್‌ಕುಮಾರ್ ನೀಡಿದರು

ಜಿಲ್ಲೆಯಲ್ಲಿ ಅರಣ್ಯ ಇಲಾಖೆಯ ಆನೆ ಕಾರ್ಯಪಡೆ, ರ‍್ಯಾಪಿಡ್ ರೆಸ್ಪಾನ್ಸ್ ಟೀಂಗಳು ಕಾಡಾನೆಗಳ ಚಲನ ವಲನದ ಮೇಲೆ ಕಣ್ಣಿಟ್ಟಿವೆ. ಆದರೆ, ಕೇಂದ್ರೀಕೃತ ವ್ಯವಸ್ಥೆ ಇಲ್ಲದೇ ಉಪಟಳ ತಡೆಯುವುದು ಕಷ್ಟವಾಗಿತ್ತು.

ಕಾಡಾನೆಗಳ ಬೆನ್ನಟ್ಟಲು ಇರುವ ಜಿಪಿಎಸ್ ಅಳವಡಿಸಿದ ಆರು ವಾಹನಗಳ ಚಲನವಲನದ ಬಗ್ಗೆಯೂ ವೆಬ್‌ಸೈಟ್‌ನಲ್ಲಿ ಮಾಹಿತಿ ಸಿಗಲಿದೆ. ಆನೆ ಎಲ್ಲಿವೆ? ಆನೆಯನ್ನು ಹಿಂಬಾಲಿಸುವ ತಂಡ ಎಲ್ಲಿದೆ ಎಂಬುದನ್ನು ಗಮನಿಸುವ ಅಧಿಕಾರಿಗಳು ತಕ್ಷಣ ಸ್ಪಂದಿಸಲಿದ್ದಾರೆ. ಸಾರ್ವಜನಿಕರು ಸಮಸ್ಯೆ ದಾಖಲಿಸಲು ಈ ವೆಬ್‌ಸೈಟ್‌ನಲ್ಲಿ ಅವಕಾಶ ಇದ್ದು, ಅವುಗಳಿಗೂ ಇಲಾಖೆ ಸ್ಪಂದಿಸಲಿದೆ.

ಆನೆಗಳ ಸಂಪೂರ್ಣ ಮಾಹಿತಿ

'ಕಂಟ್ರೋಲ್ ರೂಂ ವಿಸ್ತರಿಸಲಾಗಿದ್ದು, ಜಿಲ್ಲೆಯ ಸಕಲೇಶಪುರ, ಆಲೂರು, ಬೇಲೂರು ಹಾಗೂ ಅರಕಲಗೂಡು ತಾಲ್ಲೂಕಿನಲ್ಲಿ ಸಂಚರಿಸುವ ಕಾಡಾನೆಗಳ ಮೇಲೆ ನಿಗಾ ಇರಿಸಲಾಗುತ್ತಿದೆ' ಎಂದು ಡಿಸಿಎಫ್ ಸೌರಭ್‌ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ಕಾಡಾನೆಗಳು ಎಲ್ಲಿವೆ? ಗುಂಪಿನಲ್ಲಿವೆಯಾ ಅಥವಾ ಒಂಟಿಯಾಗಿವೆಯಾ? ನಿಂತಿವೆಯಾ ಅಥವಾ ಚಲಿಸುತ್ತಿವೆಯಾ? ಗ್ರಾಮಗಳ ಹತ್ತಿರವಿದೆಯಾ ಅಥವಾ ದೂರ ಇವೆಯಾ? ಹೀಗೆ ಆನೆಗಳ ಕುರಿತು ಎಲ್ಲ ರೀತಿಯ ಮಾಹಿತಿ ಗೂಗಲ್ ಮ್ಯಾಪ್ ಮತ್ತು ಸ್ಯಾಟಲೈಟ್ ಮ್ಯಾಪ್ ಸಹಾಯದಿಂದ ಸಿಗಲಿದೆ. ಅದನ್ನು ಗಮನಿಸುವ ಸಿಬ್ಬಂದಿ, ತಕ್ಷಣವೇ ಕಾರ್ಯಪ್ರವೃತ್ತರಾಗಿ ಅನಾಹುತ ತಪ್ಪಿಸಲಿದ್ದಾರೆ' ಎಂದು ಅವರು ವಿವರಿಸಿದ್ದಾರೆ.

ಯೋಜನೆಯನ್ನು ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ ಅರಂಭಿಸಿದ್ದು, ಯಶಸ್ವಿಯಾದರೆ ಕಾಡು ಪ್ರಾಣಿಗಳ ಹಾವಳಿ ಇರುವ ಇತರ ಪ್ರದೇಶಗಳಿಗೂ ವಿಸ್ತರಿಸುವ ಚಿಂತನೆ ಇದೆ

ಸೌರಭ್‌ಕುಮಾರ್, ಹಾಸನ ಡಿಸಿಎಫ್

ಮುಖ್ಯಾಂಶಗಳು

- ಜಿಲ್ಲಾ ಕೇಂದ್ರದ ಕಂಟ್ರೋಲ್ ರೂಂ ವಿಸ್ತರಣೆ
- ಮೂರು ಪಾಳಿಯಲ್ಲಿ ಸಿಬ್ಬಂದಿ ಕಾರ್ಯನಿರ್ವಹಣೆ

ಕಾದಂಬರಿಕಾರ ಎಸ್.ಎಲ್. ಭೈರಪ್ಪ ಆಕ್ರೋಶ

'ರಾಜ್ಯಪಾಲರಿಗೆ ಅಗೌರವ'

ಪ್ರಜಾವಾಣಿ ವಾರ್ತೆ

ಮೈಸೂರು: 'ಭ್ರಷ್ಟಾಚಾರವನ್ನು ನಿಯಂತ್ರಿಸುವುದು ರಾಜ್ಯಪಾಲರ ಕೆಲಸ. ಆದರೆ, ತನಿಖೆಗೆ ಆದೇಶಿಸಿದ ಅವರಿಗೆ ಇಂದಿನ ರಾಜ್ಯ ಸರ್ಕಾರ ಅಗೌರವ ತರುತ್ತಿದೆ. ಹೀಗಾದರೆ ಪ್ರಜಾಪ್ರಭುತ್ವದ ಕಥೆ ಏನು?' ಎಂದು ಕಾದಂಬರಿಕಾರ ಎಸ್.ಎಲ್.ಭೈರಪ್ಪ ಆತಂಕ ವ್ಯಕ್ತಪಡಿಸಿದರು.

ನಗರದ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಶನಿವಾರ ಮೇಘಾಲಯ ರಾಜ್ಯಪಾಲ ಸಿ.ಎಚ್.ವಿಜಯಶಂಕರ್ ಅವರಿಗೆ ಆಯೋಜಿಸಿದ್ದ ನಾಗರಿಕ ಸನ್ಮಾನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, 'ದೂರು ಬಂದಿದ್ದರಿಂದ ತನಿಖೆಗೆ ಆದೇಶಿಸಿರುವುದರಲ್ಲಿ ತಪ್ಪೇನಿದೆ? ಸರ್ಕಾರ ನಡೆಸುವವರು ಪ್ರಾಮಾಣಿಕರಾಗಿದ್ದರೆ ತನಿಖೆ ಮಾಡಿ ಎನ್ನಬೇಕಿತ್ತು. ಆದರೆ, ಅವರ ಪ್ರಾಮಾಣಿಕತೆ ಎಷ್ಟು ಎಂದು ಜನರಿಗೆ ಗೊತ್ತಿದೆ' ಎಂದು ವ್ಯಂಗ್ಯವಾಡಿದರು.



ಎಸ್.ಎಲ್ ಭೈರಪ್ಪ

'ಸರ್ಕಾರದ ತಪ್ಪನ್ನು ಸರಿಪಡಿಸುವುದು ರಾಜ್ಯಪಾಲರ ಕೆಲಸ. ಆದರೆ, ಇಂದು ಅವರ ವಿರುದ್ಧ ಸರ್ಕಾರವನ್ನೇ ಎತ್ತಿಕಟ್ಟುತ್ತಾರೆ. ಒಂದು ಲಕ್ಷ ಜನರನ್ನು ಸೇರಿಸಿ, ಕೆಟ್ಟ ಮಾತುಗಳನ್ನಾಡಿಸುತ್ತಾರೆ' ಎಂದು ಪರೋಕ್ಷವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಟೀಕಿಸಿದರು.

ವಿಧಾನ ಪರಿಷತ್ ಸದಸ್ಯ ಎ.ಎಚ್.ವಿಶ್ವನಾಥ್ ಮಾತನಾಡಿ, 'ರಾಜ್ಯಪಾಲರಿಗೆ ತೊಂದರೆ ನೀಡುವುದು ಯಾರಿಗೂ ಶೋಭೆ ತರುವುದಿಲ್ಲ. ಅದರಲ್ಲೂ, ಹೊರರಾಜ್ಯದಲ್ಲಿ ಒಂದು ಪಕ್ಷದ ಮುಖ್ಯಸ್ಥರಾಗಿ, ಹಲವು ಹುದ್ದೆ ನಿಭಾಯಿಸಿದ ಅನುಭವವುಳ್ಳವರು ರಾಜ್ಯಪಾಲರಾಗಿ ಬಂದಾಗ ಅವಮಾನಿಸುವುದು ಎಷ್ಟು ಸರಿ' ಎಂದು ಪ್ರಶ್ನಿಸಿದರು.

'ರಾಜ್ಯಪಾಲರ ಸ್ಥಾನ, ಘನತೆಗೆ ಕುಂದು ತರಬಾರದು. ಎಲ್ಲರನ್ನು ಗೌರವಯುತವಾಗಿ ನಡೆಸಿಕೊಂಡ ಇತಿಹಾಸವುಳ್ಳ ನಾಡಿನಲ್ಲಿ, ಅದಕ್ಕೆ ಧಕ್ಕೆಯಾಗದಂತೆ ನೋಡಿಕೊಳ್ಳಬೇಕು' ಎಂದು ಆಗ್ರಹಿಸಿದರು.

ಡಾ.ಶಿವಾನಿ ಭಟ್‌ಗೆ 11ನೇ ರ‍್ಯಾಂಕ್

ಪ್ರಜಾವಾಣಿ ವಾರ್ತೆ

ಮಂಗಳೂರು: ವೈದ್ಯಕೀಯ ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶಕ್ಕಾಗಿ ನಡೆದ ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆಯಲ್ಲಿ (ನೀಟ್–ಪಿಜಿ) ಇಲ್ಲಿನ ಚಿಲಿಂಬಿಯ ಡಾ. ಶಿವಾನಿ ಭಟ್ ಎಲ್. 11ನೇ ರ‍್ಯಾಂಕ್ ಪಡೆದಿದ್ದಾರೆ.



ಡಾ.ಶಿವಾನಿ ಭಟ್ ಎಲ್.

ಅವರು ಚಿಲಿಂಬಿಯ ಗೋಕುಲ್ ಭಟ್– ಗಾಯತ್ರಿ ಭಟ್ ದಂಪತಿಯ ದ್ವಿತೀಯ ಪುತ್ರಿ. ಇಲ್ಲಿನ ಕಸ್ತೂರಬಾ ವೈದ್ಯಕೀಯ ಕಾಲೇಜಿನಲ್ಲಿ ಎಂಬಿಬಿಎಸ್ ಶಿಕ್ಷಣ ಪಡೆದಿದ್ದಾರೆ.

'ನೀಟ್ ಫಲಿತಾಂಶ ನೋಡಿ ಖುಷಿಯ ಜೊತೆ ಆಶ್ಚರ್ಯವಾಯಿತು. ಪರೀಕ್ಷೆ ಬರೆಯುವ ನಿರ್ಧಾರ ಕೈಗೊಂಡ ದಿನದಿಂದಲೇ ಸಾಕಷ್ಟು ಪರಿಶ್ರಮ ಹಾಕಿದ್ದೇನೆ. ಉನ್ನತ ಶಿಕ್ಷಣಕ್ಕೆ ಇಂಗ್ಲೆಂಡ್‌ಗೆ ಹೋಗುವ ಯೋಜನೆಯನ್ನೂ ಕೈಬಿಟ್ಟಿದ್ದೆ. ಕೊನೆಗೂ ನನ್ನ ಶ್ರಮ ಫಲ ನೀಡಿದೆ. ಜನರಲ್ ಮೆಡಿಸಿನ್ ಅಥವಾ ರೇಡಿಯೋಡಯಾಗ್ನಾಸಿಸ್ ವಿಭಾಗದಲ್ಲಿ ಸ್ನಾತಕೋತ್ತರ ಶಿಕ್ಷಣ ಪಡೆಯುವ ಆಶಯವಿದೆ' ಎಂದು ಡಾ.ಶಿವಾನಿ ಭಟ್ ತಿಳಿಸಿದರು.

'ನೀಟ್ ರದ್ದಾದಾಗ ಅದರ ಪರಿಣಾಮವನ್ನು ನಾನೂ ಎದುರಿಸಿದ್ದೇನೆ. ಆದರೂ, ಅದನ್ನೆಲ್ಲ ಮೆಟ್ಟಿನಿಂತು ಪರೀಕ್ಷೆಗಾಗಿ ಮತ್ತಷ್ಟು ಕಠಿಣ ತಯಾರಿ ನಡೆಸಿದ್ದೆ' ಎಂದು ಅವರು ತಿಳಿಸಿದರು.

ಹುಣಸಘಟ್ಟ: ಕಲುಷಿತ ನೀರು ಕುಡಿದು ಮಹಿಳೆ ಸಾವು?

ಪ್ರಜಾವಾಣಿ ವಾರ್ತೆ

ದಾವಣಗೆರೆ: ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನ ಹುಣಸಘಟ್ಟ ಗ್ರಾಮದಲ್ಲಿ ಕಲುಷಿತ ನೀರು ಸೇವಿಸಿ ಅಸ್ವಸ್ಥಗೊಂಡು ಆಸ್ಪತ್ರೆಗೆ ದಾಖಲಾಗಿದ್ದ ಮಹಿಳೆಯೊಬ್ಬರು ಶನಿವಾರ ಮೃತಪಟ್ಟಿದ್ದಾರೆ.

ಗ್ರಾಮದ ಚಂದ್ರಮ್ಮ ಹುರಳಹಳ್ಳಿ (60) ಮೃತರು. ಆ.21ರಂದು ಕಲುಷಿತ ನೀರು ಸೇವಿಸಿದ್ದರಿಂದ ಗ್ರಾಮದ ಏಳು ಜನರು ಅಸ್ವಸ್ಥರಾಗಿದ್ದರು. ವಾಂತಿ–ಭೇದಿಯಿಂದ ತೀವ್ರವಾಗಿ ಬಳಲಿದ್ದ ಚಂದ್ರಮ್ಮ ಅವರನ್ನು ಶಿವಮೊಗ್ಗದ ಮೆಗ್ಗಾನ್ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿತ್ತು.

'ಕಲುಷಿತ ನೀರು ಸೇವಿಸಿದ ಬಳಿಕ ಚಂದ್ರಮ್ಮ ಅಸ್ವಸ್ಥಗೊಂಡಿದ್ದರು. ಆರೋಗ್ಯದ ಸಮಸ್ಯೆ ಉಲ್ಬಣಗೊಂಡಿತು. ಸಾವಿಗೆ ಕಲುಷಿತ ನೀರೇ ಕಾರಣ' ಎಂದು ಕುಟುಂಬದ ಸದಸ್ಯರು ಆರೋಪಿಸಿದ್ದಾರೆ.

'ವಾಂತಿ–ಭೇದಿ ಹಾಗೂ ಜ್ವರದಿಂದ ಬಳಲುತ್ತಿದ್ದ ಚಂದ್ರಮ್ಮ ಅಂಗಾಂಗ ವೈಫಲ್ಯದಿಂದ ಮೃತಪಟ್ಟಿದ್ದಾರೆ. ಇದಕ್ಕೆ ಕಲುಷಿತ ನೀರು ಕಾರಣವೇ ಎಂಬುದು ಇನ್ನೂ ದೃಢಪಟ್ಟಿಲ್ಲ. ಉಳಿದ ಆರು ಜನರ ಆರೋಗ್ಯದಲ್ಲಿ ಚೇತರಿಕೆ ಕಾಣಿಸಿಕೊಂಡಿದ್ದು ಮನೆಗೆ ಮರಳಿದ್ದಾರೆ' ಎಂದು ಹೊನ್ನಾಳಿ ತಾಲ್ಲೂಕು ಪ್ರಭಾರ ಆರೋಗ್ಯಾಧಿಕಾರಿ ಡಾ.ಎನ್.ಎಚ್. ಗಿರೀಶ್ ತಿಳಿಸಿದ್ದಾರೆ.



ಚಂದ್ರಮ್ಮ

'ಗ್ರಾಮಕ್ಕೆ ಪೂರೈಕೆ ಮಾಡಿದ ನೀರಿನ ಮಾದರಿಗಳನ್ನು ಸಂಗ್ರಹಿಸಿ ಚನ್ನಗಿರಿ ಹಾಗೂ ಶಿವಮೊಗ್ಗ ಪ್ರಯೋಗಾಲಯಗಳಿಗೆ ಕಳುಹಿಸಲಾಗಿತ್ತು. ಚನ್ನಗಿರಿ ಪ್ರಯೋಗಾಲಯದ ವರದಿ ಕೈಸೇರಿದ್ದು, ನೀರು ಕಲುಷಿತಗೊಂಡಿರುವುದು ದೃಢಪಟ್ಟಿಲ್ಲ. ಶಿವಮೊಗ್ಗ ಪ್ರಯೋಗಾಲಯದ ವರದಿಗೆ ಕಾಯುತ್ತಿದ್ದೇವೆ' ಎಂದು ಹೊನ್ನಾಳಿ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಎಂ.ಆರ್. ಪ್ರಕಾಶ್ ತಿಳಿಸಿದ್ದಾರೆ.

ಗ್ರಾಮದಲ್ಲಿ ನೀರು ಪೂರೈಸಲು ಅಳವಡಿಸಿರುವ ಪೈಪ್‌ಗಳು ಚರಂಡಿಗಳಲ್ಲಿ ಇವೆ. ಪೈಪ್‌ಗಳಲ್ಲಿ ದೋಷ ಇದ್ದುದರಿಂದ ಚರಂಡಿಯ ನೀರೂ ಪೂರೈಕೆಯಾಗಿದೆ ಎಂದು ಗ್ರಾಮಸ್ಥರು ದೂರಿದ್ದಾರೆ.

ಟೊಂಕ: ಡಾಲ್ಫಿನ್ ಕಳೇಬರ ಪತ್ತೆ

ಹೊನ್ನಾವರ (ಉತ್ತರ ಕನ್ನಡ ಜಿಲ್ಲೆ): ತಾಲ್ಲೂಕಿನ ಕಾಸರಕೋಡ ಟೊಂಕ ಸಮೀಪ ಸಮುದ್ರ ತೀರದಲ್ಲಿ ಶುಕ್ರವಾರ ಡಾಲ್ಫಿನ್ ಕಳೇಬರ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದೆ.

'ಡಾಲ್ಫಿನ್ ಸಾವಿಗೆ ಕಾರಣ ತಿಳಿದುಬಂದಿಲ್ಲ. ಮರಣೋತ್ತರ ಪರೀಕ್ಷೆ ವರದಿ ಬಂದ ಬಳಿಕ ನಿಖರ ಕಾರಣ ಗೊತ್ತಾಗಲಿದೆ' ಎಂದು ವಲಯ ಅರಣ್ಯಾಧಿಕಾರಿ ಸವಿತಾ ದೇವಾಡಿಗ ತಿಳಿಸಿದರು.

'ಕಾಸರಕೋಡ ಸಮೀಪದ ಕಡಲು ಡಾಲ್ಫಿನ್ ವಾಸಸ್ಥಾನವಾಗಿದ್ದು, ಅಳಿವಿನಂಚಿನಲ್ಲಿರುವ ಅವುಗಳ ಸಂರಕ್ಷಣೆಗೆ ಕ್ರಮ ಕೈಗೊಳ್ಳಬೇಕಿದೆ' ಎಂದು ಮೀನುಗಾರ ಮುಖಂಡ ರಾಜೇಶ ತಾಂಡೇಲ ಹೇಳಿದರು.

'ಸಿದ್ದರಾಮಯ್ಯ ನಾಯಕತ್ವ ಅಬಾಧಿತ'

ಒಂದನೇ ಪುಟದಿಂದ...

'ಆಧಾರರಹಿತ ಆರೋಪಗಳು ಮತ್ತು ರಾಜ್ಯಪಾಲರ ಕಚೇರಿ ಬಳಸಿ ಸಿದ್ದರಾಮಯ್ಯ ಅವರನ್ನು ಗುರಿ ಮಾಡುತ್ತಿರುವ ಬಿಜೆಪಿಯ ಷಡ್ಯಂತ್ರವನ್ನು ಕಾಂಗ್ರೆಸ್ ಬಹಿರಂಗಪಡಿಸಲಿದೆ' ಎಂದೂ ಹೇಳಿದರು.

'ಈ ವರ್ಷದ ಆರಂಭದಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಮತ್ತು ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರನ್ನು ಬೆಂಬಲಿಸಿದ ಮಾದರಿಯಲ್ಲಿ, ಬೆಂಗಳೂರಿನಲ್ಲಿಯೂ ಜಂಟಿ ಸಾರ್ವಜನಿಕ ಸಭೆ ಹಮ್ಮಿಕೊಳ್ಳುವ ಕುರಿತು 'ಇಂಡಿಯಾ' ಮೈತ್ರಿಕೂಟದ ಪಕ್ಷಗಳ ಜೊತೆ ಚರ್ಚೆ ನಡೆಸಲಾಗುತ್ತಿದೆ' ಎಂದರು.

'ಕರ್ನಾಟಕದಲ್ಲಿ 'ಗ್ಯಾರಂಟಿ' ಯೋಜನೆಗಳು ಜಾರಿಗೆ ಬಂದ ನಂತರ ಸಿದ್ದರಾಮಯ್ಯ ಅವರ ಜನಪ್ರಿಯತೆ ಹೆಚ್ಚಿದೆ. ಇದು ಬಿಜೆಪಿಯ ಭೀತಿಗೆ ಕಾರಣವಾಗಿದೆ. ಪಕ್ಷದ ಸಿದ್ಧಾಂತ ಮತ್ತು ಸಿದ್ದರಾಮಯ್ಯ- ಡಿ.ಕೆ. ಶಿವಕುಮಾರ್ ನಾಯಕತ್ವದ ಪರಿಣಾಮ ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿದೆ' ಎಂದೂ ವೇಣುಗೋಪಾಲ್ ಹೇಳಿದರು.

'ಸಿದ್ದರಾಮಯ್ಯ ವಿರುದ್ಧದ ವಿಚಾರಣೆಗೆ ತ್ವರಿತವಾಗಿ ಅನುಮತಿ ನೀಡಿರುವ ರಾಜ್ಯಪಾಲ, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಲು ಲೋಕಾಯುಕ್ತ ಕೇಳಿದ್ದ ಅನುಮತಿ ನೀಡಲು ಯಾಕೆ ಮುಂದಾಗಿಲ್ಲ' ಎಂದು ಪ್ರಶ್ನಿಸಿದರು.

'ಕಾನೂನು ಎಲ್ಲರಿಗೂ ಒಂದೇ ಅಲ್ಲವೇ? ಬಿಜೆಪಿ ನಾಯಕರಿಗೆ ಸಂಬಂಧಿಸಿದ ಎಷ್ಟೋ ಕಡತಗಳನ್ನು ರಾಜ್ಯಪಾಲರು ವಿಲೇವಾರಿ ಮಾಡಿಲ್ಲ. ರಾಜ್ಯಪಾಲರ ಪರ ಸಾಲಿಸಿಟರ್ ಜನರಲ್ ಅವರೇ ವಾದ ಮಂಡಿಸುತ್ತಾರೆ. ರಾಜ್ಯಪಾಲರ ಕಚೇರಿಯನ್ನು ಬಿಜೆಪಿ ಹೇಗೆ ದುರುಪಯೋಗಪಡಿಸಿಕೊಳ್ಳುತ್ತಿದೆ ಎಂಬುವುದನ್ನು ರಾಜ್ಯದ ಜನರಿಗೆ ಪಕ್ಷ ತಿಳಿಸಿಕೊಡಲಿದೆ' ಎಂದರು.

'ಸುಳ್ಳು ಹೇಳುವ ಅವತಾರ ಪುರುಷ'

ಸೈನ್ಸ್ ಗ್ಯಾಲರಿ 'ವಿಜ್ಞಾನ ಪ್ರದರ್ಶನ'ದಲ್ಲಿ ಕೈಲಾಸ್ ಸತ್ಯಾರ್ಥಿ ಬೇಸರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜನರಲ್ಲಿ ವೈಜ್ಞಾನಿಕ ಮನೋಭಾವದ ಕೊರತೆ ತೀವ್ರವಾಗಿದೆ. ಈಚಿನ ವರ್ಷಗಳಲ್ಲಿ ಹುಟ್ಟಿಕೊಂಡಿರುವ ಅವತಾರ ಪುರುಷನೊಬ್ಬ ಬಡವರನ್ನು ಉದ್ಧಾರ ಮಾಡುತ್ತೇನೆ ಎನ್ನುತ್ತಾ, ಬರಿಯ ಸುಳ್ಳುಗಳನ್ನೇ ಹೇಳುತ್ತಾನೆ. ಜನ ಅದನ್ನು ನಂಬುತ್ತಾರೆ' ಎಂದು ಮಕ್ಕಳ ಹಕ್ಕುಗಳ ಹೋರಾಟಗಾರ ಕೈಲಾಸ್ ಸತ್ಯಾರ್ಥಿ ಅವರು ಪ್ರಧಾನಿ ನರೇಂದ್ರ ಮೋದಿ ಅವರ ಹೆಸರು ಉಲ್ಲೇಖಿಸದೇ ಲೇವಡಿ ಮಾಡಿದರು.

ಸೈನ್ಸ್ ಗ್ಯಾಲರಿ ಬೆಂಗಳೂರು ಶನಿವಾರ ಆಯೋಜಿಸಿರುವ 'ಎಸ್‌ಸಿಐ560' ವಿಜ್ಞಾನ ವಸ್ತು ಪ್ರದರ್ಶನದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

'ನಮ್ಮ ಜನರು ಈಗಲೂ ವೈದ್ಯರು ಮತ್ತು ಆಧುನಿಕ ಚಿಕಿತ್ಸಾ ವಿಧಾನಗಳನ್ನು ನಂಬುವುದಿಲ್ಲ. ಮೂಢನಂಬಿಕೆಗಳಿಗೇ ಆತುಕೊಳ್ಳುತ್ತಾರೆ. ಮನದ ಮಾತನಾಡುವ ಫಕೀರ ತಟ್ಟೆ ಬಡಿಯಿರಿ ಎಂದು ಹೇಳಿದ್ದನ್ನು ಹಲವು ಮುಖ್ಯ-ಮಂತ್ರಿಗಳೂ, ಸಚಿವರೂ ತಲೆಮೇಲೆ ಹೊತ್ತುಕೊಂಡು ಮಾಡುತ್ತಾರೆ. ಇಂತಹ ಸ್ಥಿತಿಯಲ್ಲಿ ನಾವಿದ್ದೇವೆ' ಎಂದು ಅವರು ವಿಷಾದ ವ್ಯಕ್ತಪಡಿಸಿದರು.



ಬೆಂಗಳೂರಿನ ಬಳ್ಳಾರಿ ರಸ್ತೆಯಲ್ಲಿರುವ ಸೈನ್ಸ್ ಗ್ಯಾಲರಿಯಲ್ಲಿ ಶನಿವಾರ ಆರಂಭವಾದ 'ಎಸ್‌ಸಿಐ560' ವಿಜ್ಞಾನ ವಸ್ತು ಪ್ರದರ್ಶನದಲ್ಲಿ ವಿದ್ಯಾರ್ಥಿನಿಯೊಬ್ಬರು ಬಾಲಕನಿಗೆ ಶಬ್ದ ತರಂಗಗಳ ಪರಿಣಾಮಗಳ ಪ್ರಾತ್ಯಕ್ಷಿಕೆ ನೀಡಿದರು ಪ್ರಜಾವಾಣಿ ಚಿತ್ರ

ರಾಜ್ಯ ಸರ್ಕಾರದ ಸಹಯೋಗದಲ್ಲಿ ಸ್ಥಾಪಿಸಲಾಗಿರುವ ಸೈನ್ಸ್ ಗ್ಯಾಲರಿಗೆ ₹ 10 ಕೋಟಿಗಳ ಮೂಲಧನದ ಚೆಕ್ ಅನ್ನು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್.ಬೋಸರಾಜು ಅವರು ಗ್ಯಾಲರಿಯ ಸಂಸ್ಥಾಪಕ ನಿರ್ದೇಶಕಿ ಜಾಹ್ನವಿ ಫಾಲ್ಕೆಗೆ ಹಸ್ತಾಂತರಿಸಿದರು.

ಸೈನ್ಸ್ ಗ್ಯಾಲರಿಯ ಆಡಳಿತ ಮಂಡಳಿ ಸದಸ್ಯರಾದ ರೋಹಿಣಿ ನಿಲೇಕಣಿ, 'ಯಾವುದೇ ವಿಷಯವನ್ನು ವಿಜ್ಞಾನಿಗಳು, ಸಾಮಾನ್ಯ ಜನರು ಮತ್ತು ವಿದ್ಯಾರ್ಥಿಗಳು ಹೇಗೆ ನೋಡುತ್ತಾರೆ ಎಂಬುದನ್ನು ಪರಸ್ಪರ ಹಂಚಿಕೊಳ್ಳುವ ವೇದಿಕೆಯಾಗಿ ಸೈನ್ಸ್ ಗ್ಯಾಲರಿಯನ್ನು ರೂಪಿಸಲಾಗಿದೆ' ಎಂದರು.

ಮುಖ್ಯಾಂಶಗಳು

- ಮದ್ಯ ತಯಾರಿಸುವ ಬಗ್ಗೆ ಸ್ಕೋಬಿ ಲ್ಯಾಬ್‌ನಿಂದ ಪ್ರಾತ್ಯಕ್ಷಿಕೆ
- ಎಚ್‌ಎಎಲ್‌ನಿಂದ 'ಹಿಂದುಸ್ತಾನ್ ಟ್ರೈನರ್–10' ಕಿರುಚಿತ್ರದ ಪ್ರದರ್ಶನ

ಟಿಪ್ಪು ಕಾಲದ ರಾಕೆಟ್ ಪ್ರದರ್ಶನ

- 30 ಸಂಸ್ಥೆಗಳು ವಿವಿಧ ಪ್ರಯೋಗಗಳ ಪ್ರಾತ್ಯಕ್ಷಿಕೆ, ಛಾಯಾಚಿತ್ರ 'ಎಸ್‌ಸಿಐ560'ಯಲ್ಲಿ ಪ್ರದರ್ಶನಕ್ಕೆ ಇರಿಸಿವೆ.
- ಟಿಪ್ಪು ಸುಲ್ತಾನ್ ಅವಧಿಯಲ್ಲಿ ಅಭಿವೃದ್ಧಿಪಡಿಸಿದ 'ರಾಕೆಟ್' ಅನ್ನು ಬಳಸಿಕೊಂಡು ಬ್ರಿಟಿಷರು ರೂಪಿಸಿದ 'ಬೆಂಗಳೂರು ಟಾರ್ಪೆಡೊ'ದ ಮಾದರಿಯನ್ನು ಭಾರತೀಯ ಸೇನೆಯ ಮದ್ರಾಸ್ ಎಂಜಿನಿಯರ್ ಗ್ರೂಪ್ ಪ್ರದರ್ಶಿಸಿದೆ.
- ಕತ್ತಲ ಆಗಸ, ನಕ್ಷತ್ರ ಪುಂಜಗಳನ್ನು ಪರದೆಯ ಮೇಲೆ ಸೃಷ್ಟಿಸುವ 'ಅಪ್ಟೊ–ಮೆಕ್ಯಾನಿಕಲ್ ಪ್ರೊಜೆಕ್ಟರ್' ಅನ್ನು ಜವಾಹರಲಾಲ್ ನೆಹರು ತಾರಾಲಯ ಪ್ರದರ್ಶಿಸಿದೆ. 1989ರಲ್ಲಿ ಜರ್ಮನಿಯಲ್ಲಿ ತಯಾರಾದ ಈ ಪ್ರೊಜೆಕ್ಟರ್‌ನ ಕೆಲವೇ ಮಾದರಿ ಉಳಿದಿವೆ.

ಕಾರ್ಕಳ: ಯುವತಿ ಅಪಹರಿಸಿ ಅತ್ಯಾಚಾರ

ಒಂದನೇ ಪುಟದಿಂದ...

ಕೃತ್ಯದಲ್ಲಿ ಮೂವರು ಭಾಗಿಯಾಗಿದ್ದಾರೆ ಎಂದು ಯುವತಿಯ ತಾಯಿ ಕಾರ್ಕಳ ನಗರ ಠಾಣೆಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಶುಕ್ರವಾರ ರಾತ್ರಿ ಆಸ್ಪತ್ರೆ ಬಳಿ ಜಮಾಯಿಸಿದ ಬಜರಂಗದಳ, ವಿಶ್ವಹಿಂದೂ ಪರಿಷತ್ ಮತ್ತು ಹಿಂದೂ ಜಾಗರಣ ವೇದಿಕೆ, ಭೋವಿ ಸಮುದಾಯದವರು ಆರೋಪಿಗಳ ಬಂಧನಕ್ಕೆ ಒತ್ತಾಯಿಸಿದ್ದರು.

ಎಲ್ಲ ಆರೋಪಿಗಳನ್ನು ಬಂಧಿಸದಿದ್ದರೆ ಹೋರಾಟ ಮಾಡುವುದಾಗಿ ಮುಸ್ಲಿಂ ಸಮುದಾಯದ ಮುಖಂಡರು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಎಚ್ಚರಿಕೆ ನೀಡಿದರು.

ಲವ್ ಜಿಹಾದ್ ಭಾಗ: 'ಇದು ಲವ್ ಜಿಹಾದ್ ಭಾಗವಾಗಿ ನಡೆದ ಪೈಶಾಚಿಕ ಕೃತ್ಯ. ಉಳಿದ ಆರೋಪಿಗಳನ್ನೂ ತಕ್ಷಣ ಬಂಧಿಸದಿದ್ದರೆ ಹೋರಾಟ ನಡೆಸಲಾಗುವುದು' ಎಂದು ಶಾಸಕ ಯಶ್‌ಪಾಲ್ ಸುವರ್ಣ ಹೇಳಿದ್ದಾರೆ.

ಕರಾವಳಿಯಲ್ಲಿ ಡ್ರಗ್ಸ್ ಮಾಫಿಯಾ

ಮಂಗಳೂರು: 'ಕಾರ್ಕಳದಲ್ಲಿ ಹಿಂದೂ ಯುವತಿಯನ್ನು ಅಪಹರಿಸಿ ಮಾದಕ ದ್ರವ್ಯ ನೀಡಿ ಗ್ಯಾಂಗ್ ರೇಪ್ ಮಾಡಿ ಅಟ್ಟಹಾಸ ಮೆರೆದಿದ್ದಾರೆ. ಕರಾವಳಿಯಲ್ಲಿ ಡ್ರಗ್ಸ್ ದಂಧೆ ಮಿತಿ ಮೀರಿದೆ ಎನ್ನುವುದಕ್ಕೆ ಈ ಪ್ರಕರಣ ಜ್ವಲಂತ ಸಾಕ್ಷಿ' ಎಂದು ದಕ್ಷಿಣ ಕನ್ನಡ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಅವರು ಹೇಳಿದ್ದಾರೆ.

'ವೈದ್ಯಕೀಯ ಸಾಹಿತ್ಯ ರಚನೆಗೆ ಆದ್ಯತೆ ನೀಡಿ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಕನ್ನಡದಲ್ಲಿ ವೈದ್ಯಕೀಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಾಹಿತ್ಯ ರಚನೆ ಕಡಿಮೆಯಿದ್ದು, ಇದನ್ನು ನೀಗಿಸುವಲ್ಲಿ ಯುವ ವೈದ್ಯರು ಪ್ರಮುಖ ಪಾತ್ರ ವಹಿಸಬೇಕು' ಎಂದು ವೈದ್ಯ ಸಾಹಿತಿ ಡಾ.ನಾ.ಸೋಮೇಶ್ವರ ತಿಳಿಸಿದರು.

ಶನಿವಾರ ಆರಂಭಗೊಂಡ ಎರಡು ದಿನಗಳ ಕನ್ನಡ ವೈದ್ಯ ಬರಹಗಾರರ 5ನೇ ರಾಜ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಭಾರತೀಯ ವೈದ್ಯಕೀಯ ಸಂಘದ ರಾಜ್ಯ ಶಾಖೆ, ಕನ್ನಡ ವೈದ್ಯ ಬರಹಗಾರರ ಸಮಿತಿ ಹಾಗೂ ಜವಾಹರಲಾಲ್ ನೆಹರೂ ವೈದ್ಯಕೀಯ ಮಹಾವಿದ್ಯಾಲಯದ ಕನ್ನಡ ಬಳಗದ ಸಹಯೋಗದಲ್ಲಿ ಸಮ್ಮೇಳನ ಏರ್ಪಡಿಸಲಾಗಿದೆ.

'ರಾಜ್ಯದಲ್ಲಿ ನೋಂದಾಯಿತ ವೈದ್ಯರ ಸಂಖ್ಯೆ 1.41 ಲಕ್ಷವಿದ್ದು, ಅವರಲ್ಲಿ ಕನ್ನಡದಲ್ಲಿ ಬರೆಯಬಲ್ಲವರು 120 ಮಂದಿ. ನಿಯಮಿತ ಬರೆಯುವರು 50 ಮಂದಿ. ಹಾಗಾದರೆ ಉಳಿದವರು ಏಕೆ ಬರೆಯುತ್ತಿಲ್ಲ' ಎಂದು ಅವರು ಪ್ರಶ್ನಿಸಿದರು.

ಸಮ್ಮೇಳನ ಉದ್ಘಾಟಿಸಿದ ಸಾಹಿತಿ ಜಯಂತ ಕಾಯ್ಕಿಣಿ ಮಾತನಾಡಿ, 'ಕಲೆ ಮತ್ತು ವಿಜ್ಞಾನ ಪೂರಕವಾಗಿ ಕೆಲಸ ಮಾಡುತ್ತವೆ. ಮನುಷ್ಯನ ಯಾತನೆ ಅರ್ಥೈಸಿಕೊಂಡು, ಅದನ್ನು ಕಡಿಮೆಗೊಳಿಸಲು ಪ್ರಯತ್ನಿಸುವುದು ವೈದ್ಯಕೀಯ ರಂಗದ ಕೆಲಸ' ಎಂದು ಹೇಳಿದರು.

ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ, ಸಮ್ಮೇಳನದ ನಿಕಟಪೂರ್ವ ಅಧ್ಯಕ್ಷ ಡಾ.ಕೆ.ಆರ್. ಶ್ರೀಧರ, ಭಾರತೀಯ ವೈದ್ಯಕೀಯ ಸಂಘದ ರಾಜ್ಯ ಘಟಕದ ಅಧ್ಯಕ್ಷ ಡಾ.ಎಸ್.ಶ್ರೀನಿವಾಸ ಇದ್ದರು.

ಸಾಧಕರಿಗೆ ವಿವಿಧ ಪ್ರಶಸ್ತಿ

ರಾಯಚೂರಿನ ಡಾ.ಸುರೇಶ ಸಗರದ, ಹುಬ್ಬಳ್ಳಿಯ ಡಾ.ಸುನಂದಾ ಕುಲಕರ್ಣಿ ಅವರಿಗೆ 2023-24ನೇ ಸಾಲಿನ 'ಶ್ರೇಷ್ಠ ವೈದ್ಯ ಸಾಹಿತಿ' ಪ್ರಶಸ್ತಿ, ಶಿವಮೊಗ್ಗ ಜಿಲ್ಲೆಯ ಭದ್ರಾವತಿಯ ಡಾ.ವೀಣಾ ಭಟ್ ಅವರಿಗೆ 'ಸುನಂದಾ ಕುಲಕರ್ಣಿ ಶ್ರೇಷ್ಠ ವೈದ್ಯಕೀಯ ಹಸ್ತಪ್ರತಿ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಬಳ್ಳಾರಿಯ ಡಾ.ಕೆ.ಎನ್.ದಿವ್ಯಾ ಅವರಿಗೆ 'ಸುನಂದಾ ಕುಲಕರ್ಣಿ ಶ್ರೇಷ್ಠ ವೈದ್ಯೇತರ ಹಸ್ತಪ್ರತಿ' ಪ್ರಶಸ್ತಿ, ಬೆಳಗಾವಿಯ ಜೆಎನ್‌ಎಂಸಿಯ ಡಾ.ರಂಜೀತ್ ನಾಯ್ಕ ಕೆಂಚನ್ ಅವರಿಗೆ 'ಡಾ.ಕೆ.ಎಸ್.ಶಾಮಪ್ರಸಾದ್ ಶ್ರೇಷ್ಠ ವೈದ್ಯಕೀಯ ಕೃತಿ' ಪ್ರಶಸ್ತಿ ಮತ್ತು ಅಥಣಿಯ ಡಾ.ಸಲೀಮ್ ನದಾಫ ಅವರಿಗೆ 'ಡಾ. ಕೆ.ಎಸ್. ಶಾಮಪ್ರಸಾದ್ ಶ್ರೇಷ್ಠ ವೈದ್ಯೇತರ ಕೃತಿ' ಪ್ರಶಸ್ತಿ ನೀಡಲಾಯಿತು.

ಇಂದು–ನಾಳೆ ರಾಜ್ಯದ ಕೆಲವೆಡೆ ಭಾರಿ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರಾವಳಿ ಸೇರಿ ರಾಜ್ಯದ ವಿವಿಧೆಡೆ ಭಾನುವಾರ ಮತ್ತು ಸೋಮವಾರ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಉತ್ತರ ಕನ್ನಡ, ಉಡುಪಿ ಜಿಲ್ಲೆಗೆ 'ಆರೆಂಜ್ ಅಲರ್ಟ್' ಘೋಷಿಸಲಾಗಿದೆ. ಬೆಳಗಾವಿ, ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ದಕ್ಷಿಣ ಕನ್ನಡ ಜಿಲ್ಲೆಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ.

ಉತ್ತರ ಒಳನಾಡು ಹಾಗೂ ದಕ್ಷಿಣ ಒಳನಾಡಿನ ಜಿಲ್ಲೆಗಳ ಕೆಲವು ಸ್ಥಳಗಳಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಹುಬ್ಬಳ್ಳಿ, ಬೀದರ್ ಸೇರಿದಂತೆ ವಿವಿಧೆಡೆ ಮಳೆ

ಹುಬ್ಬಳ್ಳಿ: ಧಾರವಾಡ, ಉತ್ತರ ಕನ್ನಡ, ಬಾಗಲಕೋಟೆ, ವಿಜಯಪುರ ಮತ್ತು ಗದಗ ಜಿಲ್ಲೆಯ ವಿವಿಧೆಡೆ ಶನಿವಾರ ಮಳೆ ಸುರಿಯಿತು. ಬಹುತೇಕ ಕಡೆ ತುಂತುರು ಮಳೆಯಾಯಿತು.

ಹುಬ್ಬಳ್ಳಿ – ಧಾರವಾಡ ಅಲ್ಲದೆ ಧಾರವಾಡ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ಧಾರಾಕಾರ ಮಳೆಯಾಯಿತು. ಉತ್ತರ ಕನ್ನಡ ಜಿಲ್ಲೆಯ ಕಾರವಾರ, ಭಟ್ಕಳ, ಹೊನ್ನಾವರ, ಶಿರಸಿ ಭಾಗದಲ್ಲಿ ಬಿರುಸಿನ ವರ್ಷಧಾರೆಯಾಯಿತು.

ವಿಜಯಪುರ ಜಿಲ್ಲೆಯ ಇಂಡಿ, ಕೊಲ್ಹಾರ ವ್ಯಾಪ್ತಿಯಲ್ಲಿ ಧಾರಾಕಾರ ಮಳೆ ಸುರಿಯಿತು. ಬಾಗಲಕೋಟೆ ಜಿಲ್ಲೆಯ ಬಾದಾಮಿ, ಗುಳೇದಗುಡ್ಡ, ಹುನಗುಂದದಲ್ಲಿ ಬಿರುಸಿನ ಮಳೆಯಾದರೆ, ಗದಗ ಜಿಲ್ಲೆಯ ಬಹುತೇಕ ಕಡೆ ತುಂತುರು ಮಳೆಯಾಯಿತು.

ಕಲಬುರಗಿ ವರದಿ: ಕಲಬುರಗಿ ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಹಾಗೂ ಬೀದರ್ ಜಿಲ್ಲೆಯಲ್ಲಿ ಶನಿವಾರ ಕೆಲ ಕಾಲ ಬಿರುಸಿನ ಮಳೆಯಾಯಿತು.

ಕಲಬುರಗಿಯಲ್ಲಿ ಬೆಳಗಿನ ಜಾವ ಸುಮಾರು ಒಂದು ಗಂಟೆ ಹಾಗೂ ಸಂಜೆ ಸುಮಾರು ಅರ್ಧ ಗಂಟೆ ಸುರಿಯಿತು.

ಬೀದರ್ ನಗರದಲ್ಲಿ ಸಂಜೆ ಅರ್ಧಗಂಟೆಗೂ ಹೆಚ್ಚು ಸಮಯ ಬಿರುಸಿನ ಮಳೆಯಾಗಿದೆ. ಹುಲಸೂರ, ಔರಾದ್ ತಾಲ್ಲೂಕಿನಲ್ಲೂ ವರ್ಷಧಾರೆಯಾಗಿದೆ.

ಕೆಸೆಟ್ ಪರೀಕ್ಷಾ ಕೇಂದ್ರಗಳ ಆಯ್ಕೆಯಲ್ಲೂ ತಾರತಮ್ಯ

ಅರ್ಜಿ ಸಲ್ಲಿಕೆಗೆ ತಾಂತ್ರಿಕ ಸಮಸ್ಯೆ

• ಆರ್. ಜಿತೇಂದ್ರ

ಮೈಸೂರು: ರಾಜ್ಯ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆಗೆ (ಕೆಸೆಟ್) ಆನ್‌ಲೈನ್ ನೋಂದಣಿ ಪ್ರಕ್ರಿಯೆಯಲ್ಲಿ ತಾಂತ್ರಿಕ ದೋಷ ಉಂಟಾಗಿ ಸಾವಿರಾರು ಅಭ್ಯರ್ಥಿಗಳು ಪರದಾಡುವಂತಾಗಿದೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನವೆಂಬರ್ 24ರಂದು ಪರೀಕ್ಷೆ ನಿಗದಿ ಮಾಡಿದ್ದು, 41 ವಿಷಯಗಳಲ್ಲಿ ಪರೀಕ್ಷೆ ಬರೆಯಲು ಅವಕಾಶವಿದೆ. ಆನ್‌ಲೈನ್ ಅರ್ಜಿ ಸಲ್ಲಿಸಲು ಆಗಸ್ಟ್ 28 ಕೊನೇ ದಿನ. ಆದರೆ ಅರ್ಜಿ ಸಲ್ಲಿಸುವ ವೇಳೆ, ಮೀಸಲಾತಿ ಪ್ರವರ್ಗ ಆಯ್ಕೆ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಆಯ್ಕೆ ಬಟನ್ ಒತ್ತಿ ಜಾತಿ ಪ್ರಮಾಣಪತ್ರದ ಆರ್.ಡಿ. ಸಂಖ್ಯೆ ಸಲ್ಲಿಸುತ್ತಲೇ ವೆಬ್‌ಸೈಟ್ ಚಟುವಟಿಕೆ ನಿಲ್ಲುತ್ತಿದ್ದು, ಅರ್ಜಿ ಸಲ್ಲಿಕೆ ಪ್ರಕ್ರಿಯೆ ಪೂರ್ಣಗೊಳ್ಳುತ್ತಿಲ್ಲ.

ಮುಖ್ಯಾಂಶಗಳು

- ಮೀಸಲಾತಿ ಸೌಲಭ್ಯ ಪಡೆಯಲು ತೊಂದರೆ
- ಪರೀಕ್ಷಾ ಕೇಂದ್ರದ ಆಯ್ಕೆಯ ಅವಕಾಶವೂ ಮೊಟಕು

ಅರ್ಜಿ ಸಲ್ಲಿಸಲು ಸಾಮಾನ್ಯ ವರ್ಗದವರಿಗೆ ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಠ ಶೇ 55 ಅಂಕ, ಹಿಂದುಳಿದ ವರ್ಗಗಳು ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಶೇ 50 ಅಂಕ ನಿಗದಿಪಡಿಸಲಾಗಿದೆ. ಮೀಸಲಾತಿ ಬೇಕೆನ್ನುವವರು ಜಾತಿ ಪ್ರಮಾಣಪತ್ರದ ಸಂಖ್ಯೆಯನ್ನು ದಾಖಲಿಸುವುದು ಕಡ್ಡಾಯ. ಅದನ್ನು ಆನ್‌ಲೈನ್ ಮೂಲಕವೇ ಪರಿಶೀಲಿಸಿ ನೈಜತೆಯನ್ನು ತಿಳಿದುಕೊಳ್ಳಲಾಗುತ್ತದೆ. ಆದರೆ, 'ಸಂಖ್ಯೆಯನ್ನು ನೋಂದಾಯಿಸಲು ಆಗುತ್ತಿಲ್ಲ' ಎಂಬುದು ಅಭ್ಯರ್ಥಿಗಳ ಅಳಲು.

ಅರ್ಜಿ ಸಲ್ಲಿಕೆ ವೇಳೆ ಜಾತಿ ಪ್ರಮಾಣಪತ್ರ ಸಂಖ್ಯೆ ನಮೂದಿಸಲು ಸಾಧ್ಯವಾಗುತ್ತಿಲ್ಲ. ಕೂಡಲೇ ತಾಂತ್ರಿಕ ದೋಷ ಸರಿಪಡಿಸಬೇಕು

ಸಮರ್ಥ್, ಪರೀಕ್ಷಾಕಾಂಕ್ಷಿ, ಮೈಸೂರು

ಕೇಂದ್ರದ ಗೊಂದಲ: ಒಟ್ಟು 41 ವಿಷಯಗಳ ಪೈಕಿ, ಎ-ಭಾಗದಲ್ಲಿರುವ ವಾಣಿಜ್ಯ ಶಾಸ್ತ್ರ, ಕನ್ನಡ, ಅರ್ಥಶಾಸ್ತ್ರ, ಇಂಗ್ಲಿಷ್, ರಾಜ್ಯಶಾಸ್ತ್ರ ಸೇರಿದಂತೆ 18 ವಿಷಯಗಳನ್ನು ಆಯ್ಕೆ ಮಾಡಿಕೊಂಡವರಿಗೆ ಮಾತ್ರ ರಾಜ್ಯದ 12 ಪರೀಕ್ಷಾ ಕೇಂದ್ರಗಳಲ್ಲಿ ಯಾವುದನ್ನಾದರೂ ಆಯ್ಕೆ ಮಾಡಿಕೊಳ್ಳಲು ಅವಕಾಶವಿದೆ.

ಆದರೆ, ಭೂಗೋಳ ವಿಜ್ಞಾನ, ಮನೋವಿಜ್ಞಾನ, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ, ಕಾನೂನು, ಸಂಸ್ಕೃತ, ಸಾರ್ವಜನಿಕ ಆಡಳಿತ, ಜಾನಪದ ಸಾಹಿತ್ಯ, ಉರ್ದು, ಮರಾಠಿ, ಸಂಗೀತ, ದೃಶ್ಯಕಲೆ ಸೇರಿದಂತೆ ಉಳಿದ 23 ವಿಷಯಗಳ ಅಭ್ಯರ್ಥಿಗಳಿಗೆ ಪರೀಕ್ಷಾ ಕೇಂದ್ರಗಳ ಆಯ್ಕೆಯನ್ನೇ ನೀಡಿಲ್ಲ. ಅವರೆಲ್ಲರೂ ಕಡ್ಡಾಯವಾಗಿ ಬೆಂಗಳೂರಿನಲ್ಲೇ ಪರೀಕ್ಷೆ ಬರೆಯಬೇಕು.

'ಪತಿ–ಪತ್ನಿ, ಸಹಪಾಠಿಗಳು, ಸ್ನೇಹಿತರು ಬೇರೆ ವಿಷಯ ಆಯ್ಕೆ ಮಾಡಿಕೊಂಡಿದ್ದರೆ, ಒಂದೇ ಪರೀಕ್ಷಾ ಕೇಂದ್ರದಲ್ಲಿ ಎಲ್ಲರೂ ಪರೀಕ್ಷೆ ಬರೆಯಲು ಅವಕಾಶ ಇಲ್ಲದಂತಾಗಿದೆ. ಅದರಲ್ಲೂ ಉತ್ತರ ಕರ್ನಾಟಕ ಭಾಗದ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ಬೆಂಗಳೂರಿಗೇ ಬರಬೇಕು. ಎಲ್ಲ 41 ವಿಷಯಗಳಿಗೂ ರಾಜ್ಯದ ಎಲ್ಲ ಕೇಂದ್ರಗಳಲ್ಲಿ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡಬೇಕು' ಎಂಬುದು ಅಭ್ಯರ್ಥಿಗಳ ಆಗ್ರಹ.

ಈ ಕುರಿತು ಪ್ರತಿಕ್ರಿಯೆಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಹಿರಿಯ ಅಧಿಕಾರಿಗಳು ದೂರವಾಣಿ ಸಂಪರ್ಕಕ್ಕೆ ಲಭ್ಯವಾಗಲಿಲ್ಲ.



ಬಸವಕಲ್ಯಾಣ ಹೊರವಲಯದ ಬಯಲಲ್ಲಿ ನೆಟ್ಟಿರುವ ಸಸಿಗಳನ್ನು ಪರಿಶೀಲಿಸುತ್ತಿರುವ ಅರಣ್ಯ ಇಲಾಖೆಯ ಅಧಿಕಾರಿಗಳು





ಕಲಬುರಗಿಯ ಕೇಸರಟಗಿ ಬಳಿ ಸಾಮಾಜಿಕ ಅರಣ್ಯ ವಲಯ ಇಲಾಖೆಯ ಆವರಣದಲ್ಲಿ ಮಹಿಳಾ ಸಿಬ್ಬಂದಿ ಸಸಿಗಳನ್ನು ಆರೈಕೆ ಮಾಡುತ್ತಿರುವುದು

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಅರಣ್ಯೀಕರಣ ಪ್ರಚಾರಕ್ಕೆ ಮಾತ್ರ?

ಒಂದನೇ ಪುಟದಿಂದ

ಮುಖ್ಯರಸ್ತೆಯಿಂದ ದೂರ ಇರುವ, ಸುಲಭವಾಗಿ ಅಲ್ಲಿಗೆ ತಲುಪಲಾಗದ ಸ್ಥಳಗಳಲ್ಲಿ ಸಸಿಗಳ ಪೋಷಣೆ ಹೇಳಿಕೊಳ್ಳುವ ರೀತಿಯಲ್ಲಿ ಆಗುತ್ತಿಲ್ಲ. ಕೆಲವೇ ವರ್ಷಗಳ ಹಿಂದೆ ಬೀದರ್ ತಾಲ್ಲೂಕಿನ ಚೊಂಡಿ, ಅಲಿಯಾಬಾದ್, ಮಲ್ಕಾಪುರ ಹೊರವಲಯದಲ್ಲಿ ಸಾಕಷ್ಟು ಗಿಡಗಳನ್ನು ನೆಡಲಾಗಿತ್ತು. ಆದರೆ, ಅಲ್ಲಿ ಹಸಿರು ಹೆಚ್ಚಾಗಿಲ್ಲ. ಬಹುತೇಕ ಗಿಡಗಳು ಸತ್ತಿವೆ. ಇನ್ನು, ಪ್ರತಿ ವರ್ಷ ಮಳೆಗಾಲ ಬರುತ್ತಿದ್ದಂತೆ ಪಟ್ಟಣ, ನಗರ ಪ್ರದೇಶಗಳಲ್ಲಿ ವಿಶೇಷವಾಗಿ ರಸ್ತೆಗಳ ಉದ್ದಕ್ಕೂ ಸಸಿಗಳನ್ನು ನೆಡಲಾಗುತ್ತಿದೆ. ಆದರೆ, ಅವು ಬೆಳೆಯುತ್ತಿಲ್ಲ. ನೆಟ್ಟ ಜಾಗದಲ್ಲಿಯೇ ಪದೇ ಪದೇ ಏಕೆ ಸಸಿಗಳನ್ನು ನೆಡುತ್ತಾರೆ ಎಂಬ ಪ್ರಶ್ನೆ ಮೂಡುತ್ತದೆ. ಹಿಂದೆ ನೆಟ್ಟ ಸಸಿಗಳು ಎಲ್ಲಿಗೆ ಹೋದವು? ಪ್ರತಿ ವರ್ಷ ಸಸಿ ನೆಟ್ಟರೂ ಹಸಿರೇಕೆ ಹೆಚ್ಚಾಗುತ್ತಿಲ್ಲ? ಎಂಬ ಪ್ರಶ್ನೆಗಳಿಗೆ ಸರಿಯಾದ ಉತ್ತರ ಸಿಗದ ಕಾರಣದಿಂದಲೇ ಅರಣ್ಯೀಕರಣ ಹೇಗೆ ನಡೆಯುತ್ತಿದೆ ಎಂಬ ಬಗ್ಗೆ ಅನುಮಾನ ಮೂಡುತ್ತದೆ. ಅರಣ್ಯೀಕರಣ ವಿಷಯ ದಲ್ಲಿ ಅರಣ್ಯ ಇಲಾಖೆ ಗಂಭೀರವಾಗಿಲ್ಲ ಎನ್ನುವುದನ್ನು ಇದು ಎತ್ತಿ ತೋರಿಸು ತ್ತದೆ. ಅಧಿಕಾರಿಗಳ ಧೋರಣೆ ಅರಿತ ಅರಣ್ಯ ಸಚಿವರು, ಸವಿವರವಾದ ಮಾಹಿತಿ ನೀಡುವಂತೆ ಸೂಚಿಸಿದ್ದಾರೆ.

ಕಳೆದ ಎರಡು ದಶಕಗಳ ಅವಧಿಯಲ್ಲಿ ಅರಣ್ಯ ಇಲಾಖೆಯಲ್ಲಾಗಿರುವ ಬೆಳವಣಿಗೆಗಳನ್ನು ನೋಡಿದಾಗ ನಿರಾಸೆಯೇ ಹೆಚ್ಚು ಎದ್ದು ಕಾಣುತ್ತದೆ. ಪ್ರತಿ ವರ್ಷ ಕೋಟ್ಯಂತರ ರೂಪಾಯಿ ಖರ್ಚು ಮಾಡಿ ರಾಜ್ಯದಲ್ಲಿ ಸಸಿಗಳನ್ನು ನೆಡಲಾಗುತ್ತಿದೆ. ಇದರಿಂದಾಗಿ ವರ್ಷದಿಂದ ವರ್ಷಕ್ಕೆ ಹಸಿರಿನ ಪ್ರಮಾಣ ಕೂಡ ದ್ವಿಗುಣವಾಗುತ್ತ ಹೋಗಬೇಕಿತ್ತು. ಆದರೆ, ಇದು ವಿರುದ್ಧ ದಿಕ್ಕಿಗೆ ಹೋಗುತ್ತಿದೆ! ಎರಡು ದಶಕಗಳ ಹಿಂದೆ ರಾಜ್ಯದ ಒಟ್ಟು ಅರಣ್ಯ ಪ್ರದೇಶದ ವಿಸ್ತಾರ ಶೇ 22.61ರಷ್ಟಿತ್ತು. 2023ನೇ ಸಾಲಿಗೆ ಬರು ಬರುತ್ತ ಶೇ 21.21ಕ್ಕೆ ಕುಸಿದಿದೆ.

2002ರ ಅಂಕಿ–ಅಂಶಗಳ ಪ್ರಕಾರ, ರಾಜ್ಯದಲ್ಲಿ ಶೇ 22.61ರಷ್ಟು ಅರಣ್ಯ ಪ್ರದೇಶದ ಹರವು ಇತ್ತು. ಒಟ್ಟು 43,35,645 ಹೆಕ್ಟೇರ್ ಪ್ರದೇಶದಲ್ಲಿ ಅರಣ್ಯ ಹರಡಿಕೊಂಡಿತ್ತು. 2023ನೇ ಸಾಲಿಗೆ ಇದು 40,67,822 ಹೆಕ್ಟೇರ್‌ಗೆ ಕುಸಿದಿದೆ. ಇದರಲ್ಲಿ ಒಂದು ಅಚ್ಚರಿಯ ಸಂಗತಿ ಏನೆಂದರೆ 2023ರ ಏಪ್ರಿಲ್‌ನಿಂದ ಡಿಸೆಂಬರ್ ಅವಧಿಯಲ್ಲಿ 2,892 ಹೆಕ್ಟೇರ್ ಅರಣ್ಯ ಪ್ರದೇಶ ಹೊಸದಾಗಿ ಸೇರ್ಪಡೆಯಾಗಿದೆ ಎನ್ನುವುದು ಸಮಾಧಾನಕರ ಸಂಗತಿ. ಹೀಗಿದ್ದರೂ ಒಟ್ಟಾರೆ ಅರಣ್ಯ ಪ್ರದೇಶದ ವಿಸ್ತಾರ ಶೇ 21.21ಕ್ಕೆ ಇಳಿಕೆಯಾಗಿದೆ. ಇದು ಎರಡು ದಶಕಗಳ ಹಿಂದಿನ ಒಟ್ಟು ಅರಣ್ಯ ಪ್ರದೇಶಕ್ಕಿಂತಲೂ ಕಡಿಮೆ. ರಾಜ್ಯದಲ್ಲಿ ಅರಣ್ಯೀಕರಣ ಕಳೆದ ಎರಡು ದಶಕಗಳಲ್ಲಿ ಯಾವ ರೀತಿಯಲ್ಲಿ ನಡೆಯುತ್ತಿದೆ ಎನ್ನುವುದಕ್ಕೆ ಇದು ಸಾಕ್ಷಿಯಾಗಿದೆ.

2023ನೇ ಸಾಲಿನಿಂದ ಅರಣ್ಯ ಇಲಾಖೆಯು, ಪ್ರತಿ ವರ್ಷ ರಾಜ್ಯದಲ್ಲಿ 5 ಕೋಟಿ ಸಸಿಗಳನ್ನು ನೆಡುವುದಾಗಿ ಘೋಷಿಸಿತ್ತು. ಬರುವ ಐದು ವರ್ಷಗಳಲ್ಲಿ ಹೊಸದಾಗಿ ಒಟ್ಟು 25 ಕೋಟಿ ಸಸಿಗಳನ್ನು ಹಚ್ಚಿ, ರಾಜ್ಯದ ಹಸಿರಿನ ಪ್ರಮಾಣ ಹೆಚ್ಚಿಸುವುದಾಗಿ ತಿಳಿಸಿದೆ. ಆದರೆ, ಹೋದ ವರ್ಷ ನೆಟ್ಟ ಒಟ್ಟು 5 ಕೋಟಿ ಸಸಿಗಳಲ್ಲಿ ಎಷ್ಟು ಬೆಳೆದಿವೆ, ಎಷ್ಟು ಹಾಳಾಗಿವೆ ಎನ್ನುವುದರ ಅಂಕಿ ಅಂಶ ಅರಣ್ಯ ಇಲಾಖೆಯ ಬಳಿಯೇ ಇಲ್ಲ! ಅರಣ್ಯ ಇಲಾಖೆಯ ಪ್ರಕಾರ, ನೂರು ಗಿಡಗಳನ್ನು ನೆಟ್ಟರೆ ಅದರಲ್ಲಿ ಎಂಬತ್ತು ಗಿಡಗಳು ಬದುಕುಳಿಯುತ್ತವೆ. ಆದರೆ, ವಾಸ್ತವ ಪರಿಸ್ಥಿತಿ ಹಾಗಿಲ್ಲ. ಇಪ್ಪತ್ತು ಗಿಡ ಉಳಿದರೆ ಹೆಚ್ಚು ಎನಿಸುತ್ತಿದೆ. ಅರಣ್ಯೀಕರಣ ಸಮರ್ಪಕವಾಗಿ ನಡೆದಿದ್ದರೆ ರಾಜ್ಯದ ಅನೇಕ ಬಯಲು ಪ್ರದೇಶಗಳು ಇಷ್ಟೊತ್ತಿಗೆ ಹಸಿರಿನಿಂದ ನಳನಳಿಸುತ್ತಿದ್ದವು. ಆ ಕೆಲಸ ಆಗಿಲ್ಲ. ಇನ್ನು, ಖಾಸಗಿಯವರಿಗೆ ಕೊಡುವ ಸಸಿಗಳ ಲೆಕ್ಕವನ್ನು ಅರಣ್ಯ ಇಲಾಖೆ ಇಡುತ್ತಿಲ್ಲ.

ವಿಜಯಪುರವು ರಾಜ್ಯದಲ್ಲಿಯೇ ಅತಿ ಕಡಿಮೆ ಅರಣ್ಯ ಪ್ರದೇಶ ಹೊಂದಿರುವ ಜಿಲ್ಲೆ. ದಶಕಗಳಿಂದಲೂ ವಿಜಯಪುರಕ್ಕೆ ಹಸಿರಿನ ಹೊದಿಕೆ ಹಾಸುವ ಮಾತುಗಳನ್ನು ಆಡಲಾಗುತ್ತಿದೆ. ಆದರೆ, ವಾಸ್ತವದಲ್ಲಿ ಆ ಕೆಲಸವೇ ಆಗಿಲ್ಲ. ಹಾಗೆ ನೋಡಿದರೆ ಕಳೆದ ಎರಡು ದಶಕಗಳಲ್ಲಿ ವಿಜಯಪುರದ ಹೆಚ್ಚಿನ ಭಾಗಗಳಿಗೆ ಕಾಲುವೆಗಳ ಮೂಲಕ ನೀರಿನ ಸೌಲಭ್ಯ ಕಲ್ಪಿಸಲಾಗಿದೆ. ಕೃಷಿ ಚಟುವಟಿಕೆಗಳಿಗೆ ಪರಿಣಾಮಕಾರಿಯಾಗಿ ಅದನ್ನು ಬಳಸಿಕೊಳ್ಳಲಾಗುತ್ತಿದೆ. ಆದರೆ, ಅದೇ ನೀರನ್ನು ಬಳಸಿಕೊಂಡು ಅರಣ್ಯ ಪ್ರದೇಶದ ವಿಸ್ತಾರ ಹೆಚ್ಚಿಸುವ ಕೆಲಸವಾಗಿಲ್ಲ. ರಾಜ್ಯದ ಕಲಬುರಗಿ, ಯಾದಗಿರಿ, ರಾಯಚೂರು, ಬಳ್ಳಾರಿ, ವಿಜಯನಗರ, ಚಿತ್ರದುರ್ಗ, ಚಿಕ್ಕಬಳ್ಳಾಪುರ, ಕೋಲಾರ ಸೇರಿದಂತೆ ಬಹುತೇಕ ಭಾಗಗಳು ಈಗಲೂ ಹಸಿರಿನಿಂದ ವಂಚಿತವಾಗಿವೆ. ಇದನ್ನೆಲ್ಲ ಗಮನಿಸಿದರೆ ಅರಣ್ಯೀಕರಣ ಪ್ರಚಾರಕ್ಕೆ ಸೀಮಿತವಾಯಿತೇ ಎಂಬ ಅನುಮಾನ ಕಾಡದಿರದು.

> **ಅರಣ್ಯ ಇಲಾಖೆಯ ಪ್ರಮುಖ ಯೋಜನೆಗಳು...**
> - ರಾಜ್ಯದಲ್ಲಿ ಪ್ರತಿ ವರ್ಷ ಐದು ಕೋಟಿ ಹೊಸದಾಗಿ ಸಸಿಗಳನ್ನು ನೆಡುವುದು
> - ನೆಡುತೋಪುಗಳಿಗೆ ಹೆಚ್ಚಿನ ಒತ್ತು ಹಾಗೂ ನಿರ್ವಹಣೆ
> - ಸಾಧ್ಯವಾದಷ್ಟು ಹೆಚ್ಚಿನ ಕಡೆಗಳಲ್ಲಿ ಟ್ರೀ ಪಾರ್ಕ್‌ಗಳನ್ನು ಅಭಿವೃದ್ಧಿ ಪಡಿಸುವುದು
> - ಬೋಳು ಗುಡ್ಡ, ಬಯಲು ಪ್ರದೇಶಗಳನ್ನು ಹಸಿರಾಗಿಸಲು ಪ್ರಾಮುಖ್ಯತೆ

ಹಸಿರೇಕೆ ಹೆಚ್ಚಾಗುತ್ತಿಲ್ಲ?: ರಾಜ್ಯದಲ್ಲಿ ಅರಣ್ಯ ಪ್ರದೇಶವನ್ನು ವಿವಿಧ ಉದ್ದೇಶಗಳಿಗೆ ಬಿಟ್ಟು ಕೊಡಲಾಗುತ್ತಿದೆ. ಹೀಗಾಗಿ ಸಹಜವಾಗಿಯೇ ಹಸಿರಿನ ಪ್ರಮಾಣ ಹೆಚ್ಚಾಗುತ್ತಿಲ್ಲ. ಅರಣ್ಯ ಇಲಾಖೆಯ ಪ್ರಕಾರ, 2023ರ ಏಪ್ರಿಲ್‌ನಿಂದ ಡಿಸೆಂಬರ್ ತನಕ ರಾಜ್ಯದಲ್ಲಿ 120.06 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಬೇರೆ ಬೇರೆ ಉದ್ದೇಶಗಳಿಗಾಗಿ ಹಸ್ತಾಂತರಿಸಲಾಗಿದೆ. ಇದರಲ್ಲಿ ಹೆಚ್ಚಿನ ಭಾಗವನ್ನು ರೈಲ್ವೆ ಯೋಜನೆಗಳು ಮತ್ತು ಗಣಿಗಾರಿಕೆಗೆ ಬಿಟ್ಟುಕೊಡಲಾಗಿದೆ. 65.83 ಹೆಕ್ಟೇರ್ ಪ್ರದೇಶ ರೈಲ್ವೆ ಯೋಜನೆಗಳು, 53.67 ಹೆಕ್ಟೇರ್ ಗಣಿಗಾರಿಕೆಗೆ ಬಿಡಲಾಗಿದೆ. ಹೀಗೆ ಕಳೆದ ಎರಡು ದಶಕಗಳ ಅವಧಿಯಲ್ಲಿ ರಾಷ್ಟ್ರೀಯ ಹೆದ್ದಾರಿಗಳು, ರೈಲ್ವೆ ಮಾರ್ಗಗಳು ಸೇರಿದಂತೆ ಇತರೆ ದೊಡ್ಡ ಯೋಜನೆಗಳು ಅರಣ್ಯ ಪ್ರದೇಶದಲ್ಲಿ ನಡೆದಿವೆ. ಇದರ ಪರಿಣಾಮವಾಗಿ ಹಸಿರಿನ ಹೊದಿಕೆ ಕುಗ್ಗುತ್ತಿದೆ.

ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿರುವ ಒತ್ತುವರಿ, ಬೆಂಕಿ ಅವಘಡಗಳಿಂದಲೂ ಹಸಿರು ನಾಶವಾಗುತ್ತಿದೆ. ಮಂಗಳೂರು, ಕುಂದಾಪುರ ಅರಣ್ಯ ವಿಭಾಗ, ಭಾಗಶಃ ಶಿವಮೊಗ್ಗ ಮತ್ತು ಚಿಕ್ಕಮಗಳೂರು, ಅರಣ್ಯ ವಿಭಾಗ ಹೊಂದಿರುವ ಮಂಗಳೂರು ಅರಣ್ಯ ವೃತ್ತದಲ್ಲಿ ಪ್ರಸ್ತುತ ಶೇ 28ರಷ್ಟು ಅರಣ್ಯ ಪ್ರದೇಶ ಇದೆ. ಒತ್ತುವರಿ ಇಲ್ಲಿನ ಪ್ರಮುಖ ಸಮಸ್ಯೆಯಾಗಿದೆ. ಇನ್ನು, ಬೀದರ್ ಜಿಲ್ಲೆಯೊಂದರಲ್ಲಿಯೇ ಸಾವಿರ ಹೆಕ್ಟೇರ್‌ಗೂ ಅಧಿಕ ಪ್ರದೇಶ ಒತ್ತುವರಿಯಾಗಿದೆ. ಸುಮಾರು 200 ಹೆಕ್ಟೇರ್‌ಗೂ ಹೆಚ್ಚಿನ ಪ್ರದೇಶದಲ್ಲಿ ಅತಿಕ್ರಮಣ ತೆರವುಗೊಳಿಸಿರುವ ಅರಣ್ಯ ಇಲಾಖೆ ಅದನ್ನು ತನ್ನ ಸುಪರ್ದಿಗೆ ತೆಗೆದುಕೊಂಡಿದೆ. ರಾಜ್ಯದ ಇತರೆ ಜಿಲ್ಲೆಗಳಲ್ಲಿಯೂ ಈ ಸಮಸ್ಯೆ ಇದೆ. ಆದರೆ, ಒತ್ತುವರಿ ತೆರವುಗೊಳಿಸುವಲ್ಲಿ ಅರಣ್ಯ ಇಲಾಖೆ ಹಿಂದೆ ಬಿದ್ದಿದೆ ಎಂಬುದು ಪರಿಸರವಾದಿಗಳ ಆರೋಪ. ಇತ್ತೀಚಿನ ಸಿಎಜಿ ವರದಿ ಕೂಡ ಇದಕ್ಕೆ ಆಕ್ಷೇಪ ಎತ್ತಿದೆ.

ಸಿಎಜಿ ಆಕ್ಷೇಪ: ಹೈಕೋರ್ಟ್ ನಿರ್ದೇಶನವಿದ್ದರೂ ಅರಣ್ಯ ಇಲಾಖೆಯು 22,173 ಎಕರೆಯಷ್ಟು ಅರಣ್ಯ ಜಮೀನಿನ ಒತ್ತುವರಿ ತೆರವಿಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಒತ್ತುವರಿ ತೆರವಿನಲ್ಲಿ ಇಲಾಖೆ ಹಿಂದೆ ಬಿದ್ದಿದೆ ಎಂದು ಮಹಾಲೇಖಪಾಲರ (ಸಿಎಜಿ) ವರದಿಯಲ್ಲಿ ಪ್ರಸ್ತಾಪಿಸಲಾಗಿದೆ.

ಇಲಾಖೆಗಳ ಮತ್ತು ಸಾರ್ವಜನಿಕ ವಲಯದ ಉದ್ದಿಮೆಗಳ ಲೆಕ್ಕಪರಿಶೋಧನಾ ವರದಿ ಈ ಮಾಹಿತಿ ಒಳಗೊಂಡಿದೆ. ಅರಣ್ಯ ಪ್ರದೇಶದ ಒತ್ತುವರಿಗೆ ಸಂಬಂಧಿಸಿದಂತೆ 4,026 ಪ್ರಕರಣಗಳು ಇಲಾಖೆಯಲ್ಲಿ ದಾಖಲಾಗಿದ್ದವು. ಈ ಪ್ರಕರಣಗಳಲ್ಲಿ ಒಟ್ಟು 29,688 ಎಕರೆಗಳಷ್ಟು ಅರಣ್ಯ ಜಮೀನಿನ ಒತ್ತುವರಿಯಾಗಿತ್ತು. ಎಲ್ಲ ಪ್ರಕರಣಗಳಲ್ಲಿ 2016ರ ಜೂನ್ ತನಕ ಒತ್ತುವರಿ ಸಂಪೂರ್ಣ ತೆರವುಗೊಳಿಸಲಾಗುವುದು ಎಂದು ಇಲಾಖೆ ಹೈಕೋರ್ಟ್‌ಗೆ ತಿಳಿಸಿತ್ತು. ಕ್ರಿಯಾ ಯೋಜನೆ ಕೂಡ ಸಲ್ಲಿಸಿತ್ತು. ಆದರೆ, 2022ರ ಮಾರ್ಚ್ ಅಂತ್ಯದವರೆಗೆ ಇಲಾಖೆಯು 7,515 ಎಕರೆ ಒತ್ತುವರಿ ತೆರವುಗೊಳಿಸಿದೆ. ತೆರವು ಮಾಡಬೇಕಿದ್ದ ಒಟ್ಟು ಒತ್ತುವರಿಯಲ್ಲಿ ಇದು ಶೇ 25.31ರಷ್ಟು. ಇನ್ನೂ ಶೇ 74.69ರಷ್ಟು ಅರಣ್ಯ ಜಮೀನು ಒತ್ತುವರಿಯಾಗಿಯೇ ಇದೆ ಸಿಎಜಿ ತನ್ನ ವರದಿಯಲ್ಲಿ ಉಲ್ಲೇಖಿಸಿದೆ.

ಅರಣ್ಯ ಜಮೀನಿನ ಒತ್ತುವರಿ ಪ್ರಕರಣಗಳಲ್ಲಿ ಒತ್ತುವರಿಯನ್ನು ಸಕ್ರಮಗೊಳಿಸುವ ಪ್ರಕ್ರಿಯೆ ನಡೆಯುತ್ತಿದ್ದರೆ, ತೆರವು ಕಾರ್ಯಾಚರಣೆ ನಡೆಸುವಂತಿಲ್ಲ ಎಂದು 2015ರ ಮಾರ್ಚ್‌ನಲ್ಲಿ ರಾಜ್ಯ ಸರ್ಕಾರ ಸುತ್ತೋಲೆ ಹೊರಡಿಸಿತ್ತು. ಸಕ್ರಮ ಅರ್ಜಿ ತಿರಸ್ಕೃತವಾದರೆ ತೆರವು ಕಾರ್ಯ ನಡೆಸಬೇಕು ಎಂದೂ ಹೇಳಿತ್ತು. ಆದರೆ, ಹೀಗೆ ಸಕ್ರಮ ಅರ್ಜಿ ತಿರಸ್ಕೃತವಾಗಿದ್ದರೂ 2,965 ಎಕರೆಗಳಷ್ಟು ಅರಣ್ಯ ಜಮೀನಿನ ಒತ್ತುವರಿ ತೆರವು ಮಾಡಿಲ್ಲ ಎಂದು ಸಿಎಜಿ ವರದಿಯಲ್ಲಿ ತಿಳಿಸಲಾಗಿದೆ.

ಬಿಳಿಗಿರಿರಂಗನ ಹುಲಿ ಸಂರಕ್ಷಣಾರಣ್ಯದಲ್ಲಿ ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆ ಜಂಟಿಯಾಗಿ ಸರ್ವೆ ನಡೆಸಿ ಒತ್ತುವರಿಯಾದ ಜಮೀನಿನ ಪ್ರಮಾಣವನ್ನು ಗುರುತಿಸಿ ಎರಡು ವರ್ಷವಾಗಿದೆ. ಆದರೆ ಎರಡೂ ಇಲಾಖೆಯಗಳು ಒತ್ತುವರಿ ತೆರವು ಮಾಡುವ ಕೆಲಸರನ್ನೇ ಇನ್ನೂ ಆರಂಭಿಸಿಲ್ಲ.

ಬೆಂಕಿಯಿಂದ ರಕ್ಷಣೆಯ ಸವಾಲು: ಉಷ್ಣಾಂಶ ಹೆಚ್ಚಾಗಿರುವ ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ, ವಿಜಯನಗರ, ಚಿತ್ರದುರ್ಗ, ಚಿಕ್ಕಬಳ್ಳಾಪುರ, ತುಮಕೂರಿನ ಹೆಚ್ಚಿನ ಭಾಗ ಹುಲ್ಲುಗಾವಲಿದೆ. ಇಲ್ಲಿ ನೆಟ್ಟ ಗಿಡಗಳನ್ನು ಬೇಸಿಗೆಯಲ್ಲಿ ಬೆಂಕಿಯಿಂದ ಅರಣ್ಯ ರಕ್ಷಿಸುವುದೇ ದೊಡ್ಡ ಸವಾಲಾಗಿದೆ.

ಕುರುಚಲು ಕಾಡು, ಒಣ ಎಲೆ ಉದುರುವ ಪ್ರದೇಶ ಜಾಸ್ತಿ ಇರುವುದರಿಂದ ಒಂದು ಕಡೆ ಬೆಂಕಿ ಹೊತ್ತಿಕೊಂಡರೆ ಎಲ್ಲ ಕಡೆಗಳಿಗೆ ವೇಗವಾಗಿ ಹರಡುತ್ತದೆ. ತ್ವರಿತ ಗತಿಯಲ್ಲಿ ನಿಯಂತ್ರಿಸುವ ವಿಧಾನಗಳು ಅರಣ್ಯ ಇಲಾಖೆಯ ಬಳಿ ಇಲ್ಲ. 'ಫೈರ್ ಲೈನ್'ಗಷ್ಟೇ ತಂತ್ರಕಷ್ಟೇ ಇದು ಸೀಮಿತವಾಗಿದೆ. ಪ್ರತಿ ವರ್ಷ ನೂರಾರು ಹೆಕ್ಟೇರ್ ಪ್ರದೇಶ ಬೆಂಕಿಯಿಂದ ಹಾನಿಯಾಗುತ್ತಿದೆ. ಹಲವಾರು ಪ್ರಾಣಿ, ಪಕ್ಷಿಗಳು ಬೆಂಕಿಯ ಕೆನ್ನಾಲಿಗೆಗೆ ಬಲಿಯಾಗುತ್ತಿವೆ. 2023–24ನೇ ಸಾಲಿನಲ್ಲೇ ಎರಡು ಸಾವಿರಕ್ಕೂ ಹೆಚ್ಚು ಬೆಂಕಿ ಹೊತ್ತಿಕೊಂಡ ಪ್ರಕರಣಗಳು ವರದಿಯಾಗಿವೆ. ಸುಮಾರು ಮೂರು ಸಾವಿರ ಹೆಕ್ಟೇರ್ ಅರಣ್ಯ ಪ್ರದೇಶಕ್ಕೆ ಹಾನಿಯಾಗಿದೆ ಎನ್ನುತ್ತವೆ ಅರಣ್ಯ ಇಲಾಖೆಯ ಮೂಲಗಳು.

'ಬೆಂಕಿ ಕಾಣಿಸಿಕೊಂಡ ತಕ್ಷಣಕ್ಕೆ ನಿಯಂತ್ರಿಸಲು ಅರಣ್ಯ ಇಲಾಖೆಯಲ್ಲಿ ಅಗತ್ಯ ಸಿಬ್ಬಂದಿ ಇಲ್ಲ. ಬೆಂಕಿ ನಂದಿಸುವ ಕೆಲಸವೂ ಪರಿಣಾಮಕಾರಿಯಾಗಿ ಆಗುತ್ತಿಲ್ಲ. ಕಾಡು ನಾಶವಾಗಿರುವ ಕಡೆ ಅರಣ್ಯ ಇಲಾಖೆಯಿಂದ ಗಿಡ ನೆಟ್ಟು ಸುಮ್ಮನಾಗುತ್ತಾರೆ. ನಂತರ ಅವುಗಳ ಪೋಷಣೆ ಮರೆಯುತ್ತಾರೆ' ಎಂದು ಪರಿಸರವಾದಿ ಬಿ.ವಿ.ಗುಂಡಪ್ಪ ಬೇಸರದಿಂದ ಹೇಳುತ್ತಾರೆ.

ತಾಪಮಾನ ಏರಿಕೆ, ಭೂಕುಸಿತ: ಅರಣ್ಯೀಕರಣ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ಬರದ ಕಾರಣ ತಾಪಮಾನ ಹೆಚ್ಚಳ, ಭೂಕುಸಿತದಂತಹ ಘಟನೆಗಳು ಕೂಡ ರಾಜ್ಯದಲ್ಲಿ ಹೆಚ್ಚಾಗಿ ಸಂಭವಿಸುತ್ತಿವೆ. ಇತ್ತೀಚೆಗೆ ಉತ್ತರ ಕನ್ನಡದಲ್ಲಿ ಭೂಕುಸಿತ ಉಂಟಾಗಿರುವುದು ತಾಜಾ ನಿದರ್ಶನ. ಉತ್ತರ ಕನ್ನಡದಲ್ಲಿ ಗುಡ್ಡಗಳೆಲ್ಲ ಗಿಡ, ಮರಗಳಿಂದ ಕೂಡಿರುತ್ತವೆ. ಆದರೆ, ವಿವಿಧ ಕಾಮಗಾರಿಗಳನ್ನು ಕೈಗೆತ್ತಿಕೊಂಡಿರುವುದರಿಂದ ಅರಣ್ಯ ನಾಶವಾಗುತ್ತಿದೆ. ಗುಡ್ಡಗಳೆಲ್ಲ ಬೋಳಾಗಿ, ಭೂಮಿಯನ್ನು ಹಿಡಿದಿಟ್ಟುಕೊಳ್ಳುವ ಬೇರುಗಳಿಲ್ಲದೆ ಭೂಕುಸಿತಗಳು ಉಂಟಾಗುತ್ತಿವೆ.

ಇನ್ನು, ರಾಜ್ಯದ ತಾಪಮಾನ ಕೂಡ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಲೇ ಇದೆ. ಈ ಹಿಂದೆ ಉತ್ತರ ಕರ್ನಾಟಕ, ಬಯಲು ಸೀಮೆಯ ಜಿಲ್ಲೆಗಳಲ್ಲಿ ಹೆಚ್ಚಿನ ಬಿಸಿಲು ಇರುತ್ತಿತ್ತು. ಈ ವರ್ಷ ಬೇಸಿಗೆಯಲ್ಲಿ ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಗರಿಷ್ಠ ತಾಪಮಾನವು 45 ಡಿಗ್ರಿ ಸೆಲ್ಸಿಯಸ್ ಗಡಿಯನ್ನು ದಾಟಿತ್ತು. ಹಳೆ ಮೈಸೂರು, ಮಲೆನಾಡು ಕೂಡ ಇದಕ್ಕೆ ಹೊರತಾಗಿಲ್ಲ. ಬೇಸಿಗೆಯಲ್ಲಿ ರಾಜ್ಯದ ಬಹುತೇಕ ಕಡೆಗಳಲ್ಲಿ ಹೆಚ್ಚು ಕಡಿಮೆ ಒಂದೇ ಪರಿಸ್ಥಿತಿ ಎನ್ನುವಂತಾಗಿದೆ. ಹಸಿರು ಪ್ರದೇಶ ದಿನೇ ದಿನೇ ಕಡಿಮೆ ಆಗುತ್ತಿರುವುದರ ಪರಿಣಾಮವಿದು ಎನ್ನುತ್ತಾರೆ ಪರಿಸರವಾದಿಗಳು.

ಎಷ್ಟಿರಬೇಕು ಅರಣ್ಯ ಪ್ರದೇಶ?: ಕೇಂದ್ರ ಸರ್ಕಾರದ ಅರಣ್ಯ ಇಲಾಖೆಯ ಪ್ರಕಾರ, ಕರ್ನಾಟಕ ರಾಜ್ಯದಲ್ಲಿ ಒಟ್ಟು ಭೂ ಭಾಗದ ಶೇ 33ರಷ್ಟು ಅರಣ್ಯ ಪ್ರದೇಶ ಇರಬೇಕು. ಆದರೆ, ರಾಜ್ಯದಲ್ಲಿ ಸದ್ಯ ಶೇ 21.21ರಷ್ಟು ಅರಣ್ಯ ಪ್ರದೇಶವಿದೆ. ರಾಜ್ಯದಲ್ಲಿ ಉತ್ತರ ಕನ್ನಡ ಜಿಲ್ಲೆ ಅತಿ ಹೆಚ್ಚು ಅರಣ್ಯ ಪ್ರದೇಶ ಹೊಂದಿದರೆ, ವಿಜಯಪುರದಲ್ಲಿ ಅತಿ ಕಡಿಮೆ ಇದೆ. ಕಳೆದ ಎರಡು ದಶಕಗಳ ಅವಧಿಯಲ್ಲಿ ಅರಣ್ಯ ಪ್ರದೇಶದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳು ಇದೇ ವೇಗದಲ್ಲಿ ನಡೆದರೆ ಶೇ 33ರಷ್ಟು ಹಸಿರಿನ ಹೊದಿಕೆ ಗುರಿ ಈಡೇರುವುದು ಕಷ್ಟ. ಈಗಿರುವ ಅರಣ್ಯ ಪ್ರದೇಶ ಉಳಿಸಿಕೊಂಡು ಹೋಗುವುದು ಕಷ್ಟವಾಗುತ್ತದೆ ಎನ್ನುತ್ತಾರೆ ಪರಿಸರ ತಜ್ಞರು.

'ಒಂದು ಕಡಿದರೆ ಹತ್ತು ನೆಡಬೇಕು': 'ಸ್ವಾತಂತ್ರ್ಯ ಸಿಕ್ಕಾಗ ಧಾರವಾಡ ಜಿಲ್ಲೆಯಲ್ಲಿ ಅರಣ್ಯ ಪ್ರದೇಶ ಶೇ 38 ಇತ್ತು. ಈಗ ಶೇ 9.1ರಷ್ಟಿದೆ. ಅಭಿವೃದ್ಧಿಯ ಹೆಸರಿನಲ್ಲಿ ವೃಕ್ಷಗಳ ಹನನ ಇದಕ್ಕೆ ಕಾರಣ. ಒಂದು ವೃಕ್ಷ ಕಡಿದರೆ 10 ಗಿಡ ನೆಟ್ಟು ಬೆಳೆಸಬೇಕು ಎಂಬ ನಿಯಮ ಇದೆ. ಆದರೆ, ಅದು ಪಾಲನೆಯಾಗುತ್ತಿಲ್ಲ' ಎನ್ನುತ್ತಾರೆ ಧಾರವಾಡದ 'ನೇಚರ್ ಫಸ್ಟ್ ಇಕೋ ವಿಲೇಜ್' ಅಧ್ಯಕ್ಷ ಪಿ.ವಿ.ಹಿರೇಮಠ.

ಆಗಸ್ಟ್‌ನೊಳಗೆ ಬಹಿರಂಗ



2003ರಲ್ಲಿ ರಾಜ್ಯದಲ್ಲಿ ಐದು ಕೋಟಿ ಸಸಿಗಳನ್ನು ನೆಡುವ ಅಭಿಯಾನ ಹಮ್ಮಿಕೊಳ್ಳಲಾಗಿತ್ತು. ಅವುಗಳಿಗೆ ಜಿಯೋ ಟ್ಯಾಗ್ ಮಾಡಿ ಆಗಸ್ಟ್ ತಿಂಗಳೊಳಗೆ ಮಾಹಿತಿ ಕೊಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಅದರ ವರದಿ ಕೈಸೇರಿದ ನಂತರ ಮಾಧ್ಯಮದವರಿಗೆ ಬಹಿರಂಗಪಡಿಸಲಾಗುವುದು. ಪರಿಸರಕ್ಕೆ ಪೂರಕವಾದ ಸಸಿಗಳನ್ನು ನೆಡಬೇಕು. ಸಸಿಗಳನ್ನು ನೆಟ್ಟಿದ್ದೇವೆ ಎನ್ನುವ ಸುಳ್ಳು ಮಾಹಿತಿ ನೀಡಬಾರದು ಎಂದು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ಕೊಡಲಾಗಿದೆ.

ಈಶ್ವರ ಬಿ. ಖಂಡ್ರೆ, ಅರಣ್ಯ ಸಚಿವ

'ಜ್ಞಾನ–ಸಹಭಾಗಿತ್ವದ ಕೊರತೆ'



'ಕಳೆದ ಸುಮಾರು 230 ವರ್ಷಗಳ ಸುದೀರ್ಘ ಅನುಭವದ ಪಾಠ, ಪರಿಣಾಮಕಾರಿ ಅಳವಡಿಕೆ ಆಗಿಲ್ಲ. ಹಿಂದೆಲ್ಲ ನಮ್ಮ ನೆಲದ ಅನುಭವಗಳನ್ನು ಪುಸ್ತಕವಾಗಿ ಬರೆಯುತ್ತಿದ್ದ ಹಳೆಯ ತಲೆಮಾರಿನ ಅಧಿಕಾರಿಗಳ ವಿಧಾನ ಈಗಿನವರಿಗೆ ಗೊತ್ತೇ ಇಲ್ಲ. ಅರಣ್ಯ ಇಲಾಖೆ ಈಗ ಸಸಿ ನೆಡುವ ಲೆಕ್ಕದಲ್ಲಿ ಮುಳುಗಿ ಕಲಿಕೆ ಮರೆತಿದೆ. ಜನ ಸಂಪರ್ಕ ಕಳೆದುಕೊಂಡಿದೆ. ಸ್ವತಃ ಓಡಾಡಿ ಗಳಿಸಬೇಕಾದ ಅರಣ್ಯ ಜ್ಞಾನದ ಕೊಂಡಿ ಕಳಚಿದೆ. ಕಾಲು ದಾರಿಯ ಕಾರ್ಯಕರ್ತರ ಕೊರತೆಯಿಂದ ಯೋಜನೆ ಸೋತಿದೆ. ಸಸಿ ನೆಡುವ ಸರಳ ತಂತ್ರ ಅಳವಡಿಸಿ ಗೆಲ್ಲುವ ದಾರಿ ಇದೆ. ಅರಣ್ಯೀಕರಣ ಸ್ಥಳೀಯ ಜ್ಞಾನ, ಸಹಭಾಗಿತ್ವ ಕೊರತೆಯಿಂದ ಸೋಲುತ್ತಿದೆ' ಎನ್ನುತ್ತಾರೆ ಪರಿಸರ ಬರಹಗಾರ **ಶಿವಾನಂದ ಕಳವೆ.**

'ಗೋಲ್‌ಮಾಲ್ ಶಂಕೆ'

ಅರಣ್ಯ ಇಲಾಖೆಯ ನರ್ಸರಿಗಳಲ್ಲಿ ಎಷ್ಟು ಸಸಿಗಳನ್ನು ಬೆಳೆಯಲಾಗುತ್ತದೆ? ಎಷ್ಟು ವಿತರಿಸಲಾಗುತ್ತದೆ? ನೆಟ್ಟ ಸಸಿಗಳಲ್ಲಿ ಎಷ್ಟು ಬೆಳೆಯುತ್ತವೆ? ಎಷ್ಟು ಹಾಳಾಗುತ್ತವೆ? ಇದಕ್ಕಾಗಿ ಮಾಡುವ ಖರ್ಚು ಎಷ್ಟು? ಎಂಬ ಬಗ್ಗೆ ಅರಣ್ಯ ಇಲಾಖೆಯಲ್ಲಿ ನಿಖರ ಮಾಹಿತಿಯೇ ಲಭ್ಯ ಇಲ್ಲ! ಇದರಲ್ಲಿ ದೊಡ್ಡಮಟ್ಟದಲ್ಲಿ ಗೋಲ್‌ಮಾಲ್ ನಡೆಯುತ್ತಿರುವ ಶಂಕೆ ವ್ಯಕ್ತವಾಗಿದೆ.

ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆಯವರು ಇತ್ತೀಚೆಗೆ ನಡೆಸಿದ ಅರಣ್ಯ ಅಧಿಕಾರಿಗಳ ಸಭೆಯಲ್ಲಿ ಈ ಕುರಿತು ಪ್ರಶ್ನಿಸಿದಾಗ, ಅಧಿಕಾರಿಗಳಿಂದ ಸ್ಪಷ್ಟ ಉತ್ತರ ಬರಲಿಲ್ಲ. 'ರಾಜ್ಯದಲ್ಲಿ ಈವರೆಗೆ ನಡೆದಿರುವ ಸಸಿ ನೆಡುವ ಕಾರ್ಯಕ್ರಮಗಳಲ್ಲಿ ಎಷ್ಟು ಸಸಿಗಳನ್ನು ನೆಡಲಾಗಿದೆ. ಎಷ್ಟು ಬೆಳೆದಿವೆ, ಇವುಗಳಿಗೆ ಮಾಡಿದ ಖರ್ಚು ಎಷ್ಟು? ಗಿಡಗಳನ್ನು ಬೆಳೆಸಲು ಕೆಂಪು ಮಣ್ಣಿನ ಖರೀದಿಗೆ ವೆಚ್ಚ ಮಾಡಿದ್ದೆಷ್ಟು, ಗುಂಡಿ ತೋಡಲು ಖರ್ಚು ಮಾಡಿದ್ದೆಷ್ಟು, ಸಸಿಗಳನ್ನು ಇಡಲು ಪಾಲಿಥೀನ್‌ಗೆ ಮಾಡಿದ ಖರ್ಚು ಎಷ್ಟು ಎಂಬ ಸಮಗ್ರ ಮಾಹಿತಿಯನ್ನು ಆಗಸ್ಟ್ 31 ರೊಳಗೆ ನೀಡಬೇಕು' ಎಂದು ಸಚಿವ ಖಂಡ್ರೆ ಅವರು ಅಧಿಕಾರಿಗಳಿಗೆ ಗಡುವು ನೀಡಿದ್ದಾರೆ.

ಅಧಿಕಾರಿಗಳು ಪ್ರತಿ ವರ್ಷ 3 ಕೋಟಿಯಿಂದ 5 ಕೋಟಿ ಸಸಿಗಳನ್ನು ನೆಡುತ್ತಿರುವುದಾಗಿ ಮಾಹಿತಿ ನೀಡುತ್ತಾರೆ. ಈ ಕುರಿತು ನಿಖರವಾದ ಮಾಹಿತಿ ನೀಡುವಂತೆ ಸಚಿವರು ಸೂಚಿಸಿದ್ದಾರೆ. ಅರಣ್ಯ ಇಲಾಖೆಯ ಅಧಿಕಾರಿಗಳು, ಸಚಿವರ ದಾರಿತಪ್ಪಿಸುವ ಪ್ರಯತ್ನ ನಡೆಸಿದ್ದರಿಂದ ಕಠಿಣ ಕ್ರಮಕ್ಕೆ ಮುಂದಾಗಿದ್ದಾರೆ ಎಂದು ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಅರಣ್ಯ ಇಲಾಖೆ ನರ್ಸರಿಗಳಲ್ಲಿ ಲಕ್ಷಗಟ್ಟಲೇ ಗಿಡ ಬೆಳೆಸಿ ಹಂಚುತ್ತಾರೆ. ಈ ಕಾರ್ಯಕ್ಕೆ ಸರ್ಕಾರ ಅನುದಾನ ನೀಡುತ್ತದೆ. ಎಷ್ಟು ಲಕ್ಷ ಗಿಡಗಳನ್ನು ಹಂಚಲಾಗಿದೆ ಎಂಬ ದಾಖಲೆ ಅರಣ್ಯ ಇಲಾಖೆಯಲ್ಲಿ ಇದೆ. ಆದರೆ, ಹಂಚಿದ ನಂತರ ಆ ಗಿಡಗಳ ಸ್ಥಿತಿಗತಿ ಕುರಿತ ಮಾಹಿತಿ, ದಾಖಲೆ ಇಲ್ಲ. ಸ್ಥಳೀಯ ಆಡಳಿತಗಳು ಗಿಡ ನೆಟ್ಟು ಬೆಳೆಸುವ ನಿಟ್ಟಿನಲ್ಲಿ ಆಸಕ್ತಿ ತೋರುತ್ತಿಲ್ಲ. ಮರಗಳು ಕಡಿಮೆಯಾದರೆ ಆಮ್ಲಜನಕ ಕೊರತೆಗೆ ಎಡೆಮಾಡುತ್ತದೆ. ಬರಗಾಲ, ನೆರೆಗಾಲ ಪರಿಸ್ಥಿತಿ ಎದುರಿಸಬೇಕಾಗುತ್ತದೆ. ಪಾಲಿಕೆ ಮತ್ತು ಅರಣ್ಯ ಇಲಾಖೆಯವರು ಪ್ರತಿಯೊಂದು ಉದ್ಯಾನದಲ್ಲಿ 'ಟ್ರೀ ಪಾರ್ಕ್' ಅಭಿವೃದ್ಧಿ ಪಡಿಸಬೇಕು. ಆಮ್ಲಜನಕ ಹೆಚ್ಚು ನೀಡುವ, ಪಕ್ಷಿ ಸಂಕುಲಕ್ಕೆ ಆಹಾರ ನೀಡುವ ಗಿಡಗಳನ್ನು ರಸ್ತೆ ಬದಿಗಳಲ್ಲಿ ನೆಟ್ಟು ಪೋಷಿಸಬೇಕು ಎಂದು ಸಲಹೆ ನೀಡುವರು.

ಅರಣ್ಯೀಕರಣಕ್ಕೆ ನೆಡುತೋಪು: ಬಳ್ಳಾರಿ ಜಿಲ್ಲೆಯಲ್ಲಿ ಅರಣ್ಯ ಇಲಾಖೆ 'ಟ್ರೀ ಪಾರ್ಕ್' ಮೂಲಕ ಅರಣ್ಯೀಕರಣ ಮಾಡುತ್ತಿದೆ. ಸಾಲುಮರದ ತಿಮ್ಮಕ್ಕ ಸಸ್ಯೋದ್ಯಾನಗಳನ್ನು ಮಾಡಲಾಗಿದೆ. ಜಿಲ್ಲೆಗೆ ಕೆಎಂಇಆರ್‌ಸಿ ಮೂಲಕ ಅರಣ್ಯೀಕರಣಕ್ಕೆ ಸಾಕಷ್ಟು ಹಣ ಹರಿದು ಬರುತ್ತಿದೆ. ಇದನ್ನು ಬಳಸಿ ಹಸಿರೀಕರಣ ಯೋಜನೆಗಳನ್ನು ಕೈಗೊಳ್ಳಲಾಗುತ್ತಿದೆ. 'ಕಾಂಪನ್ಸೇಟರಿ ಅಫಾರೆಸ್ಟೇಷನ್' (ಯೋಜನೆಯೊಂದಕ್ಕೆ ಹಾನಿಯಾದ ಅರಣ್ಯಕ್ಕೆ ಪ್ರತಿಯಾಗಿ ಬೇರೆ ಕಡೆ ಬೆಳೆಸಲಾಗುವ ಕಾಡು) ಅಡಿಯಲ್ಲಿ ಜಿಲ್ಲೆಯ ಸಂಡೂರಿನಲ್ಲಿ ಅರಣ್ಯೀಕರಣ ಮಾಡಲಾಗುತ್ತಿದೆ. ಮಿಂಚೇರಿ ಗುಡ್ಡಗಳಲ್ಲಿ ಹಣ್ಣಿನ ಗಿಡಗಳನ್ನು ನೆಡಲಾಗಿದೆ.

'ಬಳ್ಳಾರಿಯ ಬೆಳಗಲ್ ಕ್ರಾಸ್‌ನಲ್ಲಿ ಸಸ್ಯಕ್ಷೇತ್ರ, ಸಂಡೂರಿನ ರಾಘಾಪುರ, ಅಂಕಮ್ಮನಾಳ, ರಾರಾವಿ, ಮಿಟ್ಟೆಸೂಗೂರು, ಅಗಸನೂರು, ದೇಶನೂರು, ದರೋಜಿಗಳಲ್ಲಿ ನೆಡುತೋಪುಗಳನ್ನು ನೆಟ್ಟು ಪೋಷಣೆ ಮಾಡಲಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ನೆಡುತೋಪುಗಳನ್ನು ಅರಣ್ಯ ಇಲಾಖೆ ಉತ್ತಮವಾಗಿ ನಿರ್ವಹಿಸುತ್ತಿದೆ' ಎನ್ನುತ್ತಾರೆ ಪರಿಸರವಾದಿ ಸಮದ್ ಕೊಟ್ಟೂರು.

ರಾಜ್ಯ ಹೈಕೋರ್ಟ್ ಆದೇಶವಿದ್ದರೂ ಅರಣ್ಯ ಇಲಾಖೆ 22,173 ಎಕರೆಯಷ್ಟು ಅರಣ್ಯ ಭೂಮಿಯ ಒತ್ತುವರಿ ತೆರವು ಮಾಡಿಲ್ಲ. ಇದರಲ್ಲಿ ಹಲವು ಪ್ರಕರಣ ವಿವಿಧ ನ್ಯಾಯಾಲಯದಲ್ಲಿ ಇತ್ಯರ್ಥವಾಗಿಲ್ಲ. ಇಲಾಖೆಯ ಸಚಿವರ ಸೂಚನೆ ಪ್ರಕಾರ ಒತ್ತುವರಿ ತೆರವಿಗೆ ಚುರುಕು ದೊರಕಿದೆ. ಆದರೆ ನೆಟ್ಟ ಗಿಡಗಳನ್ನು ಕನಿಷ್ಠ ಮೂರ್‍ನಾಲ್ಕು ವರ್ಷ ನೀರು ಹಾಕಿ ನಿಗಾ ವಹಿಸದಿದ್ದರೆ ಕೇಂದ್ರ ಅರಣ್ಯ ಇಲಾಖೆಯ ಗುರಿಯಂತೆ ರಾಜ್ಯದಲ್ಲಿ ಅರಣ್ಯ ಈಗಿರುವ ಶೇ 21.21ರಿಂದ ಶೇ 33ಕ್ಕೆ ಏರುವುದು ಸಾಧ್ಯವೇ? ಅರಣ್ಯ ಇಲಾಖೆಯ ವಿವಿಧ ಹಂತದ ಅಧಿಕಾರಿಗಳು ಅರಣ್ಯ ವಿಸ್ತೀರ್ಣ ಏರಿಸಲು ಇಚ್ಛಾಶಕ್ತಿ ಪ್ರದರ್ಶಿಸದಿದ್ದರೆ ಗುರು ಮುಟ್ಟುವುದು ಅಸಾಧ್ಯ.

ಪೂರಕ ಮಾಹಿತಿ: ಎಸ್. ರವಿಪ್ರಕಾಶ್, ಮೈಲಾರಿ ಲಿಂಗಪ್ಪ, ಸಂಧ್ಯಾ ಹೆಗಡೆ, ಬಿ.ಜೆ. ಧನ್ಯಪ್ರಸಾದ
ಪರಿಕಲ್ಪನೆ: ಯತೀಶ್ ಕುಮಾರ್ ಜಿ.ಡಿ

ಗುಂಡಣ್ಣ



25 ವರ್ಷಗಳ ಹಿಂದೆ

ಬುಧವಾರ, 25-8-1999

● ಮಾದೇಗೌಡ ರಾಜಕೀಯ ನಿವೃತ್ತಿ

ಮಂಡ್ಯ, ಆ. 24– ಕಾಂಗ್ರೆಸ್‌ನ ಹಿರಿಯ ಮುಖಂಡ, ಮಾಜಿ ಸಂಸದ ಹಾಗೂ ರಾಜಕೀಯ ಮುತ್ಸದ್ದಿ ಜಿ. ಮಾದೇಗೌಡರು ಇಂದು ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಿ, ಸಕ್ರಿಯ ರಾಜಕಾರಣದಿಂದ ನಿವೃತ್ತಿ ಘೋಷಿಸಿದ್ದಾರೆ.

ಅವರು ಸಂಜೆ ಇಲ್ಲಿರುವ ತಮ್ಮ ನಿವಾಸದಲ್ಲಿ ನಡೆಸಿದ ತುರ್ತು ಪತ್ರಿಕಾಗೋಷ್ಠಿಯಲ್ಲಿ ಈ ವಿಷಯವನ್ನು ಪ್ರಕಟಿಸಿ, ರಾಜೀನಾಮೆ ಪತ್ರವನ್ನು ಕೆಪಿಸಿಸಿ ಅಧ್ಯಕ್ಷ ಎಸ್.ಎಂ. ಕೃಷ್ಣರಿಗೆ ಅಂಚೆ ಮೂಲಕ ಕಳುಹಿಸಿರುವುದಾಗಿ ತಿಳಿಸಿದರು.

ತಾವು ಕಾಂಗ್ರೆಸ್‌ಗೆ ರಾಜೀನಾಮೆ ನೀಡುತ್ತಿರುವ ಕಾರಣ ತಿಳಿಸಿದರು.

50 ವರ್ಷಗಳ ಹಿಂದೆ

ಭಾನುವಾರ, 25-8-1974

● ಐದನೇ ರಾಷ್ಟ್ರಪತಿಯಾಗಿ ಫಕ್ರುದ್ದೀನ್ ಅಲಿ ಅಹ್ಮದ್ ಅಧಿಕಾರ ಸ್ವೀಕಾರ

ನವದೆಹಲಿ, ಆ. 24– ಯಾವುದೇ ಬಗೆಯ ಜಾತಿ, ಮತ, ವರ್ಣ, ವರ್ಗ ಭೇದಗಳಿಲ್ಲದೆ, ಜನತೆಗೆ ಸೇವೆ ಸಲ್ಲಿಸುವ ಪ್ರಮಾಣ ವಚನದೊಂದಿಗೆ ಫಕ್ರುದ್ದೀನ್ ಅಲಿ ಅಹ್ಮದ್ ಇಂದು ಭಾರತದ ಐದನೇ ರಾಷ್ಟ್ರಪತಿಯಾಗಿ ಅಧಿಕಾರ ಸ್ವೀಕರಿಸಿದರು.

ರಾಷ್ಟ್ರಪತಿ ಭವನದ ದರ್ಬಾರ್ ಹಾಲ್‌ನಲ್ಲಿ ಬೆಳಿಗ್ಗೆ ನಡೆದ ಸರಳ ಸಮಾರಂಭದಲ್ಲಿ ಅಸ್ಸಾಮಿನ 69 ವರ್ಷ ವಯಸ್ಸಿನ ಹಿರಿಯ ರಾಜಕಾರಣಿ ಅಹ್ಮದ್ ಅವರು ಪ್ರಮಾಣ ವಚನವನ್ನು ಸ್ವೀಕರಿಸಿದರು.

ಅಹ್ಮದ್ ಭಾರತ ಗಣ ರಾಜ್ಯದ ಎರಡನೇ ಮುಸ್ಲಿಂ ರಾಷ್ಟ್ರಪತಿ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಭಾನುವಾರ ಆಗಸ್ಟ್ 25, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ಸಪ್ತಮಿ ಗಂ. 27-40 ನಕ್ಷತ್ರ: ಭರಣಿ ಗಂ. 16-45 ಯೋಗ: ಧ್ರುವ ಗಂ. 24-29 ಕರಣ: ವಿಷ್ಟಿ ಗಂ. 16-32, ಸಿಂಹ ಮಾಸದ 09 ನೇ ದಿನ, ಮಳೆನಕ್ಷತ್ರ: ಮಘಾ 3.
ರಾಹುಕಾಲ : ಸಾಯಂಕಾಲ 04-30 – 06-00
ಸೂರ್ಯೋದಯ : 06-22 ಸೂರ್ಯಾಸ್ತ : 06-43
ಮುಸ್ಲಿಂ ದಿನಾಂಕ : 20 ಸಫರ್
ಅದೃಷ್ಟ ಸಂಖ್ಯೆ : 7, 2

ಮೇಷ: ಆಕಸ್ಮಿಕವಾಗಿ ಹಳೆಯ ಗೆಳೆಯನ ಭೇಟಿಯಾಗಲಿದೆ. ಆತಂಕವಿಲ್ಲದೆ ಕೆಲಸ ಕಾರ್ಯಗಳು ಸಾಗುವುದು. ಆಹಾರ ಸೇವನೆಯ ವಿಷಯದಲ್ಲಿ ಆದಷ್ಟು ಜಾಗೃತರಾಗಿರಿ. ಆರೋಗ್ಯದಲ್ಲಿ ಸುಧಾರಣೆ ಕಂಡು ಬರುವುದು.

ವೃಷಭ: ನಿಮ್ಮ ಚಟುವಟಿಕೆಯಲ್ಲಿ ಟೀಕೆಗಳಿಗೆ ಕಿವಿಯೊಡ್ಡಿದರೆ ಯಾವುದೇ ಉಪಯೋಗವಾಗುವುದಿಲ್ಲ, ಕೇವಲ ಸಮಯ ಮಾತ್ರಾ ಹಾಳಾಗುವುದು ಎಂದು ತಿಳಿದಿರಲಿ. ವಾಹನಗಳಿಂದ ಆದಾಯವನ್ನು ನಿರೀಕ್ಷಿಸಬಹುದು.

ಮಿಥುನ: ಸ್ನೇಹಿತರು ನಿಮ್ಮ ಪ್ರಾಮಾಣಿಕತೆಯನ್ನು ದುರುಪಯೋಗಪಡಿಸಿ ಕೊಂಡು ಲಾಭ ಮಾಡಿಕೊಳ್ಳಬಹುದು. ಜವಳಿ ವ್ಯಾಪಾರಿಗಳು ವಿಶೇಷ ರಿಯಾಯಿತಿಯಂತಹ ಮಾರಾಟಗಳಿಂದ ಹೆಚ್ಚಿನ ಲಾಭವು ಉಂಟಾಗುವುದು.

ಕರ್ಕಾಟಕ: ವೈದ್ಯಕೀಯ ವಿದ್ಯಾರ್ಥಿಗಳಿಗೆ ಮತ್ತು ರಾಸಾಯನಿಕ ಶಾಸ್ತ್ರದ ವಿದ್ಯಾರ್ಥಿಗಳಿಗೆ ಓದಿನಲ್ಲಿ ಹೆಚ್ಚಿನ ಪರಿಶ್ರಮ ಬೇಕಾಗುವುದು. ನಿಮ್ಮ ಆಲಸ್ಯದಿಂದಾಗಿ ಅಧಿಕಾರ ಹೋಗುವ ಪರಿಸ್ಥಿತಿ ಉಂಟಾಗುವುದು. ಎಚ್ಚರದಿಂದಿರಿ.

ಸಿಂಹ: ಹಿಂದೆ ಯಾವುದೋ ದಿನ ಮಾಡಿದ ಕೆಲಸದ ಫಲವಾಗಿ ಈ ದಿನ ಅದರ ಲಾಭ ಬಂದು ಕೈ ಸೇರಿದ ಸಂತಸ ಆಗಲಿದೆ. ಪ್ರತಿಭೆಗೆ ಅನುಗುಣವಾದ ಉದ್ಯೋಗ ಅವಕಾಶ ದೊರೆಯಲಿದೆ. ಭಿನ್ನಾಭಿಪ್ರಾಯಗಳು ದೂರಾಗುವವು.

ಕನ್ಯಾ: ಭೂಸಂಬಂಧಿ ಅದರಲ್ಲೂ ಕೃಷಿ ಭೂಮಿ ವ್ಯವಹಾರದಲ್ಲಿರುವವರಿಗೆ ಧನಲಾಭವಾಗುವುದು. ಇನ್ನೊಬ್ಬರಿಗೆ ಉಪಕಾರ ಮಾಡಲು ಹೋಗಿ ನೀವು ಸಮಸ್ಯೆಗೆ ಸಿಕ್ಕಿಕೊಳ್ಳಬೇಡಿ.

ತುಲಾ: ವಿಶೇಷವಾದ ತಿಂಡಿ-ತಿನಿಸುಗಳು ಪ್ರಾಪ್ತಿಯಾಗಿ ಸಂತೋಷ ಉಂಟಾಗುತ್ತದೆ. ಹಳೆಯ ಜವಾಬ್ದಾರಿ ಬದ್ಧತೆ ಇವುಗಳಿಂದ ಈ ದಿನ ಮುಕ್ತಿಯನ್ನು ಹೊಂದಬಹುದು. ಮಹಾಗಣಪತಿಯನ್ನು ಆರಾಧಿಸಿ.

ವೃಶ್ಚಿಕ: ಈ ದಿನದ ಅಂತ್ಯದಲ್ಲಿ ನಾಳೆಯ ದಿನದ ಕೆಲಸಗಳ ಬಗ್ಗೆ ಗಮನಹರಿಸಿ ಪೂರ್ವ ತಯಾರಿಯನ್ನು ಮಾಡಿಕೊಳ್ಳುವುದರಿಂದ ನಾಳೆ ಸುಲಭವಾಗುತ್ತದೆ. ನಿಮ್ಮ ಈ ದಿನದ ಕೆಲಸದಿಂದ ನಿಮ್ಮ ಬದುಕಿಗೆ ಅರ್ಥ ಸಿಗುವಂತಾಗಲಿದೆ.

ಧನು: ಚರ್ಚೆ ಹಾಗೂ ವ್ಯಾಪಾರ ವ್ಯವಹಾರಗಳಲ್ಲಿ ಬಹಳ ಜಾಗರೂಕತೆಯನ್ನು ವಹಿಸಿರಿ. ಸಾಂಸಾರಿಕ ವಿಚಾರಕ್ಕೆ ಸಂಬಂಧಿಸದಂತೆ ಈ ದಿನ ಆತುರದಿಂದ ತೀರ್ಮಾನ ತೆಗೆದುಕೊಳ್ಳುವುದು ಸರಿಯಲ್ಲ. ಕೆಂಪು ಶುಭ ತರುವುದು.

ಮಕರ: ಜೀವನ ಶೈಲಿಯಲ್ಲಿ ಮಹತ್ತರ ಬದಲಾವಣೆಗಳನ್ನು ತಂದುಕೊಳ್ಳುವ ಸನ್ನಿವೇಶ ಬರಲಿದೆ. ನಿಮ್ಮ ಸ್ವಾರ್ಥದ ಬದುಕಿಗಾಗಿ ಇನ್ನೊಬ್ಬರ ಭಾವನೆಗಳನ್ನು ಒಡೆಯಬೇಡಿ. ಸ್ನೇಹಿತರೊಂದಿಗೆ ಅಧ್ಯಾತ್ಮಿಕ ಮಾತುಕತೆಗಳಲ್ಲಿ ತೊಡಗುವಿರಿ.

ಕುಂಭ: ಅನಿವಾರ್ಯದಿಂದ ಅಥವಾ ಬೇಜವಾಬ್ದಾರಿಯಿಂದ ಅವಶ್ಯಕತೆಗಿಂತ ಹೆಚ್ಚಾಗಿ ಹಣ ವ್ಯಯವಾಗುವುದು. ಶ್ರೀಮಂತಿಕೆಯ ಬದುಕಿಗೆ ಮನಸ್ಸು ಹಾತೊರೆಯುವುದು. ಆದರೆ ಹಾಸಿಗೆ ಇದ್ದಷ್ಟು ಕಾಲು ಚಾಚಿ.


ಮೀನ: ಉತ್ಸಾಹದಿಂದ ಕೆಲಸ ಆರಂಭಿಸಿದಲ್ಲಿ ಸಮಸ್ಯೆಗಳು ತಾನಾಗಿಯೇ ಪರಿಹಾರಗೊಳ್ಳಲಿವೆ. ಹೃದಯ ಸಂಬಂಧವಾದ ಅನಾರೋಗ್ಯದ ವಿಚಾರದಲ್ಲಿ ನಿರ್ಲಕ್ಷ್ಯ ತೋರುವುದು ಸರಿಯಲ್ಲ. ಷೇರು ವ್ಯವಹಾರದಲ್ಲಿ ನಷ್ಟವಾಗಬಹುದು.

ಪದಬಂಧ 5783

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಆಹುತಿಯಾಗುವ ಪ್ರಾಣಿ (4)
5.ಜಡಿ ಮಳೆಯಲ್ಲಿ ಖರೀದಿಸಿದ ವಂದರಿ ಇಲ್ಲಿದೆ (3)
6.ಬೆನ್ನೆಲುಬು ಇರುವ ಪ್ರಾಣಿ (4)
7.ಉಲ್ಲಾ ಬೆಲೆ ಹೇಳಿದಾಗ ಆನೆಯ ದಾಡಿ ಕಾಣುವುದೇ? (2)
9.ಅನಿರೀಕ್ಷಿತವಾಗಿ ಬಂದವನು (4)
10.ಹುತ್ತ ಇಲ್ಲಿದೆ (3)
11.ಸಂಬಳ ಮುಂತಾದವುಗಳನ್ನು ಹಂಚುವಿಕೆ (4)
12.ವರನಿಗೆ ಕೇಳಿಸಿದ ಧ್ವನಿ (2)
15.ದೊಡ್ಡ ಉತ್ಸವ (4)
17.ಇದು ಮತ್ತು ಬರಿಸುವಂಥದ್ದು (3)
18.ಮಾನವುಳ್ಳವನ ಹುಟ್ಟುಗುಣ (4)

ಮೇಲಿಂದ ಕೆಳಕ್ಕೆ
1.ಮಜವಾಗಿರುವ ಸಮಾಚಾರ! (4)
2.ವಾರದ ಕೊನೆಗೆ ತೋರಿದ ಡೌಲು (4)
3.ಶುನಕದ ಹತ್ತಿರ ಕಾಣಿಸಿದ ಗಿಳಿ (2)
4.ಅನಿರೀಕ್ಷಿತ ಘಟನೆ (4)
8.ವಡೆ ತಿನ್ನಲು ಸಹಾಯವಾಗುವ ಒಸಡು! (3)
9.ಕರ ಕೊನೆಗಿಟ್ಟಾಗ ಗಣಿ ಕಾಣುವುದೇ? (3)
11.ಅಧಿಕ ಸಂಖ್ಯೆಯ ವ್ಯಕ್ತಿಗಳ ಅಭಿಪ್ರಾಯ (4)
13.ವನದಲ್ಲಿ ದೊರೆತ ಗಳಿಕೆ (4)
14.ಲೋಕಾಭಿರಾಮವಾದ ಸಂಭಾಷಣೆ (4)
16.ಬೆಳಗಿನ ಜಾವದಲ್ಲೇ ತೆಗೆದು ಹಾಕುವಿಕೆ! (2)



5782ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪುನರುಕ್ತಿ, 4.ಶಿಲುಬೆ, 6.ಭವಿಷ್ಯ, 8.ಅಭಿರುಚಿ, 11.ಬಾಕು, 12.ಲೋಬಿ, 13.ಮಟ್ಟಸ, 14.ಗೆಜ್ಜೆ, 15.ಜಯ, 16.ಚಿಪರಸ, 18.ಕರುಣೆ, 20.ಕಮ್ಮಾರ, 21.ಮನೋರಥ

ಮೇಲಿಂದ ಕೆಳಕ್ಕೆ: 2.ನವುರು, 3.ಕ್ತಿಭ, 4.ಶಿಷ್ಯ, 5.ಬೆಳಕು, 7.ವಿಚಾರಸರಣಿ, 9.ಭಿನ್ನಾಭಿಪ್ರಾಯ, 10.ಚಿಕ್ಕಮಗಳೂರು, 11.ಬಾಡಿಗೆದಾರ, 15.ಜನಕ, 17.ಪದರ, 18.ಕರ, 19.ಣೆಮ

ಸುಡೊಕು 6168

	2			8				7
			1		6			
3		5		2			8	
	8	7					1	
		4	7	6	3	8		9
5	9						7	
	3	2		7		1		5
1			2		5			
	5			4		2	3	8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6167 ಸುಡೊಕು

2	7	9	4	5	3	6	8	1
6	4	3	1	8	7	2	5	9
8	1	5	2	6	9	7	3	4
3	8	4	7	2	6	1	9	5
7	9	2	8	1	5	4	6	3
5	6	1	9	3	4	8	2	7
9	2	7	5	4	8	3	1	6
1	5	6	3	7	2	9	4	8
4	3	8	6	9	1	5	7	2

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಕೆರೆ ಒತ್ತುವರಿ ಜಾಗದಲ್ಲಿ ನಿರ್ಮಿಸಲಾಗಿದೆ ಎಂಬ ಆರೋಪ

ನಾಗಾರ್ಜುನ ಒಡೆತನದ ಸಭಾಂಗಣ ಧ್ವಂಸ

ಪ್ರಜಾವಾಣಿ ವಾರ್ತೆ/ ಪಿಟಿಐ



ನಾಗಾರ್ಜುನ ಒಡೆತನದ ಎನ್–ಕನ್ವೆನ್ಷನ್ ಸೆಂಟರ್ ಕೆಡವಲಾಗಿದೆ —ಪಿಟಿಐ ಚಿತ್ರ

ಹೈದರಾಬಾದ್: ತೆಲುಗು ನಟ ಅಕ್ಕಿನೇನಿ ನಾಗಾರ್ಜುನ ಅವರ ಜಂಟಿ ಮಾಲೀಕತ್ವದ ಎನ್-ಕನ್ವೆನ್ಷನ್ ಸೆಂಟರ್ ಅನ್ನು ಕೆರೆ ಒತ್ತುವರಿ ಜಾಗದಲ್ಲಿ ನಿರ್ಮಿಸಲಾಗಿದೆ ಎಂಬ ಆರೋಪದಲ್ಲಿ ನೆಲಸಮಗೊಳಿಸಲಾಯಿತು.

ಹೈದರಾಬಾದ್ ವಿಕೋಪ ಸ್ಪಂದನೆ, ಆಸ್ತಿಗಳ ನಿಗಾ ಹಾಗೂ ರಕ್ಷಣಾ ಏಜೆನ್ಸಿಯ (ಹೈಡ್ರಾ) ಅಧಿಕಾರಿಗಳು ಪೊಲೀಸರ ಬಿಗಿ ಬಂದೋಬಸ್ತ್‌ನೊಂದಿಗೆ ಶನಿವಾರ ಬೆಳಿಗ್ಗೆ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಿದ್ದಾರೆ.

ತುಮ್ಮಿಡಿಕುಂಟ ಕೆರೆಯ ಜಾಗವನ್ನು ಒತ್ತುವರಿ ಮಾಡಿಕೊಂಡು ಎನ್-ಕನ್ವೆನ್ಷನ್ ಸೆಂಟರ್ ನಿರ್ಮಿಸಲಾಗಿದೆ ಎಂಬ ಆರೋಪ ಇದೆ.

ಇಲ್ಲಿನ ಮಾದಾಪುರದಲ್ಲಿರುವ ಕನ್ವೆನ್ಷನ್ ಸೆಂಟರ್ ಎನ್3 ಎಂಟರ್‌ಪ್ರೈಸಸ್‌ನ ಒಡೆತನದಲ್ಲಿದೆ. ಈ ಸಂಸ್ಥೆಯು ನಾಗಾರ್ಜುನ ಮತ್ತು ನಲ್ಲಾ ಪ್ರೀತಂ ಅವರ ಜಂಟಿ ಮಾಲೀಕತ್ವದಲ್ಲಿದೆ.

ಎನ್- ಕನ್ವೆನ್ಷನ್ ಸೆಂಟರ್ ಅನ್ನು 2010–12ರ ಅವಧಿಯಲ್ಲಿ ನಿರ್ಮಿಸಲಾಗಿದ್ದು, ಸುಮಾರು 10 ಎಕರೆ ಪ್ರದೇಶದಲ್ಲಿ ಹರಡಿಕೊಂಡಿದೆ. ತುಮ್ಮಿಡಿಕುಂಟ ಕೆರೆಗೆ ಸೇರಿದ 1.12 ಎಕರೆ ಭೂಮಿ ಮತ್ತು ಬಫರ್ ವಲಯದ ಎರಡು ಎಕರೆ ಜಾಗವನ್ನು ಒತ್ತುವರಿ ಮಾಡಲಾಗಿದೆ ಎಂದು ಆರೋಪಿಸಲಾಗಿದೆ.

ಮುಖ್ಯಾಂಶಗಳು

- ಹೈದರಾಬಾದ್‌ನ ಮಾದಾಪುರದಲ್ಲಿರುವ ಸೆಂಟರ್
- ಕೆರೆ ಒತ್ತುವರಿ ಜಾಗದಲ್ಲಿ ನಿರ್ಮಿಸಿರುವ ಆರೋಪ
- ಅಧಿಕಾರಿಗಳಿಂದ ಶನಿವಾರ ಬೆಳಿಗ್ಗೆ ಕಾರ್ಯಾಚರಣೆ



ನ್ಯಾಯಾಲಯದ ತಡೆಯಾಜ್ಞೆ ಇದ್ದರೂ ಎನ್-ಕನ್ವೆನ್ಷನ್ ಸೆಂಟರ್ ಅನ್ನು 'ಕಾನೂನುಬಾಹಿರ' ರೀತಿಯಲ್ಲಿ ಕೆಡವಿರುವುದು ನೋವುಂಟು ಮಾಡಿದೆ

ನಾಗಾರ್ಜುನ, ನಟ

ನಾಗಾರ್ಜುನ ಅವರು ಒತ್ತುವರಿ ತೆರವು ಪ್ರಕ್ರಿಯೆಗೆ ಶನಿವಾರ ಮಧ್ಯಾಹ್ನದ ವೇಳೆಗೆ ಹೈಕೋರ್ಟ್‌ನಿಂದ ತಡೆಯಾಜ್ಞೆ ತಂದರಾದರೂ, ಆ ವೇಳೆಗಾಗಲೇ ಇಡೀ ಕನ್ವೆನ್ಷನ್ ಸೆಂಟರ್ ಅನ್ನು ಕೆಡವಲಾಗಿತ್ತು.

'ನಾವು ಕಾನೂನು ಉಲ್ಲಂಘಿಸಿ ಯಾವುದೇ ನಿರ್ಮಾಣ ಕೆಲಸ ಮಾಡಿಲ್ಲ. ಕನ್ವೆನ್ಷನ್ ಇರುವ ಜಮೀನು ಪಟ್ಟಾ ಭೂಮಿಯಾಗಿದ್ದು, ಕೆರೆಯ ಒಂದಿಂಚು ಜಾಗವೂ ಒತ್ತುವರಿಯಾಗಿಲ್ಲ' ಎಂದು ನಾಗಾರ್ಜುನ ಅವರು 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿದ್ದಾರೆ.

ನೆಲಸಮ ಕಾರ್ಯಾಚರಣೆಗೆ ಮುನ್ನ ಯಾವುದೇ ನೋಟಿಸ್ ಕೂಡಾ ನೀಡಿಲ್ಲ. ತಪ್ಪು ಮಾಹಿತಿಯಿಂದ ಕನ್ವೆನ್ಷನ್ ಸೆಂಟರ್ ಅನ್ನು ಕೆಡವಲಾಗಿದೆ. ಈ ಕ್ರಮದ ವಿರುದ್ಧ ಕಾನೂನು ಹೋರಾಟ ನಡೆಸಲಾಗುವುದು ಎಂದು ತಿಳಿಸಿದ್ದಾರೆ.

ಆರೋಪಿಗಳ ಮನೆ ನೆಲಸಮ ಒಪ್ಪಲು ಸಾಧ್ಯವಿಲ್ಲ: ಕಾಂಗ್ರೆಸ್



ಮಲ್ಲಿಕಾರ್ಜುನ ಖರ್ಗೆ

ನವದೆಹಲಿ (ಪಿಟಿಐ): 'ಆರೋಪಿಗಳ ಮನೆ ನೆಲಸಮ ಮಾಡುವುದನ್ನು ಒಪ್ಪಲು ಸಾಧ್ಯವಿಲ್ಲ, ಕೂಡಲೇ ಇದನ್ನು ನಿಲ್ಲಿಸಬೇಕು ಎಂದು ಕಾಂಗ್ರೆಸ್ ಶನಿವಾರ ಆಗ್ರಹಿಸಿದೆ.

ಮಧ್ಯ ಪ್ರದೇಶದ ಛತರ್‌ಪುರದಲ್ಲಿ ಪ್ರತಿಭಟನೆ ವೇಳೆ ಉಂಟಾದ ಹಿಂಸಾಚಾರದಲ್ಲಿ ಭಾಗಿಯಾಗಿದ್ದ ಎನ್ನಲಾದ ವ್ಯಕ್ತಿಯ ಮನೆಯನ್ನು ನೆಲಸಮಗೊಳಿಸಿದ ಬೆನ್ನಲ್ಲೇ ಕಾಂಗ್ರೆಸ್ ಈ ಹೇಳಿಕೆ ನೀಡಿದೆ.

'ಶಹಜಾದ್ ಅಲಿ ಎಂಬವರ ಮನೆಯನ್ನು ನೆಲಸಮ ಮಾಡಲಾಗಿದೆ. ಹಿಂಸಾಚಾರ ಆರೋಪಕ್ಕೆ ಸಂಬಂಧಿಸಿ 150 ಜನರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಈ ಪೈಕಿ 46 ಮಂದಿಯ ಗುರುತು ಪತ್ತೆಯಾಗಿದೆ' ಎಂದು ಅಧಿಕಾರಿಗಳು ಹೇಳಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, 'ಯಾರದೊ ಮನೆಯನ್ನು ನೆಲಸಮ ಮಾಡುವುದು ಮತ್ತು ಕುಟುಂಬಸ್ಥರ ಸೂರನ್ನು ಕಸಿದುಕೊಳ್ಳುವುದು ಎರಡೂ ಅಮಾನವೀಯ ಮತ್ತು ಅನ್ಯಾಯ' ಎಂದು ಎಕ್ಸ್‌ನಲ್ಲಿ ಹೇಳಿದ್ದಾರೆ.

ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ಅಲ್ಪಸಂಖ್ಯಾತರನ್ನು ಪದೇ ಪದೇ ಗುರಿಮಾಡಲಾಗುತ್ತಿದೆ. ಕಾನೂನಿನ ಆಳ್ವಿಕೆ ಇರುವ ಸಮಾಜದಲ್ಲಿ ಇಂಥ ಕೆಲಸಕ್ಕೆ ಜಾಗವಿಲ್ಲ' ಎಂದು ಕಿಡಿಕಾರಿದ್ದಾರೆ.

ಜನರಲ್ಲಿ ಭಯ ಹುಟ್ಟಿಸಲು ಬುಲ್ಡೋಜರ್ ಬಳಕೆ ಮಾಡುತ್ತಿರುವ ಹಾಗೂ ಸಂವಿಧಾನಕ್ಕೆ ಅಗೌರವ ತೋರುತ್ತಿರುವ ಬಿಜೆಪಿ ಆಡಳಿತವಿರುವ ರಾಜ್ಯ ಸರ್ಕಾರಗಳ ಕ್ರಮವನ್ನು ಕಾಂಗ್ರೆಸ್ ಬಲವಾಗಿ ಖಂಡಿಸುತ್ತದೆ ಎಂದರು.

ಪ್ರಿಯಾಂಕಾ ಆಕ್ರೋಶ: ವ್ಯಕ್ತಿಯೊಬ್ಬ ಅಪರಾಧವೊಂದರ ಆರೋಪಿಯಾಗಿದ್ದಲ್ಲಿ ಆತ ತಪ್ಪು ಮಾಡಿದ್ದಾನೋ, ಇಲ್ಲವೋ ಎಂಬುದನ್ನು ಕೋರ್ಟ್ ನಿರ್ಧಾರ ಮಾಡಿ ಶಿಕ್ಷೆ ವಿಧಿಸುತ್ತದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಹೇಳಿದರು.

'ಆದರೆ, ಆರೋಪ ಕೇಳಿಬಂದ ತಕ್ಷಣವೇ ಆತನ ಕುಟುಂಬಕ್ಕೆ ಶಿಕ್ಷೆ ನೀಡುವುದು ಮತ್ತು ಅವರ ಸೂರನ್ನು ಕಸಿದುಕೊಳ್ಳುವುದು ಕಾನೂನಿಗೆ ವಿರುದ್ಧವಾದುದು' ಎಂದರು.

ಕೋಲ್ಕತ್ತದಲ್ಲಿ ನಡೆದ ವೈದ್ಯ ವಿದ್ಯಾರ್ಥಿನಿ ಅತ್ಯಾಚಾರ, ಕೊಲೆ ಪ್ರಕರಣ

ಆರು ಮಂದಿಗೆ ಸುಳ್ಳುಪತ್ತೆ ಪರೀಕ್ಷೆ

ನವದೆಹಲಿ/ ಕೋಲ್ಕತ್ತ (ಪಿಟಿಐ): ವೈದ್ಯ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಎಸಗಿ, ಕೊಲೆಗೈದ ಪ್ರಕರಣದಲ್ಲಿ ಮಾಜಿ ಪ್ರಾಂಶುಪಾಲ ಸೇರಿ ಆರು ಮಂದಿಯ ಸುಳ್ಳು ಪತ್ತೆ ಪರೀಕ್ಷೆ ಪ್ರಕ್ರಿಯೆಯನ್ನು ಶನಿವಾರ ಆರಂಭಿಸಲಾಯಿತು ಎಂದು ಅಧಿಕಾರಿಗಳು ಹೇಳಿದ್ದಾರೆ.

ಪ್ರಮುಖ ಆರೋಪಿ ಸಂಜಯ್ ರಾಯ್‌ನ ಸುಳ್ಳು ಪತ್ತೆ ಪರೀಕ್ಷೆಯನ್ನು ತಾಂತ್ರಿಕ ಕಾರಣಗಳಿಂದ ಮುಂದೂಡಲಾಗಿದೆ. ಆರ್.ಜಿ ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಮಾಜಿ ಪ್ರಾಂಶುಪಾಲ ಸಂದೀಪ್ ಘೋಷ್ ಸೇರಿದಂತೆ ಆರು ಮಂದಿಯನ್ನು ಕೋಲ್ಕತ್ತದ ಸಿಬಿಐ ಕಚೇರಿಯಲ್ಲಿ ಸುಳ್ಳುಪತ್ತೆ ಪರೀಕ್ಷೆಗೆ ಒಳಪಡಿಸಲಾಗಿದೆ.

ಆಗಸ್ಟ್ 9ರಂದು (ಘಟನೆ ನಡೆದ ದಿನ) ರಾತ್ರಿ ಪಾಳಿಯಲ್ಲಿದ್ದ ವೈದ್ಯರು ಮತ್ತು ಇಬ್ಬರು ಮೊದಲ ವರ್ಷದ ಸ್ನಾತಕೋತ್ತರ ಟ್ರೈನಿಗಳು ಸುಳ್ಳುಪತ್ತೆ ಪರೀಕ್ಷೆಗೆ ಒಳಗಾದವರಲ್ಲಿ ಸೇರಿದ್ದಾರೆ. ವೈದ್ಯ ವಿದ್ಯಾರ್ಥಿನಿಯ ಮೃತದೇಹ ದೊರೆತ ಸೆಮಿನಾರ್ ಹಾಲ್‌ನಲ್ಲಿ ಸ್ನಾತಕೋತ್ತರ ಟ್ರೈನಿಗಳ ಬೆರಳಚ್ಚು ಪತ್ತೆಯಾಗಿರುವುದು ಅವರನ್ನು ಸುಳ್ಳುಪತ್ತೆ ಪರೀಕ್ಷೆಗೆ ಒಳಪಡಿಸಲು ಕಾರಣ.

ಸುಳ್ಳುಪತ್ತೆ ಪರೀಕ್ಷೆ ನಡೆಸಲು ದೆಹಲಿಯ ಕೇಂದ್ರೀಯ ವಿಧಿವಿಜ್ಞಾನ ಪ್ರಯೋಗಾಲದ (ಸಿಎಫ್‌ಎಸ್‌ಎಲ್) ತಜ್ಞರ ತಂಡವು ಕೋಲ್ಕತ್ತಕ್ಕೆ ಬಂದಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ತನಿಖೆ ಕೈಗೆತ್ತಿಕೊಂಡ ಸಿಬಿಐ: ಆರ್.ಜಿ ಕರ್ ವೈದ್ಯಕೀಯ ಕಾಲೇಜಿನಲ್ಲಿ ನಡೆದಿರುವ ಹಣಕಾಸಿನ ಅವ್ಯವಹಾರ ಆರೋಪಗಳ ಕುರಿತ ತನಿಖೆಯನ್ನು ಸಿಬಿಐ ಕೈಗೆತ್ತಿಕೊಂಡಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೊಮ್ಮೆ ಎಫ್‌ಐಆರ್ ದಾಖಲಿಸುವ ನಿಟ್ಟಿನಲ್ಲಿ ಸಿಬಿಐ ಅಧಿಕಾರಿಗಳು ಶನಿವಾರ ಎಸ್‌ಐಟಿಯಿಂದ ಅಗತ್ಯ ದಾಖಲೆಗಳನ್ನು ಪಡೆದುಕೊಂಡಿದ್ದಾರೆ. ಹಣಕಾಸು ಅವ್ಯವಹಾರದ ತನಿಖೆಯನ್ನು ಎಸ್‌ಐಟಿಯಿಂದ ಸಿಬಿಐಗೆ ವರ್ಗಾಯಿಸುವಂತೆ ಕಲ್ಕತ್ತ ಹೈಕೋರ್ಟ್ ಆದೇಶಿಸಿತ್ತು.



ವೈದ್ಯ ವಿದ್ಯಾರ್ಥಿನಿ ಕೊಲೆ ಖಂಡಿಸಿ ಡಿವೈಎಫ್‌ಐ ಮತ್ತು ಎಸ್‌ಎಫ್‌ಐ ಕಾರ್ಯಕರ್ತರು ಕೋಲ್ಕತ್ತದಲ್ಲಿ ಶನಿವಾರ ಮಳೆಯ ನಡುವೆಯೇ ಪ್ರತಿಭಟನಾ ಮೆರವಣಿಗೆ ನಡೆಸಿದರು —ಪಿಟಿಐ ಚಿತ್ರ

ದಿನದ ಪ್ರಮುಖ ಅಂಶಗಳು

- ಪಶ್ಚಿಮ ಬಂಗಾಳದಲ್ಲಿ ಕಿರಿಯ ವೈದ್ಯರ ಮುಷ್ಕರ ಸತತ 16ನೇ ದಿನಕ್ಕೆ ಕಾಲಿಟ್ಟಿದ್ದು, ರೋಗಿಗಳು ಶನಿವಾರವೂ ಪರದಾಟ ನಡೆಸಿದರು.
- ವೈದ್ಯ ವಿದ್ಯಾರ್ಥಿನಿ ಹತ್ಯೆ ಘಟನೆ ಖಂಡಿಸಿ ನಡೆದ ಪ್ರತಿಭಟನೆಯಲ್ಲಿ ವಿದ್ಯಾರ್ಥಿಗಳು ಪಾಲ್ಗೊಂಡದ್ದಕ್ಕೆ ಸಂಬಂಧಿಸಿದಂತೆ ಶಾಲಾ ಶಿಕ್ಷಣ ಇಲಾಖೆಯು ಪಶ್ಚಿಮ ಬಂಗಾಳದ ಹೌರಾ ಜಿಲ್ಲೆಯ ಮೂರು ಶಾಲೆಗಳಿಗೆ ನೋಟಿಸ್ ಜಾರಿಗೊಳಿಸಿದೆ.
- ಶಾಲಾ ಅವಧಿಯಲ್ಲಿ ವಿದ್ಯಾರ್ಥಿಗಳನ್ನು ಪ್ರತಿಭಟನಾ ಮೆರವಣಿಗೆಯಲ್ಲಿ ಭಾಗವಹಿಸುವಂತೆ ಮಾಡಿದ್ದು ಏಕೆ ಎಂಬ ಬಗ್ಗೆ 24 ಗಂಟೆಗಳ ಒಳಗಾಗಿ ಕಾರಣ ಕೊಡುವಂತೆ ಸೂಚಿಸಿದೆ.

'ಮಹಾ' ಪ್ರತಿಪಕ್ಷಗಳ ಮೌನ ಪ್ರತಿಭಟನೆ

ಬದ್ಲಾಪುರ ಪ್ರಕರಣ: ಸರ್ಕಾರದ ವಿರುದ್ಧ 'ಮಹಾ ವಿಕಾಸ ಆಘಾಡಿ' ಆಕ್ರೋಶ

ಪುಣೆ/ಮುಂಬೈ/ನಾಗ್ಪುರ (ಪಿಟಿಐ): ಮೂರು ಹಾಗೂ ನಾಲ್ಕು ವರ್ಷದ ಬಾಲಕಿಯರ ಮೇಲೆ ನಡೆದ ಲೈಂಗಿಕ ದೌರ್ಜನ್ಯವನ್ನು ಖಂಡಿಸಿ ವಿರೋಧ ಪಕ್ಷಗಳ ಮೈತ್ರಿಕೂಟ 'ಮಹಾ ವಿಕಾಸ ಆಘಾಡಿ'ಯು ಶನಿವಾರ ರಾಜ್ಯದಾದ್ಯಂತ ಮೌನ ಪ್ರತಿಭಟನೆ ನಡೆಸಿತು. ಶಿವಸೇನಾ (ಉದ್ಧವ್ ಬಣ), ಎನ್‌ಸಿಪಿ (ಶರದ್ ಬಣ) ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಬಾಯಿಗೆ ಕಪ್ಪು ಬಟ್ಟೆ ಧರಿಸಿ, ತಲೆಗೆ ಕಪ್ಪು ಪಟ್ಟಿ ಕಟ್ಟಿಕೊಂಡು ಪ್ರತಿಭಟನೆ ನಡೆಸಿದರು.

'ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳುವ ಬದಲು ರಾಜ್ಯ ಸರ್ಕಾರವು ಅವರನ್ನು ರಕ್ಷಿಸುತ್ತಿದೆ. ರಾಜ್ಯವು ಇಂಥ ನಾಚಿಕೆಗೇಡಿನ ಸರ್ಕಾರವನ್ನು ಹಿಂದೆಂದೂ ನೋಡಿರಲಿಲ್ಲ. ಕೈಗಳಿಗೆ ರಾಕಿ ಕಟ್ಟಿಸಿಕೊಳ್ಳುವಲ್ಲಿ 'ಕಂಸ ಮಾಮ' ಬ್ಯುಸಿ ಆಗಿದ್ದಾರೆ. ಆದರೆ, ತಮ್ಮ ಸಹೋದರಿಯರಿಗೆ ಯಾವಾಗ ನ್ಯಾಯ ಸಿಗಲಿದೆ ಎಂದು 'ಕಂಸ ಮಾವ' ಹೇಳಬೇಕು' ಎಂದು ಶಿವಸೇನಾ (ಉದ್ಧವ್ ಬಣ) ಮುಖ್ಯಸ್ಥ ಉದ್ಧವ್ ಠಾಕ್ರೆ ಆಕ್ರೋಶ ವ್ಯಕ್ತಪಡಿಸಿದರು.

ಎನ್‌ಸಿಪಿ (ಶರದ್ ಬಣ) ಮುಖ್ಯಸ್ಥ ಶರದ್ ಪವಾರ್ ಮಾತನಾಡಿ, 'ಬದ್ಲಾಪುರ ಪ್ರಕರಣವು ರಾಷ್ಟ್ರಮಟ್ಟದಲ್ಲಿ ರಾಜ್ಯದ ಮಾನವನ್ನು ಹರಾಜು ಹಾಕಿದೆ. ಮಹಿಳೆಯರ ರಕ್ಷಣೆ ತನ್ನ ಜವಾಬ್ದಾರಿ ಎಂಬುದನ್ನು ಈ ಸರ್ಕಾರ ಮರೆತಂತಿದೆ. ಮಹಿಳೆಯರ ಮೇಲೆ ದೌರ್ಜನ್ಯ ನಡೆಸುವವರ ತಲೆಯನ್ನು ಕತ್ತರಿಸುತ್ತಿದ್ದ ಛತ್ರಪತಿ ಶಿವಾಜಿ ನೆಲದಲ್ಲಿ ಇಂಥ ಘಟನೆ ನಡೆದಿದೆ' ಎಂದರು.

'ಮಹಿಳೆಯರು ಹಾಗೂ ಮಕ್ಕಳ ಮೇಲಿನ ಬಹುತೇಕ ಅಪರಾಧಗಳು ಠಾಣೆ ಜಿಲ್ಲೆಯಲ್ಲಿಯೇ ನಡೆಯುತ್ತಿವೆ. ಇವುಗಳನ್ನು ಶಿವಸೇನಾದ (ಶಿಂದೆ ಬಣ) ಕಾರ್ಯಕರ್ತರೇ ಎಸಗುತ್ತಿದ್ದಾರೆ. ಮುಖ್ಯಮಂತ್ರಿ ಶಿಂದೆ ಅವರು ಠಾಣೆಯ ಪ್ರಭಾವಶಾಲಿ ನಾಯಕ. ಇವರು ಮುಖ್ಯಮಂತ್ರಿ ಆಗಿರುವುದರಿಂದ ಅವರ ಕಾರ್ಯಕರ್ತರಿಗೆ ಭಯವೇ ಇಲ್ಲದಂತಾಗಿದೆ' ಎಂದು ಕಾಂಗ್ರೆಸ್ ನಾಯಕ ವಿಜಯ್ ವಡೆಟ್ಟೀವರ್ ಅಭಿಪ್ರಾಯಪಟ್ಟರು.

ಬಿಜೆಪಿಯಿಂದಲೂ ಪ್ರತಿಭಟನೆ: 'ಮಹಾ ವಿಕಾಸ ಆಘಾಡಿ' ಪ್ರತಿಭಟನೆಯನ್ನು ವಿರೋಧಿಸಿ ಬಿಜೆಪಿಯೂ ಬಾಯಿಗೆ ಕಪ್ಪು ಬಟ್ಟೆ ಧರಿಸಿ ಪ್ರತಿಭಟನೆ ನಡೆಸಿದೆ. 'ಬದ್ಲಾಪುರದಂಥ ದೌರ್ಜನ್ಯದ ಪ್ರಕರಣಗಳನ್ನು ಇಟ್ಟುಕೊಂಡು ವಿರೋಧ ಪಕ್ಷಗಳು ಆಯೋಜಿಸಿದ್ದ ಬಂದ್‌ಗೆ ಹೈಕೋರ್ಟ್ ತಡೆ ನೀಡಿತ್ತು. ಮುಂಬರುವ ವಿಧಾನ ಸಭೆ ಚುನಾವಣೆಯ ಕಾರಣಕ್ಕಾಗಿ ಇವರು ಈ ಪ್ರಕರಣವನ್ನು ರಾಜಕೀಯಕ್ಕೆ ಬಳಸಿಕೊಳ್ಳುವ ಹತಾಶ ಯತ್ನ ನಡೆಸುತ್ತಿದ್ದಾರೆ' ಎಂದು ಮುಂಬೈನ ಬಿಜೆಪಿ ಘಟಕದ ಅಧ್ಯಕ್ಷ ಧೀರಜ್ ಘಾಟೆ ತಿಳಿಸಿದರು.



'ಮಹಾ ವಿಕಾಸ ಆಘಾಡಿ' ಮೈತ್ರಿಕೂಟದ ಕಾರ್ಯಕರ್ತರು ಕರದ್‌ನಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

ಮಹಿಳೆಯರ ಮೇಲಿನ ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿವೆ. ಅಪರಾಧಿಗಳಿಗೆ ಕಾನೂನಿನ ಭಯವೇ ಇಲ್ಲದಂತಾಗಿದೆ

ವಿಜಯ್ ವಡೆಟ್ಟೀವರ್
ವಿಧಾನಸಭೆ ವಿರೋಧ ಪಕ್ಷದ ನಾಯಕ

ದೌರ್ಜನ್ಯ: ದೈಹಿಕ ಶಿಕ್ಷಕ ಬಂಧನ

ಪುಣೆಯ ಪಿಂಪರಿ ಚಿಂಚವಡ ಪ್ರದೇಶದಲ್ಲಿರುವ ಖಾಸಗಿ ಶಾಲೆಯಲ್ಲಿ 12 ವರ್ಷದ ವಿದ್ಯಾರ್ಥಿನಿಯ ಮೇಲೆ ಕಳೆದ ಎರಡು ವರ್ಷಗಳಿಂದ ಲೈಂಗಿಕ ದೌರ್ಜನ್ಯ ಎಸಗುತ್ತಿದ್ದ ಆರೋಪದ ಮೇಲೆ ದೈಹಿಕ ಶಿಕ್ಷಣ ಶಿಕ್ಷಕ ಸೇರಿ 7 ಮಂದಿಯನ್ನು ಬಂಧಿಸಲಾಗಿದೆ.

ಲೈಂಗಿಕ ಕಿರುಕುಳದ ಆರೋಪದಲ್ಲಿ ಈ ಹಿಂದೆ ಇದೇ ಶಿಕ್ಷಕ ಜೈಲು ಶಿಕ್ಷೆ ಅನುಭವಿಸಿದ್ದ. ಆದರೂ ಶಾಲೆಯು ಈತನನ್ನು ಮರಳಿ ಕೆಲಸಕ್ಕೆ ಸೇರಿಸಿಕೊಂಡಿತ್ತು.

ಅಸ್ಸಾಂ: ಅತ್ಯಾಚಾರ ಆರೋಪಿ ಆತ್ಮಹತ್ಯೆ

ಗುವಾಹಟಿ (ಪಿಟಿಐ): ನಾಗಾಂವ್ ಜಿಲ್ಲೆಯ ಧೀಂಗ್ ಎಂಬಲ್ಲಿ 14 ವರ್ಷದ ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರ ಎಸಗಿದ ಆರೋಪ ಎದುರಿಸುತ್ತಿದ್ದ ತಫುಜಲ್ ಇಸ್ಲಾಂ ಎಂಬಾತ ಪೊಲೀಸರ ವಶದಲ್ಲಿ ಇರುವಾಗಲೇ ತಪ್ಪಿಸಿಕೊಂಡು ಕೆರೆಗೆ ಹಾರಿ ಶನಿವಾರ ಆತ್ಮಹತ್ಯೆ ಮಾಡಿಕೊಂಡಿದ್ದಾನೆ

ಬಾಲಕಿಯ ಮೇಲೆ ಮೂವರು ಸೇರಿ ಸಾಮೂಹಿಕ ಅತ್ಯಾಚಾರ ನಡೆಸಿದ್ದರು. ಉಳಿದ ಇಬ್ಬರು ಆರೋಪಿಗಳು ಕಾಣೆಯಾಗಿದ್ದಾರೆ. ಅತ್ಯಾಚಾರ ಎಸಗಿದ ಬಳಿಕ ಅರೆಪ್ರಜ್ಞಾವಸ್ಥೆಯಲ್ಲಿದ್ದ ಬಾಲಕಿಯನ್ನು ಹತ್ತಿರದ ಕೆರೆಯ ಬಳಿ ಮೂವರೂ ಬಿಸಾಡಿದ್ದರು.

ಈ ಕೆರೆಯ ಬಳಿಗೆ ಘಟನೆಯ ಮರುಸೃಷ್ಟಿ ಮಾಡಿಸಲು ಬೆಳಿಗ್ಗೆ 3.30ರ ಸುಮಾರಿಗೆ ಆರೋಪಿಯನ್ನು ಪೊಲೀಸರು ಕರೆತಂದಿದ್ದರು.

'ಈ ವೇಳೆ ಆರೋಪಿಯ ಕೈಗೆ ಕೋಳ ತೊಡಿಸಲಾಗಿತ್ತು. ಆರೋಪಿಯ ಜೊತೆಯಿದ್ದ ಪೊಲೀಸರ ವಶದಿಂದ ತಪ್ಪಿಸಿಕೊಂಡ ಆರೋಪಿಯು ಕೆರೆಗೆ ಹಾರಿದ. ತಕ್ಷಣವೇ ಎಸ್‌ಡಿಆರ್‌ಎಫ್ ತಂಡವನ್ನು ಸ್ಥಳಕ್ಕೆ ಕರೆಸಲಾಯಿತು. ಎರಡು ತಾಸಿನ ನಂತರ ಆರೋಪಿಯ ಮೃತದೇಹ ದೊರೆಯಿತು. ಒಬ್ಬ ಸಿಬ್ಬಂದಿಗೆ ಗಾಯಗಳಾಗಿದ್ದು ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ನಾಗಾಂವ್‌ನ ಎಸ್‌ಪಿ ಮಾಹಿತಿ ನೀಡಿದರು.

ಗ್ರಾಮದಿಂದ ಬಹಿಷ್ಕಾರ

ಆತ್ಮಹತ್ಯೆ ಮಾಡಿಕೊಂಡ ಆರೋಪಿ ತಫುಜಲ್ ಇಸ್ಲಾಂ ನಾಗಾಂವ್ ಜಿಲ್ಲೆಯ ಬೆರ್‌ಭೇಟಿ ಗ್ರಾಮದವನು. ಶನಿವಾರ ಬೆಳಿಗ್ಗೆ ಗ್ರಾಮಸ್ಥರು ಸಭೆ ಸೇರಿದ್ದಾರೆ. ಯುವಕನ ಕೃತ್ಯವನ್ನು ಖಂಡಿಸಿ, ಆತನ ಕುಟುಂಬವನ್ನು ಗ್ರಾಮದಿಂದ ಬಹಿಷ್ಕರಿಸಲು ನಿರ್ಧರಿಸಿದ್ದಾರೆ. ಇದೇ ವೇಳೆ, ಘಟನೆಯನ್ನು ಖಂಡಿಸಿ ಗ್ರಾಮದ ಮಸೀದಿಯಿಂದ ಗ್ರಾಮಸ್ಥರು ಮೆರವಣಿಗೆಯನ್ನೂ ನಡೆಸಿದ್ದಾರೆ.

'ನಮ್ಮ ಗ್ರಾಮದ ಸ್ಮಶಾನದಲ್ಲಿ ಈತನ ಮೃತದೇಹವನ್ನು ಹೂಳಲು ಬಿಡುವುದಿಲ್ಲ. ಆತನ 'ಜನಾಝ'ಗೂ (ಮೃತದೇಹವನ್ನು ಹೂಳುವುದಕ್ಕೂ ಮೊದಲು ಮಾಡುವ ಪ್ರಾರ್ಥನೆ) ನಾವು ಹೋಗುವುದಿಲ್ಲ. ಈ ಹುಡುಗನ ಕೃತ್ಯದಿಂದ ನಾವು ತಲೆ ತಗ್ಗಿಸುವಂತಾಗಿದೆ' ಎಂದು ಗ್ರಾಮದ ಹಿರಿಯರಾದ ಮೊಹಮ್ಮದ್ ಶಹಜಾನ್ ಅಲಿ ಚೌಧರಿ ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಶ್ರೀಲಂಕಾದಲ್ಲಿ 11 ಭಾರತೀಯ ಮೀನುಗಾರರ ಸೆರೆ

ಕೊಲಂಬೊ(ಪಿಟಿಐ): ಶ್ರೀಲಂಕಾದ ಜಲಗಡಿಯಲ್ಲಿ ಅಕ್ರಮವಾಗಿ ಮೀನುಗಾರಿಕೆ ಮಾಡುತ್ತಿದ್ದ ಆರೋಪದಡಿ, 11ಕ್ಕೂ ಹೆಚ್ಚು ಭಾರತೀಯ ಮೀನುಗಾರರನ್ನು ಶ್ರೀಲಂಕಾದ ನೌಕಾಪಡೆ ಬಂಧಿಸಿದೆ.

ಉತ್ತರ ಜಾಫ್ನಾದ ಪಾಯಿಂಟ್ ಪೆಡ್ರೊ ಕರಾವಳಿಯ ಶ್ರೀಲಂಕಾದ ಗಡಿಯಲ್ಲಿ ಇವರು ಮೀನುಗಾರಿಕೆ ಮಾಡುತ್ತಿದ್ದರು ಎಂದು ಶ್ರೀಲಂಕಾ ನೌಕಾಪಡೆಯು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದೆ.ಈ ಮೂಲಕ ಶ್ರೀಲಂಕಾದ ನೌಕಾಪಡೆಯು ಪ್ರಸಕ್ತ ವರ್ಷ ಸುಮಾರು 333 ಭಾರತೀಯ ಮೀನುಗಾರರನ್ನು ಬಂಧಿಸಿದ್ದು, 45 ದೋಣಿಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದೆ.

ನೇಪಾಳದಿಂದ ಮಹಾರಾಷ್ಟ್ರಕ್ಕೆ ಶವಗಳ ರವಾನೆ

ಕಠ್ಮಂಡು (ಪಿಟಿಐ): ನೇಪಾಳದಲ್ಲಿ ಸಂಭವಿಸಿದ್ದ ಭೀಕರ ಬಸ್ ಅಪಘಾತದಲ್ಲಿ ಮೃತಪಟ್ಟ, ಮಹಾರಾಷ್ಟ್ರದ 27 ಮಂದಿಯ ಶವಗಳ ಮರಣೋತ್ತರ ಪರೀಕ್ಷೆ ಶನಿವಾರ ನಡೆಯಿತು.

10 ದಿನ ಪ್ರವಾಸಕ್ಕಾಗಿ ನೇಪಾಳಕ್ಕೆ ತೆರಳಿದ್ದ ಮಹಾರಾಷ್ಟ್ರದ ಯಾತ್ರಾರ್ಥಿಗಳಿದ್ದ ಬಸ್ ನದಿಗೆ ಉರುಳಿಬಿದ್ದು 27 ಮಂದಿ ಮೃತಪಟ್ಟಿದ್ದರು. ಭಾರತೀಯ ವಾಯುಪಡೆಯ ವಿಶೇಷ ವಿಮಾನದಲ್ಲಿ ಮಹಾರಾಷ್ಟ್ರದ ಜಲಗಾಂವ್‌ಗೆ 25 ಮೃತರ ಶವಗಳನ್ನು ಒಯ್ಯಲಾಯಿತು ಎಂದು ಹೇಳಿಕೆ ತಿಳಿಸಿದೆ.

ಪರಿಹಾರ: ಅಪಘಾತದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ತಲಾ ₹ 2 ಲಕ್ಷ, ಗಾಯಾಳುಗಳಿಗೆ ತಲಾ ₹50 ಸಾವಿರ ಪರಿಹಾರ ಘೋಷಿಸಲಾಗಿದೆ ಎಂದು ಭಾರತದ ಪ್ರಧಾನಿಯವರ ಸಚಿವಾಲಯದ ಹೇಳಿಕೆ ನೀಡಿದೆ.

ಬಾಂಗ್ಲಾ ನಿವೃತ್ತ ನ್ಯಾಯಮೂರ್ತಿ ವಶಕ್ಕೆ

ಢಾಕಾ (ಪಿಟಿಐ): ಬಾಂಗ್ಲಾದೇಶದಿಂದ ಪಲಾಯನಕ್ಕೆ ಯತ್ನಿಸುತ್ತಿದ್ದ ನಿವೃತ್ತ ನ್ಯಾಯಮೂರ್ತಿ ಶಂಸುದ್ದೀನ್ ಚೌಧರಿ ಮಾಣಿಕ್ ಅವರನ್ನು ಭಾರತದ ಗಡಿ ಸಿಲೆಟ್ ಬಳಿ ಬಾಂಗ್ಲಾದೇಶ ಗಡಿ ಭದ್ರತಾ ಪಡೆ ವಶಕ್ಕೆ ಪಡೆದಿದೆ.

ಅವಾಮಿ ಲೀಗ್‌ನ ನಾಯಕ ಎಎಸ್‌ಎಂ ಫಿರೋಜ್ ಅವರನ್ನು ಅವರ ನಿವಾಸದಲ್ಲಿ ಬಂಧಿಸಿದ ಹಿಂದೆಯೇ ಈ ಬೆಳವಣಿಗೆ ನಡೆದಿದೆ.

ಚೀತಾಗಳನ್ನು ಅರಣ್ಯಕ್ಕೆ ಬಿಡಲು ಸಿದ್ಧತೆ

ನವದೆಹಲಿ (ಪಿಟಿಐ): ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನದ ಆವರಣದಲ್ಲಿ ನಿಗಾದಲ್ಲಿ ಇರಿಸಲಾಗಿದ್ದ ಚೀತಾಗಳನ್ನು ಶೀಘ್ರದಲ್ಲಿಯೇ ಅರಣ್ಯ ಪ್ರದೇಶಕ್ಕೆ ಬಿಡಲು ನಿರ್ಧರಿಸಲಾಗಿದೆ. ಈ ಚೀತಾಗಳನ್ನು ಆಫ್ರಿಕಾದಿಂದ ತರಲಾಗಿತ್ತು.

ಮುಂಗಾರು ಅವಧಿ ಬಳಿಕ ಈ ಚೀತಾಗಳು ಮತ್ತು ಅವುಗಳ ಮರಿಗಳನ್ನು ಅರಣ್ಯಕ್ಕೆ ಬಿಡಲು ಕೇಂದ್ರ ಸರ್ಕಾರದ ಚೀತಾ ಯೋಜನೆ ಸಮಿತಿಯು ಶುಕ್ರವಾರ ನಿರ್ಧರಿಸಿದೆ. ಸಮಿತಿಯ ಸದಸ್ಯರು ಮತ್ತು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ಅಧಿಕಾರಿಗಳು ಕುನೊ ರಾಷ್ಟ್ರೀಯ ಉದ್ಯಾನಕ್ಕೆ ಭೇಟಿ ನೀಡಿ, ಚೀತಾಗಳನ್ನು ಬಿಡುಗಡೆ ಮಾಡುವ ಬಗ್ಗೆ ಚರ್ಚಿಸಿದರು.

ಕುನೊ ಉದ್ಯಾನದಲ್ಲಿ 12 ಮರಿಗಳು ಸೇರಿ 25 ಚೀತಾಗಳಿವೆ. ನಮೀಬಿಯಾದಿಂದ 8, ದಕ್ಷಿಣ ಆಫ್ರಿಕಾದಿಂದ 12 ಚೀತಾಗಳನ್ನು ಭಾರತಕ್ಕೆ ತರಲಾಗಿತ್ತು. ಈ ಪೈಕಿ ಏಳು ಚೀತಾಗಳು ಮೃತಪಟ್ಟಿವೆ.

ಹರಿಯಾಣ: 'ಕೈ' ಏಕಾಂಗಿ ಸ್ಪರ್ಧೆ

ನವದೆಹಲಿ (ಪಿಟಿಐ): 'ಹರಿಯಾಣದಲ್ಲಿ ಕಾಂಗ್ರೆಸ್ ಪಕ್ಷ ಬಲಿಷ್ಠವಾಗಿದ್ದು, ತನ್ನ ಸ್ವಂತ ಬಲದಿಂದಲೇ ವಿಧಾನಸಭಾ ಚುನಾವಣೆ ಎದುರಿಸಲಿದೆ. ಆಮ್‌ಆದ್ಮಿ ಪಕ್ಷದೊಂದಿಗೆ ಮೈತ್ರಿ ಮಾಡಿಕೊಳ್ಳುವ ಸಾಧ್ಯತೆ ಇಲ್ಲ' ಎಂದು ಪಕ್ಷದ ಹಿರಿಯ ನಾಯಕಿ ಕುಮಾರಿ ಸೆಲ್ಜಾ ಹೇಳಿದ್ದಾರೆ.

ಪಿಟಿಐ ಸುದ್ದಿಸಂಸ್ಥೆಯ ಸಂಪಾದಕರ ಜೊತೆ ಶನಿವಾರ ಸಂವಾದ ನಡೆಸಿದ ಅವರು, 90 ಸದಸ್ಯ ಬಲವನ್ನು ಹೊಂದಿರುವ ವಿಧಾನಸಭೆ ಚುನಾವಣೆಯಲ್ಲಿ ಪಕ್ಷವು 'ಜಯಭೇರಿ' ಬಾರಿಸಲಿದೆ, ಅತಂತ್ರ ವಿಧಾನಸಭೆ ಸೃಷ್ಟಿಯಾಗುವ ಸಾಧ್ಯತೆಯೇ ಇಲ್ಲ ಎಂದು ತಿಳಿಸಿದರು.

'ತಳಮಟ್ಟದಲ್ಲಿ ಜನನಾಯಕ್ ಜನತಾ ಪಕ್ಷ(ಜೆಜೆಪಿ) ಸಂಪೂರ್ಣವಾಗಿ ನೆಲೆ ಕಳೆದುಕೊಂಡಿದ್ದು, ಮುಂದಿನ ಚುನಾವಣೆಯಲ್ಲಿ ಆ ಪಕ್ಷವು ಮತ ವಿಭಜಿಸುವ ಸಾಧ್ಯತೆಯಿಲ್ಲ' ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಸಾಲು ಸಾಲು ರಜೆ- ಮತದಾನ ಮುಂದೂಡಲು ಮನವಿ: ಚಂಡೀಗಡ ಅಕ್ಟೋಬರ್ 1ಕ್ಕೆ ನಿಗದಿಯಾಗಿರುವ ಹರಿಯಾಣ ವಿಧಾನಸಭೆಯ ಮತದಾನ ಮುಂದೂಡಬೇಕು ಎಂದು ಬಿಜೆಪಿ ರಾಜ್ಯ ಘಟಕವು ಚುನಾವಣಾ ಆಯೋಗಕ್ಕೆ ಪತ್ರ ಬರೆದಿದೆ. ಮತದಾನಕ್ಕೂ ಮುನ್ನ ಹಾಗೂ ನಂತರ ನಿರಂತರ ರಜೆಗಳಿದ್ದು, ಮತ ಚಲಾವಣೆ ಕಡಿಮೆಯಾಗುವ ಸಾಧ್ಯತೆಯಿದೆ ಎಂದು ಕಳವಳ ವ್ಯಕ್ತಪಡಿಸಿದೆ.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷರು ಈ ಸಂಬಂಧ ಚುನಾವಣಾ ಆಯೋಗಕ್ಕೆ ಈಗಾಗಲೇ ಪತ್ರ ಬರೆದಿದ್ದಾರೆ ಎಂದು ಬಿಜೆಪಿ ಮುಖಂಡರೊಬ್ಬರು ತಿಳಿಸಿದರು.

ಹರಿಯಾಣದಲ್ಲಿ ಬಿಜೆಪಿ ಒಳಗಡೆ ಕಾಲೆಳೆಯುವ ಪ್ರವೃತ್ತಿಯಿದ್ದು, ಸಾಕಷ್ಟು ಒತ್ತಡಗಳಿವೆ. ಜನರೊಂದಿಗಿನ ಸಂಪರ್ಕವನ್ನು ಪೂರ್ಣ ಕಡಿದುಕೊಂಡಿದ್ದು, ಅದಕ್ಕೆ ತಕ್ಕ ಬೆಲೆ ತೆರಲಿದೆ

ಕುಮಾರಿ ಸೆಲ್ಜಾ, ಕಾಂಗ್ರೆಸ್ ಸಂಸದೆ

ಪಿಡಿಪಿ ಪ್ರಣಾಳಿಕೆ ಬಿಡುಗಡೆ

ಶ್ರೀನಗರ: ವಿಧಾನಸಭಾ ಚುನಾವಣೆಗಾಗಿ ಪೀಪಲ್ಸ್ ಡೆಮಾಕ್ರಟಿಕ್ ಪಕ್ಷವು (ಪಿಡಿಪಿ) ಶನಿವಾರ ಪ್ರಣಾಳಿಕೆ ಬಿಡುಗಡೆ ಮಾಡಿದ್ದು, ಜಮ್ಮು–ಕಾಶ್ಮೀರಕ್ಕೆ ಮತ್ತೆ ವಿಶೇಷ ಸ್ಥಾನಮಾನ ನೀಡುವ ಭರವಸೆ ನೀಡಿದೆ.

ಪಕ್ಷದ ಪ್ರಧಾನ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಧ್ಯಕ್ಷೆ ಮೆಹಬೂಬಾ ಮುಫ್ತಿ ಮತ್ತು ಇತರ ಹಿರಿಯ ನಾಯಕರು 'ಜನರ ಆಕಾಂಕ್ಷೆ'(ಪೀಪಲ್ಸ್ ಆಸ್ಪಿರೇಷನ್) ಎಂಬ ಪ್ರಣಾಳಿಕೆ ಬಿಡುಗಡೆಗೊಳಿಸಿದರು. 'ಭಾರತ ಮತ್ತು ಪಾಕಿಸ್ತಾನದ ನಡುವಣ ರಾಜತಾಂತ್ರಿಕ ಬಾಂಧವ್ಯಕ್ಕೆ ಬೆಂಬಲ ನೀಡುವುದಾಗಿ' ತಿಳಿಸಿದೆ.

'2015ರಲ್ಲಿ ಪಿಡಿಪಿ ಪ್ರಣಾಳಿಕೆ ಓದಿದ್ದೀರಾ?'

ನವದೆಹಲಿ/ಶ್ರೀನಗರ: ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ಪಕ್ಷದೊಂದಿಗೆ ಚುನಾವಣಾ ಪೂರ್ವ ಮೈತ್ರಿ ಮಾಡಿಕೊಂಡಿರುವ ಕಾಂಗ್ರೆಸ್ ಕುರಿತು ಬಿಜೆಪಿ ಶುಕ್ರವಾರ ವಾಗ್ದಾಳಿ ನಡೆಸಿತ್ತು. ಈ ಸಂಬಂಧ ಕಾಂಗ್ರೆಸ್ ಶನಿವಾರ ತಿರುಗೇಟು ನೀಡಿದೆ.

'ಮುಫ್ತಿ ಮೊಹಮ್ಮದ್ ಸಯೀದ್ ನೇತೃತ್ವದ ಪಿಡಿಪಿ ಯೊಂದಿಗೆ 2015ರಲ್ಲಿ ಮೈತ್ರಿ ಮಾಡಿಕೊಂಡಾಗ, ಆ ಪಕ್ಷದ ಪ್ರಣಾಳಿಕೆಯನ್ನು ಓದಿದ್ದಿರೇ?' ಎಂದು ಕಾಂಗ್ರೆಸ್ ಕೇಳಿದೆ. 'ಎನ್‌ಸಿ ಯೊಂದಿಗೆ ಮೈತ್ರಿ ಮಾಡಿ ಕೊಳ್ಳುವ ಮೊದಲು ಅದರ ಪ್ರಣಾಳಿಕೆಯನ್ನು ಓದಿದ್ದೀರೇ' ಎಂದು ಕೇಂದ್ರ ಅಮಿತ್ ಶಾ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ 10 ಪ್ರಶ್ನೆ ಕೇಳಿದ್ದರು.

ಹೈಬ್ರಿಡ್ ರಾಕೆಟ್ ಉಡಾವಣೆ ಯಶಸ್ವಿ

ಚೆನ್ನೈ (ಪಿಟಿಐ): ತಮಿಳುನಾಡಿನ ನವೋದ್ಯಮ ಕಂಪನಿ 'ಸ್ಪೇಸ್ ಝೋನ್ ಇಂಡಿಯಾ', ಮರುಬಳಕೆ ಮಾಡಬಹುದಾದ ದೇಶದ ಮೊದಲ ಹೈಬ್ರಿಡ್ ರಾಕೆಟ್ ಅನ್ನು ಶನಿವಾರ ಯಶಸ್ವಿಯಾಗಿ ಉಡಾವಣೆ ಮಾಡಿತು.

ಜಾಗತಿಕ ತಾಪಮಾನ ಏರಿಕೆ ಮತ್ತು ಹವಾಮಾನ ಬದಲಾವಣೆ ಕುರಿತ ಅಧ್ಯಯನದ ಉದ್ದೇಶದಿಂದ 'ರುಮಿ-2024' ಹೆಸರಿನ ರಾಕೆಟ್ ಅಭಿವೃದ್ಧಿಪಡಿಸಲಾಗಿದೆ. ಸ್ಪೇಸ್ ಝೋನ್ ಇಂಡಿಯಾ ಕಂಪನಿಯು ಕಳೆದ ಎರಡು ವರ್ಷಗಳಿಂದ 'ಮಿಷನ್ ರುಮಿ' ಹೆಸರಿನಲ್ಲಿ ಹಲವು ಸಂಶೋಧನೆಗಳನ್ನು ನಡೆಸುತ್ತಾ ಬಂದಿದೆ.

ಚೆನ್ನೈ ಸಮೀಪದ ತಿರುವಿಡಂದಾಯ್‌ನಲ್ಲಿ ಮೊಬೈಲ್ ಲಾಂಚರ್ ಬಳಸಿ ರಾಕೆಟ್‌ನ ಉಡಾವಣೆ ನಡೆದಿದೆ. ಹೈಬ್ರಿಡ್ ರಾಕೆಟ್‌ವೊಂದನ್ನು ಮೊಬೈಲ್ ಲಾಂಚರ್ ಬಳಸಿ ಉಡಾವಣೆ ನಡೆಸಿದ್ದು ವಿಶ್ವದಲ್ಲಿ ಇದೇ ಮೊದಲು ಎಂದು ಕಂಪನಿ ಹೇಳಿದೆ. ಶನಿವಾರ ಉಡಾವಣೆಯಾದ ರಾಕೆಟ್, ಮೂರು ಕ್ಯೂಬ್ ಉಪಗ್ರಹಗಳು ಮತ್ತು 50 ಸಣ್ಣ ಉಪಗ್ರಹಗಳನ್ನು ಹೊತ್ತೊಯ್ದಿದೆ. ಈ ಉಪಗ್ರಹಗಳು ಕಾಸ್ಮಿಕ್ ಕಿರಣಗಳ ತೀವ್ರತೆ, ನೇರಳಾತೀತ ಕಿರಣಗಳು, ಗಾಳಿಯ ಗುಣಮಟ್ಟ ಸೇರಿದಂತೆ ವಾತಾವರಣದ ಪರಿಸ್ಥಿತಿಗಳ ಬಗ್ಗೆ ಅಧ್ಯಯನ ನಡೆಸಲಿವೆ.

'3.5 ಮೀ. ಎತ್ತರದ ರಾಕೆಟ್ ಅನ್ನು ಬೆಳಿಗ್ಗೆ 7.25ಕ್ಕೆ ಉಡಾವಣೆ ಮಾಡಲಾಯಿತು. ಬೆಳಿಗ್ಗೆ 7ಕ್ಕೆ ಉಡಾವಣೆಯಾಗಬೇಕಿದ್ದ ರಾಕೆಟ್‌ನ ಉಡಾವಣೆ ತಾಂತ್ರಿಕ ಕಾರಣಗಳಿಂದ ಅಲ್ಪ ತಡವಾಯಿತು' ಎಂದು ಸ್ಪೇಸ್ ಝೋನ್ ಇಂಡಿಯಾದ ಸ್ಥಾಪಕ ಸಿಇಒ ಆನಂದ್ ಮೇಗಲಿಂಗಂ ಹೇಳಿದರು. ತಮ್ಮ ಮಗ ರುಮಿತ್ರನ್ ಅವರ ಹೆಸರನ್ನೇ ರಾಕೆಟ್‌ಗೆ (ರುಮಿ) ಇಡಲಾಗಿದೆ ಎಂದು ಅವರು ತಿಳಿಸಿದರು. 'ಮರುಬಳಕೆ ಮಾಡಬಹುದಾದ ಹೈಬ್ರಿಡ್ ರಾಕೆಟ್ ಅನ್ನು ರೂಪಿಸುವ ಮೂಲಕ, ನಾವು ಬಾಹ್ಯಾಕಾಶ ಸಂಶೋಧನಾ ಕ್ಷೇತ್ರದಲ್ಲಿನ ಆರ್ಥಿಕ ಹೊರೆಯನ್ನು ತಗ್ಗಿಸುವ ಜತೆಯಲ್ಲೇ ಪರಿಸರದ ಮೇಲಾಗುವ ಪರಿಣಾಮವನ್ನೂ ಕಡಿಮೆ ಮಾಡುತ್ತಿದ್ದೇವೆ' ಎಂದರು.

ಪ್ರಧಾನಿ ಬಯಸಿದಾಗ ಭಾರತ ಭೇಟಿಗೆ ಸಿದ್ದ –ಉಕ್ರೇನ್ ಅಧ್ಯಕ್ಷ

'ಬಿಕ್ಕಟ್ಟು ನಿವಾರಣೆ: ಭಾರತದ್ದು ಮುಖ್ಯ ಪಾತ್ರ'

ಕೀವ್ (ಪಿಟಿಐ): 'ರಷ್ಯಾ- ಉಕ್ರೇನ್ ಬಿಕ್ಕಟ್ಟು ಬಗೆಹರಿಸಿ ಶಾಂತಿ ಸ್ಥಾಪಿಸುವ ಜಾಗತಿಕ ರಾಜತಾಂತ್ರಿಕ ಪ್ರಯತ್ನದಲ್ಲಿ ಭಾರತದ ಪಾತ್ರ ಮಹತ್ವದ್ದಾಗಿದೆ' ಎಂದು ಉಕ್ರೇನ್‌ನ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ಅಭಿಪ್ರಾಯ ಪಟ್ಟಿದ್ದಾರೆ.

'ಶಂಕಾಸ್ಪದ ರಾಷ್ಟ್ರಗಳ ವರ್ತುಲದ ಈ ಜಗತ್ತಿನಲ್ಲಿ ಭಾರತವು ಬೃಹತ್ ಪ್ರಭಾವಿ ರಾಷ್ಟ್ರವಾಗಿದೆ. ಯುದ್ಧ ಮತ್ತು ರಷ್ಯಾ ಕುರಿತು ಭಾರತ ತನ್ನ ದೃಷ್ಟಿಕೋನವನ್ನು ಬದಲಿಸಿದಲ್ಲಿ, ನಾವು ಈ ಯುದ್ಧ ನಿಲ್ಲಿಸಬಹುದು. ಆಗ ಪುಟಿನ್ ಕೂಡಾ ಯುದ್ಧ ನಿಲ್ಲಿಸಲು ಬಯಸುತ್ತಾರೆ' ಎಂದು ಝೆಲೆನ್ ಸ್ಕಿ ಪ್ರತಿಪಾದಿಸಿದರು.

ಇಲ್ಲಿ, ಭಾರತದ ಮಾಧ್ಯಮ ಪ್ರತಿನಿಧಿಗಳ ಜೊತೆಗೆ ಸಂವಾದ ನಡೆಸಿದ ಅವರು, 'ಉಕ್ರೇನ್‌ಗೆ ಮೋದಿ ಅವರ ಭೇಟಿ ಚಾರಿತ್ರಿಕವಾದುದು. ರಷ್ಯಾ ಮತ್ತು ಅಮೆರಿಕ ನಡುವೆ ಸಮತೋಲನ ಸಾಧಿಸುವ ಬದಲು ನಿಮ್ಮ ರಾಷ್ಟ್ರವು ನಮ್ಮ ಜೊತೆಗೆ ಇರಬೇಕು ಎಂದೇ ನಾನು ಬಯಸುತ್ತೇನೆ' ಎಂದು ಸ್ಪಷ್ಟಪಡಿಸಿದರು.

'ರಾಜತಾಂತ್ರಿಕ ಚರ್ಚೆ ಒಮ್ಮೆ ಆರಂಭವಾದರೆ ಮುಂದುವರಿಯಲಿದೆ. ಸಮಯ ವ್ಯರ್ಥವಾಗದು. ಮತ್ತೆ, ಮತ್ತೆ ಭೇಟಿ ಮಾಡುತ್ತೇವೆ. ಇದು, ಭಾರತದ ಐತಿಹಾಸಿಕ ಆಯ್ಕೆಯ ಪ್ರಶ್ನೆಯಲ್ಲ. ನಿಮ್ಮ ದೇಶ ರಾಜತಾಂತ್ರಿಕ ಪ್ರಭಾವ ಹೊಂದಿರಬಹುದು. ನಿಮ್ಮ ಪ್ರಧಾನಿ, ನಿಮ್ಮ ಸರ್ಕಾರ ಬಯಸಿದ ಸಂದರ್ಭದಲ್ಲಿ ನಾನು ನಿಮ್ಮ ದೇಶಕ್ಕೆ ಭೇಟಿ ನೀಡಲು ಸಿದ್ಧನಿದ್ದೇನೆ ಎಂದು ಅವರು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಆದರೆ, ಗಡಿ ಕುರಿತ ನಮ್ಮ ನಿಲುವಿನಲ್ಲಿ ಬದಲಾವಣೆ ಇಲ್ಲ. ನಮ್ಮ ಗಡಿ, ನಮ್ಮ ಸಿದ್ಧಾಂತ, ಸ್ವಾತಂತ್ರ್ಯ ಹಾಗೂ ಪ್ರಜಾಪ್ರಭುತ್ವ ಕುರಿತ ನಿಲುವಿನಲ್ಲಿ ಬದಲಾವಣೆ ಇಲ್ಲ ಎಂದು ಸ್ಪಷ್ಟಪಡಿಸಿದರು.

ಉಕ್ರೇನ್‌ಗೆ ಭೇಟಿ ವೇಳೆ ಪ್ರಧಾನಿ ಮೋದಿ, ಶಾಂತಿ ಸ್ಥಾಪನೆಯ ಕ್ರಮವಾಗಿ ಸಮಯ ವ್ಯರ್ಥ ಮಾಡದೇ ಉಕ್ರೇನ್ ಮತ್ತು ರಷ್ಯಾ ಅಧ್ಯಕ್ಷರು ಪರಸ್ಪರ ಕುಳಿತು ಚರ್ಚಿಸಬೇಕು ಎಂದು ಹೇಳಿದ್ದರು.



ಉಕ್ರೇನ್ ಪ್ರವಾಸದ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು, ರಾಜಧಾನಿ ಕೀವ್‌ನ ಓರಿಯಂಟಲ್ ಸ್ಟಡೀಸ್ ಶಾಲೆಯ, ಹಿಂದಿ ಭಾಷೆ ಕಲಿಯುತ್ತಿರುವ ವಿದ್ಯಾರ್ಥಿಗಳ ಜೊತೆಗೆ ಸಂವಾದ ನಡೆಸಿದರು —ಪಿಟಿಐ ಚಿತ್ರ

ಪ್ರಧಾನಿ ಮೋದಿ ಅವರಿಗೆ ಶಾಂತಿ ಸ್ಥಾಪನೆ ಬೇಕಾಗಿದೆ. ಸಮಸ್ಯೆ ಏನೆಂದರೆ ಪುಟಿನ್ ಅವರಿಗೆ ಇದು ಬೇಡವಾಗಿದೆ. ಭೇಟಿಯಾದಾಗ ಏನು ಚರ್ಚಿಸಿದರೋ ಗೊತ್ತಿಲ್ಲ

ವೊಲೊಡಿಮಿರ್ ಝೆಲೆನ್‌ಸ್ಕಿ
ಉಕ್ರೇನ್ ಅಧ್ಯಕ್ಷ

ಭಾರತಕ್ಕೆ ಭೇಟಿ ನೀಡುವಂತೆ ಝೆಲೆನ್‌ಸ್ಕಿ ಅವರಿಗೆ ಪ್ರಧಾನಿ ಆಹ್ವಾನಿಸಿದ್ದಾರೆ. ಆಹ್ವಾನ ನೀಡುವುದು ಸಹಜ. ಪರಸ್ಪರ ಅನುಕೂಲಕರ ವೇಳೆಯಲ್ಲಿ ಭೇಟಿ ನೀಡಬಹುದು

ಎಸ್.ಜೈಶಂಕರ್
ವಿದೇಶಾಂಗ ವ್ಯವಹಾರಗಳ ಸಚಿವ

ಭಾರತದಲ್ಲಿ ಶಾಂತಿ ಶೃಂಗಸಭೆ ಝೆಲೆನ್‌ಸ್ಕಿ ಸಲಹೆ

'ಉಕ್ರೇನ್ ಶಾಂತಿ ಕುರಿತ ದ್ವಿತೀಯ ಶೃಂಗಸಭೆ ಆಯೋಜಿಸಲು ಸೂಕ್ತವಾದ ದಕ್ಷಿಣದ ರಾಷ್ಟ್ರಗಳಲ್ಲಿ ಭಾರತವೂ ಒಂದು' ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹೇಳಿದ್ದಾರೆ.

ಉಕ್ರೇನ್‌ಗೆ ಭೇಟಿ ನೀಡಿದ್ದ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರ ಜೊತೆಗೂ ಈ ಅಭಿಪ್ರಾಯ ಹಂಚಿಕೊಂಡಿದ್ದೇನೆ ಎಂದರು.

ಆದರೆ, ಇದೇ ವೇಳೆ ಪ್ರಥಮ ಶಾಂತಿ ಶೃಂಗದ ಘೋಷಣೆಗೆ ಸಹಮತ ವ್ಯಕ್ತಪಡಿಸದಿರುವ ರಾಷ್ಟ್ರದಲ್ಲಿ ಶೃಂಗಸಭೆ ಆಯೋಜನೆ ಸಾಧ್ಯವಿಲ್ಲ ಎಂದು ಝೆಲೆನ್ ಸ್ಕಿ ಪ್ರತಿಪಾದಿಸಿದ್ದಾರೆ.

ಭಾರತ ಮೊದಲ ಶಾಂತಿ ಶೃಂಗಸಭೆಯಲ್ಲಿ ಪಾಲ್ಗೊಂಡಿತ್ತು. ಆದರೆ, ಘೋಷಣೆಗೆ ಸಹಮತ ವ್ಯಕ್ತಪಡಿಸಿರಲಿಲ್ಲ. ಬಿಕ್ಕಟ್ಟು ಬಗೆಹರಿಸಲು ಎಲ್ಲ ಭಾಗಿದಾರರ ಜೊತೆ ಸಂಪರ್ಕದಲ್ಲಿರುವುದಾಗಿ ಪ್ರತಿಪಾದಿಸಿತ್ತು.

ವಿಮೆಗಾಗಿ 'ಸತ್ತವನ' ಸೆರೆ

ಪ್ರಜಾವಾಣಿ ವಾರ್ತೆ




ಮುನಿಶ್ವಾಮಿಗೌಡ ಶಿಲ್ಪಾರಾಣಿ

ಹಾಸನ: ತನ್ನನ್ನೇ ಹೋಲುವ ವ್ಯಕ್ತಿಯನ್ನು ಕೊಲೆ ಮಾಡಿ, ತಾನೇ ಮೃತಪಟ್ಟಂತೆ ಬಿಂಬಿಸಿದ್ದ ಆರೋಪಿ, ಹೊಸಕೋಟೆ ತಾಲ್ಲೂಕಿನ ಚಿಕ್ಕಕೋಲಿಗ ಗ್ರಾಮದ ಮುನಿಶ್ವಾಮಿಗೌಡ ಪೊಲೀಸರಿಗೆ ಸಿಕ್ಕಿ ಬಿದ್ದಿದ್ದು, ಸಂಚಿಗೆ ಸಹಕರಿಸಿದ ಆತನ ಪತ್ನಿ ಶಿಲ್ಪಾರಾಣಿಯನ್ನೂ ಬಂಧಿಸಲಾಗಿದೆ.

'ಜೀವವಿಮೆ ಹಣ ಪಡೆಯಲು ಆರೋಪಿಗಳು ಸಂಚು ರೂಪಿಸಿದ್ದರು' ಎಂಬುದು ವಿಚಾರಣೆ ವೇಳೆ ಗೊತ್ತಾಗಿದೆ.

ವಿವರ: ಆ.12ರಂದು ರಾತ್ರಿ ಗಂಡಸಿ ಬಳಿಯ ಗೊಲ್ಲರಹೊಸಳ್ಳಿ ಗೇಟ್ ಬಳಿ ಅಪಘಾತ ನಡೆದಿತ್ತು. ಕಾರಿನ ಚಕ್ರ ಬದಲಿಸುತ್ತಿದ್ದಾಗ ಲಾರಿ ಹರಿದು ವ್ಯಕ್ತಿಯೊಬ್ಬರು ಮೃತಪಟ್ಟಿರುವುದಾಗಿ ಗಂಡಸಿ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ನಂತರ, ಮೃತದೇಹ ತನ್ನ ಪತಿಯದು ಎಂದು ಆರೋಪಿ ಪತ್ನಿ ಹೇಳಿದ್ದರು. ಅಂತ್ಯಸಂಸ್ಕಾರವೂ ನಡೆದಿತ್ತು. ಆದರೆ, ಮೃತದೇಹದ ಕುತ್ತಿಗೆ ಮೇಲೆ ಗಾಯದ ಗುರುತು ಇದ್ದುದರಿಂದ ಪೊಲೀಸರು ತನಿಖೆ ಆರಂಭಿಸಿದ್ದರು. ಆರೋಪಿ ತಲೆಮರೆಸಿ ಕೊಂಡಿದ್ದ. ನಂತರ ಆತನೇ ತನ್ನ ಸಂಬಂಧಿ, ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ಸರ್ಕಲ್ ಇನ್‌ಸ್ಪೆಕ್ಟರ್ ಶ್ರೀನಿವಾಸ್ ಅವರನ್ನು ಭೇಟಿ ಮಾಡಿ, 'ಅಪಘಾತದಲ್ಲಿ ಬೇರೊಬ್ಬ ವ್ಯಕ್ತಿ ಮೃತಪಟ್ಟಿದ್ದ' ಎಂದು ತಿಳಿಸಿದ್ದ. ಅನುಮಾನಗೊಂಡ ಅಧಿಕಾರಿಯು, ಆರೋಪಿಯನ್ನು ಗಂಡಸಿ ಪೊಲೀಸರಿಗೆ ಒಪ್ಪಿಸಿದ್ದರು.

'ಆರೋಪಿ ಪತ್ನಿಯ ವಿಚಾರಣೆ ನಡೆಸಿದಾಗ ಆಕೆ ತನಗೇನೂ ಗೊತ್ತಿಲ್ಲವೆಂಬಂತೆ ನಟಿಸಿದ್ದರು. ಮುನಿಶ್ವಾಮಿಗೌಡನನ್ನು ಆಕೆಯ ಎದುರು ಹಾಜರುಪಡಿಸಿದಾಗ ಎಲ್ಲ ವಿವರ ಹೊರಬಿದ್ದವು. ಟಯರ್ ಮಾರಾಟ ಮಳಿಗೆ ಹೊಂದಿರುವ ಆರೋಪಿಯು ತಾನು ಮಾಡಿದ್ದ ಸಾಲ ತೀರಿಸಲೆಂದೇ ಪತ್ನಿ ಜೊತೆ ಸೇರಿ ವಂಚನೆಯ ಯೋಜನೆ ರೂಪಿಸಿದ್ದ' ಎಂದು ಪೊಲೀಸರು ತಿಳಿಸಿದರು.

'ಆರೋಪಿಯು ತನ್ನನ್ನೇ ಹೋಲುವ ವ್ಯಕ್ತಿಯೊಬ್ಬನನ್ನು ವಿಶ್ವಾಸಕ್ಕೆ ಪಡೆದು, ಕಾರಿನಲ್ಲಿ ಕರೆತಂದಿದ್ದ. ಕಾರಿನ ಟಯರ್ ಬದಲಿಸಲು ಹೇಳಿ, ಆಗ ಆ ವ್ಯಕ್ತಿಯ ಕುತ್ತಿಗೆಗೆ ಹಗ್ಗ ಹಾಕಿ ರಸ್ತೆಗೆ ಎಳೆದಿದ್ದ. ನಂತರ ಲಾರಿಯನ್ನು ಆತನ ಮೇಲೆ ಹರಿಸಿದ್ದ. ನಂತರ ಅಪಘಾತದಲ್ಲಿ ತಾನೇ ಮೃತಪಟ್ಟಿರುವಂತೆ ಬಿಂಬಿಸಿದ್ದ. ಈಗ, 'ನಿಜಕ್ಕೂ ಕೊಲೆಯಾದ ವ್ಯಕ್ತಿ ಯಾರು' ಎಂಬ ಕುರಿತು ಹಾಗೂ ಆರೋಪಿಗಳು ಪಡೆಯಲು ಬಯಸಿದ್ದ ವಿಮೆಯ ಮಾಹಿತಿಯ ತನಿಖೆ ನಡೆದಿದೆ.

'ಅಕ್ಕ' ಸಮ್ಮೇಳನಕ್ಕೆ ಅಧಿಕಾರಿಗಳ ದಂಡು

ಸಚಿವರು ಸೇರಿ 40ಕ್ಕೂ ಹೆಚ್ಚು ಜನರ ಪ್ರವಾಸ • ಪಟ್ಟಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅನುಮೋದನೆ

• ರಾಜೇಶ್ ರೈ ಚಟ್ಲ



ಬೆಂಗಳೂರು: ಅಮೆರಿಕದ ವರ್ಜೀನಿಯಾ ರಾಜ್ಯದ ರಿಚ್‌ಮಂಡ್ ನಗರದಲ್ಲಿ 'ಅಮೆರಿಕ ಕನ್ನಡ ಕೂಟಗಳ ಆಗರ (ಅಕ್ಕ)' ಏರ್ಪಡಿಸಿರುವ 12ನೇ 'ಅಕ್ಕ' ವಿಶ್ವ ಕನ್ನಡ ಸಮ್ಮೇಳನದಲ್ಲಿ ಭಾಗವಹಿಸಲು ಸಚಿವರು ಮತ್ತು ಅಧಿಕಾರಿಗಳ 40ಕ್ಕೂ ಹೆಚ್ಚು ಮಂದಿಯ ದಂಡು ಅಣಿಯಾಗಿದೆ.

ಇದೇ 30, 31 ಮತ್ತು ಸೆ. 1ರಂದು ಸಮ್ಮೇಳನ ನಡೆಯಲಿದೆ. ಸಚಿವರು ಮತ್ತು ಅಧಿಕಾರಿಗಳ ಅಮೆರಿಕ ಪ್ರವಾಸದ ಪ್ರಸ್ತಾವಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅನುಮೋದನೆ ನೀಡಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ, ಕಾನೂನು ಸಚಿವ ಎಚ್‌.ಕೆ. ಪಾಟೀಲ, ಸಮಾಜ ಕಲ್ಯಾಣ ಸಚಿವ ಎಚ್‌.ಸಿ. ಮಹದೇವಪ್ಪ, ಕೃಷಿ ಸಚಿವ ಎನ್‌. ಚಲುವರಾಯಸ್ವಾಮಿ, ವಿವಿಧ ನಿಗಮಗಳ ಅಧ್ಯಕ್ಷರು ಸಮ್ಮೇಳನಕ್ಕೆ ತೆರಳಲು ತಯಾರಿ ನಡೆಸುತ್ತಿದ್ದಾರೆ. 'ಅಕ್ಕ'ದ ಆಹ್ವಾನದ ಮೇರೆಗೆ ಸಮಾಜ ಕಲ್ಯಾಣ ಇಲಾಖೆಯು ದಲಿತ ಸಮುದಾಯದ 17 ಕಲಾವಿದರನ್ನೂ ಕರೆದೊಯ್ಯಲಿದೆ.

ತಂಗಡಗಿ ಜೊತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಎಂ.ಎನ್‌. ಅಜಯ್ ನಾಗಭೂಷಣ್, ಸಚಿವರ ಆಪ್ತ ಕಾರ್ಯದರ್ಶಿ ಜಿ.ಎಸ್‌. ಮಧುಸೂದನ ರೆಡ್ಡಿ, ಮುಖ್ಯಮಂತ್ರಿಯ ಜಂಟಿ ಕಾರ್ಯದರ್ಶಿ ಬಿ. ಶಿವಸ್ವಾಮಿ, ಮುಖ್ಯಮಂತ್ರಿಯ ಆಪ್ತ ಕಾರ್ಯದರ್ಶಿ ವೆಂಕಟೇಶಯ್ಯ ಮತ್ತು 'ಗ್ಯಾರಂಟಿ'ಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್ ತೆರಳಲಿದ್ದಾರೆ.

ಎಚ್‌.ಸಿ. ಮಹದೇವಪ್ಪ ನೇತೃತ್ವದ ತಂಡದಲ್ಲಿ ಅಂಬೇಡ್ಕರ್ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಪ್ರವೀಣ್ ಬಾಗೇವಾಡಿ, ಲಿಡ್ಕರ್ ವ್ಯವಸ್ಥಾಪಕ ನಿರ್ದೇಶಕರಾದ ವಸುಂಧರಾ, ಸಚಿವರ ಆಪ್ತ ಸಹಾಯಕ ಗೋಪಾಲ್, ಜಂಟಿ ನಿರ್ದೇಶಕ ದೇವರಾಜ್ ಇದ್ದಾರೆ.

ಚಲುವರಾಯಸ್ವಾಮಿ ನೇತೃತ್ವದ ತಂಡವು ಅಮೆರಿಕದ ಅಯೋವಾ ರಾಜ್ಯದ ಸೆಂಟ್ ಬೂನ್ ನಗರದಲ್ಲಿ ಇದೇ 27ರಿಂದ 29ರವರೆಗೆ ನಡೆಯಲಿರುವ 'ಫಾರ್ಮ್ ಪ್ರೋಗ್ರೆಸ್ ಶೋ- 2024' ಮತ್ತು ಅಕ್ಕ ಸಮ್ಮೇಳನದಲ್ಲಿ ಭಾಗವಹಿಸಲಿದೆ.

ಕೃಷಿ ಇಲಾಖೆ ಕಾರ್ಯದರ್ಶಿ ಅನ್ಬುಕುಮಾರ್, ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮದ (ಕೆಪೆಕ್) ಅಧ್ಯಕ್ಷ ಬಿ.ಎಚ್‌. ಹರೀಶ, ವ್ಯವಸ್ಥಾಪಕ ನಿರ್ದೇಶಕ ಎಂ.ಎಚ್‌. ಬಂಥನಾಳ, ಹೆಚ್ಚುವರಿ ಕೃಷಿ ನಿರ್ದೇಶಕ ವೆಂಕಟರಮಣ ರೆಡ್ಡಿ, ಸಚಿವರ ಆಪ್ತ ಕಾರ್ಯದರ್ಶಿ ಎಚ್‌.ಜಿ. ಪ್ರಭಾಕರ ತಂಡದಲ್ಲಿದ್ದಾರೆ. ತಂಡದ ಪ್ರವಾಸಕ್ಕೆ ಸುಮಾರು ₹ 85.15 ಲಕ್ಷ ವೆಚ್ಚವಾಗಲಿದೆ ಎಂದೂ ಪ್ರಸ್ತಾವದಲ್ಲಿದೆ. ಇಲಾಖೆಯ ಮಳಿಗೆ ತೆರೆಯಲು ₹25 ಲಕ್ಷದ ಪ್ರಾಯೋಕತ್ವಕ್ಕೂ ಅನುಮೋದನೆ ನೀಡಲಾಗಿದೆ.

ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷ ಅಪ್ಪಾಜಿ ನಾಡಗೌಡ ನೇತೃತ್ವದ ತಂಡದಲ್ಲಿ ವ್ಯವಸ್ಥಾಪಕ ನಿರ್ದೇಶಕ ಪಿ.ಕೆ. ಎಂ. ಪ್ರಶಾಂತ್, ಮಹಾ ಪ್ರಬಂಧಕ (ಹಣಕಾಸು ಮತ್ತು ಮಾರುಕಟ್ಟೆ) ಕೆ.ಎಲ್‌. ರವೀಶ, ಸಹಾಯಕ ಮಹಾ ಪ್ರಬಂಧಕ (ಮಾರುಕಟ್ಟೆ) ಬಿ.ಎನ್‌. ಅರವಿಂದ್ ಇದ್ದಾರೆ. ಈ ತಂಡ ಇದೇ 27ರಿಂದ ಸೆ. 5ರವರೆಗಿನ ಅಮೆರಿಕ ಪ್ರವಾಸ ಕೈಗೊಳ್ಳಲಿದೆ ಎಂದು ಪ್ರಸ್ತಾವದಲ್ಲಿ ತಿಳಿಸಲಾಗಿದೆ.

ಸ್ಯಾನ್ ಫ್ರಾನ್ಸಿಸ್ಕೊ, ನ್ಯೂಯಾರ್ಕ್‌ನಲ್ಲಿ ರೋಡ್ ಶೋ

ಎಚ್‌.ಕೆ. ಪಾಟೀಲ ನೇತೃತ್ವದಲ್ಲಿ ಒಂಬತ್ತು ಮಂದಿ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ. ಪ್ರವಾಸೋದ್ಯಮ ಇಲಾಖೆಯಿಂದ ಸೆ. 3ರಂದು ನ್ಯೂಯಾರ್ಕ್‌ನಲ್ಲಿ, ಸೆ. 5ರಂದು ಸ್ಯಾನ್ ಫ್ರಾನ್ಸಿಸ್ಕೊದಲ್ಲಿ ಅಂತರ ರಾಷ್ಟ್ರೀಯ ರೋಡ್ ಶೋ ನಡೆಯಲಿದೆ.

ಪ್ರವಾಸೋದ್ಯಮ ನಿಗಮದ ಅಧ್ಯಕ್ಷ ಎಂ. ಶ್ರೀನಿವಾಸ್, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಆಯೂಬ್ ಖಾನ್, ಪ್ರವಾಸೋದ್ಯಮ ಇಲಾಖೆಯ ಕಾರ್ಯದರ್ಶಿ ಸಲ್ಮಾ ಕೆ.ಫಾಹಿಮ, ನಿರ್ದೇಶಕ ಕೆ.ವಿ. ರಾಜೇಂದ್ರ, ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ಸಂಸ್ಥೆಯ ಅಧ್ಯಕ್ಷ ಅನಿಲ್ ಚಿಕ್ಕಮಾದು, ವ್ಯವಸ್ಥಾಪಕ ನಿರ್ದೇಶಕ ಪ್ರಶಾಂತ್ ಸಂಕಿನ್‌ಮಠ, ಸಚಿವರ ಆಪ್ತ ಕಾರ್ಯದರ್ಶಿ ಶಿವಪುತ್ರ ಬಾಬುರಾವ್, ಪುರಾತತ್ವ, ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ ಆಯುಕ್ತ ಎ.ದೇವರಾಜು ಹೆಸರು ಪಟ್ಟಿಯಲ್ಲಿದೆ.

ದಲಿತ ಕಲಾವಿದರಿಗೆ ಎಸ್‌ಸಿಎಸ್‌ಪಿ, ಟಿಎಸ್‌ಪಿ ಹಣ

ದಲಿತ ಸಮುದಾಯದ 17 ಕಲಾವಿದರ ಪ್ರಯಾಣ, ವೀಸಾ ನವೀಕರಣ, ಪೋಷಾಕು ಇತರೆ ವೆಚ್ಚಗಳಿಗೆ ಎಸ್‌ಸಿಎಸ್‌ಪಿ, ಟಿಎಸ್‌ಪಿ ಯೋಜನೆಯಡಿ ಹಣ ನೀಡಲು ಆದೇಶಿಸಲಾಗಿದೆ.

ತಲಾ ₹ 2.55 ಲಕ್ಷದಂತೆ ಒಟ್ಟು ₹ 43.55 ಲಕ್ಷವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ, 2024–25ರಲ್ಲಿ ಬಳಕೆಯಾಗದ ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನದಿಂದ ಭರಿಸಲು ಆ.20ರಂದೇ ಆದೇಶ ಹೊರಡಿಸಿದೆ.

'ಕಾಮ್ರೇಡ್ ಸೂರಿ 100' ಕಾರ್ಯಕ್ರಮದಲ್ಲಿ ಸಿ.ಎಂ ಸಿದ್ದರಾಮಯ್ಯ ಹೇಳಿಕೆ

'ಕಾರ್ಮಿಕ ಹೋರಾಟದ ಮ್ಯೂಸಿಯಂ ರಚನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ಮಿಕ ಚಳವಳಿಯ ಹೋರಾಟವನ್ನು ನೆನಪಿಸುವ ಮ್ಯೂಸಿಯಂ ರಚನೆಗೆ ಕ್ರಮ ಕೈಗೊಳ್ಳ- ಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಲ್ಲಿ ಶನಿವಾರ ಭರವಸೆ ನೀಡಿದರು.

ಕಾಮ್ರೇಡ್ ಸೂರ್ಯನಾರಾಯಣ ರಾವ್ ಅವರ ಜನ್ಮ ಶತಮಾನೋತ್ಸವ– 'ಕಾಮ್ರೇಡ್ ಸೂರಿ 100' ಪ್ರಯುಕ್ತ ನಡೆದ 'ಕರ್ನಾಟಕದ ಅಭಿವೃದ್ಧಿ- ಯಲ್ಲಿ ಕಾರ್ಮಿಕ ಚಳವಳಿಯ ಪಾತ್ರ' ರಾಜ್ಯಮಟ್ಟದ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

ದುಡಿಯುವ ವರ್ಗದ ಸಾಧನೆಗಳು ಬಿಂಬಿಸುವ ಮ್ಯೂಸಿಯಂ ಬೇಕು ಎಂಬ ಬೇಡಿಕೆಗೆ ಸಕಾರಾತ್ಮಕವಾಗಿ ಸ್ಪಂದಿಸ ಲಾಗುವುದು' ಎಂದರು.

'ಕಾಮ್ರೇಡ್ ಸೂರ್ಯನಾರಾಯಣ ಮತ್ತು ನಾನು ಒಟ್ಟಿಗೆ ವಿಧಾನಸಭೆಗೆ ಪ್ರವೇಶಿಸಿದವರು. ಅವರು ಪೂರ್ಣ ತಯಾರಿಯೊಂದಿಗೆ ಸದನಕ್ಕೆ ಬಂದು ಕಾರ್ಮಿಕರ ಕಲ್ಯಾಣ ಮಾತ್ರವಲ್ಲ; ಕರ್ನಾಟಕದ ಅಭಿವೃದ್ಧಿಯ ಬಗ್ಗೆ ಒಳನೋಟದಿಂದ ಮಾತನಾಡುತ್ತಿದ್ದರು. ಜನರ ಹಿತಕ್ಕಾಗಿ ಬದ್ಧತೆ ಮತ್ತು ಕಾಳಜಿಯಿಂದ ಸದನದ ಒಳಗೂ ಹೊರಗೂ ಹೋರಾಟ ಮಾಡುತ್ತಿದ್ದರು' ಎಂದು ನೆನಪು ಮಾಡಿಕೊಂಡರು.

ಅಧ್ಯಕ್ಷತೆ ವಹಿಸಿ ಸಿಐಟಿಯು ರಾಜ್ಯ ಉಪಾಧ್ಯಕ್ಷ ವಿ.ಜೆ.ಕೆ.ನಾಯರ್, 'ಕಾರ್ಮಿಕರ ಒಪ್ಪಿಗೆ ಪಡೆಯದೇ ಮುಖಂಡರು ಒಪ್ಪಂದ ಮಾಡಿಕೊಳ್ಳುತ್ತಿದ್ದರು. ಕಾಮ್ರೇಡ್ ಸೂರಿ ಅವರು ಈ ವ್ಯವಸ್ಥೆಯನ್ನು ತಪ್ಪಿಸಿದರು. ಕಾರ್ಮಿಕರ ಒಪ್ಪಿಗೆ ಪಡೆದೇ ಮುಂದುವರಿಯುವ ಕ್ರಮವನ್ನು ರೂಢಿಗೆ ತಂದರು' ಎಂದು ಸ್ಮರಿಸಿದರು.

ನಿವೃತ್ತ ಪ್ರಾಧ್ಯಾಪಕಿ ಜಾನಕಿ ನಾಯರ್ ಮಾತನಾಡಿ, 'ದುಡಿಮೆ ಅವಧಿ ಕಡಿಮೆ ಮಾಡಿ ಎಂದು ನೂರು ವರ್ಷ ಹೋರಾಟ ಮಾಡಿ 8 ಗಂಟೆಯ ದುಡಿಮೆ ಜಾರಿಗೆ ಬರುವಂತೆ ಕಾರ್ಮಿಕರು ಮಾಡಿದ್ದರು. ಈಗ ಅದಕ್ಕೆ ವಿರುದ್ಧವಾಗಿ ನವ ಬಂಡವಾಳಶಾಹಿಗಳು 12 ಗಂಟೆ– 14 ಗಂಟೆಗೆ ಹೆಚ್ಚಿಸಲು ಮುಂದಾಗಿದ್ದಾರೆ. ಆ್ಯಪ್ ಆಧಾರಿತ ಸ್ವಿಗ್ಗಿ, ಜೊಮೆಟೊ, ಓಲಾಗಳಲ್ಲಿ ದುಡಿಮೆ ಅವಧಿ ಗಣನೆಯೇ ಇಲ್ಲ' ಎಂದು ವಿಷಾದಿಸಿದರು. ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೇನ್ ವಿಚಾರ ಸಂಕಿರಣ ಉದ್ಘಾಟಿಸಿದರು. ಸಿಪಿಎಂ ಕಾರ್ಯದರ್ಶಿ ಯು. ಬಸವರಾಜ್, ಸೂರಿಯವರ ಪುತ್ರಿ ರೇಖಾ, ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಭಾಗವಹಿಸಿದ್ದರು.



ರಾಜ್ಯಮಟ್ಟದ ವಿಚಾರ ಸಂಕಿರಣದಲ್ಲಿ ಸಿಐಟಿಯು ರಾಜ್ಯ ಉಪಾಧ್ಯಕ್ಷ ಪ್ರಕಾಶ್ ಕೆ, ಸಿಐಟಿಯು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ತಪನ್ ಸೇನ್, ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ನಿವೃತ್ತ ಪ್ರಾಧ್ಯಾಪಕಿ ಜಾನಕಿ ನಾಯರ್, ರಾಜ್ಯ ಉಪಾಧ್ಯಕ್ಷ ವಿಜೆಕೆ ನಾಯರ್, ಸಿಪಿಐ (ಎಂ)ಕಾರ್ಯದರ್ಶಿ ಯು. ಬಸವರಾಜ, ಸೂರಿಯವರ ಪುತ್ರಿ ರೇಖಾ ಅವರು 'ಕಾಮ್ರೇಡ್ ಸೂರಿ ಶತಮಾನೋತ್ಸವದ ನೆನಪು' ಹೊತ್ತಗೆಯನ್ನು ಬಿಡುಗಡೆ ಮಾಡಿದರು. – ಪ್ರಜಾವಾಣಿ ಚಿತ್ರ

ಸಿದ್ದರಾಮಯ್ಯ ಸಹಿ ನಕಲು: ರಾಜ್ಯಪಾಲರಿಗೆ ಮತ್ತೊಂದು ದೂರು

ಮೈಸೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಹಿಯನ್ನು ಬೇರೆಯವರು ನಕಲು ಮಾಡಿದ್ದಾರೆ' ಎಂದು ಆರೋಪಿಸಿರುವ ಇಲ್ಲಿನ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ, 'ಈ ಬಗ್ಗೆ ಲೋಕಾಯುಕ್ತರಿಂದ ತನಿಖೆ ಮಾಡಿಸಿ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ರಾಜ್ಯಪಾಲರನ್ನು ಒತ್ತಾಯಿಸಿದ್ದಾರೆ.

ಇದರೊಂದಿಗೆ ಅವರು ಮುಖ್ಯಮಂತ್ರಿ ವಿರುದ್ಧ ಮತ್ತೊಂದು ದೂರು ಸಲ್ಲಿಸಿದಂತಾಗಿದೆ.

ಶನಿವಾರ ದೂರು ಸಲ್ಲಿಸಿರುವ ಅವರು, 'ಮುಖ್ಯಮಂತ್ರಿಯು ಕನ್ನಡದಲ್ಲಿ ಸಹಿ ಮಾಡುವುದು ಸಾಮಾನ್ಯ. ಸಾಕಷ್ಟು ಸರ್ಕಾರಿ ದಾಖಲೆಗಳಲ್ಲಿ ಕನ್ನಡದಲ್ಲಿ ಸಹಿ ಇರುವುದನ್ನು ಗಮನಿಸಿದ್ದೇನೆ. ಆದರೆ, ಮುಡಾ ಹಗರಣ ಸಂಬಂಧ ರಾಜ್ಯಪಾಲರಿಗೆ ಬರೆದಿರುವ ಪತ್ರ ಮತ್ತು ಲೋಕಾಯುಕ್ತಕ್ಕೆ ಸಲ್ಲಿಸಿದ ಆಸ್ತಿ ವಿವರದ ಪ್ರಮಾಣಪತ್ರದಲ್ಲಿ ಅವರ ಸಹಿ ಇಂಗ್ಲಿಷ್ ನಲ್ಲಿದೆ. ಅದು ನಕಲು ಆಗಿದ್ದು, ಬೇರೆ ಯಾರೋ ಸಹಿ ಮಾಡಿದ್ದಾರೆ. ಆದ್ದರಿಂದ ಅದನ್ನು ಗಮನಿಸಿ ಸಾಂವಿಧಾನಿಕ ಹುದ್ದೆಯ ಗೌರವ ಕಾಪಾಡಬೇಕು' ಎಂದು ಕೋರಿದ್ದಾರೆ. ದೂರಿನೊಂದಿಗೆ ಆರು ದಾಖಲೆಗಳನ್ನು ನೀಡಿರುವುದಾಗಿ ತಿಳಿಸಿದ್ದಾರೆ.

ಒಂದೇ ದಿನ 18 ಶಂಕಿತ ಡೆಂಗಿ ಪ್ರಕರಣ

ಹಾವೇರಿ: ಜಿಲ್ಲೆಯಲ್ಲಿ ಶನಿವಾರ ಒಂದೇ ದಿನ 18 ಜನರಲ್ಲಿ ಶಂಕಿತ ಡೆಂಗಿ ಜ್ವರ ಪ್ರಕರಣ ಪತ್ತೆಯಾಗಿದ್ದು, ಜನವರಿಯಿಂದ ಈವರೆಗಿನ ಒಟ್ಟು ಪ್ರಕರಣಗಳ ಸಂಖ್ಯೆ 688ಕ್ಕೆ ಏರಿದೆ. ಅವರಲ್ಲಿ 684 ಮಂದಿ ಗುಣಮುಖರಾಗಿದ್ದಾರೆ. ಮೂವರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರೆದಿದೆ. ಒಬ್ಬ ಬಾಲಕ ಮೃತಪಟ್ಟಿದ್ದಾನೆ.

ಮಣಿಪುರ ಹೊತ್ತಿ ಉರಿದರೂ ಮೌನವಾಗಿದ್ದ ಪ್ರಧಾನಿ: ತುಷಾರ್ ಗಾಂಧಿ ಟೀಕೆ

'ವಿದೇಶದಲ್ಲಿ ಮಾತ್ರ ಶಾಂತಿ ಜಪ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯುದ್ಧ ಪೀಡಿತ ಉಕ್ರೇನ್ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಗಾಂಧೀಜಿಯ ಶಾಂತಿ ಸಂದೇಶ ನೆನಪಾಗಿದೆ. ಆದರೆ, ಮಣಿಪುರ ಹೊತ್ತಿ ಉರಿದರೂ ಅವರು ಮೌನವಾಗಿದ್ದರು' ಎಂದು ಮಹಾತ್ಮ ಗಾಂಧಿ ಅವರ ಮರಿ ಮೊಮ್ಮಗ ತುಷಾರ್ ಗಾಂಧಿ ಅಸಮಾಧಾನ ವ್ಯಕ್ತಪಡಿಸಿದರು.

ಗಾಂಧಿ ಸ್ಮಾರಕ ನಿಧಿಯ 75ನೇ ವರ್ಷದ ಸಂಸ್ಮರಣೆ ನಿಮಿತ್ತ ಗಾಂಧಿ ಭವನದಲ್ಲಿ ಶನಿವಾರ '21ನೇ ಶತಮಾನಕ್ಕೆ ಗಾಂಧೀಜಿ' ವಿಷಯದ ಕುರಿತು ಅಂತರರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ದಿಕ್ಸೂಚಿ ಭಾಷಣ ಮಾಡಿದರು.

'ವಿದೇಶಗಳಲ್ಲಿ ಗಾಂಧಿ ಮತ್ತು ಅವರ ವಿಚಾರಧಾರೆ ಬಗ್ಗೆ ಮಾತನಾಡುವವರು ತಮ್ಮ ದೇಶದಲ್ಲಿ ಅವುಗಳ ಹತ್ಯೆ ಮಾಡುತ್ತಿದ್ದಾರೆ. ದೇಶದಲ್ಲಿ ಗೋಡ್ಸೆ, ಸಾವರ್ಕರ್ ವಿಚಾರಧಾರೆಗಳ ತಾಂಡವ ಹೆಚ್ಚಾಗಿದ್ದರಿಂದ ಮಹಾತ್ಮನ ವಿಚಾರ ಧಾರೆಗಳು ರೋಗಗ್ರಸ್ತವಾಗಿವೆ. ಗೋಡ್ಸೆ ಆಡಳಿತ ನಡೆಸುತ್ತಿರುವುದರಿಂದ ಗಾಂಧೀಜಿ ಸ್ಥಾಪಿಸಿದ ಸಂಸ್ಥೆಗಳು, ಅವರ ತತ್ವಗಳನ್ನು ಮುನ್ನಡೆಸುತ್ತಿರುವ ಸಂಸ್ಥೆಗಳನ್ನು ಕಸಿದುಕೊಳ್ಳಲಾಗುತ್ತಿದೆ' ಎಂದು ಹೇಳಿದರು.

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್‌.ಕೆ.ಪಾಟೀಲ, ರಾಜ್ಯದ 25 ಜಿಲ್ಲೆಗಳಲ್ಲಿ ಗಾಂಧಿ ಭವನ ನಿರ್ಮಾಣ ಪೂರ್ಣಗೊಂಡಿವೆ. ಗಾಂಧಿ ಭವನ ಗ್ರಂಥಾಲಯದ 11,720 ಪುಸ್ತಕಗಳನ್ನು ಡಿಜಿಟಲೀಕರಣ ಗೊಳಿಸ ಲಾಗಿದೆ ಎಂದರು.

ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ರಾಮಚಂದ್ರ ರಾಹಿ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ, ಕಾರ್ಯಾಧ್ಯಕ್ಷ ವಿಶುಕುಮಾರ್ , ಗೌರವ ಕಾರ್ಯದರ್ಶಿ ಎಂ. ಸಿ. ನರೇಂದ್ರ, ನವದೆಹಲಿ ಸ್ಮಾರಕ ನಿಧಿ ಅಧ್ಯಕ್ಷ ಸಂಜೋಯ್ ಸಿಂಗ್, ಶಿವರಾಜ್ ಪಾಲ್ಗೊಂಡಿದ್ದರು.



ಬೆಂಗಳೂರಿನಲ್ಲಿ ಶನಿವಾರ ನಡೆದ ಅಂತರರಾಷ್ಟ್ರೀಯ ವಿಚಾರ ಸಂಕಿರಣವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚರಕದಿಂದ ನೂಲು ತೆಗೆಯುವ ಮೂಲಕ ಉದ್ಘಾಟಿಸಿದರು. ರಾಮಚಂದ್ರ ರಾಹಿ, ಎಚ್‌.ಕೆ.ಪಾಟೀಲ, ವೂಡೇ ಪಿ.ಕೃಷ್ಣ, ಎನ್‌. ಆರ್‌. ವಿಶುಕುಮಾರ್ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ಗಾಂಧೀಜಿ ಕೊಂದವರು ಅಸಮಾನತೆ ಪೋಷಕರು: ಸಿ.ಎಂ

'ಧರ್ಮ-ಜಾತಿ ಹೆಸರಲ್ಲಿ ಸಮಾಜ ಒಡೆದಂತೆ ಅಸಮಾನತೆ ಹೆಚ್ಚುತ್ತದೆ. ಜಾತಿ, ಅಸಮಾನತೆ ಪೋಷಕರೇ ಗಾಂಧೀಜಿ ಅವರನ್ನು ಕೊಂದರು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದರು.

ವಿಚಾರ ಸಂಕಿರಣ ಉದ್ಘಾಟಿಸಿದ ಅವರು, 'ಮನುಷ್ಯ ಮನುಷ್ಯರ ನಡುವೆ ಸಹಿಷ್ಣುತೆ ರೂಢಿಸಿಕೊಳ್ಳದಿದ್ದರೆ ಸರ್ವನಾಶವಾಗುತ್ತದೆ. ಕೋಮು ಭಾವನೆ ಹೀಗೇ ಬೆಳೆದರೆ ಕುವೆಂಪು ಅವರ ವಿಶ್ವ ಮಾನವ ಆಶಯ ಈಡೇರುವುದು ಕಷ್ಟವಾಗುತ್ತದೆ ಎಂದರು.

ಗಾಂಧೀಜಿ ಅಧ್ಯಕ್ಷತೆ ವಹಿಸಿದ್ದ ಕಾಂಗ್ರೆಸ್‌ನ ಬೆಳಗಾವಿ ಅಧಿವೇಶನದ ಶತಮಾನೋತ್ಸವವನ್ನು ಹೆಚ್ಚು ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದರು.

ಕಾಮೆಡ್‌–ಕೆ 3ನೇ ಸುತ್ತು ಮುಂದೂಡಿಕೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಮೊದಲ ಸುತ್ತಿನ ಸೀಟು ಹಂಚಿಕೆ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಕಾಮೆಡ್‌–ಕೆ 3ನೇ ಸುತ್ತಿನ ಕೌನ್ಸೆಲಿಂಗ್ ನಡೆಸದಂತೆ ಸೂಚಿಸಬೇಕು ಎಂದು ವಿದ್ಯಾರ್ಥಿ–ಪೋಷಕರು ಒತ್ತಾಯಿಸಿದ್ದಾರೆ.

ನೀಟ್ ಗೊಂದಲಗಳಿಂದ ಈ ಬಾರಿ ರಾಜ್ಯದಲ್ಲೂ ಸಿಇಟಿ ಕೌನ್ಸೆಲಿಂಗ್ ಪ್ರಕ್ರಿಯೆ ವಿಳಂಬವಾಗಿದೆ. ಆದರೆ, ಕರ್ನಾಟಕ ವೈದ್ಯಕೀಯ, ಎಂಜಿನಿಯರಿಂಗ್ ಮತ್ತು ದಂತ ವೈದ್ಯಕೀಯ ಕಾಲೇಜುಗಳ ಒಕ್ಕೂಟ (ಕಾಮೆಡ್‌–ಕೆ) ನಡೆಸಿದ್ದ ಪ್ರವೇಶ ಪರೀಕ್ಷೆಯಲ್ಲೂ ರ‍್ಯಾಂಕ್ ಪಡೆದವರು ಶುಲ್ಕ ಪಾವತಿಸಿ, ಸೀಟು ಕಾಯ್ದಿರಿಸಿದ್ದಾರೆ. ಸಿಇಟಿಯಲ್ಲಿ ಉತ್ತಮ ಕಾಲೇಜು ಸಿಕ್ಕರೆ ಕಾಮೆಡ್‌–ಕೆ ಸೀಟು ಬಿಟ್ಟು ಕೊಡುತ್ತಾರೆ. ಬಯಸಿದ ಕಾಲೇಜಿನಲ್ಲಿ ಸೀಟು ಸಿಗದವರು ಮೂರನೇ ಸುತ್ತಿನಲ್ಲಿ ಆಯ್ಕೆ ಮಾಡಿಕೊಳ್ಳಬಹುದು. ಹಾಗಾಗಿ, ಕೌನ್ಸೆಲಿಂಗ್ ಮುಂದೂಡಬೇಕು ಎಂದು ಮನವಿ ಮಾಡಿದ್ದಾರೆ.

ಕೆಇಎ ಸೆ.1ರಂದು ಮೊದಲ ಸುತ್ತಿನ ಸೀಟು ಹಂಚಿಕೆ ಮಾಡುತ್ತಿದೆ. ಕಾಮೆಡ್‌–ಕೆ ಆ.26ರಿಂದ 30ರವರೆಗೆ ಮೂರನೇ ಸುತ್ತಿನ ಕೌನ್ಸೆಲಿಂಗ್ ನಿಗದಿಪಡಿಸಿದೆ. ಇದರಿಂದ ಕಾಮೆಡ್‌–ಕೆನಲ್ಲಿ ಮೊದಲ ಹಾಗೂ ಎರಡನೇ ಸುತ್ತಿನಲ್ಲಿ ಆಯ್ಕೆಯಾಗಿ, ಪ್ರವೇಶ ಪಡೆದ ವಿದ್ಯಾರ್ಥಿಗಳು ಕೆಇಎ ಸುತ್ತನಲ್ಲಿ ಸರ್ಕಾರಿ ಕೋಟಾದ ಸೀಟು ಪಡೆದರೂ ವ್ಯರ್ಥವಾಗುತ್ತದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

'ಬಿಜೆಪಿ ವಿಚಾರಧಾರೆ ಹಳ್ಳಿಗಳಿಗೆ ತಲುಪಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಿರಂತರ ಜನಸಂಪರ್ಕದ ಮೂಲಕ ಬಿಜೆಪಿ ವಿಚಾರಧಾರೆ ವಿಸ್ತರಣೆಯಾಗಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಪಕ್ಷದ ಬಾವುಟ ಹಾರಾಡಬೇಕು' ಎಂದು ಬಿಜೆಪಿ ರಾಷ್ಟ್ರೀಯ ಕಾರ್ಯದರ್ಶಿ ರಿತುರಾಜ್ ಸಿನ್ಹಾ ಶನಿವಾರ ಇಲ್ಲಿ ಹೇಳಿದರು.

ಬೆಂಗಳೂರಿನ ಅರಮನೆ ಮೈದಾನದಲ್ಲಿ ಸೆ. 1ರಿಂದ ಆರಂಭವಾಗುವ ಬಿಜೆಪಿ ಸದಸ್ಯತ್ವ ಅಭಿಯಾನದ ಅಂಗವಾಗಿ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

90ರ ದಶಕದಲ್ಲಿ ಅತ್ಯಂತ ಕಡಿಮೆ ಸದಸ್ಯರಿದ್ದ ಪಕ್ಷ ಇಂದು ಅತಿ ದೊಡ್ಡ ರಾಷ್ಟ್ರೀಯ ಪಕ್ಷವಾಗಿದೆ. ದಕ್ಷಿಣ ಭಾರತದಲ್ಲೂ ಅತಿ ಹೆಚ್ಚು ಸದಸ್ಯತ್ವ ಇರುವಂತೆ ನಾಯಕರು, ಕಾರ್ಯಕರ್ತರು ಶ್ರಮಿಸಬೇಕು ಎಂದರು.

ರಾಮಮಂದಿರ ಆಂದೋಲನವನ್ನು ಪಕ್ಷ ಸಾಕಾರಗೊಳಿಸಿದೆ. ಕಾಶ್ಮೀರಕ್ಕೆ ನೀಡಿದ್ದ ಪ್ರತ್ಯೇಕ ಸ್ಥಾನಮಾನ ರದ್ದು ಮಾಡಿದೆ. ಒಂದು ರಾಷ್ಟ್ರ–ಒಂದು ಚುನಾವಣೆಯ ಧ್ಯೇಯವನ್ನು ಸಾಕಾರ ಮಾಡುತ್ತದೆ ಎಂದರು. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ 'ಮಿಸ್ಡ್ ಕಾಲ್' ಮೂಲ ಕಸದಸ್ಯತ್ವ ನೋಂದಣಿ ಮಾಡಿಕೊಳ್ಳುವ ಸಂಖ್ಯೆ (8800002024) ಹಾಗೂ ಅಭಿಯಾನದ ಲೋಗೊ ಬಿಡುಗಡೆ ಮಾಡಿದರು. ಬಿಜೆಪಿ ರಾಜ್ಯ ಸಹ ಪ್ರಭಾರಿ ಸುಧಾಕರ ರೆಡ್ಡಿ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್‌. ಅಶೋಕ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ನಂದೀಶ್ ರೆಡ್ಡಿ, ಪಿ.ರಾಜೀವ್, ಸುನಿಲ್ ಕುಮಾರ್, ಪ್ರೀತಂ ಗೌಡ, ಶಾಸಕರಾದ ಡಾ.ಸಿ.ಎನ್‌. ಅಶ್ವತ್ಥನಾರಾಯಣ, ಮಹೇಶ್ ಟೆಂಗಿನಕಾಯಿ, ದೊಡ್ಡನಗೌಡ ಪಾಟೀಲ, ವಿಧಾನ ಪರಿಷತ್ ಸದಸ್ಯ ಪ್ರತಾಪ್ ಸಿಂಹ ನಾಯಕ್, ಸಂಸದ ಪಿ.ಸಿ.ಮೋಹನ್ ಉಪಸ್ಥಿತರಿದ್ದರು.



ಬಿಜೆಪಿ ಸದಸ್ಯತ್ವ ಅಭಿಯಾನ ಕಾರ್ಯಾಗಾರದಲ್ಲಿ ಬಿಜೆಪಿ ರಾಜ್ಯ ಸಹ ಪ್ರಭಾರಿ ಸುಧಾಕರ ರೆಡ್ಡಿ, ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ರಾಷ್ಟ್ರೀಯ ಕಾರ್ಯದರ್ಶಿ ರಿತುರಾಜ್ ಸಿನ್ಹಾ ಉಪಸ್ಥಿತರಿದ್ದರು

ಡ್ರಾಗೆ ತೃಪ್ತಿಪಟ್ಟ ಪ್ರಜ್ಞಾನಂದ

ಸಿಂಕ್ವೆಫೀಲ್ಡ್ ಕಪ್ ಚೆಸ್ ● ಮುನ್ನಡೆಯಲ್ಲಿ ಅಲಿರೇಜಾ

ಸೇಂಟ್ ಲೂಯಿ (ಅಮೆರಿಕ), (ಏಜನ್ಸೀಸ್): ಗ್ರ್ಯಾಂಡ್‌ಮಾಸ್ಟರ್ ಪ್ರಜ್ಞಾನಂದ ಆರ್. ಅವರು ಉತ್ತಮ ಲಯದಲ್ಲಿದ್ದಂತೆ ಕಾಣುತ್ತಿಲ್ಲ. ಪಂದ್ಯಗಳಲ್ಲಿ ಮೇಲುಗೈ ಸಾಧಿಸುತ್ತಿದ್ದರೂ ಅದನ್ನು ಗೆಲುವಾಗಿ ಪರಿವರ್ತಿಸಲು ಎಡವುತ್ತಿದ್ದಾರೆ. ಸಿಂಕ್ವೆಫೀಲ್ಡ್ ಕಪ್ ಚೆಸ್ ಟೂರ್ನಿಯಲ್ಲಿ ಶುಕ್ರವಾರ ಐದನೇ ಸುತ್ತಿನಲ್ಲಿ ಅಮೆರಿಕದ ವೆಸ್ಲಿ ಸೊ ವಿರುದ್ಧ ಅಂಥ ಕೆಲವು ಅವಕಾಶಗಳನ್ನು ತಪ್ಪಿಸಿಕೊಂಡ ಅವರು ಅಂತಿಮವಾಗಿ 'ಡ್ರಾ'ಕ್ಕೆ ಸಹಿ ಮಾಡಬೇಕಾಯಿತು.


ಪ್ರಜ್ಞಾನಂದ

ಒಂದೆಡೆ ಸೊ ಸೋಲಿನಿಂದ ಬಚಾವಾದರೆ, ಇನ್ನೊಂದು ಪಂದ್ಯದಲ್ಲಿ ಸಮಬಲದ ಸ್ಥಿತಿಯಲ್ಲಿದ್ದಾಗ ಡಚ್ ಆಟಗಾರ ಅನಿಶ್ ಗಿರಿ ಎಸಗಿದ ಲೋಪದಿಂದ ಫ್ರಾನ್ಸ್‌ನ ಆಟಗಾರ ಅಲಿರೇಜಾ ಫಿರೋಜ್ ಅವರು ಗೆಲುವು ಸಾಧಿಸುವಲ್ಲಿ ಯಶಸ್ವಿ ಆದರು.

ಐದನೇ ಸುತ್ತಿನಲ್ಲಿ ನಿರ್ಣಾಯಕ ಫಲಿತಾಂಶ ಬಂದಿದ್ದು ಗಿರಿ– ಅಲಿರೇಜಾ ಪಂದ್ಯದಲ್ಲಿ ಮಾತ್ರ. ಪ್ರಜ್ಞಾನಂದ– ಸೊ ಪಂದ್ಯವೂ ಸೇರಿ ಉಳಿದ ನಾಲ್ಕು ಪಂದ್ಯಗಳು 'ಡ್ರಾ' ಆದವು.

ಗೆಲುವಿನಿಂದ ಅಲಿರೇಜಾ ಅವರು ಒಟ್ಟಾರೆ ಮೂರೂವರೆ ಪಾಯಿಂಟ್ಸ್ ಸಂಗ್ರಹಿಸಿದ್ದು ಅಗ್ರಸ್ಥಾನದಲ್ಲಿದ್ದಾರೆ. ಸೊ (3 ಪಾಯಿಂಟ್) ಎರಡನೇ ಸ್ಥಾನದಲ್ಲಿದ್ದಾರೆ. ಆರು ಮಂದಿ ಆಟಗಾರರು ತಲಾ ಎರಡೂವರೆ ಪಾಯಿಂಟ್ಸ್ ಗಳಿಸಿದ್ದಾರೆ. ಅಮೆರಿಕದ ಫ್ಯಾಬಿಯಾನೊ ಕರುವಾನ, ರಷ್ಯಾದ ಇಯಾನ್ ನಿಪೊಮ್‌ನಿಯಾಷಿ, ಡಿ.ಗುಕೇಶ್, ಆರ್.ಪ್ರಜ್ಞಾನಂದ, ಡಿಂಗ್ ಲಿರೆನ್, ಮ್ಯಾಕ್ಸಿಂ ವೇಷಿಯರ್ ಲಗ್ರಾವ್ ಈ ಆರು ಮಂದಿ. ಅಬ್ದುಸತ್ತಾರೋವ್ (2) ಒಂಬತ್ತನೇ ಸ್ಥಾನದಲ್ಲಿದ್ದು, ಅನಿಶ್ ಗಿರಿ (1.5) ಕೊನೆಯ ಸ್ಥಾನದಲ್ಲಿದ್ದಾರೆ.

ಭಾರತದ ಇನ್ನೊಬ್ಬ ಗ್ರ್ಯಾಂಡ್ ಮಾಸ್ಟರ್ ಡಿ.ಗುಕೇಶ್ ಅವರು ಉಜ್ಬೇಕಿಸ್ತಾನದ ನಾಡಿರ್ಬೆಕ್ ಅಬ್ದುಸತ್ತಾರೋವ್ ವಿರುದ್ಧ 'ಡ್ರಾ' ಮಾಡಿಕೊಂಡರು. ಮೊದಲ ಬೋರ್ಡ್‌ನಲ್ಲಿ ಕರುವಾನ, ಫ್ರಾನ್ಸ್‌ನ ಲಗ್ರಾವ್ ಜೊತೆ 'ಡ್ರಾ'ಕ್ಕೆ ಸಹಿಮಾಡಿದರು.

ನಿಪೊಮ್‌ನಿಯಾಷಿ, ಹಾಲಿ ವಿಶ್ವ ಚಾಂಪಿಯನ್ ಚೀನಾದ ಲಿರೆನ್ ಜೊತೆ ಪಾಯಿಂಟ್ ಹಂಚಿಕೊಂಡರು.

ಇಂದು ಹೆಚ್‌ಪಿಎಸ್‌ಎಲ್ ಬೆಂಗಳೂರು ಬೇಸಿಗೆ ಡರ್ಬಿ

ಗೆಲ್ಲುವ ವಿಶ್ವಾಸದಲ್ಲಿ ಎಕ್ಸಲೆಂಟ್ ಲಾಸ್

● ಡಿ. ರವಿಕುಮಾರ್

ಬೆಂಗಳೂರು: ರೇಸ್ ಪ್ರಿಯರು ಕಾತುರ ದಿಂದ ಕಾಯುತ್ತಿರುವ ಬೆಂಗಳೂರು ಬೇಸಿಗೆ ರೇಸ್‌ಗಳ ಪ್ರತಿಷ್ಠಿತ ಹೆಚ್‌ಪಿಎಸ್‌ಎಲ್ ಬೆಂಗಳೂರು ಬೇಸಿಗೆ ಡರ್ಬಿ ಭಾನುವಾರ ಸಂಜೆ 4:05ಕ್ಕೆ ನಡೆಯಲಿದೆ.

ಹೆಚ್‌ಪಿಎಸ್‌ಎಲ್ ಸಂಸ್ಥೆಯ ಪ್ರಾಯೋಜಕತ್ವ ಜೊತೆಗೆ ಬೆಂಗಳೂರು ಟರ್ಫ್ ಕ್ಲಬ್ ಜಂಟಿಯಾಗಿ ಏರ್ಪಡಿಸಿರುವ ಡರ್ಬಿಯ ಒಟ್ಟು ಬಹುಮಾನದ ಮೊತ್ತ ಸುಮಾರು₹ 2 ಕೋಟಿ. ಇದರಲ್ಲಿ ಗೆಲ್ಲುವ ಕುದುರೆಯು ಮೊದಲನೇ ಬಹುಮಾನವಾಗಿ ಸುಮಾರು ₹ 99 ಲಕ್ಷ ಪಡೆಯಲಿದೆ.

ಸ್ವಲ್ಪ ಮುಕ್ತವಾಗಿ ಕಂಡು ಬರುತ್ತಿರುವ ಡರ್ಬಿಯ ಕಣದಲ್ಲಿ ಹನ್ನೆರಡು ಕುದುರೆಗಳು ಸ್ಪರ್ಧಿಸುತ್ತಿವೆ; ಇವುಗಳಲ್ಲಿ,ಹತ್ತು ಗಂಡು ಮತ್ತು ಎರಡು ಹೆಣ್ಣು, ಸುಲೈಮಾನ್ ಅತೋಲಾಹಿ ತರಬೇತಿಯಲ್ಲಿರುವ ಪೊಸಿಟಾನೊ, ಪೆಸಿ ಶ್ರಾಫ್ ತರಬೇತಿ ನೀಡಿರುವ ಸ್ಯಾಂಟಿಸಿಮೊ ಮತ್ತು ದಿ ಪ್ಯಾಂಥರ್ ಹಾಗೂ ರಾಜೇಶ್ ನರೇಡು ತರಬೇತಿಯಲ್ಲಿ ಪಳಗಿರುವ ಎಕ್ಸಲೆಂಟ್ ಲಾಸ್ ಪ್ರಮುಖ ಸ್ಪರ್ಧಿಗಳು. ಇವುಗಳಲ್ಲಿ, ಸ್ಯಾಂಟಿಸಿಮೊ ಮತ್ತೊ ಎಕ್ಸಲೆಂಟ್ ಲಾಸ್ ನಡುವೆ ನೇರ ಪೈಪೋಟಿ ಕಂಡು ಬರುತ್ತಿದೆ.

ಮುಖ್ಯಾಂಶಗಳು

- ಬಹುಮಾನಕ್ಕಾಗಿ ಸೆಣಸಲಿವೆ ಒಟ್ಟು ಹನ್ನೆರಡು ಕುದುರೆಗಳು
- ಒಟ್ಟು ಬಹುಮಾನದ ಮೊತ್ತ: ಸುಮಾರು ₹ 2 ಕೋಟಿ
- ಮೊದಲನೇ ಬಹುಮಾನ ಸುಮಾರು ₹ 99 ಲಕ್ಷ ಗೆಲ್ಲುವ ಕುದುರೆಗೆ ಸಿಗಲಿದೆ



ಫಿಲ್ಲೀಸ್ ಚಾಂಪಿಯನ್‌ಷಿಪ್ ಸ್ಟೇಕ್ಸ್‌ನಲ್ಲಿ ಎಕ್ಸಲೆಂಟ್ ಲಾಸ್ ಮತ್ತೆ ತನ್ನ ಗೆಲುವಿನ ಲಯ ಕಂಡುಕೊಂಡಿದೆ.ಸ್ಯಾಂಟಿಸಿಮೊ ಸತತವಾಗಿ ನಾಲ್ಕು ಬಾರಿ ಗೆದ್ದು, ಕೋಲ್ಟ್ಸ್ ಚಾಂಪಿಯನ್‌ಷಿಪ್ ಸ್ಟೇಕ್ಸ್‌ನಲ್ಲಿ ನೇರ ಅಂತರದಲ್ಲಿ ಆಫ್ರಿಕನ್ ಗೋಲ್ಡ್ ಕುದುರೆಗೆ ಸೋತಿದೆ. ಸಮಬಲದ ಇವರೆಡರಲ್ಲಿ, ನಿರಾಯಾಸವಾಗಿ ಗೆದ್ದಿರುವ ಎಕ್ಸಲೆಂಟ್ ಲಾಸ್ ತುಸು ಮುಂಚೂಣಿಯಲ್ಲಿರುವಂತೆ ಕಂಡಿದ್ದು, ಸ್ಯಾಂಟಿಸಿಮೊ ಕುದುರೆಯಿಂದ ಈ ಡರ್ಬಿ ಗೆಲ್ಲುವ ಹೆಚ್ಚಿನ ಅವಕಾಶ ಹೊಂದಿದೆ ಎಂದು ನಿರೀಕ್ಷಿಸಲಾಗಿದೆ. ಉಳಿದ ಸ್ಥಾನಗಳಿಗೆ ದಿ ಪ್ಯಾಂಥರ್ ಮತ್ತು ಪೊಸಿಟಾನೊ ನಡುವೆ ಪೈಪೋಟಿಯಿದೆ.

ಬೆಂಗಳೂರು ರೇಸ್

ಭಾನುವಾರ ಒಂಬತ್ತು ರೇಸ್‌ಗಳನ್ನು ಏರ್ಪಡಿಸಿದ್ದು, 1ನೇ ರೇಸ್ ಮಧ್ಯಾಹ್ನ 12:45ಕ್ಕೆ ಪ್ರಾರಂಭವಾಗಲಿದೆ. ನಮ್ಮ ಆಯ್ಕೆ ಈ ಕೆಳಕಂಡಂತಿವೆ.

1ನೇ ರೇಸ್: ಎಮಿರಾಲ್ಡೊ 6, ಮೇಗಾ ಸಕ್ಸಸ್ 4, ಸ್ಲಿಂಗ್ ಶಾಟ್ 2
2ನೇ ರೇಸ್: ದಿ ಲೀಡರ್ 5, ಬಲ್ಮರೋಲ್ 7. ಡೆಸರ್ಟ್ ಗಾಡೆಸ್ 8
3ನೇ ರೇಸ್: ಫಿನಾಮಿನನ್ 2, ಇಮ್ಮೋರ್ಟಲ್ ಬ್ಯೂಟಿ 1, ಮೆಹ್ರಾ 4
4ನೇ ರೇಸ್: ಬ್ಲೂ ಗಾಡ್ 4, ಕಿಂಗ್ಸ್ ಬೆಟಾಲಿಯನ್ 1, ಕ್ರಿಸ್ಟಲಾಸ್ 8
5ನೇ ರೇಸ್: ಕಾನ್‌ಸ್ಟೇಬಲ್ 5, ಸಸ್ಸಿ 3, ಸ್ಟಾರ್ ಕಾನ್ಸೆಪ್ಟ್ 8
6ನೇ ರೇಸ್: ಶ್ಯಾಮ್‌ರಾಕ್ 2, ಯೂಕಾನ್ 4, ಸ್ಯಾಂಟೊರಿನೊ 6
7ನೇ ರೇಸ್: ಎಕ್ಸಲೆಂಟ್ ಲಾಸ್ 11, ಸ್ಯಾಂಟಿಸಿಮೊ 8, ದಿ ಪ್ಯಾಂಥರ್ 9
8ನೇ ರೇಸ್: ಲಾ ಮೆಕ್ವಿನ್ 7, ದಿ ಗ್ಯಾಲರಿ ಟೈಮ್ 9, ಎಬೊಟ್ಸೆ 5
9ನೇ ರೇಸ್: ಕಲ್ಲು ಸಕ್ಕರೆ 2, ಅಕ್ವಮ್ಯಾಟಿಕ್ 3, ಆಗಸ್ಟೊ 8

ಉತ್ತಮ ಬೆಟ್: ಶ್ಯಾಮ್‌ರಾಕ್


ಜಾಕ್‌ಪಾಟ್‌ಗೆ	1ನೇ ಟ್ರಬಲ್	2ನೇ ಟ್ರಬಲ್	3ನೇ ಟ್ರಬಲ್
5,6,7,8,9	1,2,3	4,5,6	7,8,9


ಡರ್ಬಿ ಸ್ಪರ್ಧಿಗಳ ವಿವರ

ಸಂಖ್ಯೆ	ಕುದುರೆ ಹೆಸರು	ತರಬೇತುದಾರ	ಸವಾರ	ಹೊರಬೇಕಾದ ತೂಕ	ಡ್ರಾ
1	ಅಮೇಜಿಂಗ್ ರೂಲರ್	ಬಿ.ಪೃಥ್ವಿರಾಜ್	ಎ.ಸಂದೇಶ್	56	10
2	ಕ್ಯಾಸ್ಟಿಲ್	ಎಸ್.ನರೇಡು	ಯಶ್ ನರೇಡು	56	9
3	ಡ್ಯೂಕ್ ಆಫ್ ಟಸ್ಕನಿ – ಓಡುವುದಿಲ್ಲ				
4	ಎಲ್ಫಿನ್ ನೈಟ್	ಡಿ.ಬೈರಾಮ್ಜಿ	ನೀರಜ್ ರಾವಲ್	56	7
5	ಗೋಲ್ಡನ್ ಥಂಡರ್	ಕಾರ್ತಿಕ್ ಗಣಪತಿ	ಆಂಥೋನಿ ರಾಜ್	56	6
6	ಪರ್ಶಿಯನ್ ರಾಕ್	ಫಹಾದ್ ಖಾನ್	ಆಶದ್ ಅಬ್ಬಾರ್	56	2
7	ಪೊಸಿಟಾನೊ	ಎಸ್.ಎಸ್. ಅತೋಲಾಹಿ	ಅಕ್ಷಯ್ ಕುಮಾರ್	56	1
8	ಸ್ಯಾಂಟಿಸಿಮೊ	ಪಿ.ಶ್ರಾಫ್	ಸಕ್ಲೈನ್	56	4
9	ದಿ ಪ್ಯಾಂಥರ್	ಪಿ.ಶ್ರಾಫ್	ವಿವೇಕ್.ಜಿ	56	3
10	ವಿಕ್ಟರ್ ಹುಗೊ	ಇರ್ಫಾನ್ ಘಟಾಲ	ಅಲೆಕ್ಸ್ ರೊಜಾರಿಯೊ	56	11
11	ಎಕ್ಸಲೆಂಟ್ ಲಾಸ್	ರಾಜೇಶ್ ನರೇಡು	ಸೂರಜ್ ನರೇಡು	54.5	5
12	ನಿಕ್ಸ್	ಎಸ್.ಎಸ್. ಅತೋಲಾಹಿ	ಎಸ್.ಜೆ ಮೌಲಿನ್	54.5	8



ಅಮೇಜಿಂಗ್ ರೂಲರ್


ಕ್ಯಾಸ್ಟಿಲ್


ಡ್ಯೂಕ್ ಆಫ್ ಟಸ್ಕನಿ


ಎಲ್ಫಿನ್ ನೈಟ್


ಗೋಲ್ಡನ್ ಥಂಡರ್


ಪರ್ಶಿಯನ್ ರಾಕ್


ಪೊಸಿಟಾನೊ


ಸ್ಯಾಂಟಿಸಿಮೊ


ದಿ ಪ್ಯಾಂಥರ್


ವಿಕ್ಟರ್ ಹುಗೊ


ಎಕ್ಸಲೆಂಟ್ ಲಾಸ್


ನಿಕ್ಸ್

ಸಾಗರ ತಳ, ಪರ್ವತ ಶ್ರೇಣಿಯಲ್ಲಿ ಕ್ರೀಡಾಜ್ಯೋತಿಯ ಪಯಣ

ಪ್ಯಾರಿಸ್ (ಎಪಿ): ಪ್ಯಾರಿಸ್ ಒಲಿಂಪಿಕ್ಸ್ ಜ್ಯೋತಿ ಆರಿ ಎರಡು ವಾರಗಳಾಗುತ್ತಿರುವಂತೆ ಪ್ಯಾರಾಲಿಂಪಿಕ್ಸ್ ಕ್ರೀಡಾಜ್ಯೋತಿ ಓಟಕ್ಕೆ ಚಾಲನೆ ದೊರಕಿದೆ. ವಾಯುವ್ಯ ಲಂಡನ್‌ನ ಸ್ಟೋಕ್ ಮಾಂಡ್‌ವಿಲೆಯ ಆಸ್ಪತ್ರೆಯಲ್ಲಿ ಶನಿವಾರ ಪ್ಯಾರಾಲಿಂಪಿಕ್ಸ್ ಜ್ಯೋತಿ ಬೆಳಗಲಾಯಿತು.

ಬ್ರಿಟನ್‌ನ ಪ್ಯಾರಾಲಿಂಪಿಕ್ ಅಥ್ಲೀಟುಗಳಾದ ಗ್ರೆಗರ್ ಇವಾನ್ ಮತ್ತು ಹೆಲೆನ್ ರೇನ್ಸ್‌ಫೋರ್ಡ್ ಅವರು ಮಳೆಯ ನಡುವೆಯೇ ಜ್ಯೋತಿ ಬೆಳಗಿದರು.

'ಇದರಲ್ಲಿ ಭಾಗಿಯಾಗುವ ಅವಕಾಶ ದೊರೆತಿದ್ದು ದೊಡ್ಡ ಗೌರವ' ಎಂದು ಪ್ಯಾರಾ ರೋಯಿಂಗ್‌ನ ಮೊದಲ ಚಾಂಪಿಯನ್ ಆಗಿರುವ ಹೆಲೆನ್ ರೇನ್ಸ್‌ಫೋರ್ಡ್ ಹೇಳಿದರು. ಪ್ಯಾರಾ ರೋಯಿಂಗ್‌ಅನ್ನು 2008ರ ಬೀಜಿಂಗ್ ಕ್ರೀಡೆಗಳ ವೇಳೆ ಮೊದಲ ಬಾರಿ ಸೇರ್ಪಡೆ-ಮಾಡಲಾಗಿತ್ತು. ಇವಾನ್ ಅವರು ಚಳಿಗಾಲದ ಕ್ರೀಡೆಗಳಲ್ಲಿ ಮೂರು ಬಾರಿ ವೀಲ್‌ಚೇರ್ ಕರ್ಲಿಂಗ್‌ನಲ್ಲಿ ಸ್ಪರ್ಧಿಸಿದ್ದಾರೆ.

ಸ್ಟೋಕ್ ಮಾಂಡ್‌ವಿಲೆಯ ಆಸ್ಪತ್ರೆಯಲ್ಲಿ ಪ್ಯಾರಾಲಿಂಪಿಕ್ಸ್ ಆಯೋಜನೆಯ ಯೋಚನೆ ಹೊಳೆದಿದ್ದು, ಇದನ್ನು ಪ್ಯಾರಾಲಿಂಪಿಕ್ಸ್ ಉಗಮಸ್ಥಾನ ಎಂದು ಪರಿಗಣಿಸ ಲಾಗುತ್ತಿದೆ. ಈ ಜ್ಯೋತಿಯಾತ್ರೆ ಇಲ್ಲಿಂದ ಇಂಗ್ಲಿಷ್ ಕಡಲ್ಗಾಲುವೆಯ ಸುರಂಗಮಾರ್ಗದ ಮೂಲಕ ಫ್ರಾನ್ಸ್‌ಗೆ ಪಯಣಿಸಲಿದೆ. ಅಟ್ಲಾಂಟಿಕ್ ಸಾಗರ ತೀರಪ್ರದೇಶಗಳನ್ನು ದಾಟಿ ಮೆಡಿಟರೇನಿಯನ್ ಕಿನಾರೆಗಳು, ಪಿರೆನೀಸ್, ಆಲ್ಪ್ಸ್ ಪರ್ವತಶ್ರೇಣಿಗಳಲ್ಲಿ ಸಂಚರಿಸಲಿದೆ.

ಜ್ಯೋತಿಯಾತ್ರೆಯಲ್ಲಿ 1,000 ಮಂದಿ ಭಾಗವಹಿಸಲಿದ್ದಾರೆ. ಮಾಜಿ ಪ್ಯಾರಾಲಿಂಪಿಯನ್ಸ್, ಯುವ ಪ್ಯಾರಾ ಅಥ್ಲೀಟುಗಳು, ತಂತ್ರಜ್ಞಾನದ ಕ್ಷೇತ್ರದ ಸಂಶೋಧಕರು ಇವರಲ್ಲಿ ಒಳಗೊಂಡಿದ್ದಾರೆ.

ಪ್ಯಾರಾಲಿಂಪಿಕ್ಸ್ ಜ್ಯೋತಿ ಆಗಸ್ಟ್ 28ರಂದು ಪ್ಯಾರಿಸ್ ತಲುಪಲಿದೆ. ಅಂದು ಪ್ಯಾರಾಲಿಂಪಿಕ್ಸ್ ಕ್ರೀಡೆಗಳ ಉದ್ಘಾಟನೆಯಾಗಲಿದೆ. ವಿಶೇಷವಾಗಿ ಸಿದ್ಧಪಡಿಸಿದ ಕಾಲ್ಡ್ರನ್‌ನಲ್ಲಿ (ಕಡಾಯಿಯಂಥ ರಚನೆ) ಜ್ಯೋತಿ ಬೆಳಗಿಸಲಾಗುವುದು.


ಮಧ್ಯ ಇಂಗ್ಲೆಂಡ್‌ನ ಏಲ್ಸ್‌ಬರಿಯ ಸ್ಟೋಕ್ ಮಾಂಡ್‌ವಿಲೆಯಲ್ಲಿ ಶನಿವಾರ ಬ್ರಿಟನ್‌ನ ಪ್ಯಾರಾ ಅಥ್ಲೀಟುಗಳಾದ ಹೆಲೆನ್ ರೇನ್ಸ್‌ಫೋರ್ಡ್ ಮತ್ತು ಗ್ರೆಗರ್ ಇವಾನ್ (ಬಲಗಡೆ) ಅವರು ಪ್ಯಾರಾಲಿಂಪಿಕ್ಸ್ ಜ್ಯೋತಿ ಬೆಳಗುವ ಸಂಪ್ರದಾಯಕ್ಕೆ ಚಾಲನೆ ನೀಡಿದರು. –ಎಎಫ್‌ಪಿ ಚಿತ್ರ

PARIS 2024

ಈ ವೇದಿಕೆಯ ಮೇಲೆ ಸ್ಪರ್ಧೆಗಳ 11 ದಿನವೂ ಸಂಜೆ ವೇಳೆ ಬಿಸಿಗಾಳಿ ತುಂಬಿದ ಬಲೂನು ಹಾರಾಡಲಿದೆ.

ಇತಿಹಾಸ: 1948ರಲ್ಲಿ ಮೊದಲ ಬಾರಿ ವೀಲ್ ಚೇರ್ ಅಥ್ಲೀಟುಗಳಿಗೆ ಸ್ಟೋಕ್ ಮಾಂಡ್‌ವಿಲೆ ಕ್ರೀಡೆಗಳನ್ನು ನಡೆಸಲಾಯಿತು. ಎರಡನೇ ವಿಶ್ವಯುದ್ಧದ ವೇಳೆ ಬೆನ್ನುಹುರಿಯ ಗಾಯಕ್ಕೆ ಒಳಗಾದವರು ಇದರಲ್ಲಿ ಭಾಗವಹಿಸಿದ್ದರು.

ಜರ್ಮನಿ ಮೂಲದ ಇಂಗ್ಲೆಂಡ್‌ನ ನರರೋಗ ತಜ್ಞ ಲುಡ್ವಿಗ್ ಗುಟ್‌ಮ್ಯಾನ್ (1899–1980) ಈ ರೀತಿಯ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಿದರು. ಅವರನ್ನು ಉತ್ತೇಜಿಸಲು ಕ್ರೀಡೆಗಳನ್ನು ನಡೆಸಲಾಯಿತು. ಇದು ಮುಂದೆ ಮೊದಲ ಪ್ಯಾರಾಲಿಂಪಿಕ್ಸ್ ಆರಂಭಕ್ಕೆ ಕಾರಣವಾಯಿತು. 1960ರಲ್ಲಿ ರೋಮ್ ಒಲಿಂಪಿಕ್ಸ್ ನಂತರ ಮೊದಲ ಪ್ಯಾರಾಲಿಂಪಿಕ್ಸ್ ನಡೆಯಿತು. ಸ್ಟೋಕ್ ಮಾಂಡ್‌ವಿಲೆಯಲ್ಲಿ ಜ್ಯೋತಿ ಬೆಳಗುವ ಸಂಪ್ರದಾಯ 2012ರ ಲಂಡನ್ ಪ್ಯಾರಾಲಿಂಪಿಕ್ಸ್‌ನಿಂದ ಆರಂಭವಾಯಿತು.

50 ಕಿ.ಮೀ. (30 ಮೈಲಿ) ಸುರಂಗಮಾರ್ಗದಲ್ಲಿ 24 ಬ್ರಿಟಿಷ್ ಅಥ್ಲೀಟುಗಳ ಗುಂಪು ಕ್ರೀಡಾಜ್ಯೋತಿಯೊಡನೆ ಓಡಲಿದೆ. ಅರ್ಧಭಾಗ ಕ್ರಮಿಸಿದ ನಂತರ ಇನ್ನೊಂದು ಕಡೆಯಿಂದ ಬರುವ ಫ್ರಾನ್ಸ್‌ನ 24 ಅಥ್ಲೀಟುಗಳ ಗುಂಪಿಗೆ ಜ್ಯೋತಿ ಹಸ್ತಾಂತರ ನಡೆಯಲಿದೆ. 12 ಪಂಜುಗಳನ್ನು ಬೆಳಗಿಸಲಾಗುವುದು.

ಹೆಸರು, ಸೂರ್ಯಕಾಂತಿ ಖರೀದಿ

ಬೆಂಬಲ ಬೆಲೆಯಡಿ ಖರೀದಿ ಆರಂಭ ಶೀಘ್ರ: ಸಚಿವ ಶಿವಾನಂದ ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಹೆಸರುಕಾಳು ಮತ್ತು ಸೂರ್ಯಕಾಂತಿ ಖರೀದಿಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದ್ದು, ಶೀಘ್ರವೇ ಖರೀದಿ ಪ್ರಕ್ರಿಯೆ ಆರಂಭಿಸಲಾಗುವುದು ಎಂದು ರಾಜ್ಯ ಸರ್ಕಾರ ತಿಳಿಸಿದೆ.

ಬಾಗಲಕೋಟೆ, ಗದಗ, ಯಾದಗಿರಿ, ಧಾರವಾಡ, ಕೊಪ್ಪಳ, ವಿಜಯಪುರ, ರಾಯಚೂರು ಜಿಲ್ಲೆಯಲ್ಲಿ ಹೆಚ್ಚಾಗಿ ಹೆಸರುಕಾಳು ಬೆಳೆಯಲಾಗುತ್ತದೆ. 2.50 ಲಕ್ಷ ಹೆಕ್ಟೇರ್‌ಗೂ ಹೆಚ್ಚು ಪ್ರದೇಶದಲ್ಲಿ ಬೆಳೆಯಲಾಗಿದೆ. ಸದ್ಯ ಮಾರುಕಟ್ಟೆಯಲ್ಲಿ ಪ್ರತಿ ಕ್ವಿಂಟಲ್‌ಗೆ ₹6,000ದಿಂದ ₹8,350 ಬೆಲೆ ಇದೆ.

ಬಳ್ಳಾರಿ, ಚಿತ್ರದುರ್ಗ, ಗದಗ, ಚಾಮರಾಜನಗರ, ರಾಯಚೂರು, ಮೈಸೂರು ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸೂರ್ಯಕಾಂತಿ ಬೆಳೆಯಲಾಗುತ್ತಿದೆ. ಪ್ರಸ್ತುತ ಮಾರುಕಟ್ಟೆ ಯಲ್ಲಿ ಪ್ರತಿ ಕ್ವಿಂಟಲ್‌ಗೆ ₹1,509ರಿಂದ ₹5,779 ಧಾರಣೆ ಇದೆ.



> ಬೆಲೆ ಕುಸಿದಿರುವ ಬಗ್ಗೆ ರೈತರು ಆತಂಕಪಡುವ ಅಗತ್ಯವಿಲ್ಲ. ತ್ವರಿತವಾಗಿ ನೋಂದಣಿ ಹಾಗೂ ಖರೀದಿ ಪ್ರಕ್ರಿಯೆ ಆರಂಭವಾಗಲಿದೆ
> **ಶಿವಾನಂದ ಪಾಟೀಲ**
> ಕೃಷಿ ಮಾರುಕಟ್ಟೆ ಸಚಿವ

ಮಾರುಕಟ್ಟೆಯಲ್ಲಿ ಬೆಲೆ ಕುಸಿದಿದ್ದರೂ ಹೆಸರುಕಾಳು ಮತ್ತು ಸೂರ್ಯಕಾಂತಿ ಖರೀದಿಗೆ ಬೆಂಬಲ ಬೆಲೆ ಕೇಂದ್ರ ತೆರೆದಿರಲಿಲ್ಲ. ಇದರಿಂದ ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದರು. ಹಾಗಾಗಿ, ಬೆಳೆಗಾರರಿಗೆ ಅನುಕೂಲ ಕಲ್ಪಿಸಲು ಬೆಂಬಲ ಬೆಲೆ ಯೋಜನೆಯಡಿ ಖರೀದಿಗೆ ಅನುಮತಿ ನೀಡುವಂತೆ ರಾಜ್ಯ ಸರ್ಕಾರವು ಸಲ್ಲಿಸಿದ್ದ ಪ್ರಸ್ತಾವಕ್ಕೆ ಕೇಂದ್ರವು ಒಪ್ಪಿಗೆ ನೀಡಿದೆ.

'ಕೇಂದ್ರವು ಒಪ್ಪಿಗೆ ನೀಡಿರುವುದರಿಂದ ಖರೀದಿ ಏಜೆನ್ಸಿ ನೇಮಕ ಮಾಡಿ ಆದೇಶ ಹೊರಡಿಸಲು ರಾಜ್ಯ ಸರ್ಕಾರ ಕ್ರಮ ಕೈಗೊಂಡಿದೆ. ಹಾಗಾಗಿ, ರೈತರು ಆತಂಕಪಡುವ ಅಗತ್ಯವಿಲ್ಲ. ಖರೀದಿ ಕೇಂದ್ರಗಳನ್ನು ಆರಂಭಿಸುತ್ತಿದ್ದಂತೆ ಹೆಸರು ನೋಂದಣಿ ಮಾಡಿಸಿಕೊಂಡು ಬೆಂಬಲ ಬೆಲೆಯಲ್ಲಿ ಮಾರಾಟ ಮಾಡಬಹುದಾಗಿದೆ' ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ತಿಳಿಸಿದ್ದಾರೆ.

'ಹೆಸರುಕಾಳು ಮತ್ತು ಸೂರ್ಯಕಾಂತಿ ಬೆಳೆಯುವ ಪ್ರಮುಖ ಜಿಲ್ಲೆಗಳ ಜಿಲ್ಲಾಧಿಕಾರಿ ಅವರು ಟಾಸ್ಕ್‌ಫೋರ್ಸ್ ಸಭೆ ನಡೆಸಿ ಅಗತ್ಯ ಇರುವ ಕಡೆ ಖರೀದಿ ಕೇಂದ್ರ ತೆರೆದು ನೋಂದಣಿ ಆರಂಭಿಸಲಿದ್ದಾರೆ. ನಂತರ ಖರೀದಿ ಪ್ರಕ್ರಿಯೆ ಪ್ರಾರಂಭವಾಗಲಿದೆ. ವಿಳಂಬ ಮಾಡದೆ ಟಾಸ್ಕ್‌ಫೋರ್ಸ್ ಸಭೆ ನಡೆಸಲು ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನೂ ನೀಡಲಾಗಿದೆ' ಎಂದು ಸಚಿವರು ವಿವರಿಸಿದ್ದಾರೆ.

ಎಷ್ಟು ಖರೀದಿ?

ಕೇಂದ್ರ ಸರ್ಕಾರವು 22,215 ಟನ್ ಹೆಸರುಕಾಳು ಹಾಗೂ 13,210 ಟನ್ ಸೂರ್ಯಕಾಂತಿ ಖರೀದಿಗೆ ಒಪ್ಪಿಗೆ ನೀಡಿದೆ. ಎಫ್‌ಎಕ್ಯೂ ಗುಣಮಟ್ಟದ ಪ್ರತಿ ಕ್ವಿಂಟಲ್ ಹೆಸರುಕಾಳಿಗೆ ₹8,682 ಹಾಗೂ ಸೂರ್ಯಕಾಂತಿಗೆ ₹7,280 ಬೆಂಬಲ ಬೆಲೆ ನಿಗದಿಪಡಿಸಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹480
12 ಕ್ಕೆ	₹66
ಮೈಸೂರು	
100ಕ್ಕೆ	₹482

ಮುದ್ರೆಮನೆ ಕಾಫಿ (50 ಕೆಜಿಗೆ)



ಎಪಿ	₹16950
ಎಸಿ	₹10125
ಆರ್‌ಪಿ	₹20250
ಆರ್‌ಸಿ	₹10325

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹230
ಆರ್‌ಎಸ್‌ಎಸ್-5	₹224
ಗುಡ್ ಲಾಟ್	₹208

(ಪ್ರತಿ ಕೆ.ಜಿಗೆ)


ಕೃಷ್ಣ ಜನ್ಮಾಷ್ಟಮಿ ನೋಯ್ಡಾದಲ್ಲಿ ಹಮ್ಮಿಕೊಂಡಿದ್ದ ಕೃಷ್ಣ ವೇಷಭೂಷಣ ಸ್ಪರ್ಧೆಯಲ್ಲಿ ಮಹಿಳೆಯೊಬ್ಬರು ಮಗುವಿನ ಉಡುಪನ್ನು ಸರಿಪಡಿಸಿದರು –ಪಿಟಿಐ ಚಿತ್ರ

ರಿಲಯನ್ಸ್ ಫೌಂಡೇಷನ್‌ನಿಂದ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಲಯನ್ಸ್ ಫೌಂಡೇಷನ್‌ನಿಂದ 2024-25ನೇ ಶೈಕ್ಷಣಿಕ ಸಾಲಿನಡಿ ಪದವಿ ಮತ್ತು ಸ್ನಾತಕೋತ್ತರ ಪದವಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ಯುವಜನರ ಸಬಲೀಕರಣ ಹಾಗೂ ಆರ್ಥಿಕ ಹೊರೆಯಿಲ್ಲದೆ ತಮ್ಮ ಅಧ್ಯಯನ ಮುಂದುವರಿಸಲು ಅನುಕೂಲವಾಗುವಂತೆ ಈ ಯೋಜನೆ ರೂಪಿಸಲಾಗಿದೆ ಎಂದು ಫೌಂಡೇಷನ್ ತಿಳಿಸಿದೆ.

ನವಭಾರತ ನಿರ್ಮಾಣಕ್ಕೆ ಕೊಡುಗೆ ನೀಡುವ ಸಾಮರ್ಥ್ಯ ಹೊಂದಿರುವ, ಭವಿಷ್ಯಕ್ಕೆ ಉಪಯುಕ್ತವಾದ ಎಂಜಿನಿಯರಿಂಗ್, ತಂತ್ರಜ್ಞಾನ, ಇಂಧನ ಹಾಗೂ ಜೀವ ವಿಜ್ಞಾನ ವಿಷಯದಲ್ಲಿ ವ್ಯಾಸಂಗ ಮಾಡುತ್ತಿರುವ 100 ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಾಗುತ್ತದೆ.

ಪದವಿ ಕಾಲೇಜು ಶಿಕ್ಷಣಕ್ಕಾಗಿ ಅಂಕ ಹಾಗೂ ವಿದ್ಯಾರ್ಥಿಯ ಆರ್ಥಿಕ ಸ್ಥಿತಿಯ ಮಾನದಂಡ ಆಧಾರದ ಮೇಲೆ 5 ಸಾವಿರ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಾಗುತ್ತದೆ. ಪದವಿ ವಿದ್ಯಾರ್ಥಿಗಳಿಗೆ ₹2 ಲಕ್ಷ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ₹6 ಲಕ್ಷ ವಿದ್ಯಾರ್ಥಿ ವೇತನ ದೊರೆಯಲಿದೆ.

ವಿದ್ಯಾರ್ಥಿಗಳು www.scholarships.reliancefoundation.org ಈ ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಬಹುದು. ಆಯ್ಕೆ ಪ್ರಕ್ರಿಯೆಯು ಪದವಿ ವಿದ್ಯಾರ್ಥಿಗೆ ಅರ್ಹತೆ ಮತ್ತು ಆರ್ಥಿಕ ಹಿನ್ನೆಲೆಯ ಮೌಲ್ಯಮಾಪನವನ್ನು ಒಳಗೊಂಡಿದೆ. ಸ್ನಾತಕೋತ್ತರ ಪದವಿ ವಿದ್ಯಾರ್ಥಿ ವೇತನಕ್ಕಾಗಿ ಶೈಕ್ಷಣಿಕ ಸಾಧನೆ, ವೈಯಕ್ತಿಕ ಹೇಳಿಕೆ ಮತ್ತು ಸಂದರ್ಶನವನ್ನು ಆಧರಿಸಿದೆ ಎಂದು ತಿಳಿಸಿದೆ.

ಅರ್ಜಿ ಸಲ್ಲಿಕೆಗೆ ಅಕ್ಟೋಬರ್ 6 ಅಂತಿಮ ದಿನವಾಗಿದೆ. ಇಲ್ಲಿಯವರೆಗೆ ರಿಲಯನ್ಸ್ ಫೌಂಡೇಷನ್ 23 ಸಾವಿರ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕೆ ವಿದ್ಯಾರ್ಥಿ ವೇತನ ನೀಡಿದೆ. ಈ ಸೌಲಭ್ಯ ಪಡೆದ ಪ್ರತಿಭಾವಂತರು ಲಾಭದಾಯಕ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದಾರೆ ಎಂದು ಫೌಂಡೇಷನ್ ತಿಳಿಸಿದೆ.


ಅಮೆಜಾನ್: ಮಾರಾಟ ಶುಲ್ಕ ಶೇ 12ರಷ್ಟು ಕಡಿತ

ಮುಂಬೈ (ಪಿಟಿಐ): ಅಮೆಜಾನ್ ಇಂಡಿಯಾ ತನ್ನ ಮಾರ್ಕೆಟ್‌ಪ್ಲೇಸ್‌ನಲ್ಲಿ ವಿವಿಧ ವರ್ಗದ ಉತ್ಪನ್ನಗಳ ಮಾರಾಟಕ್ಕೆ ವಿಧಿಸುವ ಶುಲ್ಕದಲ್ಲಿ ಶೇ 12ರಷ್ಟು ಕಡಿತಗೊಳಿಸಲು ನಿರ್ಧರಿಸಿದೆ.

ಅಮೆಜಾನ್‌ನಲ್ಲಿ ಮಾರಾಟ ಮಾಡುವ ಪ್ರತಿ ಉತ್ಪನ್ನಕ್ಕೂ ಮಾರಾಟಗಾರರಿಗೆ ಶುಲ್ಕ ವಿಧಿಸಲಾಗುತ್ತದೆ. ಈ ಶುಲ್ಕದಿಂದ ಕಂಪನಿಯು ಆದಾಯ ಗಳಿಸುತ್ತದೆ.

ಹಬ್ಬದ ಋತುವಿನ ಅಂಗವಾಗಿ ಮಾರಾಟಗಾರರಿಗೆ ಅನುಕೂಲ ಕಲ್ಪಿಸಲು ಈ ಕ್ರಮಕೈಗೊಳ್ಳಲಾಗಿದೆ. ಸೆಪ್ಟೆಂಬರ್ 9ರಿಂದ ಮಾರಾಟ ಶುಲ್ಕವನ್ನು ಕಡಿಮೆ ಮಾಡಲಾಗುತ್ತಿದೆ ಎಂದು ಕಂಪನಿ ತಿಳಿಸಿದೆ.

ಶುಲ್ಕ ಕಡಿಮೆ ಮಾಡುವ ಮೂಲಕ ಎಲ್ಲಾ ವರ್ಗದ ಮಾರಾಟಗಾರರ ಜೊತೆಗಿನ ಸಂಬಂಧವನ್ನು ಗಟ್ಟಿಗೊಳಿಸುವ ಗುರಿ ಹೊಂದಲಾಗಿದೆ. ಮಾರಾಟಗಾರರು ಅಮೆಜಾನ್ ಡಾಟ್ ಇನ್‌ನಲ್ಲಿ ತಮ್ಮ ಉತ್ಪನ್ನಗಳ ವ್ಯಾಪಾರವನ್ನು ಮತ್ತಷ್ಟು ವಿಸ್ತರಿಸಲು ಇದು ಅನುವು ಮಾಡಿಕೊಡಲಿದೆ ಎಂದು ಹೇಳಿದೆ.



ಮಾರಾಟಗಾರರಿಗೆ ವಿವಿಧ ಉತ್ಪನ್ನಗಳ ವಿಭಾಗದಲ್ಲಿ ಶೇ 3ರಿಂದ ಶೇ 12ರ ವರೆಗೆ ಮಾರಾಟ ಶುಲ್ಕ ಕಡಿತದ ಪ್ರಯೋಜನ ದೊರೆಯಲಿದೆ. ವಿಶೇಷವಾಗಿ ₹500ಕ್ಕಿಂತ ಕಡಿಮೆ ಬೆಲೆಯ ಕೈಗೆಟುಕುವ ದರದ ಉತ್ಪನ್ನ ಒದಗಿಸುವ ಮಾರಾಟಗಾರರಿಗೆ ಇದರಿಂದ ಹೆಚ್ಚಿನ ಲಾಭ ಸಿಗಲಿದೆ ಎಂದು ತಿಳಿಸಿದೆ.

'ಸಣ್ಣ ಮತ್ತು ಮಧ್ಯಮ ಉದ್ದಿಮೆಗಳಿಂದ ಹಿಡಿದು ಹೊಸ ಉದ್ಯಮ ಸ್ಥಾಪಿಸಲು ಇಚ್ಛಿಸುವ ಉದ್ಯಮಿಗಳಿಗೆ ಪ್ರೋತ್ಸಾಹ ನೀಡಲಾಗುವುದು. ಪ್ರಸ್ತುತ ಶುಲ್ಕ ಕಡಿತದಿಂದ ಸಣ್ಣ ವ್ಯಾಪಾರಿಗಳಿಗೆ ಹೆಚ್ಚಿನ ಪ್ರಯೋಜನ ಸಿಗಲಿದೆ. ಉನ್ನತ ಮಟ್ಟದ ಮಾರಾಟ ಸ್ನೇಹಿ ವ್ಯವಸ್ಥೆಯನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಕಂಪನಿಯು ಈ ಕ್ರಮಕೈಗೊಂಡಿದೆ' ಎಂದು ಅಮೆಜಾನ್ ಇಂಡಿಯಾದ ಮಾರಾಟ ಪಾಲುದಾರ ಸೇವಾ ವಿಭಾಗದ ನಿರ್ದೇಶಕ ಅಮಿತ್ ನಂದಾ ತಿಳಿಸಿದ್ದಾರೆ.

'ಈ ಬದಲಾವಣೆಯು ಕೇವಲ ಹಬ್ಬದ ಋತುವಿಗೆ ಮಾತ್ರವೇ ಪರಿಚಯಿಸಿರುವ ತಾತ್ಕಾಲಿಕ ಕ್ರಮವಲ್ಲ. ಶುಲ್ಕ ಇಳಿಕೆಯ ಕೊಡುಗೆಯು ಮಾರಾಟಗಾರರು ದೀಪಾವಳಿ ಹಬ್ಬದ ಶಾಪಿಂಗ್ ಸಂದರ್ಭದಲ್ಲಿ ಉತ್ತಮ ಮಾರಾಟ ಕೈಗೊಳ್ಳಲು ನೆರವಾಗಲಿದೆ. ಹಬ್ಬದ ಹೊರತಾಗಿಯೂ ಮಾರಾಟದಲ್ಲಿ ಯಶಸ್ಸು ಸಾಧಿಸಲು ಸಹಾಯಕವಾಗಲಿದೆ' ಎಂದು ತಿಳಿಸಿದ್ದಾರೆ.

ಮುಖ್ಯಾಂಶಗಳು

- ಸೆಪ್ಟೆಂಬರ್ 9ರಿಂದ ಮಾರಾಟ ಶುಲ್ಕ ಕಡಿತದ ಆದೇಶ ಜಾರಿ
- ಸಣ್ಣ ವ್ಯಾಪಾರಿಗಳಿಗೆ ಹೆಚ್ಚಿನ ಪ್ರಯೋಜನ
- ಮಾರಾಟಗಾರರ ಜೊತೆಗೆ ಸಂಬಂಧ ಗಟ್ಟಿಗೊಳಿಸಲು ಕಂಪನಿ ಒತ್ತು

ಇನ್ಫೊಸಿಸ್ ವಿರುದ್ಧ ಕಾಗ್ನಿಜೆಂಟ್‌ನಿಂದ ಮೊಕದ್ದಮೆ

ವ್ಯಾಪಾರ ರಹಸ್ಯ ಕಳವು ಆರೋಪ

ನವದೆಹಲಿ (ಪಿಟಿಐ): ಇನ್ಫೊಸಿಸ್ ಕಂಪನಿಯು ಹೆಲ್ತ್‌ಕೇರ್ ಇನ್ಶೂರೆನ್ಸ್ ಸಾಫ್ಟ್‌ವೇರ್‌ಗೆ ಸಂಬಂಧಿಸಿದ ಮಾಹಿತಿ ಹಾಗೂ ವ್ಯಾಪಾರ ರಹಸ್ಯಗಳನ್ನು ಕಳವು ಮಾಡಿದೆ ಎಂದು ಐ.ಟಿ ಕಂಪನಿ ಕಾಗ್ನಿಜೆಂಟ್‌ನ ಅಂಗಸಂಸ್ಥೆಯಾದ ಟ್ರೈಝೆಟ್ಟೊ ಆರೋಪಿಸಿದ್ದು, ಈ ಸಂಬಂಧ ಅಮೆರಿಕದ ಫೆಡರಲ್ ಕೋರ್ಟ್‌ನಲ್ಲಿ ಮೊಕದ್ದಮೆ ದಾಖಲಿಸಿದೆ.

ಈ ಆರೋಪವನ್ನು ಇನ್ಫೊಸಿಸ್ ನಿರಾಕರಿಸಿದ್ದು, 'ಕೋರ್ಟ್‌ನಲ್ಲಿ ದಾಖಲಾಗಿರುವ ಮೊಕದ್ದಮೆ ಬಗ್ಗೆ ಅರಿವಿದೆ. ನ್ಯಾಯಾಲಯದಲ್ಲಿಯೇ ಇದಕ್ಕೆ ಸೂಕ್ತ ಸಮರ್ಥನೆ ನೀಡಲಾಗುವುದು' ಎಂದು ತಿಳಿಸಿದೆ.

ಟ್ರೈಝೆಟ್ಟೊ ಕಂಪನಿಯು ಆರೋಗ್ಯ ವಿಮಾದಾರರಿಗೆ ಸೌಲಭ್ಯ ಒದಗಿಸಲು ಫೆಸೆಕ್ಟ್ಸ್ ಮತ್ತು ಕ್ಯೂಎನ್‌ಎಕ್ಸ್‌ಟಿ ಎಂಬ ಸಾಫ್ಟ್‌ವೇರ್ ಬಳಸುತ್ತಿದೆ. ಇನ್ಫೊಸಿಸ್ ಅಕ್ರಮವಾಗಿ ಈ ಸಾಫ್ಟ್‌ವೇರ್‌ನ ದತ್ತಾಂಶವನ್ನು ಕಳವು ಮಾಡಿದೆ. ಅಲ್ಲದೆ, ತನ್ನದೆ ಆದ ಸಾಫ್ಟ್‌ವೇರ್ ಅಭಿವೃದ್ಧಿಪಡಿಸಲು ಈ ದತ್ತಾಂಶವನ್ನು ಬಳಸಿಕೊಂಡಿದೆ. ಹಾಗಾಗಿ, ಇದು ವ್ಯಾಪಾರ ರಹಸ್ಯ ಕಾನೂನುಗಳ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ಟೆಕ್ಸಾಸ್ ಕೋರ್ಟ್‌ನಲ್ಲಿ ಸಲ್ಲಿಸಿರುವ ಅರ್ಜಿಯಲ್ಲಿ ಕಾಗ್ನಿಜೆಂಟ್ ವಿವರಿಸಿದೆ.

Infosys®

ಇನ್ಫೊಸಿಸ್‌ನ ಕಾರ್ಯ ನಿರ್ವಾಹಕ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ರಾಜೇಶ್ ವಾರಿಯರ್ ಅವರು ಇತ್ತೀಚೆಗೆ ಕಾಗ್ನಿಜೆಂಟ್‌ನ ಜಾಗತಿಕ ಕಾರ್ಯಾಚರಣೆ ವಿಭಾಗದ ಮುಖ್ಯಸ್ಥರಾಗಿ ನೇಮಕವಾಗಿದ್ದಾರೆ. ಅಲ್ಲದೆ, ಭಾರತದ ಮುಖ್ಯಸ್ಥ ಮತ್ತು ವ್ಯವಸ್ಥಾಪಕ ನಿರ್ದೇಶಕ ಹುದ್ದೆಯ ಜವಾಬ್ದಾರಿಯನ್ನೂ ಅವರಿಗೆ ನೀಡಲಾಗಿದೆ.

ಕಾಗ್ನಿಜೆಂಟ್‌ನ ಸಿಇಒ ಆಗಿರುವ ರವಿಕುಮಾರ್ ಎಸ್. ಅವರು 20 ವರ್ಷ ಇನ್ಫೊಸಿಸ್‌ನಲ್ಲಿ ಹಲವು ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ. 2016ರ ಜನವರಿಯಿಂದ 2022ರ ಅಕ್ಟೋಬರ್‌ವರೆಗೆ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

ಷೆರ್ವನ್: ₹8,300 ಕೋಟಿ ಹೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಧನ ಕ್ಷೇತ್ರದ ಸಂಶೋಧನಾ ಸಂಸ್ಥೆ ಷೆರ್ವನ್ ಬೆಂಗಳೂರಿನಲ್ಲಿ ₹8,300 ಕೋಟಿ ಬಂಡವಾಳ ಹೂಡಿಕೆ ಮಾಡಲಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ.

ಷೆರ್ವನ್ ಇಂಡಿಯಾ ಮುಖ್ಯಸ್ಥ ಅಕ್ಷಯ್ ಸಾಹ್ನಿ ಮತ್ತು ಪ್ರಧಾನ ವ್ಯವಸ್ಥಾಪಕಿ ಕೇಟ್ ಕಲಘನ್ ಜತೆಗೆ, ಶುಕ್ರವಾರ ನಡೆದ ಸಭೆಯ ನಂತರ ಅವರು ಈ ಮಾಹಿತಿ ನೀಡಿದ್ದಾರೆ.


ಎಂ.ಬಿ. ಪಾಟೀಲ

'ರಾಜ್ಯ ಸರ್ಕಾರದ ಸಹಯೋಗದಡಿ ಕಂಪನಿಯು ಬೆಂಗಳೂರಿನಲ್ಲಿ ಎಂಜಿನಿಯರಿಂಗ್ ಮತ್ತು ನಾವೀನ್ಯತೆ ಶ್ರೇಷ್ಠತಾ ಕೇಂದ್ರ ಸ್ಥಾಪಿಸಲಿದೆ' ಎಂದು ತಿಳಿಸಿದ್ದಾರೆ. 'ಈ ಕೇಂದ್ರದ ಮೂಲಕ ಇಂಧನ ವ್ಯವಸ್ಥೆಯ ತಂತ್ರಜ್ಞಾನದ ಆವಿಷ್ಕಾರಗಳಿಗೆ ಒತ್ತು ನೀಡಲು ನಿರ್ಧರಿಸಲಾಗಿದೆ. ಎಂಜಿನಿಯರಿಂಗ್ ಮತ್ತು ಡಿಜಿಟಲ್ ಸೇವೆಗೆ ಸಂಬಂಧಿಸಿದಂತೆ 2025ರೊಳಗೆ 600 ತಂತ್ರಜ್ಞರನ್ನು ನೇಮಕ ಮಾಡಿಕೊಳ್ಳಲಾಗುವುದು' ಎಂದು ಹೇಳಿದ್ದಾರೆ.

'ಈಗಾಗಲೇ, ಬೆಂಗಳೂರಿನಲ್ಲಿ 500ಕ್ಕೂ ಹೆಚ್ಚು ಜಾಗತಿಕ ಸಾಮರ್ಥ್ಯ ಕೇಂದ್ರಗಳು (ಜಿಸಿಸಿ) ಇವೆ. ಹಣಕಾಸು, ಆರೋಗ್ಯ, ರಿಟೇಲ್ ವ್ಯಾಪಾರ, ತಯಾರಿಕಾ ವಲಯ ಸೇರಿ ಭಾರತದ ಜಿಸಿಸಿಗಳಲ್ಲಿ ಶೇ 30ಕ್ಕಿಂತ ಹೆಚ್ಚು ಪಾಲನ್ನು ಬೆಂಗಳೂರು ಹೊಂದಿದೆ' ಎಂದು ವಿವರಿಸಿದ್ದಾರೆ.

ಕಾರು ಕಾಫಿ ಹರಟೆ...


ಹೇಗಿದೆ ನನ್ ಕಾರು!

ಕೆಫೆಯಲ್ಲಿ ಸೂಪರ್‌ಕಾರುಗಳು

ಬೆಂಗಳೂರು ಹೊಸ ಬಗೆಯ ಜೀವನಶೈಲಿಯನ್ನು ಮೈಗೂಡಿಸಿಕೊಳ್ಳುತ್ತಲೇ ಬೆಳೆಯುತ್ತಿದೆ. ಕಾರು ಪ್ರಿಯರು ಸೇರಿಕೊಂಡು ಕಾರ್ ಮೀಟ್‌ಅಪ್ ಮಾಡುವುದು ಈಗಿನ ಟ್ರೆಂಡ್. ಇಲ್ಲಿಗೆ ನ್ಯಾನೊ ಕಾರಿನಿಂದ ಸೂಪರ್ ಕಾರುಗಳ ತನಕ ಬರುತ್ತವೆ. ಎಲ್ಲರೂ ಸೇರಿ ಕಾಫಿ ಹೀರಿಕೊಂಡು ಒಂದಷ್ಟು ಹೊತ್ತು ಹರಟಿ ವಾರಾಂತ್ಯವನ್ನು ತಾಜಾ ಮಾಡಿಕೊಳ್ಳುತ್ತಾರೆ.

ಇ.ಎಸ್. ಸುಧೀಂದ್ರ ಪ್ರಸಾದ್

ವಾವ್... ಫೆರಾರಿ....! ಎಷ್ಟು ವರ್ಷದಿಂದ ಓಡಿಸ್ತಿದ್ದೀರಿ? ಹೇಗೆ ಮೆಂಟೇನ್ ಮಾಡ್ತೀರಿ? ಟಾಪ್ ಸ್ಪೀಡ್‌ನಲ್ಲಿ ಎಲ್ಲಿಯಾದರೂ ಓಡಿಸಿದ್ದೀರಾ? ಹೇಗಿರುತ್ತೆ ಫೀಲಿಂಗ್?

ಝೆನ್ ಕಾರಿನಲ್ಲಿ ಬಂದಿದ್ದ ಯುವಕ ಒಂದೇಸಮನೆ ಫೆರಾರಿ ಕಾರಿನ ಮಾಲೀಕರಿಗೆ ಪ್ರಶ್ನೆಗಳ ಸುರಿಮಳೆಗರೆದ.

'ಹೋ... ನನ್ನ ಬಾಲ್ಯದ ಕ್ರಶ್ ಝೆನ್. ನನ್ನ ಅಂಕಲ್ ಹತ್ರ ಇತ್ತು. ಆಗಾಗ ಅವರಿಂದ ಪಡೆದು ಓಡಿಸ್ತಿದ್ದೆ. ಮಸ್ತ್ ಮಜಾ ಕೊಡುತ್ತೆ' ಎಂದರು ಫೆರಾರಿ ಮಾಲೀಕರು. ಆ ಯುವಕನ ಖುಷಿಗೆ ಎಲ್ಲೆಯೇ ಇರಲಿಲ್ಲ!

ಶ್ರೀಮಂತಿಕೆಯ ಪ್ರದರ್ಶನದ ವಸ್ತುವಾಗಿದ್ದ ಕಾರು, ಈಗ ಭಾರತದಲ್ಲಿ ಕೋಟ್ಯಂತರ ಕುಟುಂಬಗಳ ಅವಶ್ಯ ವಸ್ತುಗಳ ಪಟ್ಟಿಗೆ ಸೇರಿಕೊಂಡಿದೆ. ಹೀಗಾಗಿ ರಾಜ–ಮಹಾರಾಜರು, ಆಗರ್ಭ ಶ್ರೀಮಂತರ ವಿಂಟೇಜ್ ಕಾರುಗಳ ಪ್ರದರ್ಶನ ಈಗ ಸಾಮಾನ್ಯ ಕಾರುಗಳ 'ಕಾರ್ ಮೀಟ್‌ಅಪ್' ಎಂಬ ಹೆಸರಿನ ಹೊಸ ರೂಪ ಪಡೆದುಕೊಂಡಿದೆ.

1920 ಹಾಗೂ 1930ರಲ್ಲಿ ಪಾಶ್ಚಾತ್ಯ ರಾಷ್ಟ್ರಗಳಲ್ಲಿ 'ಕಾರ್ ಮೀಟ್‌ಅಪ್' ಅಥವಾ 'ಕ್ರೂಸಿಂಗ್' ಎಂಬ ಪರಿಕಲ್ಪನೆ ಜನಪ್ರಿಯತೆ ಪಡೆದುಕೊಂಡಿತ್ತು. ಯುವ ಸಮೂಹ ತಮ್ಮ ಕಾರುಗಳೊಂದಿಗೆ ನಗರದ ಹೊರವಲಯದ ವಿಶಾಲ ರಸ್ತೆಯಲ್ಲೋ, ಇನ್ಯಾವುದೋ ಸಭಾಂಗಣದ ಎದುರು ಸೇರಿ ತಮ್ಮ ತಮ್ಮ ಕಾರುಗಳನ್ನು ಪ್ರದರ್ಶಿಸುವುದು ಹಾಗೂ ತಮ್ಮಂತೆಯೇ ಇರುವ ಕಾರು ಮೋಹಿಗಳೊಂದಿಗೆ ಒಂದಷ್ಟು ಹರಟುತ್ತಾ ವಿಚಾರ ವಿನಿಮಯ ಮಾಡಿಕೊಳ್ಳುವುದು ಮೀಟ್‌ಅಪ್‌ಗಳ ಮುಖ್ಯ ಉದ್ದೇಶವಾಗಿತ್ತು. ಇವುಗಳಲ್ಲಿ ಕೆಲವು ಸಣ್ಣ ಪ್ರಮಾಣದ್ದೂ ಇದ್ದವು. ಇನ್ನೂ ಕೆಲವರು ನೂರಾರು ಕಾರುಗಳನ್ನು ಸೇರಿಸಿ ದೊಡ್ಡ ಕಾರ್ಯಕ್ರಮ ಮಾಡುವವರೂ ಇದ್ದರು.


ಕಾರ್ಸ್ ಆ್ಯಂಡ್ ಕಾಫಿ ಆಯೋಜಿಸಿದ್ದ ಮೀಟ್‌ಅಪ್‌ನಲ್ಲಿ ಪಾಲ್ಗೊಂಡ ಕಾರುಗಳ ಫೋಟೊ ತೆಗೆಯಲು ಮುಗಿಬಿದ್ದ ಆಸಕ್ತರು

ಇದು ನಂತರದ ದಿನಗಳಲ್ಲಿ ರೇಸಿಂಗ್ ಅಂಗಣವಾಗಿ ರಂಗು ಹೆಚ್ಚಿಸಿಕೊಳ್ಳುತ್ತಾ ಸಾಗಿತು. ತಮ್ಮ ಕಾರುಗಳ ಸಾಮರ್ಥ್ಯ ಪ್ರದರ್ಶನದ ಡ್ರ್ಯಾಗ್ ರೇಸ್‌ಗಳಾಗಿ ಬದಲಾಯಿತು. ಇಂಥ ಪರಿಕಲ್ಪನೆಯನ್ನೇ ಆಧರಿಸಿದ 'ಫಾಸ್ಟ್ ಆ್ಯಂಡ್ ಫ್ಯೂರಿಯಸ್' ಸರಣಿ ಚಿತ್ರಗಳು ಇದಕ್ಕೆ ಒಳ್ಳೆಯ ನಿದರ್ಶನ. ಈಗ 'ಕಾರ್ ಮೀಟ್‌ಅಪ್' ಎನ್ನುವುದು ಜಾಗತಿಕ ಮಟ್ಟದಲ್ಲಿ ಹೆಚ್ಚು ಪ್ರಚಲಿತವಾಗಿದೆ. ಈಗ ಬೆಂಗಳೂರಿನಂತ ಮಹಾನಗರಗಳಲ್ಲೂ ಜನಪ್ರಿಯಗೊಳ್ಳುತ್ತಿದೆ. ಇಲ್ಲಿ ವಿಲಾಸಿ ಕಾರು ಅಥವಾ ಪುಟ್ಟದಾದ ಹ್ಯಾಚ್‌ಬ್ಯಾಕ್ ಎಂಬ ಭೇದವಿಲ್ಲ. ಏನಿದ್ದರೂ ಕಾರು, ಕಾರು ಮತ್ತು ಕಾರು ಅಷ್ಟೇ.



> "ಸೂಪರ್ ಕಾರು ಹೊಂದಿರುವವರ ಜತೆ ಮಾತನಾಡಲು ಕೆಲವರು ಕೀಳರಿಮೆ ಅನುಭವಿಸುತ್ತಿದ್ದರು. ಆದರೆ ಕಾರ್ ಮೀಟ್‌ಅಪ್‌ನಲ್ಲಿ ಹೈ ಕಲ್ಚರ್ ಎಂಬ ಮೇಲರಿಮೆ ಇಲ್ಲ. ಕಾರಿನೊಂದಿಗೆ ಮೀಟ್‌ಅಪ್‌ಗಳಿಗೆ ಬರುವುದು, ಕಾಫಿ ಕುಡಿಯುವುದು, ಕಾರು ತೋರಿಸುವುದಷ್ಟೇ."
>
> **ನೇಸರ,** ಕಾರ್ಸ್ ಆ್ಯಂಡ್ ಕಾಫಿ

ಇಂಥ 'ಕಾರ್ ಮೀಟ್‌ಅಪ್'ಗಳನ್ನು ನಡೆಸುವ ಕೆಲ ಗುಂಪುಗಳು ರೂಪುಗೊಂಡಿವೆ. ಇನ್‌ಸ್ಟಾಗ್ರಾಂ, ಫೇಸ್‌ಬುಕ್, ವಾಟ್ಸ್‌ಆ್ಯಪ್‌ಗಳ ಮೂಲಕ ಆಹ್ವಾನ ಕಳುಹಿಸಲಾಗುತ್ತದೆ. ಈ ವಾರಾಂತ್ಯ ಎಲ್ಲಿ ಸೇರಬಹುದು ಎನ್ನುವ ಕುತೂಹಲದಲ್ಲೇ ಹಲವರು ದಿನ ಕಳೆಯುವುದೂ ಉಂಟು. ನಗರದ ಹೊರವಲಯದ ಹೋಟೆಲ್ ಇಲ್ಲವೇ ಕೆಫೆಗಳು, ಗೋ ಕಾರ್ಟ್ ಎಂಬ ರೇಸಿಂಗ್ ಟ್ರ್ಯಾಕ್‌ಗಳನ್ನೇ ವೇದಿಕೆಯನ್ನಾಗಿ ಪರಿವರ್ತಿಸಿಕೊಳ್ಳಲಾಗುತ್ತಿದೆ.

ಜನಪ್ರಿಯವಾಗಿದ್ದು ಹೇಗೆ...?

'ಕಾರ್ ಮೀಟ್‌ಅಪ್'ಗಳಲ್ಲಿ ಸಾಮಾನ್ಯವಾಗಿ ಕಾರು ಮೋಹಿಗಳಾದ ಸಮಾನ ಮನಸ್ಕರು ಒಂದೆಡೆ ಸೇರಿ ಹೊಸ ತಂತ್ರಜ್ಞಾನ ಅಥವಾ ಉತ್ತಮ ಕಾರ್ಯಕ್ಷಮತೆಯ ಕಾರುಗಳ ಕುರಿತು ಚರ್ಚಿಸುವುದು, ಕಾಫಿ ಹೀರುತ್ತಾ ಇತರ ಕಾರುಗಳ ಅಂದವನ್ನು ಕಣ್ತುಂಬಿಕೊಳ್ಳುವುದೇ ಆಗಿರುತ್ತದೆ. ಇನ್ನೂ ಕೆಲವರು ತಮ್ಮ ಕಾರನ್ನು ಹೆಚ್ಚು ಅಂದಗೊಳಿಸಿ, ಇತರರಿಂದ ಒಂದಷ್ಟು ಹೊಗಳಿಕೆಗಳನ್ನು ನಿರೀಕ್ಷಿಸುತ್ತಿರುತ್ತಾರೆ. ಕೆಲವರು ಅಜ್ಜ, ತಂದೆ ಓಡಿಸುತ್ತಿದ್ದ ಕಾರನ್ನು ತಂದು ಪ್ರದರ್ಶಿಸಿದರೆ, ಮತ್ತೆ ಕೆಲವರು ಹೊಸ ಮಾದರಿಯ ಕಾರನ್ನು ತಂದು ಪಾಲ್ಗೊಳ್ಳುತ್ತಿರುತ್ತಾರೆ. ಒಂದೆರೆಡು ಬಾರಿ ಇಂಥ ಮೀಟ್‌ಅಪ್‌ಗಳಿಗೆ ಹೋಗಿ ಬಂದಲ್ಲಿ, ನಂತರ ಇದರ ಸಂಗ ಬಿಡುವುದೇ ಕಷ್ಟ.

ಹೀಗೆ ಮೀಟ್‌ಅಪ್‌ಗಳನ್ನು ಬೆಂಗಳೂರಿನಲ್ಲಿ ಆಯೋಜಿಸುವುದರಲ್ಲಿ 'ಕಾರ್ಸ್ ಆ್ಯಂಡ್ ಕಾಫಿ', 'ಕ್ಲಬ್ ಆಕ್ಟೇನ್', 'ಮಾರ್ಕ್ಯೂ ಒನ್' ಸೇರಿದಂತೆ ಕೆಲ ಉತ್ಸಾಹಿ ಯುವಪಡೆಗಳು ಮುಂಚೂಣಿಯಲ್ಲಿವೆ.

ಇಲ್ಲೆಲ್ಲಾ ಫೆರಾರಿ, ಮಝುರಾಟಿ, ಎಎಂಜಿ, ಔಡಿ, ಪೋಶೆ, ಸುಪ್ರಾ, ಲ್ಯಾಂಬೋರ್ಗಿನಿ ಎಂಬ ವಿಲಾಸಿ ಕಾರುಗಳ ಜತೆಗೆ, ನ್ಯಾನೊ, ಝೆನ್, ಸ್ವಿಫ್ಟ್, ಪೋಲೊ ಕಾರುಗಳೂ ಪಾಲ್ಗೊಂಡ ಉದಾಹರಣೆಗಳಿವೆ. ಜತೆಗೆ ಇಂದಿಗೂ ಅದೇ ಬೇಡಿಕೆ ಉಳಿಸಿಕೊಂಡಿರುವ ಹೊಂಡಾ ಸಿಟಿ ವಿಟೆಕ್, ಝೆನ್, ಪೋಲೊ, ಸಿಡಿಯಾ, ಲ್ಯಾನ್ಸರ್, ಸ್ಕೋಡಾ ಆಕ್ಟೇವಿಯಾ ವಿಆರ್‌ಎಸ್, ವರ್ಟಸ್ ಜಿಟಿಐ ಕಾರುಗಳೂ ದುಬಾರಿ ಕಾರುಗಳಿಂತ ಹೆಚ್ಚು ಆಕರ್ಷಣೆ ಹೊಂದಿವೆ.

'ನಮ್ಮ ಮೊದಲ ಮೀಟ್‌ಅಪ್ ಬೆಂಗಳೂರಿನ ವಿಲ್ಸನ್ ಗಾರ್ಡನ್‌ನಲ್ಲಿರುವ ಮಧು ಟೈರ್ಸ್‌ನಲ್ಲಿ ನಡೆಯಿತು. ಟಾಟಾ ನ್ಯಾನೊ, ಮಿಟ್ಸುಬಿಷಿ ಮೊಂಟೆರೊ, ಲೆಕ್ಸಸ್ ಆರ್‌ಸಿಎಫ್, ಡಿಫೆಂಡರ್, ಪೋಶೆ ಕಾರುಗಳು ಬಂದಿದ್ದವು. ಪೋಶೆ ಮಾಲೀಕ, ಹೊಂಡಾ ಸಿಟಿಯ ಮಾಲೀಕನೊಂದಿಗೆ ಚರ್ಚಿಸುತ್ತಿದ್ದರೆ, ಮೊಂಟೆರೊದವರು ಡಿಫೆಂಡರ್ ಅವರೊಂದಿಗೆ ವಿಚಾರ ವಿನಿಮಯ ಮಾಡಿಕೊಳ್ಳುತ್ತಿದ್ದರು' ಎಂದು 'ಕಾರ್ಸ್ ಆ್ಯಂಡ್ ಕಾಫಿ'ಯ ನೇಸರ ನೆನಪಿಸಿಕೊಂಡರು.

ವುಡ್‌ಲ್ಯಾಂಡ್ಸ್ ಹೋಟೆಲ್, ಮಾರತ್ತಹಳ್ಳಿಯ ಇಝೋನ್, ಕನಕಪುರದ ಮೊಟೊ ಫಾರ್ಮ್, ಯುಬಿ ಸಿಟಿಯಂಥ ಸ್ಥಳಗಳೇ ಮೀಟ್‌ಅಪ್‌ಗಳ ತಾಣ. ಇನ್‌ಸ್ಟಾಗ್ರಾಂನಲ್ಲಿ ಇಂಥ ಮೀಟ್‌ಅಪ್‌ಗಳ ಆಹ್ವಾನ ರವಾನೆಯಾಗುತ್ತದೆ. ಬರುವವರು ಹೆಸರು ನೋಂದಾಯಿಸಿಕೊಳ್ಳುತ್ತಾರೆ. ಕೆಲವು ಸ್ಥಳಗಳಿಗೆ ಬಾಡಿಗೆ ನೀಡಬೇಕಾಗುತ್ತದೆ. ಒಂದಷ್ಟು ನಿರ್ವಹಣೆಯ ವೆಚ್ಚವೂ ಇರುತ್ತದೆ ಎನ್ನುತ್ತಾರೆ ಆಯೋಜಕರು.

ಕೆಲವು ಮೀಟ್‌ಅಪ್‌ಗಳು ಕಾರುಗಳ ಕಾರ್ಯಕ್ಷಮತೆ ಹಾಗೂ ಚಾಲಕನ ಚಾಲನಾ ಕಲೆಯ ಪರಿಣತಿಯನ್ನು ಒರೆಗೆ ಹಚ್ಚುವ ವೇದಿಕೆಗಳೂ ಆಗಿರುತ್ತವೆ. ಕೆಸರು, ಗುಂಡಿಯಲ್ಲಿ ಕಾರುಗಳನ್ನು ಹೇಗೆ ಸುರಕ್ಷಿತವಾಗಿ ಚಾಲನೆ ಮಾಡಬೇಕು ಎಂಬ ಪರೀಕ್ಷೆಯನ್ನು ಎದುರಿಸಬೇಕು. ಸ್ಪೀಡ್, ಸ್ಲಶ್, ಎಲಿವೇಷನ್, ಆರ್ಟಿಕಲೇಷನ್– ಹೀಗೆ ಹಲವು ಹಂತಗಳಲ್ಲಿ ಚಾಲಕರು ಪಾಸಾಗಿ, ಅಂತಿಮ ಹಂತಕ್ಕೆ ಹೋಗುತ್ತಾರೆ. ಗೆದ್ದವರಿಗೆ ಬಹುಮಾನಕ್ಕಿಂತ ಸವಾಲು ಎದುರಿಸಿದ ಸಂಭ್ರಮವೇ ಸಾಕು.

ಇಂಥ ಮೀಟ್‌ಅಪ್‌ಗಳು ಕೇವಲ ಪುರುಷರಿಗಾಗಿ ಎಂದೇನೂ ಇಲ್ಲ. ಸಾಕಷ್ಟು ಯುವತಿಯರೂ ಪಾಲ್ಗೊಳ್ಳುತ್ತಾರೆ.

12ನೇ ಪುಟಕ್ಕೆ...

ಗಡಾರಿ ಕೃಷ್ಣಪ್ಪನ ಜಾನಪದ ಕಣಜ

ಸುವರ್ಣಾ ಬಸವರಾಜ್



ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ರಂಗೇನಹಳ್ಳಿಯ ನಿವೃತ್ತ ದೈಹಿಕ ಶಿಕ್ಷಣ ಶಿಕ್ಷಕ ಗಡಾರಿ ಕೃಷ್ಣಪ್ಪ ಅವರ ಮನೆಯ ಮೊದಲ ಮಹಡಿಯಲ್ಲಿ 'ಕುವೆಂಪು ಜಾನಪದ ಕಣಜ' ಎನ್ನುವ ವಿಶಿಷ್ಟ ವಸ್ತು ಸಂಗ್ರಹಾಲಯವಿದೆ. ಇಲ್ಲಿ ದಿನಬಳಕೆ, ದೇವಸ್ಥಾನದಲ್ಲಿ ಬಳಸುವ ವಸ್ತುಗಳು, ನಾಣ್ಯಗಳು, ಪುಟ್ಟ ಗ್ರಂಥಾಲಯವೂ ಇದೆ. ಇದು ಜಾನಪದ ಸಂಶೋಧಕರು ಹಾಗೂ ಆಸಕ್ತರಿಗೆ ಪ್ರೇರಣೆ ನೀಡುತ್ತದೆ.

ಕೃಷ್ಣಪ್ಪನವರ ಜಾನಪದ ಕಣಜದಲ್ಲಿ ಸಂಗ್ರಹಿಸಿಟ್ಟಿರುವ ವಸ್ತುಗಳಲ್ಲಿನ ವೈವಿಧ್ಯತೆ ಅಚ್ಚರಿ ಮೂಡಿಸುತ್ತದೆ. ತಂತ್ರಜ್ಞಾನ ಬರುವ ಮೊದಲು ಕೃಷಿಯಲ್ಲಿ ಬಳಸುತ್ತಿದ್ದ ವಸ್ತುಗಳು ಇವುಗಳಲ್ಲಿ ಪ್ರಮುಖವಾಗಿವೆ. ಹಲವು ಬಗೆಯ ಮಚ್ಚು, ಕೊಡಲಿ, ಮರಬೋರಿಗೆ, ದೊಡ್ಡಬೋರಿಗೆ, ಸಣ್ಣ ಬೋರಿಗೆ, ತೆಂಗಿನಕಾಯಿ ಸುಲಿಯುವ ಇಕ್ಕಳ, ಗಾರೆ ಕೆಲಸ ಮಾಡುವ ಕರ್ಣಿ, ಎತ್ತಿನ ಸಣ್ಣ ಬಂಡಿ ಚಕ್ರ, ಮರ ಉಜ್ಜುವ ಉಜ್ಕೊಂಡ, ತೂಕ ಮಾಡುವ ತಕ್ಕಡಿಗಳು, ಎಮ್ಮೆ ಕಟ್ಟುವ ಸರಪಣಿ, ಹಮಾಲರು ಚೀಲ ಇಳಿಸಲು ಬಳಸುತ್ತಿದ್ದ ಹುಕ್ಕು, ಕುದುರೆ ಲಾಳ, ಕೈ ಕರಗಸ, ಬಾರಕೋಲು, ಜರಡಿ ಬೆಳಕಿಗೆಂದು ಬಳಸುತ್ತಿದ್ದ ಲಾಟೀನು. ಹೀಗೆ ಸಾಮಗ್ರಿಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ಹಿರಿಯರು ಮನೆಯಲ್ಲಿ ಬಳಸುತ್ತಿದ್ದ ಬೀಸುವಕಲ್ಲು, ಬುಟ್ಟು



ವಡೇವು, ಬಿದಿರಿನ ಮೊರ, ಬಿದಿರಿನ ಗೂಡೆ, ಹಲಗೆಯಿಂದ ಮಾಡಿದ ಕಾಯಿ ತುರಿಯುವ ತುರಿಮಣೆ, ಕಾಳು ಅಳೆಯುವ ಅರ್ಪಾವು, ಪಾವು, ಸೇರುಗಳು. ತೂಕ ಮಾಡುವ ಕಲ್ಲು, ಪಾತ್ರೆ ಕೆಳಗೆ ಇಡುವ ಇಲಿಕೆ, ಒನಕೆ, ಟ್ರಾನ್ಸಿಸ್ಟರ್ ರೇಡಿಯೋ, ಮಡಕೆ, ಗುಡಾಣ, ದಬ್ಬದ ಜರಡಿ, ಸೀಮೆಎಣ್ಣೆ ದೀಪ, ಒತ್ತು ಶ್ಯಾವಿಗೆ ಒಳ್ಳು, ಮದುವೆಯಲ್ಲಿ ಬಳಸುವ ಹಸೆ ಮಣೆ, ಮೊಸರು ಕಡೆಯುವ ಕಡೆಗೋಲು, ಕವಡೆ, ಗಂಡು ಮಕ್ಕಳ ಧರಿಸುವ ಕಾಲುಂಗರ, ಬಂಗಾರದ ಅಚ್ಚು, ದಬ್ಬದ ಕಣಜ, ಮರದ ತೊಟ್ಟಿಲು ಒಳಗೊಂಡಂತೆ ನೂರಾರು ಬಗೆಯ ಗೃಹ ಬಳಕೆ ಸಾಮಾನುಗಳು ಸಂಗ್ರಹಾಲದಲ್ಲಿವೆ.

12ನೇ ಪುಟಕ್ಕೆ...

ಪ್ರಜಾವಾಣಿ ಪತ್ರಿಕೆ ಸಂಗ್ರಹ!

ಸಾಮಾನ್ಯವಾಗಿ ದಿನಪತ್ರಿಕೆ ಓದುವವರು ಮರುದಿನ ಒಂದು ಕಡೆ ನೀಟಾಗಿ ಜೋಡಿಸಿ ಮೂರ್ನಾಲ್ಕು ತಿಂಗಳ ನಂತರ ರದ್ದಿ ಅಂಗಡಿಯವರಿಗೆ ಮಾರುವುದು ಸಾಮಾನ್ಯ. ಆದರೆ 50 ವರ್ಷಗಳಿಂದ 'ಪ್ರಜಾವಾಣಿ' ಓದುಗರಾಗಿರುವ ಕೃಷ್ಣಪ್ಪ, ಪತ್ರಿಕೆಯಲ್ಲಿ ಬರುವ ಅಂತರರಾಷ್ಟ್ರೀಯ ಘಟನಾವಳಿಗಳು, ಸಂಶೋಧನೆಗಳು, ಆವಿಷ್ಕಾರಗಳು, ಆರೋಗ್ಯಕ್ಕೆ ಸಂಬಂಧಿಸಿದ ಟಿಪ್ಸ್‌ಗಳು ಒಳಗೊಂಡಂತೆ ವಿವಿಧ ಅಂಶಗಳನ್ನು ದೇಶವಾರು ಕಡತ ಮಾಡಿ ಒಪ್ಪವಾಗಿ ಜೋಡಿಸಿದ್ದಾರೆ.

'ಪ್ರಜಾವಾಣಿ'ಯಲ್ಲಿ ಪ್ರಕಟವಾಗಿರುವ 200 ದೇಶಗಳ, ಭಾರತದ 30 ರಾಜ್ಯಗಳಲ್ಲಿ ದೊರೆಯುವ 180 ಗಿಡಮೂಲಿಕೆಗಳ ವಿವರ, ಐತಿಹಾಸಿಕ ಸ್ಥಳಗಳು, ಪ್ರಾಣಿ–ಪಕ್ಷಿ ಒಳಗೊಂಡಂತೆ ಅಲ್ಲಿನ ಅಪರೂಪದ ಮಾಹಿತಿಗಳನ್ನು ಕಲೆ ಹಾಕಿದ್ದಾರೆ. ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳ ಮಾಹಿತಿ, ಕರ್ನಾಟಕದ ದೊಡ್ಡ ದೊಡ್ಡ ಕೆರೆಗಳು, ಜಲಾಶಯಗಳು, ನದಿಗಳ ವಿವರಗಳಿವೆ. ಬ್ಯಾಂಕಿಂಗ್ ಸೇರಿ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದ ಪ್ರಶ್ನೋತ್ತರಗಳಿವೆ.

ಕೇರಳದ ಕಳರಿ ಕಲೆಗೆ ಒಲಿದವರು...

ಗಿರೀಶ ದೊಡ್ಡಮನಿ

ಇಶಿತಾ, ಜಾನ್ಹವಿ, ಭವ್ಯ ಮತ್ತು ಜಶನ್ ಅವರು ಬೆಂಗಳೂರಿನ ಪ್ರತಿಷ್ಠಿತ ಮಾಹಿತಿ ಮತ್ತು ತಂತ್ರಜ್ಞಾನ ಕಂಪನಿಯ ಉದ್ಯೋಗಿಗಳು. ದಿನವೂ ಧಾವಂತದ ಬದುಕು. ಸಂಜೆ, ರಾತ್ರಿ ಶಿಫ್ಟ್‌ಗಳಲ್ಲಿ ದುಡಿಯುವುದು. ಬೆಳಿಗ್ಗೆ ತಡವಾಗಿ ಏಳುವುದು. ಒಂದಿಷ್ಟು ತಿಂಡಿ, ಊಟ ಮಾಡಿಕೊಂಡು ಕೆಲಸಕ್ಕೆ ಧಾವಿಸುವುದು. ಸಂಬಳವೇನೋ ದೊಡ್ಡ ಮೊತ್ತದ್ದು. ಆದರೂ ಮನಸ್ಸು, ದೇಹವನ್ನು ಅದೇನೋ ಜಡತ್ವ ಆವರಿಸಿದ ಭಾವ. ದೂರದ ಊರಿನಿಂದ ಬಂದು ಇಲ್ಲಿ ದುಡಿಮೆ ಮಾಡುತ್ತಿರುವುದೇ ದೊಡ್ಡ ಸಾಧನೆ ಎಂಬಂತಹ ಸ್ಥಿತಿ.

ಹೀತಾ ಆರನೇ ತರಗತಿಯ ವಿದ್ಯಾರ್ಥಿನಿ. ಕಳೆದ ಐದು ವರ್ಷಗಳಿಂದ ಈ ಅಕಾಡೆಮಿಯಲ್ಲಿ ಕಳರಿ ಕಲಿಯುತ್ತಿದ್ದಾರೆ. ರಾಜ್ಯಮಟ್ಟ ಮತ್ತು ಖೇಲೊ ಇಂಡಿಯಾದಲ್ಲಿಯೂ ಸ್ಪರ್ಧಿಸಿದ್ದಾರೆ. ಅವರ ತಂದೆ ಐಟಿ ಕಂಪನಿಯ ಉದ್ಯೋಗಿ. 'ಮಗಳ ಆರೋಗ್ಯದ ದೃಷ್ಟಿಯಿಂದ ಕಳರಿ ಕಲಿಯಲು ಸೇರಿಸಿದೆ. ಮನೆಗೆ ಹತ್ತಿರವೂ ಇತ್ತು. ಅವಳೂ ಆಸಕ್ತಿ ಬೆಳೆಸಿಕೊಂಡಳು. ಇದರಿಂದಾಗಿ ಅವಳ ವ್ಯಕ್ತಿತ್ವದಲ್ಲಿ ಬಹಳ ಮಹತ್ವದ ಬದಲಾವಣೆಯಾಗಿದೆ. ಓದು, ಆರೋಗ್ಯದಲ್ಲಿ ಉತ್ತಮವಾಗಿದ್ದಾಳೆ. ಆತ್ಮವಿಶ್ವಾಸ ಬೆಳೆದಿದೆ' ಎಂದು ಹಿತಾ ಅವರ ತಂದೆ ಲೋಕೇಶ್ ಹೇಳುತ್ತಾರೆ.


ಕಳರಿಪಯಟ್ಟು ಕಲಿಯುತ್ತಿರುವ ಬಾಲಕಿಯರು

ಚಿತ್ರಗಳು: ಕಿಶೋರ್ ಕುಮಾರ್ ಬೋಳಾರ್

ಇವರಷ್ಟೇ ಅಲ್ಲ, ಇಂತಹ ಹಲವರು 'ಮೆಟ್ರೊ ನಗರಿ'ಯ ಬದುಕಿನ ತಲ್ಲಣಗಳು, ಉದ್ಯೋಗ, ವೈಯಕ್ತಿಕ ಜೀವನದ ತೊಳಲಾಟಗಳಿಂದ ಪಾರಾಗಲು ಕೇರಳ ರಾಜ್ಯದ 'ಕಳರಿಪಯಟ್ಟು' ಎಂಬ ಸಮರ ಕಲೆಯನ್ನು ಅಪ್ಪಿಕೊಂಡಿದ್ದಾರೆ.


ಐಟಿ ಕಂಪನಿಗಳ ಉದ್ಯೋಗಿಗಳೇ ಬಹುಪಾಲು ಸಂಖ್ಯೆಯಲ್ಲಿರುವ ಎಚ್‌ಎಸ್‌ಆರ್ ಲೇಔಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕಳರಿಯ ಕಲರವ ಮೆಲ್ಲಗೆ ಆವರಿಸುತ್ತಿದೆ. ಇಲ್ಲಿಯ ಎರಡನೇ ಸೆಕ್ಟರ್‌ನಲ್ಲಿರುವ ಚಂದ್ರಾಜಿಸ್ ವಲ್ಲಭಟ್ಟ ಕಳರಿ ಸಂಘಂ ಕಳೆದ ಕೆಲವು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದೆ. ಕೇರಳದ ಹಿರಿಯ ಕಳರಿ ಕೋಚ್ ಚಂದ್ರಮೋಹನ್ ಇದರ ಮುಖ್ಯಸ್ಥರು. ಇವರು ಕುಟುಂಬವು ತಲೆತಲಾಂತರದಿಂದ ಕಳರಿ ಕಲೆಯನ್ನು ಪೋಷಿಸುತ್ತ ಬಂದಿದೆ.

'ಇದು ಪಾರಂಪರಿಕ ಸಮರ ಕಲೆಯಾಗಿದೆ. ನಮ್ಮ ಪೂರ್ವಜರು ಕಲಿಸಿದ ಜೀವನಶೈಲಿಯೂ ಇದಾಗಿದೆ. ದೈಹಿಕವಾಗಿ, ಮಾನಸಿಕವಾಗಿ ನಮ್ಮ ವ್ಯಕ್ತಿತ್ವವನ್ನು ಸದೃಢವಾಗಿಸುವ ಕಲೆ ಇದಾಗಿದೆ. ಕೇರಳದ ಕೆಲವು ಭಾಗಗಳಲ್ಲಿ ಇದು ಇಂದಿಗೂ ಗುರುಕುಲ ಮಾದರಿಯ ಶಿಕ್ಷಣ ಪದ್ಧತಿಯಲ್ಲಿಯೇ ನೀಡಲಾಗುತ್ತದೆ. ಅಪ್ಪಟ ದೇಶಿ ಕಲೆ ಇದು. ಇಲ್ಲಿ ಬರಿಗೈನಲ್ಲಿ ಹೋರಾಟ ಮಾಡುವ ಕಲೆಯ ಜೊತೆಗೆ, ದೊಣ್ಣೆ, ಕೊಂಬು, ಖಡ್ಗ, ಭರ್ಜಿ ಮತ್ತಿತರ ಆಯುಧಗಳನ್ನು ಬಳಸಿ ಹೋರಾಡುವುದನ್ನೂ ಕಲಿಸಲಾಗುತ್ತದೆ. ಆದರೆ ಎಲ್ಲಕ್ಕಿಂತ ಮುಖ್ಯವಾಗಿ ದೇಹವನ್ನು ಹುರಿಗೊಳಿಸಿ, ಆ ಮೂಲಕ ಮಾನಸಿಕ ಸಬಲತೆಯನ್ನು ಸ್ಥಾಪಿಸುವುದು ಮೂಲ ಉದ್ದೇಶ. ಇದರಲ್ಲಿ ಯೋಗವೂ ಇದೆ, ಪೈಲ್ವಾನರ ಕಸರತ್ತುಗಳೂ ಇವೆ. ಆದರೆ ಜಿಮ್‌ಗಳಲ್ಲಿರುವಂತೆ ಮಸಲ್ ಬಿಲ್ಡಿಂಗ್ ಇಲ್ಲ. ಆದರೆ ಅದರಷ್ಟೇ ಬಲಾಢ್ಯವಾದ ದೇಹವನ್ನು ಕಟ್ಟುವ ಕೆಲಸ ಇದಾಗಿದೆ' ಎಂದು ಚಂದ್ರಮೋಹನ್ ವಿವರಿಸುತ್ತಾರೆ.

ಕಾಲ ಬದಲಾದಂತೆ ಕಳರಿ ಕಲೆಯು ಕೇವಲ ಸಂಪ್ರದಾಯಕ್ಕೆ ಮಾತ್ರ ಸೀಮಿತವಾಗಿಲ್ಲ. ಫಿಟ್‌ನೆಸ್ ಮತ್ತು ಕ್ರೀಡೆಯಾಗಿಯೂ ರೂಪಾಂತರಗೊಳ್ಳುತ್ತಿದೆ. ಅದರ ಫಲವಾಗಿಯೇ ಕೇರಳದ ಗಡಿ ದಾಟಿ ದೇಶದುದ್ದಕ್ಕೂ ಪಸರಿಸುತ್ತಿದೆ. ಬೆಂಗಳೂರಿನಲ್ಲಿಯೂ ನೆಲೆ ಕಂಡಿದೆ.

ಚಂದ್ರಮೋಹನ್ ಅವರ ಅಕಾಡೆಮಿಯಲ್ಲಿ 7 ರಿಂದ 45 ವರ್ಷದೊಳಗಿನವರು ಇದ್ದಾರೆ. ಅವರಲ್ಲಿ ಐವರು ಮಹಿಳೆಯರು ಇದ್ದಾರೆ.

11ನೇ ಪುಟಕ್ಕೆ...


ಕಳರಿಪಯಟ್ಟು

ಸಾಹಿತ್ಯ ಓದು, ಚರ್ಚೆ, ಸಂವಾದ ಇತ್ಯಾದಿ

ಸಂಜಯ್ ಚಿತ್ರದುರ್ಗ

ಬೆಂಗಳೂರು ಎಂಬ ಮಹಾನಗರಕ್ಕೆ ಕಾಲಿಟ್ಟು ನಾಲ್ಕೈದು ದಿನಗಳು ಆಗಿದ್ದವು. ಏಕಾಂಗಿತನ ಕಾಡುತ್ತಿತ್ತು. ಆಗ ಜೊತೆಯಾಗಿದ್ದು ಸೋಷಿಯಲ್ ಮೀಡಿಯಾ. ಫೇಸ್‌ಬುಕ್‌ವೊಂದರ ಪೇಜ್‌ನಲ್ಲಿ 'ಬಾ ಗುರು ಬುಕ್ ತಗೋ' ಎಂಬುದಾಗಿ ಆಹ್ವಾನ ನೀಡಿರುವುದು ಕಾಣಿಸಿತು. ನಾನು ಕುತೂಹಲಗೊಂಡು ಅದರ ಬಗ್ಗೆ ಹುಡುಕಾಡಿದೆ. ಪುಸ್ತಕ ಬರೆದ ಲೇಖಕರೇ ರಸ್ತೆಬದಿಯಲ್ಲಿ ನಿಂತು ಪುಸ್ತಕ ಮಾರುತ್ತಾರೆ ಎನ್ನುವುದು ತಿಳಿಯಿತು!

ಈ ಅಭಿಯಾನವನ್ನು ಆರಂಭಿಸಿದವರು ಸಾಹಿತಿ ಜಯರಾಮಚಾರಿ. ಅವರ ಫೇಸ್‌ಬುಕ್ ಖಾತೆಯಲ್ಲಿ ಇಣುಕಿದಾಗ, ಸಾಹಿತಿ ವಸುಧೇಂದ್ರ ಹಂಚಿಕೊಂಡ ಫೇಸ್‌ಬುಕ್ ಪೋಸ್ಟಿನಿಂದ ಪ್ರೇರಿತರಾಗಿ ಇದನ್ನು ಆರಂಭಿಸಿದಾಗಿ ಹೇಳಿಕೊಂಡಿದ್ದರು. ಅವರಿಗೆ ಸಾಥ್ ನೀಡಿದ್ದು ಮತ್ತೊಬ್ಬ ಸಾಹಿತಿ ಬಿ.ಕೆ. ವಿಕ್ರಂ. ವರ್ಷದ ಹಿಂದೆ ಕಬ್ಬನ್ ಪಾರ್ಕ್‌ನಲ್ಲಿ ಪುಸ್ತಕ ಮಾರಲು ಹೊರಟ ಲೇಖಕರು, ಈಗ ಬೆಂಗಳೂರಿನ ವಿವಿಧ ಭಾಗಗಳಲ್ಲಿ ತಿಂಗಳಲ್ಲಿ ಎರಡು ಬಾರಿ 'ಬಾ ಗುರು ಬುಕ್ ತಗೋ' ಎನ್ನುತ್ತಾ 45 ದಿನಗಳಲ್ಲಿ ತಾವೇ ಬರೆದ ಪುಸ್ತಕಗಳ 1700 ಪ್ರತಿಗಳನ್ನು ಮಾರಾಟ ಮಾಡಿದ್ದಾರೆ! ಈ ಸಾಹಸಕ್ಕೆ 40ಕ್ಕೂ ಹೆಚ್ಚು ಸಾಹಿತಿಗಳು ಕೈಜೋಡಿಸಿದ್ದಾರೆ. 'ತಮ್ಮ ಪುಸ್ತಕಗಳನ್ನು ತಾವೇ ಮಾರಾಟ ಮಾಡುವ ಮೂಲಕ ಹೊಸ ಅನುಭವದ ಜೊತೆಗೆ ಹೊಸ ಓದುಗರು, ಪುಸ್ತಕ ಮಾರಾಟದ ಕಷ್ಟಸುಖ ಗೊತ್ತಾಗುತ್ತಿದೆ' ಎನ್ನುತ್ತಾರೆ ಜಯರಾಮಾಚಾರಿ.


ಫೇಸ್‌ಬುಕ್‌ನಲ್ಲಿ ಕಣ್ಣಿಗೆ ಬಿದ್ದ ಮತ್ತೊಂದು ವಿಭಿನ್ನ ಕಾರ್ಯಕ್ರಮ 'ಹಳೇ ಬಾಟ್ಲಿ ಹೊಸ ವೈನು'. ಈ ಹೆಸರೇ ಆಕರ್ಷಕ. ಜಯರಾಮಚಾರಿ ಜೊತೆ ವಿಕ್ರಂ ಬಿ.ಕೆ, ಕಿರಣ್‌ಕುಮಾರ್ ಕೆ.ಆರ್. ಸೇರಿಕೊಂಡು ಆರಂಭಿಸಿದ 'ಹಳೇ ಬಾಟ್ಲಿ ಹೊಸ ವೈನು-ಸಮಕಾಲೀನ ಬರಹಗಾರರ ಅಭಿವ್ಯಕ್ತಿಗೊಂದು ವೇದಿಕೆ' ಎನ್ನುವ ಈ ಕಾರ್ಯಕ್ರಮ ಹೊಸ ಪ್ರಯೋಗ ಎನ್ನಲು ಅಡ್ಡಿಯಿಲ್ಲ. ಸಮಕಾಲೀನ ಸಾಹಿತಿಗಳ ಕೃತಿಗಳ ಬಗ್ಗೆ ಹಿರಿಯ ಸಾಹಿತಿಗಳು ಸಂವಾದ ನಡೆಸಿಕೊಡುವ ಮೂಲಕ ಹೊಸ ಹೊಳಹುಗಳನ್ನು ಸ್ಫುರಿಸುವ ಕೆಲಸ ಮಾಡುತ್ತಿದೆ. ಈ ಕಾರ್ಯಕ್ರಮದ ಮೂರು ಸಂಚಿಕೆಗಳು ಇದುವರೆಗೆ ಜರುಗಿದೆ. 'ಹಲೋ ಕತೆಗಾರ', 'ಹಲೋ ಕತೆಗಾರ್ತಿ' ಹಾಗೂ 'ಕವಿಗಳಿಗೆ ಕ್ಲಾಸು' ಹೆಸರಿನಲ್ಲಿ ಸಾಹಿತ್ಯ ಸಂವಾದ ನಡೆಸುತ್ತಿದ್ದಾರೆ.



'ಹಳೇ ಬಾಟ್ಲಿ ಹೊಸ ವೈನು' ಕಾರ್ಯಕ್ರಮದಲ್ಲಿ ಎ.ಎಸ್.ಜಿ, ಸಂಧ್ಯಾರಾಣಿ, ಕಿರಣ್ ಕುಮಾರ್ ಕೆ.ಆರ್

> ಹೊಸ ತಲೆಮಾರಿನ ತರುಣ–ತರುಣಿಯರ ಕನ್ನಡ ಪುಸ್ತಕಗಳನ್ನು ಓದುವ ಅಭಿರುಚಿಯನ್ನು ಪ್ರೋತ್ಸಾಹಿಸುವ ಹತ್ತಾರು ವೇದಿಕೆಗಳು ಬೆಂಗಳೂರಿನಂಥ ಮಹಾನಗರದಲ್ಲಿವೆ. ಸೋಷಿಯಲ್ ಮೀಡಿಯಾ ಇಂತಹ ಸಮಾನ ಮನಸ್ಕರನ್ನು ಬೆಸೆಯುವ ಕೊಂಡಿಯಂತೆ ಕೆಲಸ ಮಾಡುತ್ತಿದೆ.

'ಮಾಸದ ಮಂಥನ'–ಪ್ರತಿ ತಿಂಗಳ ಮೊದಲ ಭಾನುವಾರ ಬೆಂಗಳೂರಿನ ದೊಡ್ಡಕನ್ನೆಲ್ಲಿಯ 'ಸಾನಿಧ್ಯ'ದಲ್ಲಿ ನಡೆಯುವ ಕಾರ್ಯಕ್ರಮ. ಇದರಲ್ಲಿ ಕಲೆ, ಸಾಹಿತ್ಯ, ಸಂಗೀತ, ಸಂಸ್ಕೃತಿ, ಅಧ್ಯಾತ್ಮ ಮುಂತಾದ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವವರೊಂದಿಗೆ ಸಂವಾದ, ಕಾರ್ಯಗಾರ, ವಿಚಾರ ಸಂಕಿರಣ ನಡೆಯುತ್ತದೆ. 2017ರಲ್ಲಿ ಶುರುವಾದ ಮಾಸದ ಮಂಥನದಲ್ಲಿ ಇದುವರೆಗೆ 65 ಸಂಚಿಕೆಗಳಾಗಿವೆ. ಕವಿ ಸುಬ್ರಾಯ ಚೊಕ್ಕಾಡಿ, ಬೇಲೂರು ರಘುನಂದನ್, ಎಚ್.ಡುಂಡಿರಾಜ್ ಸೇರಿದಂತೆ ಹಲವರು ಪಾಲ್ಗೊಂಡಿದ್ದಾರೆ.



ಕೇಳು ಮನಸೇ ಕಾರ್ಯಕ್ರಮದಲ್ಲಿ ಲೇಖಕ ಅನಂತ್ ಕುಣಿಗಲ್

ಇದರ ರೂವಾರಿ ಶಿವಕೀರ್ತಿ.

ಸಾಹಿತಿ ವಸುಧೇಂದ್ರ 'ನಾಕೊಳ್ಳೇ ಮಾತು' ಎನ್ನುವ ಹೊಸ ಕಾರ್ಯಕ್ರಮವನ್ನು ಆರಂಭಿಸಿದ್ದಾರೆ. ಇಲ್ಲಿ ವಸುಧೇಂದ್ರ ಲೇಖಕರ ಜೊತೆಗೆ ಸಂವಾದ ನಡೆಸುತ್ತಾರೆ. ಲೇಖಕರ ಬರಹ, ಬದುಕು, ಹವ್ಯಾಸ, ಸವಾಲುಗಳನ್ನು ತಿಳಿಯುವ ಪ್ರಯತ್ನ ಇದಾಗಿದೆ. ಚರ್ಚ್ ಸ್ಟ್ರೀಟ್‌ನ ದಿ ಬುಕ್ ವರ್ಮ್‌ನಲ್ಲಿ ನಡೆದ ಮೊದಲ ಸಂಚಿಕೆಯಲ್ಲಿ ಕತೆಗಾರರಾದ ಕರ್ಕಿ ಕೃಷ್ಣಮೂರ್ತಿ ಹಾಗೂ ಕಾವ್ಯ ಕಡೆಮೆ ಅವರೊಂದಿಗೆ ಸಂವಾದ ನಡೆಸಿದರು. ಇದುವರೆಗೆ ಎರಡು ಸಂಚಿಕೆಗಳು ನಡೆದಿವೆ. ಇನ್ನು ಮುಂದೆ ತಿಂಗಳಿಗೊಮ್ಮೆ 'ನಾಕೊಳ್ಳೇ ಮಾತು'ಗಳನ್ನು ಸಾಹಿತ್ಯ ಪ್ರೇಮಿಗಳು ಕೇಳಬಹುದು.

ಪುಸ್ತಕ ತಗೊಳ್ಳಿ...

ಅಂದು ಭಾನುವಾರ ಮುಂಜಾನೆ. ರಸ್ತೆಬದಿಯಲ್ಲಿ ಕನ್ನಡ ಪುಸ್ತಕಗಳನ್ನು ಹರಡಿಕೊಂಡು ನಿಂತಿದ್ದ ಹುಡುಗನೊಬ್ಬ, 'ಬನ್ನಿ, ಪುಸ್ತಕ ತಗೊಳ್ಳಿ' ಎಂದು ಮುಗುಳ್ನಗೆ ಬೀರುತ್ತಾ ಆಹ್ವಾನಿಸಿದ. ರಸ್ತೆಬದಿಯ ಖಾಲಿ ಜಾಗದಲ್ಲಿ ಸ್ಟಾಂಡ್‌ನಲ್ಲಿ ಒಂದಿಷ್ಟು ಪುಸ್ತಕಗಳನ್ನು ಜೋಡಿಸಿಟ್ಟಿದ್ದನು. ಪಕ್ಕದಲ್ಲಿ 'ಕನ್ನಡ ಪುಸ್ತಕ ಓದಿ ಎಷ್ಟು ದಿನ ಆಯ್ತು?' ಎಂಬ ಫಲಕ ನೋಡಿದ ನನಗೆ, 'ಹೌದಲ್ವಾ, ಹೈಸ್ಕೂಲು ಕಾಲೇಜು ದಿನಗಳಲ್ಲಿ ಹುಚ್ಚಿಗೆ ಬಿದ್ದವನಂತೆ ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ಕೆ.ಶಿವರಾಮ ಕಾರಂತ, ಎಲ್.ಎಲ್.ಭೈರಪ್ಪ ಅವರ ಪುಸ್ತಕಗಳನ್ನು ಓದುತ್ತಿದ್ದವನು, ಈಗ ಓದಿ ಎಷ್ಟು ದಿನ ಆಯ್ತು' ಎಂದು ಪ್ರಶ್ನಿಸಿಕೊಂಡಾಗ, ಕೊನೆಯ ಬಾರಿ ಓದಿದ ಪುಸ್ತಕದ ಹೆಸರು ಕೂಡ ನೆನಪಿಗೆ ಬರಲಿಲ್ಲ. ಒಂದೆರಡು ಪುಸ್ತಕ ಕೊಂಡುಕೊಂಡು, ಪುಸ್ತಕ ಮಾರುತ್ತಿದ್ದ ಹುಡುಗನ ಬಳಿ ಮಾತಿಗಿಳಿದೆ.

'ಇದು ವೀರಲೋಕ ಪ್ರಕಾಶನದ ವೀರಕಪುತ್ರ ಶ್ರೀನಿವಾಸ್ ಅವರ ಪರಿಕಲ್ಪನೆ. ಕನ್ನಡ ಪುಸ್ತಕಗಳನ್ನು ಕನ್ನಡಿಗರು ಇರುವ ಕಡೆಗಳಲ್ಲಿ ಮಾರಾಟ ಮಾಡಬೇಕು. ಪುಸ್ತಕ ಓದುವವರ ಸಂಖ್ಯೆ ಜಾಸ್ತಿಯಾಗಬೇಕು ಎನ್ನುವ ಪ್ರಯತ್ನವಿದು. ಆರೇಳು ತಿಂಗಳುಗಳಿಂದ ಪ್ರತಿ ಭಾನುವಾರ ಬೆಂಗಳೂರಿನ ಗಲ್ಲಿ ಗಲ್ಲಿಗಳಲ್ಲಿ, ರಸ್ತೆಬದಿಗಳಲ್ಲಿ ನಿಂತು ಪುಸ್ತಕ ಮಾರುತ್ತಿದ್ದೇವೆ. ನಮ್ಮಲ್ಲಿ ಬಹುತೇಕರು ವಿದ್ಯಾರ್ಥಿಗಳು. ಇದರಿಂದ ನಮಗೆ ಸಂಭಾವನೆ ಸಿಗುತ್ತೆ' ಎಂದನು ಆ ಹುಡುಗ.

'ಕೇಳು ಮನಸೇ'–ಇದು ಓಪನ್ ಮೈಕ್ ಕಾರ್ಯಕ್ರಮ. ಕನ್ನಡದಲ್ಲಿ ಕಥೆ, ಕವನ ವಾಚನಕ್ಕಾಗಿಯೇ ಸೃಷ್ಟಿಯಾದ ವೇದಿಕೆ. ವಿಶಿಷ್ಟ, ವಿಭಿನ್ನ ರೀತಿಯ ಸಾಹಿತ್ಯ ಚಟುವಟಿಕೆಗಳನ್ನು ಮಾಡುತ್ತಿದೆ. ಕತೆಗಾರ ಪ್ರವೀಣ್‌ಕುಮಾರ್ ಜಿ. ನೇತೃತ್ವದಲ್ಲಿ 2022ರಿಂದ ನಡೆಯುತ್ತಿರುವ 'ಕೇಳು ಮನಸೇ' ತಿಂಗಳಲ್ಲಿ ಒಂದು ಬಾರಿ ನಡೆಯುತ್ತದೆ. ಇದುವರೆಗೆ 16 ಸಂಚಿಕೆಗಳಾಗಿವೆ. ಸುಚಿತ್ರಾ ಫಿಲ್ಮ್ ಸೊಸೈಟಿಯಲ್ಲಿ ನಡೆಯುವ ಈ ಕಾರ್ಯಕ್ರಮದಲ್ಲಿ ಒಂದು ಸಂಚಿಕೆಯಲ್ಲಿ ಆರು ಜನರಿಗೆ ಅವಕಾಶವಿದ್ದು, ಕನ್ನಡದ ಒಳ್ಳೆಯ ಕತೆ, ಕವನಗಳು ಇಲ್ಲಿ ಕೇಳಲು ಸಿಗುತ್ತವೆ.

'ಅರಳಿಕಟ್ಟೆ' ಎನ್ನುವ ಓಪನ್ ಮೈಕ್ ಕೂಡ ಕನ್ನಡಿಗರ ಮನ ಗೆದ್ದಿದೆ. ಕನ್ನಡಿಗರಿಗಾಗಿ ಹಾಗೂ ಕನ್ನಡಕ್ಕಾಗಿ ಇರುವ ಓಪನ್ ಮೈಕ್ ವೇದಿಕೆಗಳಲ್ಲಿ ಇದೂ ಒಂದು. ಎರಡು ವರ್ಷಗಳ ಹಿಂದೆ ಶುರುವಾದ ಅರಳಿಕಟ್ಟೆಯು ಕತೆ, ಕವನ, ಹಾಡು, ಅನುಭವಗಳಿಗೆ ವೇದಿಕೆಯಾಗಿದೆ. ಪ್ರತಿ ತಿಂಗಳಿಗೊಮ್ಮೆ ಭಾನುವಾರದಂದು ಬಸವನಗುಡಿಯ ಪಾಪ್ಸ್ ಆಫ್ ಪಾಸ್ಟೆಲ್ ಸಭಾಂಗಣದಲ್ಲಿ ಹಾಗೂ ವಿಶೇಷ ಸಂದರ್ಭದಲ್ಲಿ ಬೆಂಗಳೂರಿನ ವಿವಿಧೆಡೆ ಕಾರ್ಯಕ್ರಮಗಳನ್ನು ಮಾಡಿಕೊಂಡು ಬರುತ್ತಿದೆ. ಹೊಸಬರ ಈ ತಂಡ ವಿಶೇಷ ಸಾಹಿತ್ಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಹೊಸ ಪ್ರತಿಭೆಗಳಿಗೆ, ಯುವ ಬರಹಗಾರರಿಗೆ ಪ್ರೋತ್ಸಾಹ ನೀಡುತ್ತಿದೆ. ಬೆಂಗಳೂರು ಹೇಳಿಕೇಳಿ ಮಹಾನಗರ. ಈ ಊರಲ್ಲಿ ಅದೆಷ್ಟೋ ಇಂತಹ ಕಾರ್ಯಕ್ರಮಗಳು ನಡೆಯುತ್ತಿರಬಹುದು. ಏನಾದರೇನು, ಕನ್ನಡನಾಡಿನ ರಾಜಧಾನಿಯಲ್ಲಿ ಕನ್ನಡ ಸಾಹಿತ್ಯ, ಓದು, ಚಿಂತನ, ಮಂಥನ, ಸಂವಾದ ನಡೆಯುತ್ತಲೇ ಇರಲಿ. ಕನ್ನಡ ಓದಿನ ಅಭಿರುಚಿ ಬೆಳೆಯುತ್ತಲೇ ಇರಲಿ ಎಂದು ಮನಸ್ಸು ಹಂಬಲಿಸಿತು.

ವೀರರಸ ಪ್ರಸ್ತುತಿಗೆ ಲಾಲಿತ್ಯವೇ ಆಭರಣ

ಕೋಡಿಬೆಟ್ಟು ರಾಜಲಕ್ಷ್ಮಿ

ಕರುನಾಡಿನ ವೀರ ಮಹಿಳೆ ಕಿತ್ತೂರು ರಾಣಿ ಚೆನ್ನಮ್ಮಳ ಜೀವನ ವೃತ್ತಾಂತ ಮತ್ತು ಬ್ರಿಟಿಷರ ವಿರುದ್ಧದ ಕೆಚ್ಚೆದೆಯ ಹೋರಾಟವನ್ನು ಸಾರುವ 'ಕಿತ್ತೂರು ರಾಣಿ ಚೆನ್ನಮ್ಮ' ಏಕವ್ಯಕ್ತಿ ನೃತ್ಯ ನಾಟಕವನ್ನು ಪ್ರಸಿದ್ಧ ನೃತ್ಯ ಕಲಾವಿದೆ ವಸುಂಧರಾ ದೊರೆಸ್ವಾಮಿ ಪರಿಣಾಮಕಾರಿಯಾಗಿ ಪ್ರಸ್ತುತಪಡಿಸಿದರು. ಭರತನಾಟ್ಯದ ತಾಳಲಯದ ತಳಹದಿ, ರಂಗಭೂಮಿಯ ವಾಚಿಕದ ತೋರಣ, ಯೋಗಾಸನದ ಕಿಂಚಿತ್ ಅಲಂಕಾರ, ಸಮರ ಕಲೆಯ ಸಮ್ಮಿಲನದೊಂದಿಗೆ ಈ ರಂಗಪ್ರಸ್ತುತಿಯು ಪ್ರೇಕ್ಷಕರ ಮನ ಸೆಳೆಯಿತು.

ಬಾಲಕಿ ಚೆನ್ನಮ್ಮಳ ಆಟಪಾಠ ಆಸಕ್ತಿಯನ್ನು ಚಿಗರೆಗಂಗಳ ಚಲನೆಯೊಂದಿಗೆ ಚುರುಕು ಹೆಜ್ಜೆಗಾರಿಕೆಯಲ್ಲಿ ಅಭಿವ್ಯಕ್ತಿಗೊಳಿಸಿದ ಕಲಾವಿದೆ, ಯೌವ್ವನದಲ್ಲಿ ಆಕೆಗೆ ಯುದ್ಧ ಕೌಶಲ ಕಲಿಯಲು ಇದ್ದ ಆಸಕ್ತಿಯನ್ನು ಅಷ್ಟೇ ಗಂಭೀರವಾಗಿ ಪ್ರಸ್ತುತಪಡಿಸಿದರು. ನೃತ್ಯ, ನಡಿಗೆ, ನಿಲುವು ಮತ್ತು ಮುಖಭಾವದಲ್ಲಿ ಚೆನ್ನಮ್ಮಾಜಿ ನಿಧಾನವಾಗಿ ಪ್ರಬುದ್ಧತೆಯತ್ತ ಸಾಗುವ ಚಲನೆಯನ್ನು ಅಭಿವ್ಯಕ್ತಿಗೊಳಿಸಿದರು. ರಾಜಾ ಮಲ್ಲಸರ್ಜನೊಂದಿಗೆ ನಡೆದ ವಿವಾಹ ಪ್ರಸಂಗದಲ್ಲಿ ಔಚಿತ್ಯಪೂರ್ಣ ಶೃಂಗಾರದ ಝಲಕ್ ಗೋಚರಿಸಿದರೆ, ಮಗನನ್ನು ಕಳೆದುಕೊಂಡ ತಾಯಿಯ ದುಃಖಿತ ಭಾವವು ಕರುಣರಸವನ್ನು ಅನಾವರಣಗೊಳಿಸಿತು. ವೀರರಸದಲ್ಲಿ ಅಭಿನಯ ವೈಭವದ ಉತ್ತುಂಗಕ್ಕೆ ಏರಿದ ಕಲಾವಿದೆ, ಒಟ್ಟು ಈ ಪ್ರಸ್ತುತಿಯನ್ನು ಹೆಣೆದಿರುವ ವಿನ್ಯಾಸವೇ ವೈವಿಧ್ಯತೆಯಿಂದ ಕೂಡಿದೆ. ಚೆನ್ನಮ್ಮಾಜಿಯ ವಿವಾಹ ಪ್ರಸಂಗದವರೆಗೆ ಸಂತೋಷ ಪ್ರಧಾನವಾದ ಭಾವಗಳಿಗೆ ಆದ್ಯತೆ ನೀಡಿ ಭರಪೂರ ನೃತ್ಯವನ್ನು ಉಣಬಡಿಸಿದರು. ಮಗುವನ್ನು ಕಳೆದುಕೊಂಡ ಬಳಿಕ ಈಶ್ವರನನ್ನು ಮೊರೆ ಹೋಗುವ ಸಂದರ್ಭದಲ್ಲಿ ಶಂಕರಾಭರಣ ರಾಗದಲ್ಲಿ 'ಚಂದ್ರಚೂಡ ಶಿವ ಶಂಕರ...' ಹಾಡು ಸಭಿಕರು ಭಕ್ತಿರಸದಲ್ಲಿ ತಲ್ಲೀನರಾಗುವಂತೆ ಮಾಡಿತು. ಅವರ ಈ ನೃತ್ಯವಿಲಾಸಕ್ಕೆ ಸೊಗಸಾಗಿ ಜೊತೆಯಾದುದು ಯೋಗಾಸನದ ಭಾವಭಂಗಿಗಳು. ಸಾಂಸಾರಿಕ ಹೊಸ್ತಿಲನ್ನು ದಾಟಿ, ಪ್ರಜೆಗಳನ್ನು ರಕ್ಷಿಸುವ ಉದ್ದೇಶದಿಂದ ರಾಜಕೀಯಕ್ಕೆ ಮುಖಮಾಡಲು ನಿರ್ಧರಿಸುವ ಚೆನ್ನಮ್ಮಾಜಿಯ ಪರಿವರ್ತನೆಯನ್ನು ನೃತ್ಯದಲ್ಲಿಯೇ ಕಲಾವಿದೆ ಪ್ರೇಕ್ಷಕರಿಗೆ ತಲುಪಿಸಿದರು.



'ಕಿತ್ತೂರು ರಾಣಿ ಚೆನ್ನಮ್ಮ' ಏಕವ್ಯಕ್ತಿ ನೃತ್ಯ ನಾಟಕದಲ್ಲಿ ವಸುಂಧರಾ ದೊರೆಸ್ವಾಮಿ ಚಿತ್ರ: ಶಶಿಕಿರಣ್

ನೃತ್ಯ ಪ್ರಸ್ತುತಿಯೊಂದರಲ್ಲಿ ರಂಗಗತಿಗಳ ಬಳಕೆಯು ಸಾಂದರ್ಭಿಕವಾಗಿ ಹಾದುಹೋಗುವುದು ವಾಡಿಕೆ. ಆದರೆ ವಸುಂಧರಾ ದೊರೆಸ್ವಾಮಿ ಅವರು ಕಿತ್ತೂರು ರಾಣಿಯ ಧೈರ್ಯ ಸ್ಥೈರ್ಯ ಮತ್ತು ಮಹಾರಾಣಿಯ ಆಳ್ವಿಕೆಯ ಗಾಂಭೀರ್ಯವನ್ನು ಅಭಿವ್ಯಕ್ತಿಗೊಳಿಸಲು 'ತುರಗಗತಿ'ಯನ್ನು ರಾಣಿಯ ಮನೋಸ್ಥಿತಿಗೆ ಪೂರಕವಾಗಿ ವಿವಿಧ ವೇಗಗಳಲ್ಲಿ ಬಳಸಿಕೊಂಡರು. ಚೆನ್ನಮ್ಮಾಜಿಯು ಯುದ್ಧಕೌಶಲ ಕಲಿಯುವ ಸಂದರ್ಭದಲ್ಲಿ, ಆಕೆ ಕಾರ್ಯೋನ್ಮುಖಳಾಗಬೇಕಾದ ತುರ್ತು, ರಾಣಿಯ ವೈಭವ, ಯುದ್ಧದ ಸಿದ್ಧತೆ...ಹೀಗೆ ವಿವಿಧ ಲಯಗಳಲ್ಲಿ ಕಲಾವಿದೆಯ ಹೆಜ್ಜೆಗಾರಿಕೆಯು, ರಾಣಿ ಪಾತ್ರದ ವರ್ಚಸ್ಸನ್ನು ಉನ್ನತಿಗೇರಿಸುವಲ್ಲಿ ಯಶಸ್ವಿಯಾಯಿತು. ವಿದ್ವಾನ್ ಡಿ.ಎಸ್. ಶ್ರೀವತ್ಸ ಅವರ ಹಿನ್ನೆಲೆ ಸಂಗೀತವೂ ಪರಿಣಾಮಕಾರಿಯಾಗಿ ಸಾಥ್ ಕೊಟ್ಟಿತು.

ಮಲ್ಲಸರ್ಜನ ರಾಣಿಯಾಗಿ, ಶಿವಭಕ್ತೆಯಾಗಿ, ಯುದ್ಧ ಸನ್ನದ್ಧಳಾದ ಹೋರಾಟಗಾರ್ತಿಯಾಗಿ ಚೆನ್ನಮ್ಮಾಜಿಯ ಪಾತ್ರವನ್ನು ಆಹಾರ್ಯದಲ್ಲಿಯೂ ವಿಭಿನ್ನವಾಗಿ ತೋರಿಸಿದ್ದು ಮತ್ತೊಂದು ವಿಶೇಷ. ವಸುಂಧರಾ ಅವರು ಕೇರಳದ ಸಮರ ಕಲೆ ಕಳರಿಪಯಟ್ಟು ಹಾಗೂ ಮಣಿಪುರದ ತಾಂಗ್ತಾ ಕಲೆಯನ್ನೂ ಕಲಿತವರಾದ್ದರಿಂದ ಯುದ್ಧದ ಸನ್ನಿವೇಶಗಳು ನೃತ್ಯದೊಳಗೆ ಮಿಳಿತವಾಗಿ ಗಮನ ಸೆಳೆಯಿತು. ಜ್ಯೋತಿಶಂಕರ್ ಅವರ ರಂಗಕೃತಿಗೆ ನೃತ್ಯಸಾಧ್ಯತೆಗಳನ್ನು ಅನಾವರಣಗೊಳಿಸುತ್ತ, ಕಲಾವಿದೆಯು ಆಂಗಿಕ ಅಭಿನಯದಲ್ಲಿ ಭಾವಪೋಷಣೆ ಮಾಡಿ ಪ್ರೇಕ್ಷಕರೊಡನೆ ಕಥಾನುಸಂಧಾನ ಸಾಧಿಸಿಕೊಂಡರು.

ಈಚೆಗೆ ಮಣಿಪಾಲ ವಿಶ್ವವಿದ್ಯಾಲಯದ ಸಾಂಸ್ಕೃತಿಕ ವಿಭಾಗವು ಟಿ.ಎಂ.ಎ ಪೈ ಸಭಾಂಗಣದಲ್ಲಿ ಈ ರಂಗ ನೃತ್ಯನಾಟಕವನ್ನು ಆಯೋಜಿಸಿತ್ತು.

ಕೇರಳದ ಕಳರಿ ಕಲೆಗೆ ಒಲಿದವರು

10ನೇ ಪುಟದಿಂದ...

ವಿದ್ಯಾರ್ಥಿಗಳನ್ನು ಹೊರತುಪಡಿಸಿದರೆ ಉಳಿದವರೆಲ್ಲರೂ ಐಟಿ ಕ್ಷೇತ್ರದ ಉದ್ಯೋಗಿಗಳಾಗಿದ್ದಾರೆ.

'ಕಳರಿಯಲ್ಲಿ ಪಾರಂಪರಿಕ ಮತ್ತು ಆಧುನಿಕ ಎಂಬ ತಾರತಮ್ಯ ಏನಿಲ್ಲ. ಮೂಲದಲ್ಲಿ ಏನಿತ್ತೋ ಅದೇ ಇದೆ. ಇದು ದೇಹದೊಳಗಿನ ಶಕ್ತಿಯನ್ನು ವೃದ್ಧಿಸುವ ಮತ್ತು ಪಂಚೇಂದ್ರಿಯಗಳ ಸಾಮರ್ಥ್ಯ ವೃದ್ಧಿಸಿ ಏಕಾಗ್ರತೆ ಸಾಧಿಸುವುದು ಮೂಲ ಉದ್ದೇಶ. ಅದರ ಮೂಲಕ ಎದುರಾಳಿಯನ್ನು ಎದುರಿಸುವ ಸಮರ ಕಲೆ ಕರಗತವಾಗುತ್ತದೆ. ದೇಹದ ಚುರುಕುತನ ಇಲ್ಲಿ ಪ್ರಾಧಾನ್ಯತೆ ಇದೆ. ದೇಹದಾರ್ಢ್ಯಪಟುಗಳನ್ನಾಗಿ ರೂಪಿಸುವುದು ಉದ್ದೇಶವಲ್ಲ. ಆದರೆ ದೇಹದಾರ್ಢ್ಯಪಟುವಿನಷ್ಟೇ ತಾಕತ್ತು ದೇಹದೊಳಗೆ ತುಂಬಿಕೊಳ್ಳುವುದರ ಜೊತೆಗೆ ಜಿಮ್ನಾಸ್ಟ್ ಪಟುಗಳಷ್ಟೇ ಚುರುಕುತನವನ್ನೂ ರೂಢಿಸಿಕೊಂಡಾಗ ಪರಿಪೂರ್ಣತೆ ಲಭಿಸುತ್ತದೆ. ಅದಕ್ಕಾಗಿಯೇ ಮಹಿಳೆಯರು ತಮ್ಮ ಫಿಟ್‌ನೆಸ್ ಹಾಗೂ ಸ್ವರಕ್ಷಣೆಯ ಉದ್ದೇಶದಿಂದ ಇತ್ತ ಆಕರ್ಷಿತರಾಗುತ್ತಿದ್ದಾರೆ' ಎಂದು ಚಂದ್ರಮೋಹನ್ ಹೇಳುತ್ತಾರೆ.



ಕಳರಿಪಯಟ್ಟು ಕಲಿಕೆಯಲ್ಲಿ ಮಕ್ಕಳು

ಇತ್ತೀಚೆಗೆ ಕಳರಿಪಯಟ್ಟು, ಪಂಜಾಬ್ ಜನಪದ ಸಮರ ಕಲೆ ಘಾಟ್ಕಾ ಮತ್ತು ಮಣಿಪುರದ ತಾಂಗ್ತಾಗೆ ಕ್ರೀಡಾ ಮಾನ್ಯತೆಯನ್ನು ನೀಡಲಾಗಿದೆ. ಖೇಲೊ ಇಂಡಿಯಾದಲ್ಲಿಯೂ ಸೇರ್ಪಡೆ ಮಾಡಲಾಗಿದೆ. ಈ ಮೂರರಲ್ಲಿಯೂ ಒಂದು ಸಾಮ್ಯತೆ ಎಂದರೆ ನೃತ್ಯ. ಮೊದಲಿನಿಂದಲೂ ರಂಗಭೂಮಿ ಮತ್ತು ಚಲನಚಿತ್ರಗಳಲ್ಲಿ ಈ ಕಲೆಗಳನ್ನು ಬಳಸಿಕೊಳ್ಳಲಾಗುತ್ತಿದೆ. ಇದೀಗ ತಮ್ಮ ಮುಂಬರುವ ಚಿತ್ರಕ್ಕಾಗಿ ರಿಷಭ್ ಶೆಟ್ಟಿಯವರೂ ಕಳರಿ ಅಭ್ಯಾಸ ಮಾಡುತ್ತಿದ್ದಾರೆಂಬ ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ಸದ್ದು ಮಾಡುತ್ತಿದೆ.

ಅದಿರಲಿ; ಕ್ರೀಡೆಯಾಗಿ ಕಲಿಯುವವರಿಗಾಗಿಯೇ ರಾಷ್ಟ್ರೀಯ ಕಳರಿ ಫೆಡರೇಷನ್ ಪಠ್ಯಕ್ರಮವನ್ನು ಸಿದ್ಧಪಡಿಸಿದೆ. ಅದಕ್ಕಾಗಿಯೂ ಇಲ್ಲಿ ತರಬೇತಿ ನೀಡಲಾಗುತ್ತಿದೆ.

'ಇವತ್ತು ನಗರಗಳಲ್ಲಿ ಒಬ್ಬಂಟಿ ಮಹಿಳೆಯರಾಗಲೀ, ಪುರುಷರಾಗಲೀ ಹೆಚ್ಚು ಸುರಕ್ಷಿತವಾಗಿಲ್ಲ. ಜೊತೆಗೆ ಆರೋಗ್ಯದ ದೃಷ್ಟಿಯಿಂದಲೂ ಇಂತಹದೊಂದು ಕಲೆ ಕಲಿಯುವುದು ಸೂಕ್ತ. 6ನೇ ವಯಸ್ಸು ದಾಟಿದವರು ಯಾರೇ ಆದರೂ ಕಲಿಯಬಹುದು. ಯೋಗ ಪರಿಣತರಾಗಿರುವ ಅಜನೀಶ್, ಧನುಷ್ ಮತ್ತು ಶೌರ್ಯ ಕೂಡ ನಮ್ಮಲ್ಲಿ ಕಲಿಯುತ್ತಿದ್ದಾರೆ' ಎಂದು ಚಂದ್ರಮೋಹನ್ ಹೇಳುತ್ತಾರೆ.

ವಿದ್ಯಾರ್ಥಿಗಳು ಮೊದಲಿಗೆ ಅಭ್ಯಾಸ ಆರಂಭಿಸುತ್ತಾರೆ. ವಾರ್ಮ್ ಅಪ್ ವ್ಯಾಯಾಮಗಳನ್ನು ಮುಗಿಸುವಷ್ಟರಲ್ಲಿಯೇ ಮೈಪೂರಾ ಬೆವರು ಬಸಿಯುತ್ತದೆ. ನಂತರ ಸಣ್ಣ ಅಳತೆ, ಮಧ್ಯಮ ಅಳತೆ ಮತ್ತು ದೊಡ್ಡ ಅಳತೆಯ ದೊಣ್ಣೆ ವರಸೆಯ ಕೌಶಲಗಳನ್ನು ಅಭ್ಯಾಸ ಮಾಡುತ್ತಾರೆ. ಒಂದೊಂದೇ ಹಂತಗಳಲ್ಲಿ ಕಲಿಯುತ್ತಾ 4–5 ವರ್ಷಗಳ ಸತತ ಅಭ್ಯಾಸದಿಂದ ಆಯುಧಗಳ ಪ್ರಯೋಗವನ್ನೂ ಕರಗತ ಮಾಡಿಕೊಳ್ಳಬಹುದು.

ದೇಶದ ಪ್ರಮುಖ ನಗರಗಳಲ್ಲಿ ಈಗ ಕಳರಿ ಜನಪ್ರಿಯತೆಯತ್ತ ನಡೆಯುತ್ತಿದೆ. ಕೇರಳದ ಮಲೆಗಳಲ್ಲಿ ಹುಟ್ಟಿ ಬೆಳೆದ ಸಾಂಪ್ರದಾಯಿಕ ಕಲೆ ಮಹಾನಗರಗಳಿಗೆ ಕಾಲಿಟ್ಟಿದೆ. ಈ ನಗರಗಳ ಜನರ ಜೀವನಶೈಲಿಗೆ ಸರಿಹೊಂದುವಂತಹ ಸಣ್ಣಪುಟ್ಟ ಮಾರ್ಪಾಡುಗಳೊಂದಿಗೆ ಬೆಳೆಯುತ್ತ ನಡೆದಿದೆ. ಅದರಿಂದಾಗಿಯೇ ಇಂದಿನ ಯುವಕ-ಯುವತಿಯರಿಗೂ ಆಕರ್ಷಣೀಯವಾಗಿದೆ.

ಮುನ್ನೋಟ 25-08-2024 ರಿಂದ 31-08-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಮನಸ್ಸಿನಲ್ಲಿ ಸಂತೋಷವಿರುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಗಣಿತ ವಿದ್ಯಾರ್ಥಿಗಳಿಗೆ ಉತ್ತಮ ಪ್ರಗತಿ ಇರುತ್ತದೆ. ಮೂತ್ರ ಸಂಬಂಧಿ ಕಾಯಿಲೆಗಳು ಕೆಲವರಿಗೆ ಬರಬಹುದು. ನಿಮ್ಮ ಸಂಗಾತಿಯ ಸಾಲ ಕಟ್ಟಲು ಹಣ ಖರ್ಚಾಗುತ್ತದೆ. ಕಬ್ಬಿಣದ ವ್ಯಾಪಾರಿಗಳಿಗೆ ಲಾಭವಿರುತ್ತದೆ. ಕೃಷಿಯಿಂದ ನಿರೀಕ್ಷಿತ ಲಾಭ ಇರುವುದಿಲ್ಲ. ಬಂಧುಗಳಿಂದ ತೊಂದರೆ ಎದುರಾಗಬಹುದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ದೃಢವಾದ ನಿರ್ಧಾರಗಳನ್ನು ನೀವು ತೆಗೆದುಕೊಳ್ಳುವಿರಿ. ಹಣದ ಒಳ ಹರಿವು ಮಧ್ಯಮಗತಿಯಲ್ಲಿದ್ದರೂ ಯಾವುದೇ ತೊಂದರೆ ಇರುವುದಿಲ್ಲ. ನಿಮ್ಮ ಚಟುವಟಿಕೆಗಳಿಂದ ಹೊಸ ಆದಾಯದ ಮೂಲಗಳನ್ನು ಹುಡುಕುವಿರಿ. ಆಡಳಿತಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳುವವರಿಗೆ ಉತ್ತಮ ಅವಕಾಶಗಳಿರುತ್ತವೆ. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶವಿರುತ್ತದೆ. ಹಣ ನಿರ್ವಹಣೆ ಸರಿಯಾಗಿ ಮಾಡಿ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಆದಾಯವು ನಿರೀಕ್ಷೆಯ ಹತ್ತಿರ ಬರುತ್ತದೆ. ಹಿರಿಯರೊಡನೆ ಉತ್ತಮ ಸಂಬಂಧವನ್ನು ರೂಢಿಸಿಕೊಳ್ಳುವಿರಿ. ಭೂಮಿಯ ವ್ಯವಹಾರಗಳಿಂದ ಲಾಭವಿರುತ್ತದೆ. ವಿದ್ಯಾರ್ಥಿಗಳಿಗೆ ಸಾಧಾರಣ ಫಲಿತಾಂಶವಿರುತ್ತದೆ. ಉದರ ಸಂಬಂಧಿ ದೋಷಗಳು ಕೆಲವರನ್ನು ಕಾಡಬಹುದು. ನಿಮ್ಮ ಸಂಗಾತಿಯ ಸಂಬಂಧಿಗಳ ಆರೋಗ್ಯಕ್ಕಾಗಿ ಹಣ ಖರ್ಚಾಗುತ್ತದೆ. ದುರ್ಗಾ ಮತ್ತು ಸುಬ್ರಹ್ಮಣ್ಯನ ಆರಾಧನೆ ಮಾಡಿರಿ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ವ್ಯವಹಾರದ ನಿಪುಣತೆಯನ್ನು ಕರಗತ ಮಾಡಿಕೊಳ್ಳುವಿರಿ. ಆದಾಯವು ಉತ್ತಮವಾಗಿರುತ್ತದೆ. ನಿಮ್ಮ ಸೋದರಿಯರಿಂದ ನಿಮ್ಮ ಕೆಲಸ ಕಾರ್ಯಗಳಿಗೆ ಅಡ್ಡಿಯಾಗಬಹುದು. ವಿದ್ಯಾರ್ಥಿಗಳಿಗೆ ಯಶಸ್ಸು ಇರುತ್ತದೆ. ಮಾಂಸಖಂಡಗಳಲ್ಲಿ ನೋವು ಕೆಲವರಿಗೆ ಬರಬಹುದು. ಸಂಗಾತಿಯು ನಿಮ್ಮ ಆಲೋಚನೆಗಳಿಗೆ ಸ್ಪಂದಿಸದಿರಬಹುದು. ಸೈನಿಕರಿಗೆ ಹೆಚ್ಚು ಸ್ಥಾನಮಾನ ಸಿಗುವ ಸಾಧ್ಯತೆ ಇದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಬಹಳ ಗಟ್ಟಿ ನಿರ್ಧಾರ ತೆಗೆದುಕೊಂಡು ಮುನ್ನಡೆಯುವಿರಿ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಸಂಗಾತಿಯ ಹೂಡಿಕೆಗಳು ಕೈಕೊಡಬಹುದು. ಭೂಮಿ ವ್ಯವಹಾರಗಳಿಂದ ಲಾಭ ಬರುತ್ತದೆ. ವಿದ್ಯಾರ್ಥಿಗಳಿಗೆ ಸಾಧಾರಣ ಅಭಿವೃದ್ಧಿ ಇರುತ್ತದೆ. ಸಂಗಾತಿಯ ನಡುವೆ ಕಾವೇರಿದ ಮಾತುಗಳಾಗುವ ಸಾಧ್ಯತೆಗಳಿವೆ. ಹೆಚ್ಚಿನ ಒಳಿತಿಗಾಗಿ ಶನೇಶ್ವರ ಧ್ಯಾನ ಮಾಡಿರಿ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ನಿಮ್ಮ ಯೋಜನೆಗಳಿಗೆ ಹಣ ಒದಗದಿರಬಹುದು. ಆದಾಯವು ಕಡಿಮೆ ಇರುತ್ತದೆ. ನಿಮ್ಮ ಮಾತುಗಳು ದ್ವಂದ್ವಾರ್ಥದಿಂದ ಕೂಡಿರುತ್ತವೆ. ವ್ಯವಹಾರ ಚತುರತೆ ಹೆಚ್ಚಾಗುತ್ತದೆ. ನಿಮ್ಮ ಕೆಲಸ ಕಾರ್ಯಗಳಿಗೆ ಬಂಧುಗಳಿಂದ ಧನಸಹಾಯ ದೊರೆಯಬಹುದು. ರೈತರಿಗೆ ಹೆಚ್ಚು ಆದಾಯ ಬರುವ ಸಾಧ್ಯತೆ ಇದೆ. ಸಾಲ ಕೊಟ್ಟವರ ಕಾಟ ಹೆಚ್ಚಬಹುದು. ಸಂಗಾತಿಯ ವಿಪರೀತ ಖರ್ಚುಗಳು ನಿಮಗೆ ಗಾಬರಿ ಹುಟ್ಟಿಸಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಮನಸ್ಸಿನಲ್ಲಿ ಆನಂದವಿದ್ದರೂ ಒಳಗೆ ಬಹಳ ಆತಂಕವಿರುತ್ತದೆ. ಆದಾಯವು ನಿರೀಕ್ಷಿತ ಪ್ರಮಾಣಕ್ಕಿಂತ ಸ್ವಲ್ಪ ಕಡಿಮೆ ಇರುತ್ತದೆ. ಭೂಮಿಯ ವ್ಯವಹಾರ ಮಾಡುವವರಿಗೆ ಸ್ವಲ್ಪ ನಷ್ಟವಾಗಬಹುದು. ಮಕ್ಕಳಿಂದ ಅಥವಾ ಬಂಧುಗಳಿಂದ ನಿರೀಕ್ಷಿತ ಗೌರವ ದೊರೆಯುವುದಿಲ್ಲ. ಕೀಲು ನೋವು ಕೆಲವರನ್ನು ಕಾಡಬಹುದು. ನಿಮ್ಮ ಸಂಗಾತಿಯಿಂದ ನಿಮಗೆ ಸಾಂತ್ವನ ಸಿಗುತ್ತದೆ. ಗಣೇಶ ಮತ್ತು ಲಕ್ಷ್ಮಿಯನ್ನು ಧ್ಯಾನ ಮಾಡಿರಿ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಬಹಳ ಗಂಭೀರ ನಡವಳಿಕೆ ಇರುತ್ತದೆ. ಆದಾಯವು ಸಾಮಾನ್ಯ ಗತಿಯಲ್ಲಿರುತ್ತದೆ. ನಿಮ್ಮನ್ನು ಕಂಡರೆ ಶತ್ರುಗಳಿಗೆ ಭಯ ಹುಟ್ಟುವಂತೆ ಮಾಡುವಿರಿ. ಕೃಷಿಯಿಂದ ಹೆಚ್ಚಿನ ಆದಾಯ ಇರುತ್ತದೆ. ವಿದೇಶದಲ್ಲಿ ಓದಬೇಕೆನ್ನುವವರಿಗೆ ಉತ್ತಮ ಅವಕಾಶವಿರುತ್ತದೆ. ನಿಮ್ಮ ತಾಯಿಯು ನಿಮ್ಮ ಕೆಲವು ನಿರ್ಧಾರಗಳನ್ನು ಒಪ್ಪದಿರಬಹುದು. ಶೀತಬಾಧೆ ಇರುವವರು ಹೆಚ್ಚು ಎಚ್ಚರವಹಿಸಿರಿ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ನಿಮ್ಮ ಆತ್ಮಸ್ಥೈರ್ಯವನ್ನು ಹೆಚ್ಚು ಮಾಡಿಕೊಳ್ಳಿರಿ. ಆದಾಯವು ಕಡಿಮೆ ಇದ್ದರೂ ನಿಮ್ಮ ಚಟುವಟಿಕೆಗಳಿಂದ ಆದಾಯ ಹೆಚ್ಚು ಮಾಡಿಕೊಳ್ಳಲು ಪ್ರಯತ್ನಪಡುವಿರಿ. ಶತ್ರುಗಳನ್ನು ಅವರದೇ ತಂತ್ರ ಬಳಸಿ ಸದೆ ಬಡಿಯುವಿರಿ. ವಿದ್ಯಾರ್ಥಿಗಳಿಗೆ ಈಗ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ಹೈನುಗಾರಿಕೆಯನ್ನು ಓದುತ್ತಿರುವವರಿಗೆ ನಿರೀಕ್ಷಿತ ಮಟ್ಟಕ್ಕಿಂತ ಹೆಚ್ಚಿನ ಫಲಿತಾಂಶ ಬರಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಕಠಿಣ ಪರಿಶ್ರಮದಿಂದ ಮೇಲೆ ಬರುವಿರಿ. ಸಂಸಾರದಲ್ಲಿ ಸಂತೋಷವಿರುತ್ತದೆ. ರೈತರಿಗೆ ಆದಾಯ ಹೆಚ್ಚುತ್ತದೆ. ಹೈನುಗಾರಿಕೆ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ಸಂಗಾತಿಯ ಆರೋಗ್ಯದಲ್ಲಿ ಸುಧಾರಣೆಯನ್ನು ಕಾಣಬಹುದು. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಬಹಳ ಶ್ರಮ ವಹಿಸಿ ಕೆಲಸ ಮಾಡುವಿರಿ. ಸಂಸ್ಕರಿತ ರಾಸಾಯನಿಕಗಳನ್ನು ಮಾರಾಟ ಮಾಡುವವರಿಗೆ ಆದಾಯ ಹೆಚ್ಚು. ಸಹೋದರಿಯರಿಂದ ಈಗ ಸಹಾಯ ದೊರೆಯುವ ಸಾಧ್ಯತೆಗಳಿವೆ. ಆಸ್ತಿ ವ್ಯವಹಾರ ಮಾಡುವವರಿಗೆ ಸಾಕಷ್ಟು ಆದಾಯವಿರುತ್ತದೆ. ವಿದ್ಯಾರ್ಥಿಗಳಿಗೆ ಮಧ್ಯಮಗತಿಯ ಫಲಿತಾಂಶವಿರುತ್ತದೆ. ರಕ್ತ ಸಂಬಂಧಿ ದೋಷಗಳಿರುವವರು ಎಚ್ಚರವಹಿಸಿರಿ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಅನಾರೋಗ್ಯ ಪೀಡಿತರ ಆರೋಗ್ಯ ಈಗ ಸುಧಾರಣೆಯತ್ತ ಸಾಗುತ್ತದೆ. ವಸ್ತ್ರ ವಿನ್ಯಾಸ ಮಾಡುವವರಿಗೆ ಉತ್ತಮ ಆದಾಯವಿರುತ್ತದೆ. ಕಬ್ಬಿಣದ ವ್ಯಾಪಾರಿಗಳಿಗೆ ಉತ್ತಮ ಲಾಭವಿರುತ್ತದೆ. ಅನಿರೀಕ್ಷಿತ ಖರ್ಚುಗಳು ಎದುರಾಗುವ ಸಾಧ್ಯತೆಗಳಿವೆ. ಶಾಲಾ ಕಾಲೇಜುಗಳನ್ನು ನಡೆಸುವವರಿಗೆ ಸಂಕಷ್ಟ ಎದುರಾಗಬಹುದು. ಕೃಷಿ ಆಧಾರಿತ ಕೈಗಾರಿಕೆಗಳಿಗೆ ಲಾಭವಿದೆ. ಉದ್ಯೋಗ ಸ್ಥಳದಲ್ಲಿ ಕೆಲಸದ ಒತ್ತಡ ಹೆಚ್ಚಾಗುವುದು.

ಪದಬಂಧ 2856



ಮೇಲಿನಿಂದ ಕೆಳಕ್ಕೆ

1. ಪುಣ್ಯ ಗಳಿಕೆ ಶೂನ್ಯವಾದಾಗ ಮಾಡುವ ಕೆಟ್ಟ ಕೆಲಸ 4
2. ಕೆಟ್ಟಿರುವ ಮನಸ್ಸಿನ ಆಕಾರ 3
3. ಕಾಲಿಟ್ಟ ಕೂಡಲೆ ಸಯ್ಯನೆ ಸಡಿಲವಾಗಿ ಬೀಳು 2
4. ಅನಾಗರಿಕ ದುಷ್ಟ ರಾಕ್ಷಸ 4
7. ಮೂರು ರೀತಿಯ ದೈವ ರೂಪ 3
9. ಎಷ್ಟು ಸಹಿಸಿದರೂ ಇನ್ನಷ್ಟು ಬೇಕಾಗುವ ಗುಣ 3
10. ಹೆಚ್ಚು ದುಡ್ಡುಗಳಿಸಿದ ಸಿರಿವಂತರು 5
11. ಹೊಸತನದ ಹುರುಪಿನ ಹೆಣ್ಣು 4
12. ಹೆಣ್ಣಿನ ಶೀಲವನ್ನು ಕೆಡಿಸುವ ಹುನ್ನಾರ 4
13. ಮತ್ತೆ ಮತ್ತೆ ಹುಟ್ಟುವ ಕರುಣಾ ದೃಷ್ಟಿ 3
15. ಈ ಹೆಣ್ಣಿಗೆ ಯಾವ ಹೆದರಿಕೆಯೂ ಇಲ್ಲವೆಂದರೂ ಹೆದರಲೇ ಬೇಕಾಗಿದೆ 3
16. ಇದು ಗಂಡು ಕೂಸಲ್ಲ 4
17. ಕೆಟ್ಟ ಕೆಲಸ ಮಾಡಿದವರು ಬೀಳುವ ಬಾವಿ 4
18. ಪರಿಸ್ಥಿತಿ ಹದಗೆಟ್ಟಿದೆ ವಿಷದಿಂದ ಕೂಡಿದೆ 3
20. ಒಮ್ಮೊಮ್ಮೆ ಯಾರಿಗೂ ಕೇಳಿಸದ ಅಳಲಿನ ಕರೆ ಶಬ್ದ 2

ಎಡದಿಂದ ಬಲಕ್ಕೆ

1. ಯಮನ ಹಗ್ಗಕ್ಕೆ ಸಿಕ್ಕಿಸುವ ರಾಕ್ಷಸೀ ಶಕ್ತಿ 3
3. ಜಾನಪದದಿಂದ ಬಂದ ಸೀತೆ 3
5. ಬಯಕೆಯಲ್ಲಿ ಕುರುಡಾಗಿ ಹೋದವರು 4
6. ಇದು ಇರಳಲ್ಲಿ ಇರುಳು ನಟ್ಟಿರುಳು 4
10. ಜಗಳ, ಯುದ್ಧ, ವೈಮನಸ್ಯ ಏನಾದರು ಆಗಬಹುದು ಹಿಂದು ಮುಂದಾದರೆ ವಿರಳವಾದ ಕೆಟ್ಟ ಪದ 3
11. ಹಿಂದು ಮುಂದಾದ ಕಾಡು ಹೊಸದಾಗಿದೆ 2
12. ದಿಕ್ಕೆಟ್ಟ ಸಮಾಜದಲ್ಲಿ ನಿರಂತರ ನಡೆಯುವ ಬಲಾತ್ಕಾರ, ಮರ್ಯಾದೆಯ ಕಳವು 5
14. ಮದುವೆಯಾದ ಹೆಣ್ಣಿಗೆ ಸದಾ ನೆನಪು ಬರುವ ಗೃಹ 5
15. ಒಂದು ಕಣ್ಣಿಟ್ಟು ಎಚ್ಚರವಹಿಸಬೇಕಾದ್ದು 2
16. ಭಯದಿಂದ ಅಂಜು 3
18. ಪರಿಸ್ಥಿತಿ ಹತೋಟಿ ಮೀರಿ ಉದ್ರಿಕ್ತ 3
19. ಕಾಲನಿಗೆ ಸರಿಗಟ್ಟುವಂತದ್ದು 4
20. ಒಂದನ್ನೂ ಬಿಡದೆ ಪರಿಶೀಲಿಸುವ ಸಮಗ್ರ ತನಿಖಾ ದೃಷ್ಟಿ 4
21. ಮಳೆಯ ಮುಂಚೆ ಮಿಂಚಿನ ಜೊತೆ ಗುಡುಗುಡುವ ಶಬ್ಧ 3
22. ಎಮ್ಮೆಯಂತೆ ಬೆಳೆದ ಒಡೆಯ 3

ಪದಬಂಧ ಉತ್ತರ -2855

ಮೇಲಿಂದ ಕೆಳಕ್ಕೆ

1. ಸ್ವಾಧ್ಯಾಯ 2.ವನರಕ್ಷಕ 3.ರಣಭೀಕರ 4.ನವಾಜ್ಞೆ 6.ನಾಡೋಜ 8.ಪ್ರಸಾದ 10.ಆನನ 11.ನಕಾರ 13.ವಿರಾಮ 14.ನಗಣ 16.ಭಾಸ್ಕರ 17.ತಲೆಕೆಳಗೆ 19.ಕವನ 21.ಸೀಮಿತ 23.ಹರಕು

ಎಡದಿಂದ ಬಲಕ್ಕೆ

1. ಸ್ವಾತಂತ್ರ್ಯೋತ್ಸವ 3.ರಕ್ಷಾಬಂಧನ 5.ಯಮುನಾತೀರ 7.ಭೀಷ್ಮಪ್ರತಿಜ್ಞೆ 9.ಕ್ಷಣಿಕ 10.ಆಮ್ಲಜನಕ 12.ರವಿದರ್ಶನ 15.ನವಭಾರತ 18.ನಾಮಕರಣ 20.ಲೆಕ್ಕಿಗ 21.ಸೀರೆರವಿಕೆ 22.ಶಯನಗೃಹ 24.ತಪ್ಪುಗಳಿಗೆ 25.ನಯನಾಜೂಕು

ಇದೋ... ಲ್ಯಾಮಿನೇಟೆಡ್ ಟಂಕಸಾಲ!



ಲ್ಯಾಮಿನೇಟ್ ಯಂತ್ರದೊಂದಿಗೆ ಟಿ.ಎಸ್.ನಾಗರಾಜ

ವಿಶ್ವದಲ್ಲೇ ಮುದ್ರಣೋದ್ಯಮವನ್ನು 150 ವರ್ಷಗಳಿಗೂ ಹೆಚ್ಚು ಕಾಲ ನಡೆಸಿಕೊಂಡು ಬಂದಿರುವ ಒಂದೋ ಎರಡೋ ಕುಟುಂಬಗಳಲ್ಲಿ ನಾಗರಾಜ ಟಂಕಸಾಲ ಅವರದ್ದೂ ಒಂದು. ಟಿ.ಎಸ್. ನಾಗರಾಜ ಅವರನ್ನು ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘವು 2024ರ ಸಾಲಿನ 'ಮುದ್ರಣ ರತ್ನ' ಪ್ರಶಸ್ತಿಗೆ ಆಯ್ಕೆ ಮಾಡಿದ್ದು ಅರ್ಥಪೂರ್ಣ.

ವಿಶಾಖ ಎನ್

ಅದು 1895. 'ಶ್ರೀ ವೆಂಕಟೇಶ್ವರ ಮುದ್ರಾಕ್ಷರಶಾಲ' ಸ್ಥಾಪನೆಯಾದ ವರ್ಷ. ಟಿ.ಎನ್. ಕೃಷ್ಣಯ್ಯ ಶೆಟ್ಟಿ ಅದರ ಮಾಲೀಕರಾಗಿದ್ದರು. ಆಗ ನಮ್ಮ ರಾಜ್ಯದಲ್ಲಿ ಬೆರಳೆಣಿಕೆಯಷ್ಟು ಮುದ್ರಣಾಲಯಗಳು ಮಾತ್ರ ಇದ್ದವು.

ಕೃಷ್ಣಯ್ಯ ಶೆಟ್ಟಿ ಅವರ ಪೂರ್ವಜರು ಮೈಸೂರು ಸಂಸ್ಥಾನದಲ್ಲಿ ಟಂಕಸಾಲ ನಡೆಸುತ್ತಿದ್ದರು. ಆ ಕಾಲದಲ್ಲಿಯೇ ಸಂಸ್ಥಾನಕ್ಕೆ ಅಗತ್ಯವಿದ್ದ ನಾಣ್ಯಗಳು, ಶಾಸನಗಳು, ಓಲೆಪತ್ರಗಳನ್ನು ಟಂಕಿಸಿಕೊಡುತ್ತಿದ್ದರು. 'ಅತ್ಯುತ್ತಮ ಟಂಕಸಾಲ' ಗೌರವ ಕೂಡ ಅದಕ್ಕೆ ಲಭಿಸಿತ್ತು. ಕುಟುಂಬಸ್ಥರ ಹೆಸರುಗಳ ಪಕ್ಕ 'ಟಂಕಸಾಲ' ಎನ್ನುವ ಕ್ರಿಯಾವಿಶೇಷಣ ಪದ ಸೇರ್ಪಡೆಗೊಂಡಿದ್ದೇ ಆ ಗೌರವ ಪ್ರಾಪ್ತಿಯಾದ ನಂತರ.

ಇಂತಹ ಕುಟುಂಬದ ಕುಡಿ ಟಿ.ಎಸ್. ನಾಗರಾಜ; ಕೃಷ್ಣಯ್ಯ ಶೆಟ್ಟರ ಮೊಮ್ಮಗ. ಅವರ ಹೆಸರಿನಲ್ಲಿನ 'ಟಿ' ಎನ್ನುವುದರ ವಿಸ್ತೃತ ರೂಪ ಕೂಡ 'ಟಂಕಸಾಲ'. ಬೆಂಗಳೂರಿನ ಚಾಮರಾಜಪೇಟೆಯ 'ಗೌರಿ ಲ್ಯಾಮಿನೇಟರ್ಸ್' ಸಂಸ್ಥೆಯನ್ನು ಕಟ್ಟಿ ಬೆಳೆಸಿದ ನಾಗರಾಜ ಇವರೇ. ಇವತ್ತು ಮಾತೆತ್ತಿದರೆ 'ಲ್ಯಾಮಿನೇಷನ್' ಎನ್ನುತ್ತೇವಲ್ಲ, ಅಂತಹುದೊಂದು ತಂತ್ರಜ್ಞಾನವನ್ನು ನಮ್ಮ ರಾಜ್ಯದಲ್ಲಿ ಮೊದಲು ಪರಿಚಯಿಸಿದವರೇ ಇವರು.

ನಾಗರಾಜ ಅವರು 'ಗೌರಿ ಲ್ಯಾಮಿನೇಟರ್ಸ್' ಸ್ಥಾಪಿಸಿದ್ದು 1982ರಲ್ಲಿ. ಒಮ್ಮೆ ಅವರು ಬಾಂಬೆಗೆ ಹೋಗಿದ್ದರು. ಅಲ್ಲಿ ಆಪ್ತರೊಬ್ಬರ ಬಳಿ ಇದ್ದ ನರರೋಗಕ್ಕೆ ಸಂಬಂಧಿಸಿದ ಪುಸ್ತಕವೊಂದು ಕಣ್ಣಿಗೆ ಬಿದ್ದಿತು. ಅದರ ಮೇಲೆ ಬಿದ್ದ ಬೆಳಕು ಪ್ರತಿಫಲಿಸುತ್ತಿತ್ತು. ಥಟ್ಟನೆ ಆ ಪುಸ್ತಕ ಗಮನ ಸೆಳೆಯಿತು. ಮುಟ್ಟಿದಾಗ ಅದರ ಮೇಲೊಂದು ಪ್ಲಾಸ್ಟಿಕ್ ಹೊದಿಕೆ ಇರುವುದು ಗೊತ್ತಾಯಿತು. ಆ ಪುಸ್ತಕ ಮುದ್ರಿಸಿದ್ದ ಸಂಸ್ಥೆಯನ್ನು ಹುಡುಕಿಕೊಂಡು ಹೋದರು. ಅದು ಲ್ಯಾಮಿನೇಟ್ ಮಾಡಿರುವ ಮುಖಪುಟ ಎನ್ನುವುದು ಗೊತ್ತಾಯಿತು. ಹೀಗೆ ಲ್ಯಾಮಿನೇಟ್ ಮಾಡಲು ಪ್ರತ್ಯೇಕ ಯಂತ್ರ ಇತ್ತು. ಅದನ್ನು ಖುದ್ದು ನೋಡಿದರು. ತಮ್ಮ ಪ್ರಕಾಶನ ಸಂಸ್ಥೆಗೂ ಅದು ಬೇಕೆಂದು ಥಟ್ಟನೆ ನಿರ್ಧರಿಸಿದರು. ಯಂತ್ರ ತಯಾರಿಸಿಕೊಡುವ ಕಂಪನಿಗೆ ಆರ್ಡರ್ ಕೊಟ್ಟರು. ಎರಡು ತಿಂಗಳ ನಂತರ ಆ ಯಂತ್ರ ಬೆಂಗಳೂರಿಗೆ ತಲುಪಿತು.

1982ರಲ್ಲಿ ಆ ಯಂತ್ರದ ಬೆಲೆ 50 ಸಾವಿರದಿಂದ 55 ಸಾವಿರ ರೂಪಾಯಿ ಇತ್ತು. ಆಗ ಅದು ಬಹಳ ದೊಡ್ಡ ಮೊತ್ತ. ಅಷ್ಟೊಂದು ಹಣ ಕೈಯಲ್ಲಿ ಇರಲಿಲ್ಲ. ಬ್ಯಾಂಕ್‌ನಲ್ಲಿ ಸಾಲ ಕೇಳಲು ಹೋದರು. ಅಂತಹುದೊಂದು ಯಂತ್ರದಿಂದ ಬಂಡವಾಳ ಮರಳುತ್ತದೆ ಎನ್ನುವ ವಿಶ್ವಾಸ ಬ್ಯಾಂಕ್ ವ್ಯವಸ್ಥಾಪಕರಿಗೆ ಇರಲಿಲ್ಲ. ಸಾಲ ಕೊಡಲು ಒಪ್ಪಲಿಲ್ಲ. ಆಮೇಲೆ ಸಹಕಾರ ಬ್ಯಾಂಕ್‌ನಿಂದ ಸಾಲ ಪಡೆದುಕೊಂಡರು.

ಅಷ್ಟು ಕಷ್ಟಪಟ್ಟು ಖರೀದಿಸಿದ ಆ ಯಂತ್ರ ಈಗಲೂ ಕೆಲಸ ಮಾಡುವುದನ್ನು ನೋಡಿದರೆ ಕಣ್ಣರಳುತ್ತದೆ.



ನಾಗರಾಜ ಅವರು ಮುದ್ರಣ ತಂತ್ರಜ್ಞಾನದ ಆವಿಷ್ಕಾರಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಾ ಬಂದವರಷ್ಟೆ ಅಲ್ಲ, ಅಗತ್ಯಕ್ಕೆ ತಕ್ಕಂತೆ ಯಂತ್ರಗಳನ್ನೇ ಮರ್ಪಾಟು ಮಾಡುವಂತೆ ಮಾಡಿದ ಅಪರೂಪದವರು. 1985-86ರಲ್ಲಿ ಪ್ಯಾಂಕಿಂಗ್ ಉದ್ಯಮವು ಸಮಸ್ಯೆಯೊಂದನ್ನು ಎದುರಿಸುತ್ತಿತ್ತು. ಆಗೆಲ್ಲ ಒಂದು ಶೀಟ್‌ಅಳತೆಗೆ ಮಾತ್ರ 'ಸ್ಟ್ರಿಪ್ ಲ್ಯಾಮಿನೇಷನ್' ಮಾಡುವಂತಹ ಯಂತ್ರ ಇತ್ತು. ಪ್ಯಾಕಿಂಗ್ ಉದ್ಯಮದ ಅಗತ್ಯಕ್ಕೆ ತಕ್ಕ ರೀತಿಯಲ್ಲಿ ಅಳತೆಯನ್ನು ಬದಲಿಸಿ ಲ್ಯಾಮಿನೇಟ್ ಮಾಡಬಲ್ಲ ಅನುಕೂಲ ಅದರಲ್ಲಿ ಇರಲಿಲ್ಲ. ನಾಗರಾಜ ಅವರು ಯಂತ್ರ ತಯಾರಕ ಪರಿಣತರನ್ನು ಕರೆಸಿದರು. 'ಪರ್ಫೆಕ್ಟ್‌ಬೈಂಡಿಂಗ್'ನ ಅಗತ್ಯ ಏನೆಂಬುದನ್ನು ಮನದಟ್ಟು ಮಾಡಿಸಿದರು. ಈ ಪ್ರಕ್ರಿಯೆಗೆ ಒಂದೂವರೆ-ಎರಡು ವರ್ಷ ಬೇಕಾಯಿತು. ಪಟ್ಟು ಬಿಡದೆ ಅವರು ಮನವೊಲಿಸಿದ್ದರಿಂದ, ಲ್ಯಾಮಿನೇಟ್ ಮಾಡುವ ಯಂತ್ರಗಳ ಸ್ವರೂಪದಲ್ಲೇ ಬದಲಾವಣೆ ಆಯಿತು. ಹಾಗೆ ಮಾರ್ಪಾಟುಗೊಂಡ ನೂರಾರು ಯಂತ್ರಗಳು ಕಾಲಾಂತರದಲ್ಲಿ ಮುದ್ರಕರಿಗೆ ಮಾರಾಟವಾಯಿತೆನ್ನುವುದು ನಾಗರಾಜ ಅವರಿಗೆ ಹೆಮ್ಮೆಯ ವಿಷಯ.

ಲ್ಯಾಮಿನೇಟ್ ಮಾಡುವ ತಂತ್ರಜ್ಞಾನವನ್ನೇನೋ ತಂದದ್ದಾಯಿತು. ಅದಕ್ಕೆ ಮಾರುಕಟ್ಟೆ ಕುದುರಿಸಬೇಕಲ್ಲ. ಬರೀ ಪುಸ್ತಕಗಳನ್ನು ನೆಚ್ಚಿಕೊಂಡು ಬದುಕುವ ಕಾಲ ಅದಾಗಿರಲಿಲ್ಲ. ಅಗರಬತ್ತಿ ತಯಾರಕರನ್ನು ನಾಗರಾಜ ಭೇಟಿ ಮಾಡಿದರು. ಅಗರಬತ್ತಿಗಳ ಪ್ಯಾಕೆಟ್‌ಗಳನ್ನು ಲ್ಯಾಮಿನೇಟ್ ಮಾಡಿದರೆ ಆಗುವ ಅನುಕೂಲವನ್ನು ಮನವರಿಕೆ ಮಾಡಿಕೊಡಲು ಒಂದಿಷ್ಟು ದಿನ ತೆಗೆದುಕೊಂಡರು. ಅವರು ಒಪ್ಪಿದ ನಂತರ, ಲ್ಯಾಮಿನೇಷನ್ ಇಲ್ಲದ ಅಗರಬತ್ತಿ ಕವರ್‌ಗಳೇ ಇಲ್ಲ ಎನ್ನುವ ಸ್ಥಿತಿ ಸೃಷ್ಟಿಯಾಯಿತು.

ಮುದ್ರಣ ತಂತ್ರಜ್ಞಾನದ ಬದಲಾವಣೆಗಳಿಗೆ ಸದಾ ಒಡ್ಡಿಕೊಳ್ಳುತ್ತಾ ಬಂದವರು ನಾಗರಾಜ. ಥರ್ಮಲ್, ಗ್ಲಾಸಿ, ಮ್ಯಾಟ್, 3ಡಿ, ವೆಲ್ವೆಟ್, ಬೆಳಕು ಮೇಲೆ ಬಿದ್ದಾಗ ಫಳಫಳ ಹೊಳೆಯುವ ಸ್ಪಾರ್ಕಲ್... ಈ ರೀತಿ ಹಲವು ಬಗೆಯ ಮುಖಪುಟಗಳನ್ನು ಪುಸ್ತಕಗಳಿಗೆ ಮಾಡಿಕೊಡುವಷ್ಟು ಅಪ್ಡೇಟ್‌ಆಗಿದೆ 'ಗೌರಿ ಲ್ಯಾಮಿನೇಟರ್ಸ್'.

ಯಂತ್ರ ತರಿಸಿದ ನಂತರ ಕೆಲವು ತಾಂತ್ರಿಕ ಸಮಸ್ಯೆಗಳನ್ನು ಎದುರಿಸುವುದು ಅನಿವಾರ್ಯ. ಬಳಸುವ ಅಂಟು ಮುದ್ರಣಕ್ಕೆ ಬಳಸಿದ ಶಾಯಿಯ ಮೇಲೆ ಪರಿಣಾಮ ಮೂಡಿಸಿದಾಗ ಅಕ್ಷರಗಳು ಕಲಸಿಕೊಂಡಂತೆ ಆದದ್ದು ಸಮಸ್ಯೆಗೆ ಒಂದು ಉದಾಹರಣೆಯಷ್ಟೆ. ತಾಂತ್ರಿಕವಾಗಿ ಬಳಸುವ ಪರಿಕರಗಳಲ್ಲೇ ಆಗ ಅಗತ್ಯಕ್ಕೆ ತಕ್ಕಂತೆ ಮರ್ಪಾಟು ಮಾಡಿಕೊಂಡು, ಸಂಶೋಧನೆ ನಡೆಸಿಯೇ ಸಮಸ್ಯೆ ಪರಿಹರಿಸಿಕೊಳ್ಳಬೇಕಿತ್ತು. ಇಂತಹ ಸವಾಲುಗಳನ್ನು ಎದುರಿಸಿದ ರೀತಿಯನ್ನು ಹಂಚಿಕೊಳ್ಳುವಾಗ ನಾಗರಾಜ ಅವರು ಇನ್ನಷ್ಟು ಕುತೂಹಲಿಯಂತೆ ಕಾಣುತ್ತಾರೆ.

'ಮುದ್ರಣ ಎನ್ನುವುದು ನಮ್ಮ ಜೀನ್ಸ್‌ನಲ್ಲೇ ಇದೆ' ಎನ್ನುವ ನಾಗರಾಜ ಅವರ ಮಾತಿಗೆ ಅಡಿಗೆರೆ ಎಳೆಯುವಂತೆ ಅವರ ಮಕ್ಕಳು ಕಾಣುತ್ತಾರೆ. ಮಗ ವಿನಾಯಕ್ ಎನ್. ಟಂಕಸಾಲ ಅವರು ಮುದ್ರಣ ಸಂಸ್ಥೆಯ ಪ್ರೊಡಕ್ಷನ್ ವಿಭಾಗದ ಕಡೆಗೆ ಲಕ್ಷ್ಯ ಕೊಡುತ್ತಾ, ತಂದೆಯ ಹಾದಿಯಲ್ಲೇ ಹೆಜ್ಜೆ ಇಡುತ್ತಿದ್ದಾರೆ. ಮಗಳು ಗೌರಿ ವಹಿವಾಟಿನ ಲೆಕ್ಕ ಇತ್ಯಾದಿ ನಿರ್ವಹಿಸುತ್ತಾರೆ.

ವಯಸ್ಸು 72 ಆದರೂ ಉತ್ಸಾಹದಲ್ಲಿ ನಾಗರಾಜ ಅವರಲ್ಲಿ ಯುವಕನೊಬ್ಬ ಕಾಣುತ್ತಾನೆ. ಕಟ್ಟಿದ ಸಂಸ್ಥೆಯಲ್ಲಿ ಇರುವ 23-24 ಯಂತ್ರಗಳ 'ನರ-ನಾಡಿ'ಗಳೆಲ್ಲ ಅವರಿಗೆ ಚಿರಪರಿಚಿತ. ಕೆಲವು ಯಂತ್ರಗಳು ಕೊರಿಯಾದಿಂದ ಆಮದು ಮಾಡಿಕೊಂಡಂಥವು. ಬೆಂಗಳೂರಿನ ಬಹುತೇಕ ಮುದ್ರಕರಿಗೆ ಇವರ ಸಂಸ್ಥೆ ಒಂದು ರೀತಿಯಲ್ಲಿ 'ಆ್ಯಕ್ಸಸರಿ ಯೂನಿಟ್' ಇದ್ದಹಾಗೆ. ಯಂತ್ರಕ್ಕೆ ಸಂಬಂಧಿಸಿದ 'ಮೆಕ್ಯಾನಿಕ್' ಸಂಗತಿಗಳನ್ನು ಕರತಲಾಮಲಕ ಮಾಡಿಕೊಂಡಿರುವ ನಾಗರಾಜ, ಅವನ್ನು ತಾವೇ ರಿಪೇರಿ ಕೂಡ ಮಾಡಬಲ್ಲರು. ಎಲೆಕ್ಟ್ರಾನಿಕ್ಸ್ ಸಮಸ್ಯೆ ಇದ್ದರಷ್ಟೆ ತಂತ್ರಜ್ಞರನ್ನು ನೆಚ್ಚಿಕೊಳ್ಳುತ್ತಾರೆ. 1973ರಲ್ಲಿ ತಾವು ಡಿಪ್ಲೊಮಾ ಕಲಿತಾಗ ಮುದ್ರಣ ತಂತ್ರಜ್ಞಾನದ ಕೆಲವು ಮೂಲ ಸಂಗತಿಗಳಷ್ಟೆ ದಕ್ಕಿದ್ದವು. ನಂತರದ ಶೋಧನಾ ಪಯಣದಲ್ಲಿ ಅವರು ಈ ತಂತ್ರಜ್ಞಾನದಲ್ಲಿ ಕಂಡುಕೊಂಡ 'ಹೊಸತು'ಗಳು ಅಸಂಖ್ಯ.

'ನಮ್ಮ ಸಂಸ್ಥೆಯ ಮೊದಲ ಯಂತ್ರ ಈಗಲೂ ಓಡುತ್ತಿದೆ' ಎನ್ನುವಾಗ ಅವರಲ್ಲಿ ಆತ್ಮವಿಶ್ವಾಸದ ಹೊಳಪೊಂದು ಇಣುಕುತ್ತದೆ; ಥೇಟ್ ಸ್ಪಾರ್ಕಲ್ ಲ್ಯಾಮಿನೇಷನ್ ತರಹ!

ಕಾರು ಕಾಫಿ ಹರಟೆ...



> **ವಿದೇಶಗಳಲ್ಲಿ ಆಯೋಜಿಸಲಾಗುವ ಕಾರ್ ಮೀಟ್‌ಅಪ್‌ಗಳಲ್ಲಿ ಪಾಲ್ಗೊಂಡಿದ್ದೇನೆ. ಅಂಥದ್ದೊಂದು ಇಲ್ಲಿಯೂ ಇದ್ದಿದ್ದರೆ ಎಂದೆನಿಸುತ್ತಿತ್ತು. ಈಗ ಬೆಂಗಳೂರಿನಲ್ಲೂ ಇಂಥ ಸಂಸ್ಕೃತಿ ಆರಂಭವಾಗಿದೆ. ಕಾರ್ಸ್ ಅಂಡ್ ಕಾಫಿ ಆಯೋಜಿಸುವ ಮೀಟ್‌ಅಪ್‌ಗಳಲ್ಲಿ ನನ್ನ ಆಕ್ಟೀವಿಯಾ ಟಿಎಸ್‌ಐ ತೆಗೆದುಕೊಂಡು ಹೋಗಿದ್ದೇನೆ. ಹೊಸ ಸ್ನೇಹಿತರು, ಕಾರು ಪ್ರೀತಿಸುವ ಸಮುದಾಯ, ಹಲವು ಹೊಸತುಗಳು ನನಗೆ ಸಿಕ್ಕಿವೆ.**
> **ಶರಣ್,** ಕಾರು ಪ್ರಿಯ

> **ಮೊದಲ ಮೀಟ್‌ಅಪ್‌ನಲ್ಲಿ 20 ಕಾರುಗಳು ಬಂದಿದ್ದವು. ಈಗ ನಮ್ಮ ಮೀಟ್‌ಅಪ್‌ನಲ್ಲಿ 300ಕ್ಕೂ ಹೆಚ್ಚು ಕಾರುಗಳು ಸೇರುತ್ತವೆ. ಇಂಥ ಕಾರ್ಯಕ್ರಮಗಳನ್ನು ಮುಂದಿನ ತಲೆಮಾರಿಗಾಗಿ ಆಯೋಜಿಸುತ್ತೇವೆ. ಕಾರನ್ನು ಕೇವಲ ಒಂದು ಎಲೆಕ್ಟ್ರಾನಿಕ್ ಗ್ಯಾಜೆಟ್ ಆಗಿ ನೋಡದೇ, ಅದರ ಕಾರ್ಯಕ್ಷಮತೆಯನ್ನು ಅರಿಯುವ ಪ್ರಯತ್ನವನ್ನು ಇಲ್ಲಿ ಮಾಡುತ್ತೇವೆ**
> **ಅರ್ಜುನ್ ಬೀರ್ ಸಿಂಗ್,** ಕಾರ್ ಮೀಟ್‌ಅಪ್ ಆಯೋಜಕ

10ನೇ ಪುಟದಿಂದ...

ಇನ್ನೂ ಕೆಲವರು ಮಕ್ಕಳ ಸಹಿತ ಇಡೀ ಕುಟುಂಬದವರೇ ಭಾಗವಹಿಸುತ್ತಾರೆ. ತರಹೇವಾರಿ ಕಾರುಗಳ ಕಣ್ತುಂಬಿಕೊಂಡು ಖುಷಿಪಡುತ್ತಾರೆ.

ರೇಸಿಂಗ್ ಟ್ರ್ಯಾಕ್‌ಗಳು

ವಾರಾಂತ್ಯಗಳಲ್ಲಿ ಪರ್ಫಾಮೆನ್ಸ್ ಕಾರುಗಳಿಗೆ ಹೆದ್ದಾರಿಯೇ ಸದ್ಯದ ಟ್ರ್ಯಾಕ್‌ಗಳಾಗಿವೆ. 'ಬ್ರೇಕ್‌ಫಾಸ್ಟ್ ರೇಡ್' ಎಂದರೆ ಟ್ರಾಫಿಕ್ ವಾಹನ ದಟ್ಟಣೆ ಹೆಚ್ಚಾಗುವುದರೊಳಗಾಗಿ ಅಂದರೆ, ನಸುಕಿನ 4ರಿಂದ 10 ಗಂಟೆಯೊಳಗೆ ಹೆದ್ದಾರಿಯಲ್ಲಿ ಕಾರು ಓಡಿಸಿ, ಮನೆ ಸೇರುತ್ತಾರೆ. ಬೆಂಗಳೂರಿನಲ್ಲಿರುವ ಬಹುತೇಕರು ಹೊಸಕೋಟೆ ರಸ್ತೆಯನ್ನು ಆಯ್ಕೆ ಮಾಡಿಕೊಳ್ಳುವುದೇ ಹೆಚ್ಚು. ಬಿಗ್ ಬೇ-ಕೆಫೆಯಂಥ ಕೆಲ ತಾಣಗಳಲ್ಲಿ ಉಪಾಹಾರ ಸೇವಿಸಿ ಮರಳುತ್ತಾರೆ. ಆದರೆ ಮೀಟ್‌ಅಪ್‌ಗಳಲ್ಲಿ ಮಧ್ಯಾಹ್ನ ಸಂಜೆಯವರೆಗೂ ಕಾಲ ಕಳೆಯಲು ಅವಕಾಶವಿದೆ.

'ಕಾರ್ ಮೀಟ್‌ಅಪ್ ಮಾತ್ರವಲ್ಲ. 'ಕಾರ್ ಸ್ಪಾಟಿಂಗ್' ಎಂಬ ಸಂಸ್ಕೃತಿಯೂ ಇದರ ಜತೆಜತೆಗೇ ಹುಟ್ಟಿಕೊಂಡಿದೆ. ಇಲ್ಲಿ ಪಾಲ್ಗೊಳ್ಳುವವರು ಕಾರಿನೊಂದಿಗೆ ಬಂದವರಲ್ಲ. ಬದಲಿಗೆ ಇಂಥ ಮೀಟ್‌ಅಪ್‌ಗಳಿಗೆ ಬರುವ ಹೊಸ ಹೊಸ ನಮೂನೆಯ ಕಾರುಗಳ ಚಿತ್ರ, ದೃಶ್ಯವನ್ನು ಸೆರೆಹಿಡಿದು ತಮ್ಮ ಪೋಸ್ಟ್‌ನಲ್ಲಿ ಹಂಚಿಕೊಳ್ಳುತ್ತಾರೆ. ಆದರೆ ಇದು ಇತ್ತೀಚೆಗೆ ಅಲರ್ಜಿಯಾಗುವಷ್ಟರ ಮಟ್ಟಿಗೆ ಹೆಚ್ಚಿದೆ ಎನ್ನುತ್ತಾರೆ ಕೆಲ ಆಯೋಜಕರು.

'ಭಾರತದಲ್ಲಿ ಕಾರು ಸ್ಪೋರ್ಟ್ಸ್ ಅನ್ನು ಎಂದಿಗೂ ಮನರಂಜನೆಯ ಸರಕನ್ನಾಗಿ ನೋಡಲೇ ಇಲ್ಲ. ದೆಹಲಿಯಲ್ಲಿರುವ ಬುದ್ಧ ಸರ್ಕೀಟ್ ಆರಂಭದಲ್ಲಿ ಸದ್ದು ಮಾಡಿತಾದರೂ, ಅಲ್ಲಿಗೆ ಕಾರು ಆಮದು ಮಾಡುವ ಸುಂಕ, ತೆಗೆದುಕೊಂಡು ಹೋಗುವ ಖರ್ಚು ಮತ್ತು ನೋಡಲು ಬರುವವರಿಗೆ ದುಬಾರಿ ಟಿಕೆಟ್‌ನಿಂದಾಗಿ ಯಶಸ್ವಿ ಆಗಲಿಲ್ಲ. ಹೀಗಾಗಿ ಪರ್ಫಾಮೆನ್ಸ್ ಕಾರು ಹೊಂದಿರುವವರಿಗೆ ಹೆದ್ದಾರಿಯೇ ಟ್ರ್ಯಾಕ್‌ಗಳಾಗಿವೆ. ಆದರೆ ಹೀಗೆ ಬೆಳೆಯುತ್ತಿರುವ ಕಾರು ಕ್ರೇಜ್‌ನಿಂದಾಗಿ ಬೆಂಗಳೂರಿನ ಸುತ್ತಮುತ್ತ ಅಂತರರಾಷ್ಟ್ರೀಯ ಆಟೊಮೊಬೈಲ್ ಒಕ್ಕೂಟ (ಎಫ್‌ಐಎ) ಗುಣಮಟ್ಟದ ಮೂರು ರೇಸಿಂಗ್ ಟ್ರ್ಯಾಕ್‌ಗಳು ನಿರ್ಮಾಣವಾಗುವ ಮಾಹಿತಿ ಇದೆ. ಇಂಥ ಒಂದು ಟ್ರ್ಯಾಕ್ ನಿರ್ಮಾಣಕ್ಕೆ ಸುಮಾರು 100 ಎಕರೆ ಜಾಗ ಬೇಕು. ಪರ್ಫಾಮೆನ್ಸ್ ಕಾರುಗಳ ಉತ್ತಮ ಸಂಗ್ರಹ ಹೊಂದಿರುವ ಬಿಲ್ಡರ್ ಭೂಪೇಶ್ ರೆಡ್ಡಿ ಅವರೂ ಇಂಥದ್ದೊಂದು ಟ್ರ್ಯಾಕ್ ಅನ್ನು ನಿರ್ಮಿಸುತ್ತಿದ್ದಾರೆ' ಎಂದೆನ್ನುತ್ತಾರೆ ನೇಸರ.

ಮೀಟ್‌ಅಪ್‌ಗಳು ಅಥವಾ ಸಾಹಸಗಳು ಆರೋಗ್ಯಕರವಾಗಿದ್ದಲ್ಲಿ ಉತ್ತಮ. ರಸ್ತೆಯಲ್ಲಿ ಅನಗತ್ಯವಾಗಿ ರೇಸ್ ಮಾಡುವ ಮೀಟ್‌ಅಪ್‌ಗಳು ಕಾನೂನು ಬಾಹಿರ. ಅಂಥ ಮೀಟ್‌ಅಪ್‌ಗಳಿಗೆ ಹೋಗಬೇಕೆನ್ನುವವರು ಅಲ್ಲಿ ಪಾಲ್ಗೊಳ್ಳುವ ಇತರರೊಂದಿಗೆ, ತಂದಿರುವ ಕಾರುಗಳನ್ನು ಗೌರವದಿಂದ ಕಾಣುವುದು ಮುಖ್ಯ. ಮತ್ತೊಬ್ಬರ ಕಾರಿನ ಚಿತ್ರ ತೆಗೆಯುವ, ಕಾರಿನಲ್ಲಿ ಕೂರುವ ಮುನ್ನ ಅನುಮತಿ ಪಡೆಯುವ ಸೌಜನ್ಯ ಮೆರೆಯಬೇಕು. ಜತೆಗೆ ಭೇಟಿಯ ಸ್ಥಳದಲ್ಲಿನ ಘನತೆಯನ್ನು ಕಾಪಾಡಬೇಕು ಎಂಬ ಮಾತುಗಳು ಆಯೋಜಕರದ್ದು. ಆದರೆ ಅಂತಿಮವಾಗಿ ಇಲ್ಲಿಂದ ಮಧುರ ನೆನಪುಗಳೊಂದಿಗೆ, ಮುಂದಿನ ವಾರದ ಕನಸು ಆರಂಭವಾಗುತ್ತದೆ.

ಅಂದಹಾಗೆ... ಈ ಭಾನುವಾರ ಯಾವ ಕಾರ್ ಮೀಟಪ್ ನಿಮ್ಮದು...?

ಗಡಾರಿ ಕೃಷ್ಣಪ್ಪನ ಜಾನಪದ ಕಣಜ

10ನೇ ಪುಟದಿಂದ...

ಈ ವಸ್ತು ಸಂಗ್ರಹಾಲಯದಲ್ಲಿ ಬಡಪಿನಿಂದ ಮಾಡಿರುವ ಕುಂಕುಮದ ಬಟ್ಟಲು, ಕಂಚಿನ ಲೋಟ, ತಟ್ಟೆ, ಚೊಂಬು, ಗಿಂಡಿ, ಕುಂಕುಮದ ಬಟ್ಟಲು, ಕಳಸ, ಮಂಗಳಾರತಿಯ ತಟ್ಟೆ, ದೀಪದ ಕಂಬ, ಕಂಚಿನ ಶ್ರೀಕೃಷ್ಣನ ವಿಗ್ರಹ, ಲಕ್ಷ್ಮೀ ವಿಗ್ರಹ, ಅಮೆ ವಿಗ್ರಹ, ಗಣೇಶ, ರಾಧಾಕೃಷ್ಣ, ಶಾರದಾಮಾತೆಯ ವಿಗ್ರಹ, ಹಿತ್ತಾಳೆಯ ಗಂಟೆ, ಗ್ರಾಮ ಫೋನ್ ರೆಕಾರ್ಡ್‌ಗಳಂತಹ ಅಪರೂಪದ ವಸ್ತುಗಳನ್ನು ನೋಡಬಹುದು.



ಜಾನಪದ ಕಣಜದಲ್ಲಿ ಸುಮಾರು 200 ದೇಶಗಳ ನಾಣ್ಯಗಳು, 172 ದೇಶದ ನೋಟುಗಳು, ರಾಜರು ಹಾಗೂ ಬ್ರಿಟಿಷರ ಕಾಲದ ನಾಣ್ಯಗಳು, ನಮ್ಮದೇ ದೇಶದ ಒಂದು ಆಣೆ, ಒಂದು ಪೈಸೆ, ಎರಡು ಪೈಸೆ, ಮೂರು ಪೈಸೆಯಿಂದ 20 ರೂಪಾಯಿವರೆಗಿನ ನಾಣ್ಯಗಳು. 1 ರೂಪಾಯಿ ನೋಟಿನಿಂದ 2 ಸಾವಿರ ರೂಪಾಯಿ ನೋಟಿನವರೆಗೆ ಸಂಗ್ರಹ ಇದೆ. ಅಮೆರಿಕಾದ 50 ರಾಜ್ಯಗಳ ಒಂದೊಂದು ನಾಣ್ಯಗಳು. ಈಸ್ಟ್ ಇಂಡಿಯಾ ಕಂಪನಿ ನಾಣ್ಯಗಳು. ಬೆಳ್ಳಿ ನಾಣ್ಯಗಳು ಕೂಡ ಸ್ಥಾನ ಪಡೆದಿವೆ.

ಜಾನಪದ ಕಣಜದಲ್ಲಿ ರಾಷ್ಟ್ರಕವಿ ಕುವೆಂಪುರವರ 11 ಸಂಪುಟಗಳಿವೆ. ವ್ಯವಸಾಯಕ್ಕೆ ಸಂಬಂಧಪಟ್ಟ ಮಾಹಿತಿ ಒಳಗೊಂಡಿರುವ 500 ರಿಂದ 600 ಪುಸ್ತಕಗಳಿವೆ. ದಿನಪತ್ರಿಕೆ, ಸಾಮಾನ್ಯ ಜ್ಞಾನಕ್ಕೆ ಸಂಬಂಧಿಸಿದ ಪುಸ್ತಕಗಳೂ ಸಿಗುತ್ತವೆ.

'ಮನಸು ಮಾಡಿದರೆ ಹಿರಿಯರ ಬದುಕಿನ ಶ್ರೀಮಂತಿಕೆಯನ್ನು ಅವರು ಬಳಸುತ್ತಿದ್ದ ವಸ್ತುಗಳ ಮೂಲಕ ಅನಾವರಣ ಮಾಡಬಹುದು. ಈ ನಿಟ್ಟಿನಲ್ಲಿ ಮೂವತ್ತು ವರ್ಷಗಳಿಂದ ಸತತ ಪ್ರಯತ್ನದಲ್ಲಿ ತೊಡಗಿದ್ದೇನೆ. ನನ್ನ ಪುಟ್ಟ ಮನೆಯ ಮಹಡಿಯು ಸಂಗ್ರಹಗಳಿಂದ ಬಹುತೇಕ ಭರ್ತಿಯಾಗಿದೆ' ಎಂದು ಕುವೆಂಪು ಜಾನಪದ ಕಣಜದ ರೂವಾರಿ ಕೃಷ್ಣಪ್ಪ ಹೇಳುತ್ತಾರೆ.

ಹಿರಿಯೂರಿನಿಂದ 18 ಕಿಲೊಮೀಟರ್ ದೂರದಲ್ಲಿರುವ ರಂಗೇನಹಳ್ಳಿಗೆ ಹೇಮದಳ-ಅಂಬಲಗೆರೆ ಮಾರ್ಗವಾಗಿ ಅಥವಾ ಯರಬಳ್ಳಿ-ಕಂದಿಕೆರೆ ಮಾರ್ಗವಾಗಿಯೂ ತಲುಪಬಹುದು. ಸಂಶೋಧನಾ ವಿದ್ಯಾರ್ಥಿಗಳು, ಇತಿಹಾಸದ ಬಗ್ಗೆ ಆಸಕ್ತಿ ಇರುವವರು, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುವವರು, ಪದವಿ ವಿದ್ಯಾರ್ಥಿಗಳು ವಸ್ತು ಸಂಗ್ರಹಾಲಯವನ್ನು ಉಚಿತವಾಗಿ ವೀಕ್ಷಿಸಬಹುದು ಎನ್ನುವ ಕೃಷ್ಣಪ್ಪ, ಯಾರ ಮನೆಯಲ್ಲಿಯಾದರೂ ಹಳೆಯ ಕಾಲದ ವಸ್ತುಗಳು ಇದ್ದರೆ ಸಂಗ್ರಹಾಲಯಕ್ಕೆ ಕೊಡಬಹುದು. ಅಂತಹವರ ಹೆಸರನ್ನು ಡೈರಿಯಲ್ಲಿ ನಮೂದಿಸಲಾಗುವುದು ಎನ್ನುತ್ತಾರೆ.

(ಗಡಾರಿ ಕೃಷ್ಣಪ್ಪ: 88616-31901)

ಯಶಸ್ವಿ ಸಾವಯವ ಕೃಷಿಕ

ಕೃಷ್ಣಪ್ಪನವರ ಕುಟುಂಬ ಸಾವಯವ ಕೃಷಿಗೆ ಹೆಸರುವಾಸಿ. ಸಾವಯವ ಪದ್ಧತಿಯಲ್ಲಿ ಅರ್ಕ, ನವಣೆ, ಊದಲು, ರಾಗಿ ಬೆಳೆಯುತ್ತಿದ್ದಾರೆ. ಕುಟುಂಬಕ್ಕೆ ಸಾಕಾಗುವಷ್ಟು ಭತ್ತವನ್ನೂ ಬೆಳೆಯುತ್ತಾರೆ. ಬೆಳೆಗಳಿಗೆ ರಾಸಾಯನಿಕ ಗೊಬ್ಬರ, ಔಷಧ ಬಳಸದೆ ಕೊಟ್ಟಿಗೆ ಗೊಬ್ಬರವನ್ನೇ ಬಳಸುತ್ತಾರೆ. ಹೊಲದಲ್ಲಿ ಬೆಳೆದ ಶೇಂಗಾದಿಂದ ಅಡುಗೆಎಣ್ಣೆ, ತೋಟದಲ್ಲಿ ಬಂದ ಕೊಬ್ಬರಿಯಿಂದ ಎಣ್ಣೆಯನ್ನು ಮನೆಯಲ್ಲಿಯೇ ಇರುವ ಗಾಣದಿಂದ ತೆಗೆಯುತ್ತಾರೆ. ಗ್ರಾಹಕರು ಮನೆಗೇ ಬಂದು ಅರ್ಕ, ನವಣೆ, ಊದಲು ಅಕ್ಕಿಯನ್ನು ಖರೀದಿಸುತ್ತಾರೆ. ಜಮೀನಿನಲ್ಲಿ ಕೃಷಿ ಹೊಂಡ ನಿರ್ಮಿಸಿದ್ದು, ಮೀನು ಕೃಷಿಯನ್ನು ನಡೆಸುತ್ತಿದ್ದಾರೆ.

ಮೊದಲ ಓದು

ವೈಕಲ್ಯ ಮೀರುವ ಬಗೆ ವಿವರಿಸುತ್ತ...



ಪು: 102 ₹150


ಕೇಳದ ಕಿವಿಗಳು ಹೇಳಿದ ಕತೆ
ಲೇ: ಸುಚೇತ ಕೆ.ಎಸ್
ಪ್ರ: ಅನ್ನಪೂರ್ಣ ಪಬ್ಲಿಷಿಂಗ್ ಹೌಸ್

ಕಿವಿ ಕೇಳಿಸದು ಎಂಬ ಲೋಪ ಎಲ್ಲಿಯೂ ಕಾಣದಂತೆ ಮಕ್ಕಳನ್ನು ಬೆಳೆಸುವ ಕಥನ ಈ ಪುಸ್ತಕದ್ದು. ಲೇಖಕಿ ತಮ್ಮ ವೈಕಲ್ಯವನ್ನು ಮಕ್ಕಳು ಹೇಗೆ ಒಪ್ಪಿಕೊಂಡರು, ಅದ್ಹೇಗೆ ಸಹಜವಾಗಿ ಸ್ವೀಕರಿಸಿದರು, ಯಾರಾದರೂ ಹೀಯಾಳಿಸಿದರೆ ಅಮ್ಮನನ್ನು ಸುರಕ್ಷಿತವಾಗಿಡುವ ಗೋಡೆಯಾದರು ಎಂಬಂಥ ಸಣ್ಣ ಸಣ್ಣ ಘಟನೆಗಳನ್ನಾಧರಿಸಿದ ಪುಸ್ತಕ.

ತಾಯಿಯೊಬ್ಬಳ, ಮೊಮ್ಮಕ್ಕಳ ಮುಂದೆ, ಮಕ್ಕಳ ಸಾಹಸ, ಪರಾಕ್ರಮ ಮತ್ತು ಬಾಲ್ಯವನ್ನು ರಸವತ್ತಾಗಿ ಹೇಳುವಂತೆಯೇ ಈ ಪುಸ್ತಕದ ನಿರೂಪಣೆ ಇದೆ. ಪತ್ರಕರ್ತನ ಹೆಂಡ್ತಿಯಾಗಿ ಸಂಸಾರ ನಿಭಾಯಿಸುವುದು ಒಂದು ಕಲೆ ಮತ್ತು ಸವಾಲು ಎಂಬಂತೆ ಅಲ್ಲಲ್ಲಿ ಅವರ ನೆನಪುಗಳು ಧ್ವನಿಸುತ್ತವೆ. ಆದರೆ ಢಾಳಾಗಿ ಕಾಣಿಸಿಕೊಳ್ಳುವುದು, ಎಲ್ಲರಂತಲ್ಲದ ಅಮ್ಮ, ಮಕ್ಕಳನ್ನು ಬೆಳೆಸುವಾಗ ತನ್ನೊಳಗಿನ ಆತಂಕವನ್ನು ಮೀರಿದ ಬಗೆ. ಇಬ್ಬರು ಮಕ್ಕಳನ್ನು ಬೆಳೆಸುವಾಗ ಅವರ ಒಳಜಗಳ, ಯಾರ ಪರವಹಿಸಬೇಕು ಎಂಬುದನ್ನು ಕಣ್ಣಲ್ಲಿಯೇ ಅಳೆಯುವುದು, ಮಕ್ಕಳ ಸ್ನೇಹಿತರಿಗೂ ಅಮ್ಮನಾಗುವ ಬಗೆ ಮೊದಲಾದ ಹೃನ್ಮನ ಸೆಳೆಯುವಂಥ ಸಂಗತಿಗಳು ಇಲ್ಲಿ ದಾಖಲಾಗಿವೆ.

ಇಲ್ಲಿ ಪೇರೆಂಟಿಂಗ್ ಸವಾಲುಗಳೊಂದಿಗೆ ವೈಕಲ್ಯ ಮೀರುವ ಬಗೆಯನ್ನೂ ಹೇಳುತ್ತ ಹೋಗುತ್ತಾರೆ. ಅಲ್ಲಲ್ಲಿ ತಾವು ನಿಭಾಯಿಸಿದ ರೀತಿಗೆ ತಾವೇ ಸೋಜಿಗಪಡುತ್ತಾರೆ, ಓದುಗರಂತೆಯೇ! ವಿಘಟಿತ ಕುಟುಂಬ, ವರ್ಗಾವಣೆಯ ಜೀವನ ಮಕ್ಕಳನ್ನೂ ಬೆಳೆಸುವ ಲೇಖಕಿಗೆ ಸಾರ್ಥಕ್ಯ ಕಾಣಿಸುವುದು, ಮಕ್ಕಳು ಅಮ್ಮನನ್ನು ಹೊಗಳಿದಾಗ. ದೊಡ್ಡ ಹುದ್ದೇಗೇರಿದ ಮಕ್ಕಳು ಕಲಿತಿದುದೆಲ್ಲವೂ ಅಮ್ಮನಿಂದ ಎಂದಾಗ. ಆ ವಾಕ್ಯ ಓದುವಾಗ ತಾಯ್ತನದ ಮೊದಲ ಸಂತೋಷದಂತೆಯೇ ಕಣ್ಣಪಸೆಯಲ್ಲಿ ಪುಸ್ತಕ ಮುಗಿದಿದ್ದು ತಿಳಿಯುತ್ತದೆ.

ಬಿಳಿಯರ ಬದುಕಿನ ಪರಿಚಯ



ಪು: 196 ₹200

ಬಿಳಿಯರ ಜೀವನ
ಲೇ: ಡಾ. ಸತ್ಯವತಿ ಮೂರ್ತಿ
ಪ್ರ: ವಿಕ್ರಮ್ ಪ್ರಕಾಶನ
ಸಂ: 89710 91760

ಇಂಗ್ಲೆಂಡ್ ದೇಶದಲ್ಲಿ ಜೀವನದ ಬಹುಪಾಲನ್ನು ಸವೆಸಿದ ಮತ್ತು ಸವಿದ ಸತ್ಯವತಿ ಮೂರ್ತಿ ಬಿಳಿಯರ ಜೀವನವನ್ನು ಎರಡು ಭಾಗಗಳಲ್ಲಿ ಬರೆದಿದ್ದಾರೆ. ಮೊದಲ ಭಾಗ ಆಕರ್ಷಿಸಿ ಹಿಡಿದಿಡುತ್ತದೆ. ಅಲ್ಲಿಯ ಮೌಢ್ಯಗಳು, ನಂಬಿಕೆಗಳು, ಆಚರಣೆಗಳು ಆಸಕ್ತಿಕರ ಅಂಶಗಳನ್ನು ಪರಿಚಯಿಸುತ್ತ ಹೋಗುತ್ತವೆ. ಬಿಳಿಯರ ಬದುಕಿನ ಗೊತ್ತಿಲ್ಲದ ಮುಖವನ್ನು ಇಲ್ಲಿ ನಿರೂಪಿಸುತ್ತ ಹೋಗುತ್ತಾರೆ.

ಮದುವೆ, ಹಬ್ಬ, ನಂಬಿಕೆ, ಊಟ, ಆಚಾರ, ಸಂಸ್ಕಾರ, ನೀತಿ-ನಿಯಮ ಎಲ್ಲವನ್ನೂ ಸರಳವಾಗಿ ತಿಳಿಸಲಾಗಿದೆ. ಅವರ ಮೌಢ್ಯ ಆಚರಣೆಗಳು ಮತ್ತು ನಂಬಿಕೆಗಳನ್ನು ಸ್ವಾರಸ್ಯಕರವಾಗಿ ವಿವರಿಸಲಾಗಿದೆ. ಲಘುಬರಹದ ಸ್ವರೂಪದಲ್ಲಿರುವ ಈ ಭಾಗ ಬಿಡುವಿನ ಓದಿಗೆ ಸೂಕ್ತ.

ಎರಡನೆಯ ಭಾಗ ಮಾತ್ರ ಓದುಗನೊಂದಿಗೆ ಚರ್ಚೆಗಿಳಿದು, ತಮ್ಮ ವಾದವೇ ಸರಿ ಎಂಬಂತೆ ಮನವರಿಕೆ ಮಾಡಿಕೊಡುವ ಯತ್ನ ಢಾಳಾಗಿ ಕಾಣುತ್ತದೆ. ಪ್ರತಿ ಆಚರಣೆಗಳೂ ನಮ್ಮಲ್ಲಿಯೂ ಇವೆ. ನಮ್ಮಲ್ಲಿಯೂ ಶ್ರೇಷ್ಠವಾಗಿವೆ ಎಂಬ ವಾದದ ಸರಣಿ ಮುಂದುವರಿದಂತೆ ಕಾಣುತ್ತದೆ. ಇಲ್ಲಿ ಓದುಗನಿಗೆ ಸಹಮತವಿದ್ದರೂ, ಒಪ್ಪದೇ ಇದ್ದರೂ ಓದಲೇಬೇಕೆಂಬ ಅಗತ್ಯ ಎದ್ದು ಕಾಣದಂತಾಗುತ್ತದೆ. ಮೊದಲ ಭಾಗದ ಓದಿಗಾಗಿ ಈ ಪುಸ್ತಕವನ್ನು ಕೊಳ್ಳಬಹುದು. ಎರಡನೆಯ ಭಾಗದ ಓದು ಅವರವರ ಆಯ್ಕೆಗೆ ಬಿಟ್ಟಿದ್ದು.

ರೂಮಿ ಹೇಳಿದ ದೃಷ್ಟಾಂತಗಳು



ಪು: 144 ₹200

ರೂಮಿ ಕತೆಗಳು
ಲೇ: ಸ್ವಾಲಿಹ್ ತೋಡಾರು
ಪ್ರ: ತಿಜೋರಿ ಪ್ರಕಾಶನ
ಸಂ: 9663925123

ಇಂಗ್ಲಿಷ್ ಭಾಷೆಯ ಪ್ರಸಿದ್ಧ ಲೇಖಕ ಮಾರ್ಟಿನ್ ಲಿಂಗ್ಸ್ ಅವರ 'ಮುಹಮ್ಮದ್' ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದ ಯುವ ಲೇಖಕ ಸ್ವಾಲಿಹ್ ತೋಡಾರು ಅವರ ಇನ್ನೊಂದು ಮಹತ್ವಪೂರ್ಣ ಕೃತಿಯಿದು. ಮೌಲಾನಾ ಜಲಾಲುದ್ದೀನ್ ರೂಮಿ 13ನೆಯ ಶತಮಾನದ ದಾರ್ಶನಿಕ ಕವಿ.

ರೂಮಿಯ ಅನೂಹ್ಯ ಒಳನೋಟಗಳು ಚಿಕಿತ್ಸಕ ಗುಣವನ್ನು ಹೊಂದಿವೆ. ಆಳವಾದ ಆಲೋಚನೆಗೆ ಹಚ್ಚುವ, ಮನಸ್ಸನು ಆರ್ದ್ರಗೊಳಿಸುವ ಶಕ್ತಿ ರೂಮಿಯ ಕತೆಗಳಿಗೆ ಇದೆ. ರೂಮಿಯ ಎರಡು ಸಾಲುಗಳಲ್ಲಿ ಅಸಂಖ್ಯಾತ ಅರ್ಥಗಳಿರುತ್ತವೆ. ಅವುಗಳು ಮತ್ತೆ ಮತ್ತೆ ಓದುವಂತೆ ಮಾಡುತ್ತವೆ. ಮನಸು ಭಾರವಾದಾಗ, ಮನಸು ಖಾಲಿಯೆನಿಸಿದಾಗ ರೂಮಿಯ ಸಾಲುಗಳ ಸಖ್ಯ ಬೆಳೆಸಬೇಕು.

ರೂಮಿಯ ಮಸ್ನವಿಯಲ್ಲಿ ಹೇಳಿದ ಉದಾಹರಣೆಗಳು ಮತ್ತು ದೃಷ್ಟಾಂತಗಳನ್ನು ಸಂಗ್ರಹಿಸಿ ಪ್ರಸ್ತುತ ಕತೆಗಳಿಗೆ ಪುಸ್ತಕ ರೂಪವನ್ನು ಕೊಡಲಾಗಿದೆ. ಕೃತಿಯುದ್ದಕ್ಕೂ ಸೂಫಿ ಸ್ವಭಾವವಿರುವ ದಿವ್ಯ ಪ್ರೇಮದ ದೃಷ್ಟಾಂತಗಳನ್ನು ಸೂಚಿಸುವ ಕತೆಗಳನ್ನು ಕಾಣಬಹುದು. ಒಟ್ಟಾರೆ ಎಲ್ಲ ಕಾಲಕ್ಕೂ ಸಲ್ಲುವ ಸಾಮಾನ್ಯ ಉದಾಹರಣೆಗಳನ್ನು ಮುಂದಿಟ್ಟು ರೂಮಿ ನಮಗೆ ಸೂಫಿ ತತ್ವಗಳನ್ನು ಕಲಿಸುತ್ತಾರೆ. ಈ ಕೃತಿಯ ಅನುವಾದವು ಸರಳ ಮತ್ತು ಸುಂದರವಾಗಿದೆ.

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ದೊರೆನಿರಿಗೆ

ದೊರೆನಿರಿಗೆ (ನಾ.) ರಾಜನಿಗೆ ತಕ್ಕಂಥ ಮರ್ಯಾದೆ, ರೀತಿ, ರಾಜಮರ್ಯಾದೆ

ಮಾವ ಮಾರೀಚನು ತನ್ನ ಆಶ್ರಮಕ್ಕೆ ದೊರೆ ರಾವಣನು ಬಂದಾಗ, ರಾಜನನ್ನು ಉಪಚರಿಸುವ ಪದ್ಧತಿ, ರೀತಿ ಅನುಸರಿಸಿದನು. ಅದನ್ನು ತಿಳಿಸಲು ಕುವೆಂಪು ಅವರು 'ದೊರೆನಿರಿಗೆ' ಪದ ರೂಪಿಸಿ ಹೀಗೆ ಪ್ರಯೋಗಿಸಿದ್ದಾರೆ:

'ದೊರೆಯನುಪಚಪರಿಸಿದನು ದೊರೆನಿರಿಗೆಯಿಂ'

ಗಂಡುಗಂಡ

ಗಂಡುಗಂಡ (ನಾ). ಕಠಿಣವಾದ ಕೆನ್ನೆ, - ಕಪೋಲ

ವಾಲಿ ಮತ್ತು ಮಾಯಾವಿ ಮಹಾಗುಹೆ ಪ್ರವೇಶಿಸಿ ಹೋರಾಡುತ್ತ ಹತ್ತು ವರ್ಷಗಳು ಕಳೆಯುವವು. ಗುಹೆಯ ಬಾಗಿಲಿನಲ್ಲಿ ಅಣ್ಣ ವಾಲಿಗಾಗಿ ಕಾಯುತ್ತಿದ್ದ ಸುಗ್ರೀವ ಗುಹೆಯಿಂದ ಹೊರಬಂದ ನೊರೆಯ ನೆತ್ತರು ನೋಡುತ್ತಾನೆ. ವಾಲಿ ಸತ್ತಿರಬಹುದೆಂದು ಭಾವಿಸಿಕೊಂಡು ಗುಹೆಯ ಬಿಲದ ಬಾಯಿಗೆ ಗಂಡು ಹೆಬ್ಬಂಡೆಯನ್ನು ಜಡಿದು ಕಿಷ್ಕಿಂಧೆಗೆ ಹಿಂದಿರುಗುತ್ತಾನೆ.

ಮಾಯಾವಿಯನ್ನು ಸಂಹರಿಸಿ ಬಂದ ಸಾಹಸಿ ವಾಲಿ ಬಂದು ನೋಡುತ್ತಾನೆ. ಸುತ್ತಲೂ ಕತ್ತಲೆ ಕವಿದು, ದಾರಿತೋರದಾಗಿ ಗುಹೆಯ ಗಂಟಲಿಗೆ ಬಂಡೆ ತುರುಕಿರುವುದು ಕಾಣುತ್ತಾನೆ. ಅದನ್ನು ರುದ್ರ ಅಟ್ಟಹಾಸದಿಂದ ಕೂಗಿ ಗರ್ಜಿಸಿ ತಳ್ಳುತ್ತಾನೆ. ಆಗ ಅದು ಸಿಡಿದ ರೀತಿಯನ್ನು ಕುವೆಂಪು ಅವರು ಒಂದು ಉಪಮಾನದಿಂದ ಚಿತ್ರಿಸಿದ್ದಾರೆ. ಮುಚ್ಚಿದ ಶೀಸೆಯನ್ನು ಕಾಯಿಸಲು ಅದರ ಮುಚ್ಚಳ ತಟಲ್ಲೆಂದು ಸಿಡಿಯುವ ರೀತಿ ಅದು ಸಿಡಿಯಿತು!

ಅದರಿಂದ ಸಿಡಿದ ಬಂಡೆ ವಾಲಿಯ ಕಠಿಣವಾದ ಕೆನ್ನೆಗೆ ಸಿಡಿಯಿತು. ಅವನ ಗಡುಸಾದ ಬಿರುಸಿನ ಕೆನ್ನೆಯನ್ನು ಕವಿ ಚಿತ್ರಿಸುವಾಗ ಹೊಸಪದ 'ಗಂಡುಗಂಡ' ಸೃಷ್ಟಿಸಿದ್ದಾರೆ. 'ಗಂಡು' ಪದದ ಅರ್ಥ ಬಿರುಸು, ಗಟ್ಟಿ. ಗಂಡಯೆಂದರೆ ಕಪೋಲ, ಕೆನ್ನೆ.

ಮೆಜೆಸ್ಟಿಕ್ ಮಾಯಾಂಗನೆಯ ಮೋಹದಲಿ...


ಐವತ್ತು ವರ್ಷಗಳ ಹಿಂದೆ ಮೆಜೆಸ್ಟಿಕ್ ಪ್ರದೇಶ ಹೀಗಿತ್ತು...

ಚಿತ್ರಗಳು: ಪ್ರಜಾವಾಣಿ ಸಂಗ್ರಹ


ಮುಕ್ತ ಮುಕ್ತ ವಿಧಾನಸೌಧದ ಆವರಣ...

ಈರಪ್ಪ ಎಂ ಕಂಬಳಿ

ಮೆಜೆಸ್ಟಿಕ್, ಬೆಂಗಳೂರಿನ ಹೃದಯ. ಇಲ್ಲಿಗೆ ದೂರದ ರಾಯಚೂರು ಜಿಲ್ಲೆಯಿಂದ ಬಂದಿದ್ದ ಹರೆಯದ ಯುವಕನೊಬ್ಬ ಐವತ್ತು ವರ್ಷಗಳ ಹಿಂದೆ ಅನುಭವಿಸಿದ ರೋಮಾಂಚನವನ್ನು ನೆನಪಿಸಿಕೊಂಡಿದ್ದಾರೆ. ಅಂದಿನ ಮೆಜೆಸ್ಟಿಕ್ ಹೇಗಿತ್ತು...?

ಅದು 1974. ಹತ್ತನೆಯ ತರಗತಿಯಲ್ಲಿ ಫೇಲಾಗುವುದು ಗ್ಯಾರಂಟಿ ಎಂದುಕೊಂಡು ಊರಲ್ಲಿ ಮುಖ ತೋರಿಸಲು ನಾಚಿ ತುಂಗಭದ್ರೆಯ ದಡದ ಮೇಲಿದ್ದ ಸಿಂಧನೂರ ತಾಲ್ಲೂಕಿನ ಧಡೆಸೂಗೂರ 'ರೈತರ ಮಕ್ಕಳ ತರಬೇತಿ ಶಾಲೆ'ಗೆ ಓಡಿಹೋಗಿದ್ದೆ. ಸರ್ಕಾರದ ಖರ್ಚಿನಲ್ಲಿ ಶೈಕ್ಷಣಿಕ ಪ್ರವಾಸವೆಂದು ಅವರೇ ಬೆಂಗಳೂರಿಗೆ ನಮ್ಮನ್ನು ತಂದು ಇಳಿಸಿದಾಗ ಸಂಜೆ ಆರರ ಹೊತ್ತು. ಮೆಜೆಸ್ಟಿಕ್‌ನಲ್ಲಿರುವ ತೋಟದಪ್ಪ ಛತ್ರದಲ್ಲಿ ಎರಡು ದಿನಗಳ ವಾಸ್ತವ್ಯ.

'ಇದನ್ನೇನು ತೋಟದಪ್ಪನ ಧರ್ಮಛತ್ರ ಅಂದುಕೊಂಡಿದ್ದೀಯಾ?' ಎಂದು ಛೇಡಿಸುವುದು ಹಳೆ ಮೈಸೂರು ಭಾಗದಲ್ಲಿ ತುಸು ಹೆಚ್ಚೇ ಚಾಲ್ತಿಯಲ್ಲಿದೆ. ಇದು ಅಕ್ಷರಶಃ ನಿಜ. ಸಂಜೆಯಾದರೆ ಬೀದಿ ವ್ಯಾಪಾರಿಗಳ ಗಜಿಬಿಜಿ ಈ ಛತ್ರದ ಆವಾರದಲ್ಲಿ. ಮೆಜೆಸ್ಟಿಕ್, ಬೆಂಗಳೂರಿನ ಹೃದಯಭಾಗವಾದರೆ 50 ವರ್ಷಗಳ ಹಿಂದೆ ಹ್ಯಾಗಿತ್ತೊ ಈಗಲೂ ಹಾಗೇ ತನ್ನತನ ಉಳಿಸಿಕೊಂಡು ಬಂದಿರುವ ಈ ಛತ್ರವನ್ನು ಏನೆಂದು ಕರೆಯಬಹುದು? ನೆನಪುಗಳಿಗೆ ಸಾವಿಲ್ಲ!

ಕಣ್ಣ ತುಂಬ ಕನಸು ಚಿಮ್ಮುವ ಹುಡುಗರಾದ ನಾವು ಆಗ ಕಾಯಲಿಲ್ಲ. ಅಡುಗೆ ಆಗುವುದರೊಳಗೆ ಅಡ್ವಾನ್ಸ್ ಆಗಿ ವಿಧಾನಸೌಧವನ್ನೊಮ್ಮೆ ನೋಡಿಕೊಂಡು ಬರಲು ಐದಾರು ಜನ ಸಿದ್ಧರಾಗಿದ್ದೆವು. ಆಗಿನ್ನೂ ಖಾಲಿ ಹೊಡೆಯುತ್ತಿದ್ದ ಎದುರುಗಡೆಯ ಧರ್ಮಾಂಬುದಿ ಕೆರೆಯಂಗಳ (ಈಗಿನ ಕೆಎಸ್‌ಆರ್‌ಟಿಸಿ- ಬಿಎಂಟಿಸಿ ಬಸ್ ನಿಲ್ದಾಣ)ದಲ್ಲಿ ಬರೆ ಹಾಕಿದಂತೆ ತೋರುತ್ತಿದ್ದ ಕಾಲುದಾರಿಗಿಳಿದು ಆ ಕಡೆಯ ಧನ್ವಂತರಿ ರಸ್ತೆ ಹತ್ತಿ, ಕತ್ತಲಾಗುವ ಮೊದಲೇ ವಿಧಾನಸೌಧವನ್ನು ಕಣ್ತುಂಬಿಕೊಂಡು ಬರಲು 'ಹುರ್ರಾ' ಎಂದು ಒಂದೇ ಉಸಿರಿಗೆ ಓಟ ಕಿತ್ತಿದ್ದೆವು.

ಆಗಿನ್ನೂ ಆ ಭವ್ಯ ವಿಧಾನಸೌಧಕ್ಕೆ ಯಾವುದೇ ತಡೆಬೇಲಿ ಇರಲಿಲ್ಲ. ದೊಡ್ಡ ದೇವಸ್ಥಾನದಂತೆ ತೋರುವ ಆ ಭವ್ಯ ಮಹಲ್ ಒಂದು ಸುತ್ತು ಹಾಕಿಕೊಂಡು ಮುಂಭಾಗಕ್ಕೆ ಬಂದಾಗ ತಮ್ಮದೇ ಸ್ವಂತ ಮನೆಯಂಗಳವೆನ್ನುವ ತೆರದಲ್ಲಿ ಮಡದಿ ಮಕ್ಕಳು ಮರಿಗಳೊಂದಿಗೆ ಮೆಟ್ಟಿಲುಗಳ ಮೇಲೆಲ್ಲಾ ಬೀಡುಬಿಟ್ಟಿರುವ ಸ್ಥಳೀಯ ಕುಟುಂಬ ಸದಸ್ಯರ ಗಜಿಬಿಜಿ ನೋಡಬೇಕಿತ್ತು! ಅವರ ನಡುವೆ ಕಡ್ಲೇಕಾಯಿ ಮಾರುವವರ ಮೆರವಣಿಗೆ! ಈಗ ಅದನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ ಬಿಡಿ.

ಕತ್ತಲಾಗುತ್ತಿದ್ದಂತೆ ಹೊಟ್ಟೆ ಎಚ್ಚರಿಸಿದಾಗ ಕಾಲೆಳೆದುಕೊಂಡು ಛತ್ರಕ್ಕೆ ಮರಳಿದ್ದೆವು. ಅದು ದೀಪಾವಳಿಯ ಹಿಂದಿನ ದಿನ. ಮೂಲೆಯಲ್ಲಿದ್ದ ಶಾಂತಲಾ ಸಿಲ್ಕ್ ಹೌಸ್ ಆಗಲೂ ಹೊಸ ಲೈಟುಗಳಿಂದ ಝುಗಮಗಿಸುತ್ತಿತ್ತು. ಹತ್ತಿರದ ತುಳಸಿತೋಟದಿಂದ ಆರ್ಕೆಸ್ಟ್ರಾ ಸೌಂಡು!

ಚಿಕ್ಕ ಲಾಲ್ ಬಾಗ್ ಎಂತಲೂ ಅದಕ್ಕೆ ಕರೆಯುವುದುಂಟು. ಕೆಳಗೆ ಇಳಿದು ಹೋಗಲು ಮೆಟ್ಟಿಲು, ಮೇಲೆ ಕಲಾತ್ಮಕವಾದ ಕಲ್ಲಿನ ಕಮಾನುಗಳು.

ಅದು ಟ್ಯಾಂಕ್ ಬಂಡ್ ರೋಡ್. ಒಂದು ಕಡೆ ಗುಂಪಾಗಿ ನಿಂತಿರುತ್ತಿದ್ದ ಹೋಟೆಲ್ ಮಾಣಿಗಳನ್ನು ಕರೆದೊಯ್ಯಲು ಮಾಲೀಕರು ನಿತ್ಯ ಅಲ್ಲಿಗೆ ಬರುತ್ತಾರೆಂದು ಅದ್ಯಾರೋ ನಮಗೆ ತಿಳಿಸಿದರು. ಮಹಾನಗರ ಎಂದ ಮೇಲೆ ಹಳ್ಳಿಗಾಡಿನ ಹುಡುಗರು ದಾರಿ ತಪ್ಪಿಬಿಟ್ಟಾರು ಎಂದು ನಮಗೆ 'ದೂರ ಎಲ್ಲಿಗೂ ಹೋಗಕೂಡದು, ಹತ್ತಿರದಲ್ಲಿಯೇ ಸುಳಿದಾಡಿಕೊಂಡು ಇರಬೇಕು' ಎಂದು ತಾಕೀತು ಮಾಡಿದ್ದರು.

ಸರಿ, ಕಾಲಿಗೆ ಚಕ್ರ ಕಟ್ಟಿಕೊಂಡಂತಿರುವ ವಯಸ್ಸು ಒಂದು ಕಡೆ ಸುಮ್ಮನೆ ನಿಲ್ಲಲು ಬಿಡುವುದಿಲ್ಲ. ಛತ್ರದ ಮುಂದಿದ್ದ ಜಗುಲಿ ಇಳಿದು, ಕೆರೆಯ ಕಟ್ಟೆಯಗುಂಟ ಒಂದೇ ದಿಕ್ಕಿನಲ್ಲಿ ಸುತ್ತಾಡಲು ಹೊರಟರೆ ಭೂಮಿ ದುಂಡಗಿದೆ ಎನ್ನುವಂತೆ ಮತ್ತೆ ನಾವು ಇಳಿದುಕೊಂಡ ಛತ್ರಕ್ಕೇ ಬಂದು ತಲುಪುತ್ತಿದ್ದೆವು! ಕೆರೆ ಏರಿ ಮೇಲೆ ಅಲ್ಲೊಂದು ಇಲ್ಲೊಂದು ನಗರ ಸಾರಿಗೆ ಬಸ್ಸುಗಳು ಬೇರೆ ಬೇರೆ ದಿಕ್ಕುಗಳಿಗೆ ಮುಖ ಮಾಡಿ ನಿಂತಿರುತ್ತಿದ್ದವು. ಮುಂದಿನ ಕೆರೆಯಂಗಳದಲ್ಲಿ ಮೈಸೂರಿಗೆ ಹೋಗುವ ಸರ್ಕಾರಿ ಬಸ್ಸೊಂದು ಕಾದು ನಿಂತಿತ್ತು. ಅದೇ ಜಾಗ ಈಗ ಕೆಎಸ್‌ಆರ್‌ಟಿಸಿಯ ಕೇಂದ್ರ ಬಸ್ ನಿಲ್ದಾಣ.

ಆಗಿನ್ನೂ ಬೆಂಗಳೂರಿಗೆ ಈಗಿನಷ್ಟು ವೇಗ ಒದಗಿರಲಿಲ್ಲ. ರೈಲು ನಿಲ್ದಾಣವೇ ಆಗ ನಮಗೆ ವಿಮಾನ ನಿಲ್ದಾಣದಂತೆ ಕುತೂಹಲ ಹುಟ್ಟಿಸಿದ್ದು ನಿಜ. ಇಂಗ್ಲಿಷ್ ಉಚ್ಚಾರದಲ್ಲಿ 'ಮೆಜೆಸ್ಟಿಕ್' ಅಂದರೇನೇ ಅದರ ಗಾತ್ರ ಮತ್ತು ಸೌಂದರ್ಯಗಳಿಂದ ಪ್ರಭಾವ ಬೀರುವ ಆದರಣೀಯ ತಾಣ. ಅಂದಮೇಲೆ, ಊರಿಗೆ ಬಂದಾಕೆ ನೀರಿಗೆ ಬಾರದಿರುತ್ತಾಳೆಯೆ? ಮೆಜೆಸ್ಟಿಕ್ ಆಕರ್ಷಣೆ ಅಂದರೆ ಹಾಗೇ. ಈಗಿನ ಉಪ್ಪಾರಪೇಟೆ ಪೋಲಿಸ್ ಠಾಣೆಯ ಎದುರುಗಡೆ ಇದ್ದ ಮೆಜೆಸ್ಟಿಕ್ ಥಿಯೇಟರ್ ನಾಮಾವಶೇಷವಾಗಿ ಕಾಡುತ್ತಿದೆ, ಈಗಲೂ! ಸರ್ಪಭೂಷಣ ಮಠ, ಗೀತಾ ಟಾಕೀಸು, ಒಂದೇ ಎರಡೇ...

ಚಿತ್ರಮಂದಿರದ ಮುಂದೆ ಟಿಕೆಟ್ ಹಿಡಿದು ನಿಂತು ಕಾಯುತ್ತಿದ್ದ ವೇಳೆ ಅಜ್ಜ ಒಬ್ಬರು ಹತ್ತಿರ ಬಂದು 'ಲೇ ಹುಡುಗ್ರಾ ಅದೋ ಅಲ್ಲಿದೆಯಲ್ಲ, ಎದುರುಗಡೆ ಆ ಮನೆ ನಾಗೇಂದ್ರರಾಯರದು' ಎಂದಾಗ 'ಹೌದ್ರಾ, ರೇಣುಕಾ ಎಲ್ಲಮ್ಮನ ಸಿನಿಮಾದಾಗ ಜಮದಗ್ನಿ' ಎಂದು ನಾವು ಬಾಯ ಮೇಲೆ ಬೆರಳಿಟ್ಟುಕೊಂಡು ನೋಡುವ ಹೊತ್ತಿಗೆ, 'ಅಲ್ಲಿ ಪಟಾಕಿ ಸಿಡಿಸುವವರು ಅವರ ಮಕ್ಕಳು. ಒಬ್ಬ ಕವಿ, ಮತ್ತೊಬ್ಬ ನಟ, ಮಗದೊಬ್ಬ ಫೋಟೋಗ್ರಾಫರ್' ಎಂದು ಆ ಅಜ್ಜ ವಿವರಿಸುವ ಹೊತ್ತಿಗೆ, ಬೆಲ್ ಆಗಿ ಮ್ಯಾಟಿನಿ ಬಿಟ್ಟು, ಥಿಯೇಟರ್ ಒಳಗಿನಿಂದ ಜನ ಬುದುಬುದನೆ ಬರಲಾರಂಭಿಸಿದ್ದರು. ನಮಗೋ ಒಳಗೆ ಹೋಗಲು ಆತುರ.

ಮೆಜೆಸ್ಟಿಕ್ ಹೊಟ್ಟೆಯಲ್ಲಿ ಒಂದು ಗುಪ್ತಾ ಮಾರ್ಕೆಟ್ ಇತ್ತು. ಯಾವಾಗಲೂ ಬೆಲ್ಲಕ್ಕೆ ಇರುವೆ ಮುತ್ತಿದಂತೆ ಜನವೋ ಜನ. ಗುಟ್ಟಾಗಿ ಕಳ್ಳ ಸಾಗಣೆ ಸರಕುಗಳನ್ನು ಅಲ್ಲಿ ಮಾರುತ್ತಾರೆಂಬ ವದಂತಿ ಇತ್ತು. ಆ ಕಾರಣಕ್ಕೇ ಅದಕ್ಕೆ 'ಗುಪ್ತ' ಮಾರುಕಟ್ಟೆ ಎಂದು ಹೆಸರು ಬಂದಿರಬೇಕೆಂಬುದು ಆಗ ನನ್ನ ಮೂಢನಂಬಿಕೆ. ಹೀಗಾಗಿ ಅದಕ್ಕೆ ಅದರದೇ ಆದ ಆಕರ್ಷಣೆ. 'ಸಂಜೆ ಆರರ ಹೊತ್ತು ಗುಪ್ತಾ ಮಾರ್ಕೆಟ್ ಮುಂದೆ ಕಾದಿರುತ್ತೀನಿ, ಮಿಸ್ ಮಾಡಬೇಡ' ಎಂದು ಆಪ್ತ ಗೆಳೆಯರ ಭೇಟಿಗೆ ಅದು ಹೇಳಿ ಮಾಡಿಸಿದ 'ವೇಯ್ಟಿಂಗ್ ಪಾಯಿಂಟ್!'

ಆ ತುದಿಯಲ್ಲಿ ಧನ್ವಂತರಿ ಆಯುರ್ವೇದ ಆಸ್ಪತ್ರೆ, ಈ ತುದಿಯಲ್ಲಿ ಎಲೈಟ್ ಹೋಟೇಲು. ಗಲ್ಲಿಗಳಲ್ಲಿ ನುಗ್ಗಿದರೆ ಕಪಾಲಿ ಚಿತ್ರಮಂದಿರದಿಂದ ತುಸು ಮುಂದಕ್ಕೆ ಹೋದರೆ ಯಾವಾಗಲೂ ತೆಲುಗು ಸಿನಿಮಾ ಪ್ರದರ್ಶಿಸುತ್ತಿದ್ದ ಮೂವಿ ಲ್ಯಾಂಡ್, ವಾಹ್! ಪಕ್ಕದ ಗಲ್ಲಿಯಲ್ಲಿ ಜೋಳದ ರೊಟ್ಟಿ ಗದ್ದಿಗೆಪ್ಪನ ಖಾನಾವಳಿ. ಉತ್ತರ ಕರ್ನಾಟಕದ ರಾಜಕಾರಣಿಗಳು ದಂಡಿಯಾಗಿ ಅಂಡಲೆಯುವ ಜಾಗ. ಮತ್ತೊಂದು ಕಡೆ ಮುದ್ದೆ ಮುರಿಯುವವರಿಗಾಗಿ ಮಾದಪ್ಪನ ಮೆಸ್.

ಹಾಗೇ ತುಸು ಬಲಗಡೆ ತಿರುಗಿದರೆ ಸುಬೇದಾರ್ ಛತ್ರಂ ರಸ್ತೆಯಲ್ಲಿ ಅಣ್ಣಮ್ಮನ ಗುಡಿ. ಎಡಕ್ಕೆ ಕಾಲಾಡಿಕೊಂಡು ಹೋದರೆ ವೃತ್ತಿ ನಾಟಕ ಕಂಪನಿಗಳ ಆಡುಂಬೊಲ ಗುಬ್ಬಿ ವೀರಣ್ಣ ರಂಗಮಂದಿರ. ಬಲಕ್ಕೆ ತಿರುಗಿ ಕೆಂಪೇಗೌಡ ರಸ್ತೆಯಲ್ಲಿ ಕೆಂಪೇಗೌಡ ಥಿಯೇಟರ್, ಎದುರುಗಡೆ ಜನತಾ ಬಜಾರು, ಮುಂದೆ ಹೋದರೆ ಬೃಹದಾಕಾರದ ಹೊಸ ಮೈಸೂರು ಬ್ಯಾಂಕ್ ಕಟ್ಟಡ–ಇವು ಮೆಜೆಸ್ಟಿಕ್ ಏರಿಯಾದಲ್ಲಿರುವ ಹೆಗ್ಗುರುತುಗಳು!

ಚಿಕ್ಕಪೇಟೆ, ತರಗುಪೇಟೆ, ತುಳಸಿತೋಟ, ಗಾಂಧಿನಗರದ ಸುತ್ತಮುತ್ತಲ ಬಹುತೇಕ ಮೂಲ ನಿವಾಸಿಗಳು ಎಂದೋ ತಮ್ಮ ಮನೆ ಮಾರುಗಳನ್ನು ಹಣದ ಥೈಲಿ ಹಿಡಿದುಕೊಂಡು ಬಂದ ಮಾರ್ವಾಡಿಗಳಿಗೆ ಮಾರಿ ನಗರದ ಹೊರವಲಯದಲ್ಲಿ ಹೋಗಿ ನೆಲೆಸಿದ್ದು ಮತ್ತೊಂದು ಕುತೂಹಲಕಾರಿ ಇತಿಹಾಸ.

ಮೆಜೆಸ್ಟಿಕ್ ಎಂಬ ಮಾಯಾಂಗನೆಯ ಮೋಹಕ ನೆನಪು ಮನಸ್ಸು ಮಾಗಿದಷ್ಟೂ ಮತ್ತೆ ಮತ್ತೆ ಕಾಡುತ್ತಲೇ ಇದೆ!


ಕೆರೆಯಲ್ಲಿ ಬಸ್ ನಿಲ್ದಾಣವೊಂದನ್ನು ಮಾಡಿ...

ಮಜ ಮಜ ಮಜಕೂರ


• ಎಂ.ಎಸ್.ಪೂಜಾರ



ಡಬ್ಬಾ ಚಿಕ್ಕು ಕೀರ್ತಿಪ್ಪು ಕಥೆಯ — ಹೊಸ ಐಡಿಯಾ!

• ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಗುಂಡ ತನ್ನ ರೂಂಗೆ ಬಣ್ಣಬಳಿಯುತ್ತಿದ್ದ. ಕೆಳಭಾಗದ ಗೋಡೆಗೆಲ್ಲ ಬಣ್ಣಬಳಿದ ಬಳಿಕ ಒಂದು ಏಣಿ ತಂದು ಮೇಲಿನ ಗೋಡೆಗೆ ಬಣ್ಣಬಳಿಯಲಾರಂಭಿಸಿದ. ಏಣಿಯ ತುದಿ ತಲುಪಿದರೂ ಗೋಡೆ ಪೂರ್ತಿಯಾಗಿ ಗುಂಡನ ಕೈಗೆ ಎಟಕುತ್ತಿರಲಿಲ್ಲ. ಕೆಲ ಹೊತ್ತು ಯೋಚಿಸಿದ ಗುಂಡ ಮನೆಯಲ್ಲಿದ್ದ ಡ್ರೋನ್ ಹೊತ್ತು ಬಂದ. ಅದರ ಮೇಲೆ ಕುಳಿತು ಆನ್ ಮಾಡಿದ. ಡ್ರೋನ್ ಮೆಲ್ಲನೆ ಛಾವಣಿಯೆತ್ತರಕ್ಕೆ ಏರಿತು. ಗುಂಡ ಬಣ್ಣ ಹಚ್ಚುತ್ತಾ ಸಾಗಿದ...



ಪ್ರಾಸ ಪದ ಬಂಧ

ಇಲ್ಲಿ ಕೊಟ್ಟಿರುವ ಅಕ್ಷರ ಪಟ್ಟಿಯಿಂದ ಒಂದು ಸೂಕ್ತವಾದ ಅಕ್ಷರಗಳನ್ನು ಆಯ್ಕೆ ಮಾಡಿಕೊಂಡು ಕೆಳಗೆ ಕೊಟ್ಟಿರುವ ಜೋಡಿ ಅಕ್ಷರಗಳಿಗೆ ತುಂಬಿ ಪ್ರಾಸಪದ ರಚಿಸಿ.

ಅಕ್ಷರ ಪಟ್ಟಿ			
ಹು	ಮ	ನ	ಬ
ಸೊ	ಕೊ	ಬೊ	ಕೊ
ವಿ	ರ	ಸ	ಹ

1

	ಗ	ಳೆ
	ಗ	ಳೆ

2

	ಯ	ನ
	ಯ	ನ

3

	ರ	ಗು
	ರ	ಗು

4

	ಳ	ಗ
	ಳ	ಗ

5

	ಫ	ಲ
	ಫ	ಲ

6

	ಡ	ದಿ
	ಡ	ದಿ



ಜಿಜ್ಞಾಸೆ

• **ಸೂರ್ಯ ಹುಟ್ಟುವಾಗ ಮತ್ತು ಮುಳುಗುವಾಗ ಕೆಂಪಗೆ ಕಾಣಿಸುವುದೇಕೆ?**

ಸೂರ್ಯ ಹುಟ್ಟುವಾಗ ಮುಂಜಾವಿನ ಆಕಾಶ ಕೆಂಪಾಗಿರುತ್ತದೆ. ಹೊತ್ತು ಏರುತ್ತಿದ್ದಂತೆ ಸೂರ್ಯನ ಬಣ್ಣ ಬೆಳ್ಳಗಾಗುತ್ತದೆ. ಸೂರ್ಯ ಮುಳುಗುವಾಗ ಮತ್ತೆ ಬಣ್ಣ ಕೆಂಪಗಿರುತ್ತದೆ. ಸೂರ್ಯ ಹುಟ್ಟುವಾಗ ಮತ್ತು ಮುಳುಗುವಾಗ ಅವನ ಬಣ್ಣ ಏಕೆ ಕೆಂಪಗಿರುತ್ತದೆ ಹೇಳಿ ನೋಡೋಣ? ಗೊತ್ತಿಲ್ಲ ತಾನೆ! ಹಾಗಾದರೆ ಇಲ್ಲಿ ಓದಿ ತಿಳಿದುಕೊಳ್ಳಿರಿ.

ಭೂಮಿ, ಸೂರ್ಯನ ಸುತ್ತ ತಿರುಗುತ್ತದೆ. ಹೌದು ತಾನೆ! ಸೂರ್ಯನ ಬೆಳಕು ಯಾವ ಭೂಭಾಗದ ಮೇಲೆ ಬಿದ್ದಿರುತ್ತದೋ ಆ ಭಾಗದಲ್ಲಿ ಹಗಲು ಇರುತ್ತದೆ. ಬೆಳ್ಳಗಿನ ಸೂರ್ಯನ ಬೆಳಕಿನಲ್ಲಿ ಏಳು ಬಣ್ಣಗಳು ಮಿತ್ರವಾಗಿರುತ್ತವೆ. ಇದು ಗೊತ್ತಿರಬೇಕಲ್ಲವೆ! ಅವು ಯಾವುದೆಂದರೆ, ಕೆಂಪು, ಕಿತ್ತಳೆ, ಹಳದಿ, ಹಸಿರು, ನೀಲಿ, ಇಂಡಿಗೊ ಮತ್ತು ನೇರಳೆ.

ಬೆಳಗಿನ ಜಾವ ಮತ್ತು ಸಂಜೆ ಸೂರ್ಯ ದಿಗಂತದಲ್ಲಿರುತ್ತಾನೆ. ಆಗ ಸೂರ್ಯನ ಕಿರಣಗಳು ವಾತಾವರಣದಲ್ಲಿ ಬಹು ದೂರ ಹಾಯ್ದು ಬರಬೇಕಾಗುತ್ತದೆ. ಆದ್ದರಿಂದ ಬೆಳಗಿನ ಜಾವ ಮತ್ತು ಸಂಜೆ ಸೂರ್ಯ ಕಿರಣಗಳು ವಾತಾವರಣದಲ್ಲಿ ಹಾಯ್ದು ಬರಬೇಕಾದ ದೂರ, ಮಧ್ಯಾಹ್ನದ ದೂರಕ್ಕಿಂತ ಐವತ್ತು ಪಟ್ಟು ಜಾಸ್ತಿಯಾಗಿರುತ್ತದೆ. ವಾತಾವರಣದಲ್ಲಿರುವ ಮಂಜಿನ ಮತ್ತು ನೀರಾವಿಯ ಅಂಶದಿಂದ ಹಳದಿ, ಕಿತ್ತಳೆ ಮತ್ತು ಕೆಂಪು- ಇವನ್ನು ಬಿಟ್ಟು ಉಳಿದೆಲ್ಲ ಬಣ್ಣಗಳು ಹರಡಿ ಬಿಡುತ್ತವೆ. ಈ ಕಾರಣದಿಂದ ಸೂರ್ಯನ ಬೆಳಕಿನಲ್ಲಿರುವ ನೇರಳೆ, ನೀಲಿ ಮತ್ತು ಹಸಿರು ಬಣ್ಣಗಳು ನಮ್ಮ ಕಣ್ಣು ಸೇರುವುದು ಅತಿ ಕಡಿಮೆ.

ನಮ್ಮ ಕಣ್ಣಿಗೆ ಬೀಳುವ ಕೆಂಪು, ಕಿತ್ತಳೆ ಮತ್ತು ಹಳದಿ - ಈ ಬಣ್ಣಗಳಲ್ಲಿ ಕೆಂಪು ಬಣ್ಣ ಅತಿ ಹೆಚ್ಚಾಗಿರುತ್ತದೆ. ಆದ್ದರಿಂದ ಈ ಮೂರು ಬಣ್ಣಗಳ ಮಿಶ್ರಣ ಕೆಂಪಾಗಿ ಕಾಣುತ್ತದೆ. ಸೂರ್ಯ ಹುಟ್ಟುವಾಗ ಮತ್ತು ಮುಳುಗುವಾಗ ಕೆಂಪಾಗಿ ಕಾಣುವುದಕ್ಕೆ ಇದೇ ಕಾರಣ.

ಗಣಿತದಲ್ಲಿ ಗರ್ದಿ ಗಮ್ಮತ್ತು

ಮಕ್ಕಳೇ, ಕೆಲವು ಸಣ್ಣ ಗುಣಾಕಾರದ ಲೆಕ್ಕಗಳನ್ನು ಬರಿ ಬಾಯಿಯಿಂದಲೇ ಹೇಳಿಬಿಡಬಹುದು. ನಿಮಗೆ ಗೊತ್ತೇ? ಎರಡು ಸಂಖ್ಯೆಗಳಲ್ಲಿ 'ಬಿಡಿ' ಕಾಲುಗಳ ಮೊತ್ತ ಹತ್ತು ಆಗಿ ದಶಕಗಳು ಒಂದೇಯಾಗಿದ್ದರೆ ಅಂತಹ ಸಂಖ್ಯೆಗಳ ಗುಣಾಕಾರ ಬಾಯಿಂದ ಹೇಳಬಹುದು.

ಉದಾ: 1. 62 X 68 (2+8=10)

42 / 16 = 4216

ಇಲ್ಲಿ 2X8 =16 ಹಾಗೆ ದಶಸ್ಥಾನದಲ್ಲಿರುವ 6ಕ್ಕೆ 1 ಕೂಡಿಸಿ 7 ಮಾಡಿಕೊಂಡು 6ಕ್ಕೆ ಗುಣಿಸಿದರೆ = 42 ಉತ್ತರ: 4216

ಉದಾ: 2. 59 X 51

30 / 09

ಇಲ್ಲಿ 9X1 = 9 ಒಂದೇ ಸ್ಥಾನವಾದರೆ ಹಿಂದೆ 0 ಸೇರಿಸಿ ಹೇಳಬೇಕು.

ಈ ಮೇಲಿನ ಎರಡು ಉದಾಹರಣೆಗಳನ್ನು ನೋಡಿದಿರಲ್ಲವೇ. ಮತ್ತೊಮ್ಮೆ ಸರಿಯಾಗಿ ನೋಡಿ. ಹಾಗಾದರೆ ಮೇಲಿರುವ ನೀಡಿರುವ ಲೆಕ್ಕಗಳನ್ನು ಮಾಡಿ.

1.19X11=.............................
2.36X34=.............................
3.72X78=.............................
4.92X98=.............................
5.63X67=.............................
6.89X81=.............................
7.23X27=.............................
8.61X69=.............................
9.46X44=.............................
10.55X55=.............................

ಜಾಣಪದ ಆಟ

ಇಲ್ಲಿ ಮಧ್ಯದಲ್ಲಿನ ಒಂದಕ್ಷರಕ್ಕೆ ಹಿಂದೆ ಮುಂದೆ ಒಂದು ಅಕ್ಷರ ತುಂಬಿ ಅರ್ಥಬದ್ಧ ಪದ ಮಾಡಬೇಕು. ಆದರೆ ಆ ಎರಡೂ ಅಕ್ಷರಗಳು 'ಕ'ಕಾರ ಬಳ್ಳಿಯಲ್ಲಿನ ಅಕ್ಷರಗಳೇ ಆಗಿರಬೇಕು. ಪ್ರಯತ್ನಿಸಿ.

1		ಣಿ	
2		ರಿ	
3		ಟ	
4		ಣಿ	
5		ಣ	
6		ಣ	
7		ಳ	
8		ಡ	
9		ತ್ತಿ	
10		ರಿ	

ಮೊಟ್ಟ ಮೊದಲ ಮಾಹಿತಿ

ಭಾರತವು 1928ರಲ್ಲಿ ಮೊದಲ ಬಾರಿಗೆ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿತು.

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು

ಪ್ರಾಸಪದಬಂಧ: 1.ಚಿರತೆ–ಒರತೆ 2.ಅವಳ–ಹವಳ 3.ಶಿರಡಿ–ಕರಡಿ 4.ಕಮ್ಮಟ–ಚಿಮ್ಮಟ 5.ಅನಾದಿ–ಸನಾದಿ 6.ಅಬ್ಬರ–ಉಬ್ಬರ

ಗಣಿತದಲ್ಲಿ ಗರ್ದಿ–ಗಮ್ಮತ್ತು: 9,1,5/4,8,3/2,6,7

ಜಾಣಪದ ಆಟ: 1.ತಿಳ್ಳಿ 2.ಅಂಗಡಿ 3.ಆನೆ 4.ಗತಿ 5.ವಾರ 6.ಗಡಿ 7.ಜನನ 8.ಹರಿ 9.ಗದಗ 10.ಗುಡಿ

ಚಿಕ್ಕಲೆಕ್ಕ: 8 2 = 64, 6 2 = 36: 100

ಮೋಜಿನ ಇಂಗ್ಲಿಷ್: Blast, Bend, Bring, Braw, Bless, Broad, Brush, Bangle, Block, Boat, Band, Bread, Bill, Beach, Bat, Bone, Ball, Beat, Brain

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು


ಸಫಾ ಎಂ.ಖಾದ್ರಿ
ಜಮಖಂಡಿ


ಲಕ್ಷ ಎಂ.ವಿ.
ತುಮಕೂರು


ಸಂತೋಷ್ ಎಸ್.
ಎಸ್., ಅಣಜಿಗೆರೆ


ತೌಫೀಕ್
ಹಗರಿಬೊಮ್ಮನಹಳ್ಳಿ


ಸಾಯಿ ಸನ್ನಿಧಿ
ಸಿರಗುಪ್ಪ


ಪುನೀತ್ ಸೂರ್ಯ ಪಿ.
ಶಿಡ್ಲಘಟ್ಟ

ಕ್ರಿಕೆಟ್ ಪಯಣಕ್ಕೆ ತೆರೆಯೆಳೆದ ದೆಹಲಿಯ ಎಡಗೈ ಬ್ಯಾಟರ್ • ಎಲ್ಲ ಮಾದರಿಗೂ 'ಗಬ್ಬರ್' ವಿದಾಯ

ಸ್ನೇಹಜೀವಿಯ 'ಶಿಖರ'ದೆತ್ತರದ ಸಾಧನೆ

• ಗಿರೀಶ ದೊಡ್ಡಮನಿ

ಬೆಂಗಳೂರು: ಕ್ರಿಕೆಟ್ ವಲಯದಲ್ಲಿ ಶಿಖರ್ ಧವನ್ ಅವರ ಬಗ್ಗೆ ಯಾರನ್ನಾದರೂ ಕೇಳಿ ನೋಡಿ. ಅವರ ಎಡಗೈ ಬ್ಯಾಟಿಂಗ್ ಸೊಬಗಿನ ಬಗ್ಗೆ ಕೊನೆಯಲ್ಲಿ ಮಾತನಾಡುತ್ತಾರೆ. ಮೊದಲಿಗೆ ಅವರ ಸ್ನೇಹಭರಿತ ನಡವಳಿಕೆ ಮತ್ತು ಮೀಸೆ ತಿರುವಿ ತೊಡೆ ತಟ್ಟುವ ಶೈಲಿಯ ಬಗ್ಗೆ ಮನತುಂಬಿ ವಿವರಿಸುತ್ತಾರೆ.

ಅಭಿಮಾನಿಗಳಷ್ಟೇ ಅಲ್ಲ. ಶಿಖರ್ ಓರಗೆಯ ಆಟಗಾರರು, ಕುಟುಂದವರು, ಆಪ್ತರು ಮತ್ತು ಕೋಚ್‌ಗಳಿಂದಲೂ ಇವೇ ಮಾತುಗಳು ಬರುತ್ತವೆ. ಆಟದ ಮೂಲಕ ತಾವು ಪ್ರತಿನಿಧಿಸಿದ ತಂಡವನ್ನು ಹಲವು ಬಾರಿ ಗೆಲ್ಲಿಸಿದ್ದಾರೆ. ಆದರೆ ತಾವು ಕಾಲಿಟ್ಟಲೆಲ್ಲ ನಗುವಿನ ಮಿಂಚು ಹರಿಸುತ್ತ ಸ್ನೇಹಬಳಗವನ್ನು ಕಟ್ಟಿಕೊಂಡಿದ್ದಾರೆ. ಮೊದಲ ಭೇಟಿಯಲ್ಲಿಯೇ ಮರೆಯಲಾಗದ ಛಾಪು ಮೂಡಿಸುವಂತಹ ವ್ಯಕ್ತಿತ್ವ ಅವರದ್ದು. ಅಭಿಮಾನಿ ವಲಯದಲ್ಲಿ 'ಗಬ್ಬರ್' ಎಂದೇ ಚಿರಪರಿಚಿತರು. ಶನಿವಾರ ಅವರು ಕ್ರಿಕೆಟ್‌ನ ಎಲ್ಲ ಮಾದರಿಗಳಿಗೆ ನಿವೃತ್ತಿ ಘೋಷಿಸಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲಿ ಸದಾ ಕೀಟಲೆಯ ವಿಡಿಯೋಗಳ (ಮಗ ಝೋರಾವರ್ ಮತ್ತು ಅಪ್ಪಮಹೇದ್ರ ಪಾಲ್ ಅವರೊಂದಿಗೆ ಮಾಡಿದ್ದು) ಮೂಲಕ ನಗೆಯುಕ್ಕಿಸುತ್ತಿದ್ದವರು ಶಿಖರ್. ಇದೀಗ ತಮ್ಮ ವಿದಾಯವನ್ನೂ ಸಾಮಾಜಿಕ ತಾಣಗಳ ಮೂಲಕವೇ ಘೋಷಿಸಿದ್ದಾರೆ. ಆದರೆ ಈ ವಿಡಿಯೋದಲ್ಲಿ ಅವರು ಭಾವುಕರಾದಂತೆ ಕಂಡರು. ಸುಮಾರು 20 ವರ್ಷಗಳ ಕ್ರಿಕೆಟ್ ನಂಟಿಗೆ ವಿದಾಯ ಹೇಳುವಾಗ ಮನಸ್ಸು ಭಾರವಾಗಿದ್ದನ್ನು ಅವರ ಮಾತುಗಳು ಬಿಂಬಿಸಿವೆ. ತಮ್ಮ ಬಾಲ್ಯದ ಕೋಚ್ ತಾರಕ್ ಸಿನ್ಹಾ, ಮದನ್ ಶರ್ಮಾ ಅವರೂ ಸೇರಿದಂತೆ ತಮ್ಮ ಬೆಳವಣಿಗೆಗೆ ಕಾರಣರಾದವರೆಲ್ಲರಿಗೂ ಕೃತಜ್ಞತೆ ಸಲ್ಲಿಸಿದ್ದಾರೆ. ವೈಯಕ್ತಿಕ ಜೀವನದಲ್ಲಿ ನಡೆದ ಕಹಿ ಘಟನೆಯನ್ನು ಮರೆತು ಜೀವನದಲ್ಲಿ ಹೊಸ ಅಧ್ಯಾಯ ಬರೆಯುವ ಇಂಗಿತ ವ್ಯಕ್ತಪಡಿಸಿದ್ದಾರೆ.

ದೆಹಲಿಯ ಪಂಜಾಬಿ ಕುಟುಂಬದಲ್ಲಿ ಜನಿಸಿದ ಶಿಖರ್ ಶಾಲೆಯ ದಿನಗಳಲ್ಲಿಯೇ ಕ್ರಿಕೆಟ್‌ನತ್ತ ಆಕರ್ಷಿತ ರಾದವರು. ವಿಕೆಟ್‌ಕೀಪಿಂಗ್ ಮಾಡುತ್ತಿದ್ದ ಶಿಖರ್ ಅವರು ತಾರಕ್ ಸಿನ್ಹಾ ಮತ್ತು ಮದನ್ ಶರ್ಮಾ ಅವರ ಗರಡಿಯಲ್ಲಿ ಪಳಗಿದರು. ಅಲ್ಲಿ ಅವರಿಗೆ ವಿಕೆಟ್‌ಕೀಪಿಂಗ್ ಬಿಡಿಸಿ ಆರಂಭಿಕ ಬ್ಯಾಟರ್ ಆಗುವ ಸಂದರ್ಭ ಒದಗಿತು. ಈ ಹುಡುಗನ ಮುಂಗೈ ಮತ್ತು ತೋಳಿನ ಶಕ್ತಿಯುತ ಚಲನೆಯು ಅಪರೂಪದ್ದಾಗಿತ್ತು. ಹಲವು ಬ್ಯಾಟರ್‌ಗಳು ಕಷ್ಟಪಟ್ಟು ಆಡುತ್ತಿದ್ದ ಹೊಡೆತಗಳನ್ನು ಶಿಖರ್ ಲೀಲಾಜಾಲವಾಗಿ ಪ್ರಯೋಗಿಸುತ್ತಿದ್ದರು. ಅವರ ಕವರ್ ಡ್ರೈವ್ ನೋಡಿದ ಕೋಚ್‌ಗಳೇ ನಿಬ್ಬೆರಗಾಗುತ್ತಿದ್ದರು.

ಶಿಖರ್ ಧವನ್ ಸಾಧನೆಯ ನೋಟ							
ಮಾದರಿ	ಪಂದ್ಯ	ರನ್	ಶ್ರೇಷ್ಠ	ಶತಕ	ಅರ್ಧಶತಕ	ಬೌಂಡರಿ	ಸಿಕ್ಸರ್
ಟೆಸ್ಟ್	34	2,315	190	7	5	316	12
ಏಕದಿನ	167	6,793	143	17	39	842	79
ಟಿ20	68	1,759	92	0	11	191	50
ಪ್ರಥಮ ದರ್ಜೆ	122	8,499	224	25	29	-	-

'ಅದೊಂದು ಸಲ ಫಿರೋಜ್ ಶಾ ಕೋಟ್ಲಾ ಮೈದಾನದಲ್ಲಿ 17 ವರ್ಷದೊಳಗಿನವರ ರಾಷ್ಟ್ರೀಯ ಟೂರ್ನಿಯ ಪಂದ್ಯ ನಡೆದಿತ್ತು. ಜಮ್ಮು–ಕಾಶ್ಮೀರ ಎದುರಿನ ಆ ಪಂದ್ಯದಲ್ಲಿ ಶಿಖರ್ ಶತಕ ಹೊಡೆದರು. ಆಗ ತಂಡದ ವ್ಯವಸ್ಥಾಪಕರು ನನಗೆ ಕರೆ ಮಾಡಿ, ನಿಮ್ಮ ಶಿಷ್ಯ ಶತಕ ಹೊಡೆದು ಆಡುತ್ತಿದ್ದಾನೆ. ಬಹಳ ಅದ್ಭುತ ಆಟ ಮುಂದುವರಿದಿದೆ. ಬಂದು ನೋಡಿ ಎಂದರು. ನಾನು ಸುಮಾರು 40 ನಿಮಿಷದಲ್ಲಿ ಅಲ್ಲಿಗೆ ತಲುಪಿದ್ದೆ. ಅಷ್ಟರಲ್ಲಿಯೇ ಶಿಖರ್ ಸ್ಕೋರ್ 221 ಆಗಿತ್ತು. ಆ ವೇಗ ನೋಡಿ ಅಚ್ಚರಿಯಾಗಿತ್ತು' ಎಂದು ಅವರ ಬಾಲ್ಯದ ಕೋಚ್ ಮದನ್ ಶರ್ಮಾ ನೆನಪಿಸಿಕೊಳ್ಳುತ್ತಾರೆ. 2004ರಲ್ಲಿ ದೆಹಲಿ ತಂಡದ ಪರ ರಣಜಿ ಟೂರ್ನಿಗೆ ಪದಾರ್ಪಣೆ ಮಾಡಿದ ಶಿಖರ್, ಭಾರತ ತಂಡದಲ್ಲಿ ಆಡಲು 9 ವರ್ಷ ಕಾಯಬೇಕಾಯಿತು. ಅವರಿಗಿಂತ ವಯಸ್ಸಿನಲ್ಲಿ ಕಿರಿಯರಾಗಿದ್ದ ದೆಹಲಿಯ ವಿರಾಟ್ ಕೊಹ್ಲಿ ಅವರು ಭಾರತ ತಂಡಕ್ಕೆ ಪದಾರ್ಪಣೆ ಮಾಡಿ ನಾಲ್ಕು ವರ್ಷಗಳ ನಂತರ ಶಿಖರ್ ಸ್ಥಾನ ಪಡೆದಿದ್ದರು.

2013ರಲ್ಲಿ ಮೊಹಾಲಿಯಲ್ಲಿ ನಡೆದ ಆಸ್ಟ್ರೇಲಿಯಾ ಎದುರಿನ ಪಂದ್ಯದಲ್ಲಿ ಪದಾರ್ಪಣೆ ಮಾಡಿದ ಅವರು ಶತಕ ದಾಖಲಿಸಿದರು. ಆಗ ನಾಯಕರಾಗಿದ್ದ ಮಹೇಂದ್ರಸಿಂಗ್ ಧೋನಿಯ ಮನಗೆದ್ದರು. ಸಚಿನ್ ತೆಂಡೂಲ್ಕರ್, ವಿವಿಎಸ್ ಲಕ್ಷ್ಮಣ್, ರಾಹುಲ್ ದ್ರಾವಿಡ್, ಯುವರಾಜ್ ಸಿಂಗ್ ಮತ್ತು ಗೌತಮ್ ಗಂಭೀರ್ ಅವರ ಯುಗಾಂತ್ಯವಾಗುವ ಹೊತ್ತಿನಲ್ಲಿ ಶಿಖರ್ ಉದಯಿಸಿದ್ದರು.


ಫಿಫ್ಟಿ–50 ಮಾದರಿಯ ಹೀರೊ

ಶಿಖರ್ ಟೆಸ್ಟ್ ಮತ್ತು ಟಿ20 ಮಾದರಿಗಳಿಗಿಂತ ಹೆಚ್ಚು ಏಕದಿನ ಕ್ರಿಕೆಟ್‌ನಲ್ಲಿ ಹೆಚ್ಚು ಮಿಂಚಿದವರು. 44.11ರ ಸರಾಸರಿಯಲ್ಲಿ ಅವರು ರನ್ ಗಳಿಸಿದ್ದರು. 2013ರ ಚಾಂಪಿಯನ್ಸ್ ಟ್ರೋಫಿ ಜಯಿಸುವಲ್ಲಿ ಅವರ ಕೊಡುಗೆ ದೊಡ್ಡದು. ಟೂರ್ನಿಯ ಶ್ರೇಷ್ಠ ಆಟಗಾರ ಗೌರವ ಗಳಿಸಿದ್ದರು. ಇಂಗ್ಲೆಂಡ್ ವೇಗದ ಬೌಲಿಂಗ್ ಸ್ನೇಹಿ ಪಿಚ್‌ಗಳಲ್ಲಿ 363 ರನ್ ಕಲೆಹಾಕಿದ್ದರು.

ಅವರ ವೃತ್ತಿಜೀವನದಲ್ಲಿ ದಾಖಲಾದ ಒಂದೊಂದು ಶತಕವೂ ಆಕರ್ಷಕವಾಗಿದ್ದವು. ಅದರಲ್ಲೂ 2015ರ ಏಕದಿನ ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾದ ಎದುರು ಗಳಿಸಿದ್ದ 137 ರನ್ ಅತ್ಯಂತ ವಿಶೇಷವಾದದ್ದು. ಮೆಲ್ಬರ್ನ್ ಕ್ರೀಡಾಂಗಣದಲ್ಲಿ ಡೇಲ್ ಸ್ಟೇಯ್ನ್ ಮತ್ತು ಮಾರ್ನ್ ಮಾರ್ಕೆಲ್ ಅವರಿದ್ದ ಎದುರಾಳಿ ಬೌಲಿಂಗ್ ಪಡೆಯನ್ನು ದಿಟ್ಟವಾಗಿ ಎದುರಿಸಿದ್ದರು.

2019ರ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಆಸ್ಟ್ರೇಲಿಯಾ ಎದುರು ಓವಲ್ ಕ್ರೀಡಾಂಗಣದಲ್ಲಿ 117 (109ಎ) ಗಳಿಸಿದ್ದರು. ಆದರೆ ಅವರು ನಂತರದ ದಿನಗಳಲ್ಲಿ ಆಯ್ಕೆಗಾರರ ಗಮನ ಸೆಳೆಯುವಲ್ಲಿ ಹಿಂದೆ ಬಿದ್ದರು.

ಶಿಖರ್ ಅವರು ಇಷ್ಟು ವರ್ಷಗಳಲ್ಲಿ ತಮ್ಮ ಪ್ರತಿಭೆ ಮತ್ತು ಸಾಮರ್ಥ್ಯದ ಶೇ 50ರಷ್ಟನ್ನು ಮಾತ್ರ ತೋರಿಸಿದ್ದಾರೆ. ಅವರಲ್ಲಿ ಇನ್ನಷ್ಟು ಸಾಧನೆ ಮಾಡುವ ಸಾಮರ್ಥ್ಯವಿತ್ತು. ಆದರೆ ಸಿಕ್ಕ ಕಾಲ ಮತ್ತು ಅವಕಾಶ ಎರಡೂ ಕಡಿಮೆ ಎಂಬುದು ಅವರ ಆಪ್ತವಲಯದವರ ಮಾತು.



ಶಿಖರ್ ಧವನ್

38 ಶಿಖರ್ ವಯಸ್ಸು

187 ಶಿಖರ್ ಚೊಚ್ಚಲ ಟೆಸ್ಟ್‌ನಲ್ಲಿ ಗಳಿಸಿದ ಶತಕ

12 ಏಕದಿನ ಕ್ರಿಕೆಟ್‌ನಲ್ಲಿ ವಿದೇಶಿ ತಾಣಗಳಲ್ಲಿ ಗಳಿಸಿದ ಶತಕಗಳು

65.15 ಐಸಿಸಿ ಏಕದಿನ ವಿಶ್ವಕಪ್ ಟೂರ್ನಿಗಳಲ್ಲಿ ರನ್ ಗಳಿಕೆ ಸರಾಸರಿ

ದ್ವಿಶತಕ ತಪ್ಪಿಸಿಕೊಂಡ ರಹೀಂ



ಮುಷ್ಫಿಕುರ್ ರಹೀಂ
ಎಎಫ್‌ಪಿ ಚಿತ್ರ

ರಾವಲ್ಪಿಂಡಿ (ಎಎಫ್‌ಪಿ): ಅನುಭವಿ ಬ್ಯಾಟರ್ ಮುಷ್ಫಿಕುರ್ ರಹೀಂ ಅವರ 191 ರನ್‌ಗಳ ಅಮೋಘ ಆಟದ ನೆರವಿನಿಂದ ಬಾಂಗ್ಲಾದೇಶ ತಂಡ ಮೊದಲ ಟೆಸ್ಟ್ ಪಂದ್ಯದ ನಾಲ್ಕನೇ ದಿನವಾದ ಶನಿವಾರ ಪಾಕಿಸ್ತಾನ ವಿರುದ್ಧ ಮೇಲುಗೈ ಸಾಧಿಸಿತು.

ಪಾಕಿಸ್ತಾನದ 448 ರನ್‌ಗಳಿಗೆ ಉತ್ತರವಾಗಿ ಬಾಂಗ್ಲಾದೇಶ ಮೊದಲ ಇನಿಂಗ್ಸ್‌ನಲ್ಲಿ 565 ರನ್‌ಗಳ ದೊಡ್ಡ ಮೊತ್ತ ಗಳಿಸಿ 117 ರನ್‌ಗಳ ಮುನ್ನಡೆ ಪಡೆಯಿತು. ಇದು ಪಾಕಿಸ್ತಾನ ವಿರುದ್ಧ ಬಾಂಗ್ಲಾದೇಶವು ಟೆಸ್ಟ್ ಇನಿಂಗ್ಸ್‌ನಲ್ಲಿ ಗಳಿಸಿದ ಅತಿ ದೊಡ್ಡ ಮೊತ್ತ. ಖುಲ್ನಾದಲ್ಲಿ 2015ರಲ್ಲಿ ಪಾಕಿಸ್ತಾನ ವಿರುದ್ಧ ಗಳಿಸಿದ್ದ 6 ವಿಕೆಟ್‌ಗೆ 555 ರನ್ ಆ ತಂಡದ ಈ ಹಿಂದಿನ ಗರಿಷ್ಠ ಮೊತ್ತ.

ಎಂಟು ಗಂಟೆ 42 ನಿಮಿಷ ಆಡಿ 341 ಎಸೆತ ಎದುರಿಸಿದ ರಹೀಂ 22 ಬೌಂಡರಿ, 1 ಸಿಕ್ಸರ್ ಬಾರಿಸಿದರು. ಇದು 89 ಟೆಸ್ಟ್‌ಗಳಲ್ಲಿ ರಹೀಂ ಅವರಿಗೆ 11ನೇ ಶತಕ. ಏಳನೇ ವಿಕೆಟ್‌ಗೆ ಅವರು, ಮೆಹಿದಿ ಹಸನ್ ಮಿರಾಜ್ (77, 179ಎ) ಜೊತೆ 196 ರನ್ ಸೇರಿಸಿದರು. ಇದು ಪಾಕ್ ಎದುರು ಈ ವಿಕೆಟ್‌ಗೆ ದಾಖಲಾದ ಅತಿ ದೊಡ್ಡ ಜೊತೆಯಾಟ. 1976ರಲ್ಲಿ ನ್ಯೂಜಿಲೆಂಡ್‌ನ ವಾರೆನ್ ಲೀಸ್ ಮತ್ತು ರಿಚರ್ಡ್ ಹ್ಯಾಡ್ಲಿ 186 ರನ್ ಸೇರಿಸಿದ್ದು ಈ ಹಿಂದಿನ ದಾಖಲೆಯಾಗಿತ್ತು.

ದಿನದಾಟ ಮುಗಿದಾಗ ಆತಿಥೇಯ ಪಾಕಿಸ್ತಾನ ಎರಡನೇ ಇನಿಂಗ್ಸ್‌ನಲ್ಲಿ 1 ವಿಕೆಟ್‌ಗೆ 23 ರನ್ ಗಳಿಸಿದ್ದು, ಒಂದಿಷ್ಟು ಆತಂಕ ಎದುರಿಸುತ್ತಿದೆ. ಪಾಕಿಸ್ತಾನ ವಿರುದ್ಧ ಆಡಿರುವ 13 ಟೆಸ್ಟ್‌ಗಳ ಪೈಕಿ 12ರಲ್ಲಿ ಬಾಂಗ್ಲಾ ಸೋತಿದೆ.

ಸ್ಕೋರುಗಳು: ಮೊದಲ ಇನಿಂಗ್ಸ್: ಪಾಕಿಸ್ತಾನ: 6 ವಿಕೆಟ್‌ಗೆ 448 ಡಿಕ್ಲೇರ್; ಬಾಂಗ್ಲಾದೇಶ: 167.3 ಓವರುಗಳಲ್ಲಿ 565 (ಶಾದ್ಮನ್ ಇಸ್ಲಾಂ 93, ಮುಷ್ಫಿಕುರ್ ರಹೀಂ 191, ಮೆಹಿದಿ ಹಸನ್ ಮಿರಾಜ್ 77; ನಸೀಮ್ ಶಾ 93ಕ್ಕೆ3); ಎರಡನೇ ಇನಿಂಗ್ಸ್: ಪಾಕಿಸ್ತಾನ: 10 ಓವರುಗಳಲ್ಲಿ 1 ವಿಕೆಟ್‌ಗೆ 23

ಚೆಸ್: ಗಂಗೂಲಿ ಮುನ್ನಡೆ ಅಬಾಧಿತ

ಗುರುಗ್ರಾಮ (ಹರಿಯಾಣ): ಅಗ್ರ ಶ್ರೇಯಾಂಕದ ಸೂರ್ಯಶೇಖರ ಗಂಗೂಲಿ ಅವರ ಸತತ ಗೆಲುವಿನ ಓಟಕ್ಕೆ ರೈಲ್ವೇಸ್‌ನ ದೀಪ್ತಾಯನ್ ಘೋಷ್ 'ಡ್ರಾ' ಮೂಲಕ ತಡೆಯೊಡ್ಡಿದರು. 61ನೇ ರಾಷ್ಟ್ರೀಯ ಚೆಸ್ ಚಾಂಪಿಯನ್‌ಷಿಪ್‌ನ ಎಂಟನೇ ಸುತ್ತಿನಲ್ಲಿ ಗಂಗೂಲಿ ಶನಿವಾರ ದೀಪ್ತಾಯನ್ ಜೊತೆ ಪಾಯಿಂಟ್ ಹಂಚಿಕೊಳ್ಳಬೇಕಾಯಿತು.

ಆರು ಬಾರಿಯ ಚಾಂಪಿಯನ್ ಆಗಿರುವ ಗಂಗೂಲಿ (ಪೆಟ್ರೋಲಿಯಂ ಕ್ರೀಡಾ ಪ್ರೋತ್ಸಾಹಕ ಮಂಡಳಿ) ಸತತವಾಗಿ ಏಳು ಪಂದ್ಯಗಳನ್ನು ಗೆದ್ದಿದ್ದರು. ಅವರು ಏಳೂವರೆ ಪಾಯಿಂಟ್‌ಗಳೊಡನೆ ಅಗ್ರಸ್ಥಾನದಲ್ಲೇ ಮುಂದುವರಿದಿದ್ದಾರೆ.

9 ಮಂದಿ ಆಟಗಾರರು ತಲಾ 6.5 ಪಾಯಿಂಟ್ಸ್‌ಗಳಡೊನೆ ಎರಡನೇ ಸ್ಥಾನದಲ್ಲಿದ್ದಾರೆ. ಹಾಲಿ ಚಾಂಪಿಯನ್ ಎಸ್.ಪಿ.ಸೇತುರಾಮನ್, ದೀಪ್ತಾಯನ ಘೋಷ್, ಕಾರ್ತಿಕ್ ವೆಂಕಟರಾಮ್, ಅರಣ್ಯಕ್ ಘೋಷ್, ಶ್ರೀರಾಮ್ ಝಾ, ಲಲಿತ್‌ಬಾಬು, ಅರ್ಜುನ್ ಆದಿರೆಡ್ಡಿ, ಅಜಯ್ ಕಾರ್ತಿಕೇಯನ್, ಹಿಮಲ್ ಗುಸೇನ್ ಎರಡನೇ ಸ್ಥಾನದಲ್ಲಿದ್ದಾರೆ. 19 ಆಟಗಾರರು ತಲಾ 6 ಅಂಕ ಗಳಿಸಿದ್ದಾರೆ.

ಮಹಾರಾಜ ಟ್ರೋಫಿ ಕ್ರಿಕೆಟ್: ಗುಲ್ಬರ್ಗ ತಂಡಕ್ಕೆ ಜಯ, ಸ್ಮರಣ್ ಅರ್ಧಶತಕ

ಅಭಿಷೇಕ್‌ಗೆ ಐದು ವಿಕೆಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐದು ವಿಕೆಟ್ ಗೊಂಚಲು ಗಳಿಸಿದ ಅಭಿಷೇಕ್ ಪ್ರಭಾಕರ್ ಅವರ ಪರಿಣಾಮಕಾರಿ ದಾಳಿ ಮತ್ತು ಆರ್. ಸ್ಮರಣದ ಅರ್ಧಶತಕದಿಂದ ಗುಲ್ಬರ್ಗ ಮಿಸ್ಟಿಕ್ಸ್ ತಂಡವು ಮಹಾರಾಜ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ನಾಲ್ಕನೇ ಜಯ ಸಾಧಿಸಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ ಮಧ್ಯಾಹ್ನ ಆರಂಭವಾದ ಪಂದ್ಯದಲ್ಲಿ ಟಾಸ್ ಗೆದ್ದ ಗುಲ್ಬರ್ಗ ತಂಡದ ನಾಯಕ ದೇವದತ್ತ ಪಡಿಕ್ಕಲ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಅಭಿಷೇಕ್ (4–0–21–5) ಅವರ ದಾಳಿಯ ಮುಂದೆ ಮೈಸೂರು ವಾರಿಯರ್ಸ್ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 154 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಗುಲ್ಬರ್ಗ ತಂಡವು ಆರ್. ಸ್ಮರಣ್ (52; 36ಎ, 4X2, 6X4) ಅವರ ಅರ್ಧಶತಕದ ಬಲದಿಂದ 18.5 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 157 ರನ್ ಗಳಿಸಿತು. 5 ವಿಕೆಟ್‌ಗಳಿಂದ ಜಯಿಸಿತು. ಗುಲ್ಬರ್ಗ ತಂಡಕ್ಕೆ ಲವನಿತ್ ಸಿಸೊಡಿಯಾ (23; 16ಎ) ಮತ್ತು ದೇವದತ್ತ ಪಡಿಕ್ಕಲ್ (24; 21ಎ) ಅವರು ಮೊದಲ ವಿಕೆಟ್‌ಗೆ 41 ರನ್ ಗಳಿಸಿ ಉತ್ತಮ ಆರಂಭ ನೀಡಿದರು. ಆದರೆ ವಿದ್ಯಾಧರ್ ಪಾಟೀಲ ಮತ್ತು ಕೆ. ಗೌತಮ್ ಅವರು ಕ್ರಮವಾಗಿ ಲವನೀತ್ ಮತ್ತು ದೇವದತ್ತ ವಿಕೆಟ್‌ಗಳನ್ನು ಗಳಿಸಿದರು. ಕೆ.ವಿ.ಅನೀಶ್ (8) ಬೇಗನೆ ಔಟಾದರು. ಈ ಹಂತದಲ್ಲಿ ಸ್ಮರಣ್ ಮತ್ತು ರಿತೇಶ್ ಭಟ್ಕಳ (22; 16ಎ) ತಂಡದ ಗೆಲುವಿಗೆ ಬಲ ತುಂಬಿದರು.

ಮೊದಲು ಬ್ಯಾಟಿಂಗ್ ಮಾಡಿದ ಕರುಣ್ ನಾಯರ್ ನಾಯಕತ್ವದ ಮೈಸೂರು ತಂಡದಲ್ಲಿ ದೊಡ್ಡ ಜೊತೆಯಾಟಗಳು ಬೆಳೆಯದಂತೆ ಅಭಿಷೇಕ್ ಪ್ರಭಾಕರ್ ನೋಡಿಕೊಂಡರು. ಅವರು ಪ್ರಮುಖ ಬ್ಯಾಟರ್‌ಗಳ ವಿಕೆಟ್ ಕಬಳಿಸಿದರು.



ಗುಲ್ಬರ್ಗ ಮಿಸ್ಟಿಕ್ಸ್ ತಂಡದ ಅಭಿಷೇಕ್ ಪ್ರಭಾಕರ್ ಬೌಲಿಂಗ್ ವೈಖರಿ –ಪ್ರಜಾವಾಣಿ ಚಿತ್ರ/ರಂಜು ಪಿ

ಸಂಕ್ಷಿಪ್ತ ಸ್ಕೋರು: ಮೈಸೂರು ವಾರಿಯರ್ಸ್: 20 ಓವರ್‌ಗಳಲ್ಲಿ 9ಕ್ಕೆ154 (ಎಸ್.ಯು. ಕಾರ್ತಿಕ್ 24, ಜೆ. ಸುಚಿತ್ ಔಟಾಗದೆ 25, ಮನೋಜ್ ಭಾಂಡಗೆ 38, ವೈಶಾಖ ವಿಜಯಕುಮಾರ್ 47ಕ್ಕೆ2, ಅಭಿಷೇಕ್ ಪ್ರಭಾಕರ್ 21ಕ್ಕೆ5, ಪ್ರವೀಣ ದುಬೆ 19ಕ್ಕೆ1) ಗುಲ್ಬರ್ಗ ಮಿಸ್ಟಿಕ್ಸ್: 18.5 ಓವರ್‌ಗಳಲ್ಲಿ 5ಕ್ಕೆ157 (ಲವನಿತ್ ಸಿಸೊಡಿಯಾ 23, ದೇವದತ್ತ ಪಡಿಕ್ಕಲ್ 24, ಆರ್. ಸ್ಮರಣ್ 52, ರಿತೇಶ್ ಭಟ್ಕಳ 22, ಮನೋಜ್ ಭಾಂಡಗೆ 36ಕ್ಕೆ2) ಫಲಿತಾಂಶ: ಗುಲ್ಬರ್ಗ ಮಿಸ್ಟಿಕ್ಸ್‌ಗೆ 5 ವಿಕೆಟ್‌ಗಳ ಜಯ. ಪಂದ್ಯದ ಆಟಗಾರ: ಅಭಿಷೇಕ್ ಪ್ರಭಾಕರ್

ಶಿವಮೊಗ್ಗಕ್ಕೆ ಜಯ

ಒಂಬತ್ತು ಸಿಕ್ಸರ್ ಸಿಡಿಸಿದ ಅಭಿನವ್ ಮನೋಹರ್ ಅವರ ಬಿರುಸಿನ ಬ್ಯಾಟಿಂಗ್ ಬಲದಿಂದ ಶಿವಮೊಗ್ಗ ಲಯನ್ಸ್ ತಂಡವು ಮಹಾರಾಜ ಟ್ರೋಫಿ ಟೂರ್ನಿಯಲ್ಲಿ ಮೊದಲ ಗೆಲುವು ದಾಖಲಿಸಿತು.

ಶನಿವಾರ ರಾತ್ರಿ ನಡೆದ ಪಂದ್ಯದಲ್ಲಿ ಮನೋಹರ್ (70; 27ಎಸೆತ) ಅವರ ಆಟ ದಿಂದಾಗಿ ಶಿವಮೊಗ್ಗ ತಂಡವು 6 ವಿಕೆಟ್‌ಗಳಿಂದ ಜಯಿಸಿತು. ಮೊದಲು ಬ್ಯಾಟಿಂಗ್ ಮಾಡಿದ ಹುಬ್ಬಳ್ಳಿ ತಂಡವು 19.3 ಓವರ್‌ಗಳಲ್ಲಿ 141 ರನ್ ಗಳಿಸಿತು. ಅದಕ್ಕುತ್ತರವಾಗಿ ಶಿವಮೊಗ್ಗ ತಂಡವು 15.1 ಓವರ್‌ಗಳಲ್ಲಿ 4ಕ್ಕೆ147 ರನ್ ಗಳಿಸಿತು. ಕಳೆದ ಆರು ಪಂದ್ಯಗಳಲ್ಲಿ ಶಿವಮೊಗ್ಗ ತಂಡ ಸೋಲನುಭವಿಸಿತ್ತು.

ಸಂಕ್ಷಿಪ್ತ ಸ್ಕೋರು: ಹುಬ್ಬಳ್ಳಿ ಟೈಗರ್ಸ್: 19.3 ಓವರ್‌ಗಳಲ್ಲಿ 141 (ಕೃಷ್ಣನ್ ಶ್ರೀಜಿತ್ 25, ಮನೀಷ್ ಪಾಂಡೆ 44, ಎಲ್. ಮನ್ವಂತ್ ಕುಮಾರ್ 28, ವಿ. ಕೌಶಿಕ್ 12ಕ್ಕೆ3, ಡಿ. ಅವಿನಾಶ್ 34ಕ್ಕೆ3) ಶಿವಮೊಗ್ಗ ಲಯನ್ಸ್: 15.1 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 147 (ನಿಹಾಲ್ ಉಳ್ಳಾಲ್ ಔಟಾಗದೆ 37, ಅಭಿನವ್ ಮನೋಹರ್ 70, ಎಲ್. ಮನ್ವಂತ್ ಕುಮಾರ್ 13ಕ್ಕೆ3) ಫಲಿತಾಂಶ: ಶಿವಮೊಗ್ಗ ಲಯನ್ಸ್‌ಗೆ 6 ವಿಕೆಟ್‌ಗಳ ಜಯ. ಪಂದ್ಯದ ಆಟಗಾರ: ಅಭಿನವ್ ಮನೋಹರ್

ನೆರವು ತಂಡದ ಇಬ್ಬರನ್ನು ಕೈಬಿಟ್ಟ ಸಿನ್ನರ್

ನ್ಯೂಯಾರ್ಕ್ (ಎಪಿ): ಅಗ್ರ ಟೆನಿಸ್ ಆಟಗಾರ ಯಾನಿಕ್ ಸಿನ್ನರ್ ಅವರು ತಮ್ಮ ಫಿಟ್ನೆಸ್ ಟ್ರೇನರ್ ಮತ್ತು ಫಿಸಿಯೋಥೆರಪಿಸ್ಟ್ ಅವರನ್ನು ಕಿತ್ತೊಗೆದಿದ್ದಾರೆ. ಮಾರ್ಚ್ ತಿಂಗಳಿನ ಎರಡು ಪರೀಕ್ಷೆಗಳಲ್ಲಿ ಅವರು ನಿಷೇಧಿತ ಪಟ್ಟಿಯಲ್ಲಿರುವ ಉದ್ದೀಪನ ಮದ್ದು ಸೇವಿಸಿದ್ದು ಧೃಡಪಟ್ಟ ಕೆಲದಿನಗಳ ನಂತರ ಇಟಲಿಯ ಆಟಗಾರ ಈ ಕ್ರಮ ಕೈಗೊಂಡಿದ್ದಾರೆ.

'ಪ್ರಕರಣದಲ್ಲಿ ಅಮಾಯಕನೆಂದು ತಿಳಿದಿದ್ದರೂ, ತಮ್ಮ ತಪ್ಪಿಲ್ಲವೆಂದು ವಿಚಾರಣೆಯಲ್ಲಿ ಖಚಿತಪಡುವರೆಗೂ ತಾವು ಚಿಂತಾಕ್ರಾಂತರಾಗಿದ್ದಾಗಿ' ಅವರು ಮೊದಲ ಬಾರಿ ಸಾರ್ವಜನಿಕ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಅಮೆರಿಕ ಓಪನ್‌ಗೆ ಪೂರ್ವಭಾವಿಯಾಗಿ ನಡೆದ ಸುದ್ದಿಗೋಷ್ಠಿಯಲ್ಲಿ 23 ವರ್ಷ ವಯಸ್ಸಿನ ಸಿನ್ನರ್ ಈ ಹೇಳಿಕೆ ನೀಡಿದ್ದಾರೆ. ತಮ್ಮ ತಪ್ಪಿಲ್ಲವೆಂಬ ವರದಿ ಬಂದ ನಂತರ ನಿರಾಳರಾಗಿದ್ದಾಗಿಯೂ ಅವರು ಹೇಳಿದ್ದಾರೆ.

ಸ್ನೂಕರ್: ಪೋಲೆಂಡ್‌ನ ಮಿಚೆಲ್‌ಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೋಲೆಂಡ್‌ನ ಮಿಚೆಲ್ ಸ್ಜುಬಾರ್ಸಿಕ್ ಅವರು ಭವ್ಯಾ ಪಿಪಾಲಿಯಾ ಅವರನ್ನು ಸೋಲಿಸಿ ಶುಭಾರಂಭ ಮಾಡಿದರು.

ಶನಿವಾರ ಇಲ್ಲಿನ ರಾಜ್ಯ ಬಿಲಿಯರ್ಡ್ಸ್ ಸಂಸ್ಥೆಯಲ್ಲಿ ಆರಂಭವಾದ ಐಬಿಎಸ್‌ಎಫ್ ವಿಶ್ವ ಜೂನಿಯರ್ ಸ್ನೂಕರ್ (17 ಮತ್ತು 21 ವರ್ಷ ದೊಳಗಿನವರ) ಚಾಂಪಿಯನ್‌ಷಿಪ್ ಟೂರ್ನಿಯ ಪಂದ್ಯದಲ್ಲಿ ಮಿಚೆಲ್ ಸ್ಜುಬಾರ್ಸಿಕ್ ಗೆಲುವು ಸಾಧಿಸಿದರು.

ಪಂದ್ಯದುದ್ದಕ್ಕೂ ಪ್ರಾಬಲ್ಯ ಮೆರೆದ ಸ್ಜುಬಾರ್ಸಿಕ್ ಅವರು 85-28, 98-11, 74-20ರಿಂದ ಪಿಪಾಲಿಯಾ ಅವರನ್ನು ಮಣಿಸಿದರು.

ಒತ್ತಡದಲ್ಲಿ ಭಾರತ 'ಎ' ಮಹಿಳಾ ತಂಡ

ಗೋಲ್ಡ್ ಕೋಸ್ಟ್ (ಆಸ್ಟ್ರೇಲಿಯಾ), (ಪಿಟಿಐ): ಭಾರತ 'ಎ' ತಂಡವು ಮಹಿಳೆಯರ ಏಕೈಕ 'ಅನಧಿಕೃತ' ಟೆಸ್ಟ್ ಪಂದ್ಯದಲ್ಲಿ ಆಸ್ಟ್ರೇಲಿಯಾ 'ಎ' ವಿರುದ್ಧ ಸೋಲಿನ ಭೀತಿಯಲ್ಲಿದೆ. ಗೆಲುವಿಗೆ 289 ರನ್‌ಗಳ ಸವಾಲು ಎದುರಿಸಿರುವ ಭಾರತ, ಮೂರನೇ ದಿನವಾದ ಶನಿವಾರ ಆಟ ಮುಗಿದಾಗ 6 ವಿಕೆಟ್‌ಗೆ 149 ರನ್ ಗಳಿಸಿ ಸಂಕಷ್ಟದಲ್ಲಿದೆ.

ಭಾರತ ವನಿತೆಯರಿಗೆ ಗೆಲ್ಲಲು ಇನ್ನೂ 140 ರನ್‌ಗಳ ಅಗತ್ಯವಿದ್ದು, ನಾಲ್ಕು ವಿಕೆಟ್‌ಗಳು ಮಾತ್ರ ಉಳಿದಿವೆ.

ಮ್ಯಾಡಿ ಡಾರ್ಕ್ ಅವರ ಅಜೇಯ 105 ರನ್‌ಗಳ (197ಎ, 4x4) ನೆರವಿನಿಂದ ಆಸ್ಟ್ರೇಲಿಯಾ ಎರಡನೇ ಇನಿಂಗ್ಸ್‌ನಲ್ಲಿ (ಶುಕ್ರವಾರ: 7 ವಿಕೆಟ್‌ಗೆ 164) 92 ಓವರುಗಳಲ್ಲಿ 260 ರನ್‌ಗಳ ಉತ್ತಮ ಮೊತ್ತ ಪೇರಿಸಿತು. ಭಾರತದ ಕಡೆ ನಾಯಕಿಯೂ ಆಗಿರುವ ಸ್ಪಿನ್ನರ್ ಮಿನ್ನು ಮಣಿ 92 ರನ್ನಿಗೆ 6 ವಿಕೆಟ್ ಉರುಳಿಸಿದರು.

ಆರಂಭ ಆಟಗಾರ್ತಿ ಪ್ರಿಯಾ ಪುನಿಯಾ (36, 108ಎ, 4x7) ಮತ್ತು ಮೂರನೇ ಕ್ರಮಾಂಕದ ಬ್ಯಾಟರ್ ಶುಭಾ ಸತೀಶ್ (45, 98ಎ, 4x3) ಅವರ ಉಪಯುಕ್ತ ಆಟದಿಂದ ಭಾರತ ಎರಡನೇ ಇನಿಂಗ್ಸ್‌ನ ಒಂದು ಹಂತದಲ್ಲಿ 1 ವಿಕೆಟ್‌ಗೆ 89 ರನ್ ಗಳಿಸಿ ಭದ್ರ ಬುನಾದಿ ಪಡೆದಿತ್ತು. ಆದರೆ ಸ್ಪಿನ್ನರ್‌ಗಳಾದ ಚಾರ್ಲಿ ನಾಟ್ (27ಕ್ಕೆ2) ಮತ್ತು ಗ್ರೇಸ್ ಪಾರ್ಸನ್ಸ್ (27ಕ್ಕೆ2) ಪೆಟ್ಟುನೀಡಿದರು. 21 ಓವರುಗಳಲ್ಲಿ 42 ರನ್‌ಗಳ ಅಂತರದಲ್ಲಿ 5 ವಿಕೆಟ್‌ಗಳು ಉರುಳಿ ಆತಿಥೇಯರು ಮೇಲುಗೈ ಸಾಧಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ ಎ: 212, ಭಾರತ 'ಎ': 184; ಎರಡನೇ ಇನಿಂಗ್ಸ್: ಆಸ್ಟ್ರೇಲಿಯಾ ಎ: 92 ಓವರುಗಳಲ್ಲಿ 260 (ಎಮ್ಮಾ ಡಿ ಬ್ರುಗೆ 58, ಮ್ಯಾಡಿ ಡಾರ್ಕ್ ಔಟಾಗದೇ 105, ಗ್ರೇಸ್ ಪಾರ್ಸನ್ಸ್ 35; ಮಿನ್ನುಮಣಿ 92ಕ್ಕೆ6, ಸಯಾಲಿ ಸಾತ್ಘರೆ 41ಕ್ಕೆ2, ಪ್ರಿಯಾ ಮಿಶ್ರ 59ಕ್ಕೆ2); ಭಾರತ 'ಎ': 68 ಓವರುಗಳಲ್ಲಿ 6 ವಿಕೆಟ್‌ಗೆ 149 (ಪ್ರಿಯಾ ಪುನಿಯಾ 36, ಶುಭಾ ಸತೀಶ್ 45; ಚಾರ್ಲಿ ನಾಟ್ 27ಕ್ಕೆ2, ಗ್ರೇಸ್ ಪಾರ್ಸನ್ಸ್ 27ಕ್ಕೆ2).